

ಪಿ. ಆರ್. ತಿಪ್ಪೇಸ್ವಾಮಿ

And what is more intriguing is that these sketches are written with Sympathy and understanding and with no malice or prejudice. This is indeed a creditable effort and the author may well congratulate himself on this objective approach, so rare among his tribe.

Sri Thippe Swamy has taken a lot of pains to gather materials for his book from Various sources, apart from his personal contacts and impressions. The interesting part of the book is that, within the brief space of Six to Seven pages, he gives interesting details of the early lives of the artists, their trials and successes and their aspirations and achievements.

Thippe Swamy has an easy style of writing and succeeds in conveying to his readers what he wishes to say in Simple readable Kannada.

G. VENKATACHALUM.

G. VENKA

ಕಲೋಪಾಸಕರು

ಪಿ. ಆರ್. ತಿಪ್ಪೇಸ್ವಾಮಿ, ಬಿ. ಎ.

ಜನಪದ ಸಾಹಿತ್ಯ ಅಕಾಡೆಮಿ
ಸರಸ್ವತಿಪುರಂ, ಮೈಸೂರು—೯

'KALOPASAKARU' In Kannada.
54 life sketches of eminent painters in Karanataka, by
P. R. Thippe Swamy, B. A. Artist,
173, Ramavilas Agrahar, MYSORE-1

Published By :
K. R. Krishnaswamy
Janpada Sahitya Academy—MYSORE-5

ಬೆಲೆ : ರೂ 1[illegible]

ಮುಖಚಿತ್ರ : ಜಿ. ವೈ. ಹುಬ್ಳೀಕರ್

ಮುದ್ರಣ :
ಮಯೂರ ಮುದ್ರಕರು ಮತ್ತು ಪ್ರಕಾಶಕರು
ರಮಾವಿಲಾಸ ಅಗ್ರಹಾರ,
ಮೈಸೂರು-1

ಹರಕೆ ನುಡಿ

ಕಲಾವಿದ ಶ್ರೀಮಾನ್ ತಿಪ್ಪೇಸ್ವಾಮಿಯವರು ತಮ್ಮ ಈ ಪುಸ್ತಕಕ್ಕೆ ನನ್ನಿಂದ ಎರಡು ಹರಕೆನುಡಿಗಳನ್ನು ಕೋರಿದ್ದಾರೆ ; ಅದನ್ನು ನಾನು ತುಂಬ ಸಂತೋಷದಿಂದ ಕೊಡುತ್ತಿದ್ದೇನೆ. " ಪರ್ಟಿ " (ಇದು ಕವಿ ಹೊಯ್ಸಳರು ಅವರನ್ನು ಕರೆಯುತ್ತಿದ್ದ ಹೆಸರು) ತಮ್ಮ ಬಣ್ಣಗೆರೆಗಾರಿಕೆಗಳಲ್ಲಿ ಎಷ್ಟು ಪ್ರವೀಣರೋ ಅಷ್ಟೇ ಪ್ರವೀಣರಾಗಿದ್ದಾರೆ ತಮ್ಮ ನುಡಿಗಾರಿಕೆಯಲ್ಲೂ ಸಹ ಎಂಬುದನ್ನು ನಾನು ಈ ಪುಸ್ತಕದಿಂದ ಕಂಡುಕೊಂಡೆ. ಇದೊಬ್ಬ ಕಲಾ ವಿಚಕ್ಷಣನು ತನ್ನ ಕಸಬಿನವರನ್ನು ಕುರಿತು ಸದಭಿರುಚಿಯಿಂದ ಆದರೆ ತುಂಬ ಸಹಾನುಭೂತಿಯಿಂದಲೂ ಅಭಿಮಾನ ಪುರಸ್ಸರವಾಗಿಯೂ ಜಾಣ್ಮೆ ಯಿಂದಲೂ ಬರೆದ ಪುಸ್ತಕ. ಇದರಲ್ಲಿ ಸುಮಾರು ಐವತ್ತಾರು ಚಿತ್ರಗಾರರ ಪರಿಚಯ ನಮಗಾಗುತ್ತದೆ. ಎಲ್ಲರೂ ಆಕರ್ಷಕ ವ್ಯಕ್ತಿಗಳು, ಒಬ್ಬರಂತೆ ಮತ್ತೊಬ್ಬರಿಲ್ಲ ; ಅವರವರ ಕಲಾವೈಶಿಷ್ಟ್ಯಗಳು ತಜ್ಞರ ಪರಿಭಾಷೆಯಲ್ಲಿ ಕುಶಲವಾಗಿ ಚಿತ್ರಿತವಾಗಿವೆ. ಇದರಲ್ಲಿ ದಿ. ವೆಂಕಟಪ್ಪನವರಂಥ ಕಲಾಸಿದ ರಿದ್ದಾರೆ, ಎಸ್. ಎನ್. ಸ್ವಾಮಿ, ನಾಗರಾಜು ಅವರಂಥ ತೈಲಚಿತ್ರ ನಿಪುಣರಿದ್ದಾರೆ, ಆರ್. ಎಸ್. ನಾಯಿಡು ಅವರಂಥ ಬೀಸುಗೆರೆಯ ಭಾವುಕ ರಿದ್ದಾರೆ, ನವ್ಯ ಮಾರ್ಗವನ್ನು ರೇಖಾವಿನ್ಯಾಸದಲ್ಲಿ ಹಿಡಿದು ಅಪೂರ್ವ ಭಾವಗಳನ್ನು ಅಪ್ರಾಕೃತ ರೀತಿಯಲ್ಲಿ ಬಿಡಿಸುವ ಕೆ. ಕೆ. ಹೆಬ್ಬಾರರಂಥವರಿ ದ್ದಾರೆ, ಎಮ್ಮೆಗಳನ್ನು ಕಾದು, ಎಲೆಕ್ಟ್ರಿಕ್ ಕಂಬಗಳನ್ನು ಹೊತ್ತು, 'ಗಣೇಶ ಬೀಡಿ'ಯ ಏಜೆಂಟರಾಗಿ, ಹೀಗೆಯೇ ಅನೇಕ ಕಷ್ಟಪರಂಪರೆ ಯಲ್ಲೂ ಕಲಾತಪಸ್ಸನ್ನು ಬಿಡದೆ ಪಟ್ಟುಹಿಡಿದು ಸಾಧಿಸಿಕೊಂಡ ಸಾಹಸಿಗರಿದ್ದಾರೆ. ಇಲ್ಲಿ ಬಂದಿರುವ ಯಾರೂ ಅಪ್ರಸಿದ್ಧರಲ್ಲ, ಪ್ರಾಯಶಃ ಎಲ್ಲರೂ ಪ್ರಶಸ್ತಿ ವಿಜೇತರು ದೇಶವಿದೇಶಗಳಲ್ಲಿ ತಮ್ಮ ಚಿತ್ರಗಳ ಮೂಲಕ ಈ ನಾಡಿನ ಕಲಾಸೌರಭವನ್ನು ಹರಡಿರುವವರು. ಇವರಲ್ಲಿ ಎಲ್ಲ ಜಾತಿಯ ವರುಂಟು ; ಹೆಂಗಸರೂ ಇದ್ದಾರೆ.

ನಮ್ಮ ದೇಶದ ಪ್ರಾಚೀನ ಸಾಂಪ್ರದಾಯಿಕ ಕಲೆಯನ್ನು, ಬಣ್ಣಕ್ಕೂ ಸಹ ಆಧುನಿಕಸೌಲಭ್ಯಗಳನ್ನು ಕೋರದೆ ದೇಶೀಯ ವನಸ್ಪತಿಗಳನ್ನೇ ಅವಲಂಬಿಸಿ ಆಶ್ಚರ್ಯಕರವಾದ ರೀತಿಯಲ್ಲಿ ಕಲೆಯನ್ನು ಪ್ರದರ್ಶಿಸುತ್ತಿರುವ ನಗುವನ ಹಳ್ಳಿ ನರಸಿಂಹಯ್ಯ, ಕೋಡೂರು ರಾಮಮೂರ್ತಿಯವರಂಥ ಕಲಾವಿದರೂ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ತಿಪ್ಪೇಸ್ವಾಮಿಯವರು ಮೊದಲ ಬಾರಿಗೆ ನಮ್ಮ ಮುಂದೆ ತೆರೆದಿಟ್ಟಿರುವ ಈ ಪ್ರಪಂಚ ತುಂಬ ಸ್ವಾರಸ್ಯವಾಗಿ ಒಂದು ಹೊಸ ಅನುಭವವನ್ನು ನಮಗೆ ಕೊಡುತ್ತದೆ; ಈ ಕಲಾವಿದರನ್ನೂ ಅವರ ಕಲೆಯನ್ನೂ ಪರಿಚಯ ಮಾಡಿಕೊಳ್ಳಬೇಕೆಂಬ ಆಸೆ ಮೂಡುತ್ತದೆ; ಕರ್ಣಾಟಕದಲ್ಲೇಕೆ ನಮ್ಮ ಈ ಮೈಸೂರು ಪಟ್ಟಣದಲ್ಲೇ ಇಷ್ಟೊಂದು ಮಂದಿ ಖ್ಯಾತ ಚಿತ್ರಗಾರರಿದ್ದಾರೆಂದು ನಮ್ಮ ಮನಸ್ಸಿಗೆ ಬರುವುದು ಇಲ್ಲೇ ಮೊದಲು.


ಮತ್ತು ಬರಹಗಾರನಾದ ನನಗೆ ಶ್ರೀ ತಿಪ್ಪೇಸ್ವಾಮಿಯವರ ಕೆಲವು ಮಾತುಗಳೂ ಚಪ್ಪರಿಸುವಂತಿವೆ: "ನಡುವಿನಲ್ಲಿ ಅಂಗಿಯನ್ನು ನುಂಗಿಕೊಂಡಿರುವ ಶರಾಯಿಯನ್ನು ಅಪ್ಪಿಕೊಂಡಿರುವ ಮಂದವಾದ ಕಂಪು ವರ್ಣದ ಬೆಲ್ಟು—(ಪು. ೨೭);" "ಅವರ ಆ ಚೈತನ್ಯ ಆ ಪ್ರತಿಭೆ ಎಲ್ಲವೂ ಹಿಡಿಹಿಟ್ಟಿನ ಕರಾಳ ಹೋರಾಟದಲ್ಲಿ ಕಮರುತ್ತಿವೆ—(ಪು. ೫೭);" "ಒಂಕಿ ಒಂಕಿಯಾಗಿ ಆದರೂ ಓರಣವಾಗಿ ಹಬ್ಬಿಕೊಂಡಿರುವ ಗಡ್ಡ ಮೀಸೆಗಳು—(ಪು. ೭೫);" "ಕಟ್ಟಡಗಳ ಒಂದೊಂದು ಪಾರ್ಶ್ವದಲ್ಲಿ ನಸುಗಪ್ಪಿನ ತೆರೆಯನ್ನು ಬಿಟ್ಟಂತೆ ನೆರಳು ಚೆಲ್ಲಿಕೊಂಡು ಸೂರ್ಯನ ಇಳಿಮುಖವನ್ನು ತೋರುತ್ತದೆ; ಮತ್ತೊಂದು ಮುಖದಲ್ಲಿ ಗೋಡೆಗಳ ಮೇಲೆ ಬಿಸಿಲಿನ ಬೆಳ್ಳಿಚಾಟೆ ಮಿರುಗುತ್ತಿದೆ (ಪು. ೭೭)—" ಹೀಗೆಯೇ. ತಿಪ್ಪೇಸ್ವಾಮಿಯವರು ತಮ್ಮದೇ ಆದ ಒಂದು ಬರವಣಿಗೆಯ ರೀತಿಯನ್ನು ಪಡೆದಿದ್ದಾರೆ.

ಚಿತ್ರಗಾರಿಕೆ ಸಂಗೀತದಷ್ಟೇ ಮೋಹಕವಾದ ಕಲೆ: ಅಲ್ಲಿ ಸ್ವರ ಮತ್ತು ಲಯ, ಇಲ್ಲಿ ಬಣ್ಣ ಮತ್ತು ಗೆರೆ. ಸಂಚಾರಿಭಾವಗಳನ್ನು ಬಿಡಿಸಿ 'ರಸ'ವನ್ನು ಮುಟ್ಟುವುದರಲ್ಲಿ ಇದು ಸಾಹಿತ್ಯಕಲೆಯನ್ನು ತುಂಬ ಹೋಲುತ್ತದೆ. ಇದರಲ್ಲಿ ಭಾವಗೀತಗಳುಂಟು, ಕಥನಕವನಗಳುಂಟು; ಮಹಾಕಾವ್ಯಗಳುಂಟು. ಲೋಕಾನುಭೂತಿಯ ಯಾವುದೋ ಒಂದು ಭಾವಗುಂಭಿತಕ್ಷಣ

ವನ್ನು ಹಿಡಿದು ನಿಲ್ಲಿಸಿ ಅದು ನಿರಂತರಾನಂದ ಸ್ಯಂದಿಯಾಗುವಂತೆ ಮಾಡುವ ಚಮತ್ಕಾರ ಸಾಮಾನ್ಯಲಭ್ಯವಲ್ಲ. ಮನುಷ್ಯ ಈ ಸಿದ್ಧಿಗಾಗಿ ತನ್ನೆಲ್ಲ ಜೀವಿತವನ್ನೂ ವಿಾಸಲಾಗಿಡುವುದರಲ್ಲಿ ಆಶ್ಚರ್ಯವೇನಿಲ್ಲ. ಕಲೆಗಾಗಿ ದುಡಿ ಯುವವರನ್ನು ಕಂಡರೆ ನಮ್ಮ ಮನಸ್ಸು ನಮ್ರವಾಗಿ ಮಮತೆ ತೋರುವುದು ಸಹಜ. ಸ್ವತ: ಕಲೆಗಾರರೇ ಇಂಥ ನಿರ್ದುಷ್ಟ ಮನಸ್ಸಿನಿಂದ ತಮ್ಮ ಜತೆ ಗಾರರನ್ನು ಪರಿಚಯಮಾಡಿಕೊಡುವುದು ತುಂಬ ಮೆಚ್ಚತಕ್ಕ ಸಂಗತಿ. ಶ್ರೀಮಾನ್ ತಿಪ್ಪೇಸ್ವಾಮಿಯವರನ್ನು ನಾನು ಮನ:ಪೂರ್ವಕ ಅಭಿ ನಂದಿಸುತ್ತೇನೆ. ಅವರ ಕಲೆಯ ಜಾಣ್ಮೆ ಸಹ ನನ್ನ ಸ್ವಂತ ಅನುಭವಕ್ಕೆ ಬಂದಿದೆ. ನನಗೆ ನಮ್ಮೂರ ದೇವಸ್ಥಾನದ ಒಂದು ವರ್ಣಚಿತ್ರವನ್ನೂ ಮತ್ತೊಂದು ಪ್ರಕೃತಿಚಿತ್ರವನ್ನೂ ಅವರು ಕೊಟ್ಟಿದ್ದಾರೆ. ಅವನ್ನು. ಅದರಲ್ಲೂ ನಮ್ಮ ಗುಡಿಯ ಚಿತ್ರವನ್ನು, ನೋಡಿದಾಗಲೆಲ್ಲಾ ನನಗೆ ಅಪೂರ್ವ ಆನಂದವಾಗುತ್ತದೆ. ಅದರಿಂದಲೇ ನನಗೆ ಫೋಟೋ ಗ್ರಾಫಿಗಿಂತ ಚಿತ್ರಕಲೆ ಸಾರತರ ಮತ್ತು ಸಾರ್ಥಕವೆಂಬುದು ಮನದಟ್ಟಾದದ್ದು. ನಮ್ಮೂರ ಗುಡಿಯ ಯಾವ ಫೋಟೋದಿಂದಲೂ ನನಗಾಗದ ತುಷ್ಟಿ ಇದರಿಂದಾಗಿದೆ. ಮತ್ತು ಶ್ರೀ ತಿಪ್ಪೇಸ್ವಾಮಿಯವರು ಸುಜನರು, ರಸಿಕರು, ಸರಸಿಗಳು; ಅವರ ಈ ಪುಸ್ತಕವನ್ನು ಜನ ಮೆಚ್ಚಿ ಸ್ವಾಗತಿಸುವುದರಲ್ಲಿ ನನಗೆ ಶಂಕೆಯಿಲ್ಲ. ಕನ್ನಡದ ಕಲೆ ಬೆಳೆಯಲಿ, ಕನ್ನಡನಾಡು ಮತ್ತು ಜನ ಎಲ್ಲ ದಿಸೆಯಲ್ಲೂ ಉನ್ನತಿ ಯನ್ನು ಕಾಣಲಿ ಎಂಬ ಹಾರೈಕೆಯ ನುಡಿಯೊಡನೆ ಈ ಮುನ್ನುಡಿಯ ಮಾತು ಮುಗಿಯಲಿ.

ಶಂ

ಪು. ತಿ. ನ



INTRODUCTION

Every cobbler praises his own leather. So do others in their respective professions. So do artists also. Every painter thinks that his style is the best ; his technique the most difficult. Even in their personal relationship. One feels superior to the other. And usually, with rare exceptions, of course, there is never much love lost between two artists. They are made that way, like women !

And, therefore, a book on artists by one of their contemporaries is an unusual event. And that exactly what has been attempted by Shri P.R. Thippe swamy in this book of more than 340 pages covering the lives and works of 54 of his contemporary painters in Karnataka. And what is more intriguing is that these sketches are written with sympathy and understanding and with no malice or prejudice. This is indeed a creditable effort and the author may well congratulate himself on this objective approach, so rare among his tribe.

Sri Thippe swamy has taken a lot of pains to gather materials for his book from various sources, apart from his personal contacts and impressions. The interesting part of the book is that within the brief

space of six to seven pages, he gives interesting deatils of the early lives of the artists, their trials and successes and their aspirations and achievements. He recalls to our minds even such forgotten episodes like K. Venkatappa suing in court the Ramakrishna Mission in calcutta token damages for printing in their religious journal, in the wrong way, a fine line drawing of his, "Ardhanari-shwara".

This exquisite graphic art of the late Venkatappa's brings to the present writer's mind poignant memories of it. Usually, Venkatappa never parts with his creations to anybody, either for love or money. In a generous mood, for some little help done to him by this Writer, he presented this drawing with a warning and advice where and how it should be kept. A year later, at an exhibition arranged at St. Andrew's Hall Bangalore, to which it was lent, the picture mysteriously disappeared: in plain words, was stolen. It required all the ingenuity of this writer to break the news to the artist and a philosophical attitude to get over the shock.

We have in this book, then, thumb-nail sketches of most of the painters of Karnataka some well-known and others not so well-known, who are known to the author, and with whose works he is familiar. K. Venkatappa, M. Veerappa, M. V. Minajigi, K. K. Hebbar, Rumale Chennabasaviah, S. S. Kukke, S N Swamy, S V. Somasundram, S. R. Iyengar, Y. Nagaraju, Hanumiah and many more find their due placesin this book, all etched in brief broad out lines

but with significant details Thouh it is not a critical study or survey of the works of his contemporaries, there are sufficient references to their technical and aesthetical merits.

Thippe swamy has an easy style of writing and succeeds in conveying to his readers what he wishes to say in simple readable Kannada. In conclusion, let me strike a personal note. Though I cannot read Kannada I have enough knowledge of the language to understand and appreciate it when spoken or read out to me. I had most of these profiles read out and I found them both interesting and informative. I have much pleasure in recommending it to all lovers of art in Karnataka, and even outside it.

G. Venkatachalum

ಕಲಾಭಿಮಾನಿಗಳೆ....

ಇಪ್ಪತ್ತು ವರ್ಷಗಳ ಹಿಂದೆ ಕಲಾಶಾಲೆಯನ್ನು ಅರಸಿಕೊಂಡು ನಾನು ಮೈಸೂರಿಗೆ ಬಂದೆನು. ದಸರಾ ಕಲಾಪ್ರದರ್ಶನಗಳ ಸಮಿಾಕ್ಷೆಯಿಂದ ನನ್ನ ಕಲಾಭಿಮಾನ ಸಂಸ್ಕಾರಗೊಳ್ಳುತ್ತಾ ಬಂದಿತು. ಅಷ್ಟೇ ಅಲ್ಲ ಕಲಾವಿದರ ತೌರೂರಾಗಿರುವ ಮೈಸೂರು ನಗರದ ಅನೇಕ ಗಣ್ಯಕಲಾವಿದರ ಹಾಗೂ ಅವರ ಕಲಾಕೃತಿಗಳ ಸಂಪರ್ಕ ನನಗುಂಟಾದುದು ಒಂದು ಮಹಾ ಭಾಗ್ಯವೆಂದೇ ಹೇಳಬೇಕು. ನಾನು ಮೈಸೂರಿಗೆ ಬರಲು ಮುಖ್ಯ ಕಾರಣರು ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರು. ನನ್ನ ಹುಟ್ಟೂರಾದ ಹರ್ತಿಕೋಟೆಗೆ ೧೯೪೩ರಲ್ಲಿ ಯಾವುದೋ ಸಮಾರಂಭಕ್ಕೆ ಆಗಮಿಸಿದ್ದ ಅವರು ನಾನು ರಚಿಸಿದ್ದ ಗಾಂಧೀಜಿಯವರ ಭಾವಚಿತ್ರವನ್ನು ನೋಡಿ ಮೆಚ್ಚಿಕೊಂಡು ನನ್ನ ತೀರ್ಥರೂಪವರಿಗೆ ಕಲಾಶಿಕ್ಷಣಕ್ಕಾಗಿ ನನ್ನನ್ನು ಮೈಸೂರಿಗೆ ಕಳಿಸುವಂತೆ ಸೂಚಿಸಿದರು. ಮೈಸೂರಿಗೆ ಬರಲು ಗಣ್ಯಕಲಾವಿದರೊಬ್ಬರಿಗೆ ಪರಿಚಯದ ಪತ್ರವನ್ನು ಅವರೇ ಕೊಟ್ಟರು. ನನ್ನ ಕಲಾಜೀವನಕ್ಕೆ ಈ ರೀತಿ ಹೊಸ ತಿರುವನ್ನು ತಂದುಕೊಟ್ಟು ನನ್ನ ಚೇತನದ ಬೆಳವಣಿಗೆಗೆ ಕಾರಣರಾದ ಶ್ರೀ ನಿಜಲಿಂಗಪ್ಪನವರನ್ನೂ ಆ ಹಿಂದೆಯೇ ನನ್ನ ಕಲೆಗೆ ತುಂಬು ಹೃದಯದಿಂದ ಪ್ರೋತ್ಸಾಹನೀಡಿ ಹುರುದುಂಬಿಸುತ್ತಿದ್ದ ಪೂಜ್ಯ ವಿದ್ಯಾಗುರುಗಳಾದ ದಿ. ಹೊಯ್ಸಳರನ್ನೂ ನನ್ನ ಕಲೆಯ ಬಗ್ಗೆ ಆಸಕ್ತಿಯನ್ನು ತೋರಿ ಆಶೀರ್ವದಿಸುತ್ತ ಬಂದಿರುವ ನನ್ನ ಪೂಜ್ಯ ಮಾತೃಶ್ರೀಯವರನ್ನೂ ಇಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಆದ್ಯಕರ್ತವ್ಯವಾಗಿದೆ.

ಮೈಸೂರಿಗೆ ಬಂದಮೇಲೆ ಕಲಾವಿದರ ನಿಕಟಸಂಪರ್ಕದ ಫಲವಾಗಿ ನನ್ನ ಕಲಾಸಾಧನೆಯ ಜೊತೆಗೆ ಕಲಾವಿದರ ಪರಿಚಯವನ್ನೂ ಅಲ್ಲಲ್ಲಿ ಪ್ರಚುರಪಡಿಸುವ ಹಂಬಲ ನನ್ನದಾಯಿತು; ಸಾಹಿತ್ಯದ ಗೀಳೂ ಹಿಡಿಯಿತು. ಮಿತ್ರರಾದ ಹೇಮದಳ ರಾಮದಾಸ ಮತ್ತು ನಾನು

ಕಲಾಕ್ಷೇತ್ರ ' ಸಚಿತ್ರ ಹಸ್ತಪತ್ರಿಕೆಯನ್ನು ಮಹಾರಾಜಾಕಾಲೇಜಿನ ನಮ್ಮ ವಿದ್ಯಾರ್ಥಿ ದೆಸೆಯಲ್ಲಿ ಹೊರತಂದೆವು. ಎರಡು ಮೂರು ವರ್ಷಗಳಲ್ಲಿ ' ಜೀಶಂಪ ' ಅವರು ನಮ್ಮ ಜೊತೆಯನ್ನು ಕೂಡಿಕೊಂಡರು. ' ಕಲಾಕ್ಷೇತ್ರ ' ಪ್ರಕಾಶನ ಸಂಸ್ಥೆಯೂ ಆಯಿತು. ಇದೇ ವೇಳೆಗೆ ಬರೆಯುವ ಹುಚ್ಚು ನನ್ನನ್ನು ಕಲಾವಿದರ ಪರಿಚಯ ಲೇಖನಗಳಿಗೆ ದಾರಿಮಾಡಿಕೊಟ್ಟಿತು. ಅನೇಕ ಪ್ರತಿಭಾಶಾಲಿ ಕಲಾವಿದರಿದ್ದರೂ ಎಲ್ಲೋ ಒಬ್ಬಿಬ್ಬರ ಹೆಸರುಗಳು ಮಾತ್ರ ಪತ್ರಿಕೆಗಳಲ್ಲಿ ಪುಸ್ತಕಗಳಲ್ಲಿ, ಮೆರೆಯುತ್ತಿದ್ದುದನ್ನು ನೋಡಿ ವ್ಯಥೆಯಾಯಿತು. ತೆರೆಮರೆಯಲ್ಲಿ ಮೌನವಾಗಿ ಕಲಾಸಾಧನೆಯಲ್ಲಿ ತೊಡಗಿದ್ದ ಕಲಾವಿದರ ವಿವರಗಳನ್ನು ಕಲಾಸಾಧನೆಯ ಪರಿಗಳನ್ನೂ ಸಂಗ್ರಹಿಸುತ್ತಾ ಬಂದೆ.

೧೯೫೫ರ ವೇಳೆಗೆ ಮೈಸೂರಿನಿಂದ ಪ್ರಕಟವಾಗುತ್ತಿದ್ದ ' ವಿಶ್ವಕರ್ಮ ಮಾಸಪತ್ರಿಕೆಗೆ ಒಂದೆರಡು ಪರಿಚಯ ಲೇಖನಗಳನ್ನು ನೀಡಲು ಪ್ರೇರೇಪಿಸಿದವರು ಆ ಪತ್ರಿಕೆಯ ಸಂಪಾದಕರಾಗಿದ್ದ ದಿ. ಮು. ಗಂಗಾಧರ ಮೂರ್ತಿಗಳು. ಪ್ರಕಟವಾದ ಲೇಖನಗಳ ಮೂಲಕ ಸ್ಫೂರ್ತಿಯನ್ನು ಪಡೆದ ನಾನು ಅಲ್ಲಿಂದೀಚೆಗೆ ' ಚಿತ್ರಗುಪ್ತ ' ' ಜನಪ್ರಗತಿ ' ಹಾಗೂ ' ಸಂಯುಕ್ತ ಕರ್ನಾಟಕ ' ಪತ್ರಿಕೆಗಳಲ್ಲಿ ಕಲಾವಿದರ ಕೃತಿಗಳೊಡನೆ ಪರಿಚಯಗಳನ್ನು ಆಗಾಗ ಪ್ರಕಟಿಸುತ್ತಲೇ ಬಂದೆ. ಬಳ್ಳಾರಿಯ ಸಾಹಿತ್ಯ ಸಮ್ಮೇಳನದಲ್ಲಿ ' ತೆರೆ ಮರೆಯ ಕನ್ನಡ ಚಿತ್ರಕಾರರನ್ನು ಕುರಿತು ಮಾತನಾಡಿದೆ. ಮತ್ತೆ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಕಲಾವಿದರ ಕೃತಿಗಳನ್ನೇ ಕುರಿತಾದ ವಿಮರ್ಶಾತ್ಮಕ ಲೇಖನಗಳನ್ನು ಮೇಲಿಂದ ಮೇಲೆ ಪ್ರಕಟಿಸಿದೆ. ನನ್ನ ಲೇಖನ ಕಲೆ ಕುದುರಿತು; ಅದಕ್ಕೆ ಒಂದು ಸ್ವರೂಪವೂ ಬಂದಿತು. ಅದರ ಫಲವೇ ಈ ' ಕಲೋಪಾಸಕರು '. ಇಪ್ಪತ್ತು ವರ್ಷಗಳ ಅನುಭವದ ಮೇಲೆ ಬೆಳೆದುಬಂದ ಈ ಕೃತಿ ಗ್ರಂಥರೂಪದಲ್ಲಿ ತಮ್ಮ ಕೈ ಸೇರುತ್ತಿದೆ.

ಇದಕ್ಕೆ ಮುಖ್ಯ ಕಾರಣರು ನನ್ನ ಆತ್ಮೀಯರೂ ಕಲಾಭಿಮಾನಿಗಳೂ ಆದ ' ಕರಾಕೃ ' ಅವರು. ಇಂಥದೊಂದು ಸಾಹಸಕ್ಕೆ ಅವರು ಮನಸ್ಸು ಮಾಡಿ ಈ ಕೃತಿಯನ್ನು ಸರ್ವಾಂಗ ಸುಂದರವಾಗಿ ಹೊರತರಲು ಅವರು ತುಂಬುಹೃದಯದಿಂದ ಪ್ರಯತ್ನಪಟ್ಟಿದ್ದಾರೆ. ನನ್ನ ಬರವಣಿಗೆಯ ಶಕ್ತಿಯನ್ನು

ಗುರುತಿಸಿ ಈ ಕೆಲಸ ನಿಮ್ಮಿಂದ ಮಾತ್ರ ಸಾಧ್ಯ ಎಂದು ಹೇಳುತ್ತ ಬರೆಯಲು ಪ್ರೇರೇಪಿಸಿ ಅಂಕುಡೊಂಕನ್ನು ನಿರ್ವಂಚನೆಯಿಂದ ತಿದ್ದುತ್ತಾ ಬಂದ ಆತ್ಮೀಯ 'ಜೀಶಂಪ' ಅವರೂ ಈ ಕೃತಿ ಹೊರ ಬರುವಲ್ಲಿ ಸಹಕರಿಸಿದ್ದಾರೆ. ಈ ಇಬ್ಬರು ಸೋದರ ಸ್ವರೂಪಿಗಳಿಗೆ ನಾನು ಅನಂತ ಋಣಿಯಾಗಿದ್ದೇನೆ.

ಅಪಾರ ಸಂಖ್ಯೆಯಲ್ಲಿ ಕಲಾಸಂಬಂಧವಾದ ನನ್ನ ಲೇಖನಗಳ ಪ್ರಕಟಣೆಗೆ ದಾರಿಮಾಡಿಕೊಟ್ಟ ಕಲಾಭಿಮಾನಿ ಪತ್ರಿಕೋದ್ಯಮಿ ಮಿತ್ರರನೇಕರನ್ನು ನಾನು ಇಲ್ಲಿ ಸ್ಮರಿಸಿಕೊಳ್ಳಬೇಕಾದುದು ಅಗತ್ಯ. ಮುಖ್ಯವಾಗಿ ಶ್ರೀಗಳಾದ ಎಂ. ಎಸ್. ಭರದ್ವಾಜ್, ಬಿ. ಶ್ರೀನಿವಾಸಮೂರ್ತಿ, ಎಂ. ಬಿ. ಸಿಂಗ್, ಮ. ಶ್ರೀಧರಮೂರ್ತಿ, ಹ. ವೆಂ. ನಾಗರಾಜರಾವ್ ಮತ್ತು ಎಸ್. ಬಿ. ದಾನಿ ಮುಂತಾದವರಿಗೆ ನನ್ನ ವಂದನೆಗಳು ಸಲ್ಲಬೇಕು.

ನನ್ನ ಲೇಖನಗಳ ಬಗ್ಗೆ ಕಲಾಕೃತಿಗಳ ಬಗ್ಗೆ ಅಪಾರ ವಿಶ್ವಾಸವನ್ನು ತೋರುತ್ತಾ ಬಂದು ಪ್ರೋತ್ಸಾಹಿಸಿದ ಪೂಜ್ಯರಾದ 'ಕುವೆಂಪು', 'ಪುತಿನ', ಯಾಮುನಾಚಾರ್ಯ, ತ. ಸು. ಶಾಮರಾಯ, ಪ್ರೊ. ದೇ. ಜವರೇಗೌಡ, ಡಾ. ಪ್ರಭುಶಂಕರ, 'ಅನಕೃ', 'ತರಾಸು' 'ನಿರಂಜನ' ಮುಂತಾದವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

'ಹರಕೆಯ ನುಡಿ' ಮತ್ತು ಮುನ್ನುಡಿಗಳಿಂದ ನನ್ನನ್ನು ಹರಸಿರುವ ಹಿರಿಯರಾದ ವರಕವಿ 'ಪುತಿನ' ಹಾಗೂ ಸುಪ್ರಸಿದ್ಧ ಕಲಾವಿಮರ್ಶಕರಾದ ಶ್ರೀ ಜಿ. ವೆಂಕಟಾಚಲಂ ಇವರಿಗೆ ನಾನು ಅನಂತ ಋಣಿ.

'ಮಯೂರ' ಮುದ್ರಣಾಲಯದ ಮಿತ್ರರಾದ ಶ್ರೀ ಪ. ಮಲ್ಲೇಶ್ ಮತ್ತು ಎಸ್. ಪಟ್ಟಾಭಿರಾಮನ್ ಅವರು ನಾನು ಕೊಟ್ಟ ತೊಂದರೆಗಳನ್ನೆಲ್ಲಾ ತಾಳ್ಮೆಯಿಂದ ಸಹಿಸಿಕೊಂಡು ಕೃತಿ ಇಷ್ಟು ಶೀಘ್ರವಾಗಿ ಹೊರಬರಲು ಸಹಕರಿಸಿದ್ದಾರೆ. ಇವರಿಗೂ ನನ್ನ ವಂದನೆಗಳು.

ಕೇವಲ ಐವತ್ತುನಾಲ್ಕು ಮಂದಿ ಕಲಾವಿದರಿಗೆ ಮಾತ್ರ ಈ ಕೃತಿಯನ್ನು ಕೆಲವು ಅನಿವಾರ್ಯದಿಂದ ಸೀಮಿತಗೊಳಿಸಬೇಕಾಯಿತು. ಉಳಿದ ಕಲಾವಿದರ ಹಾಗೂ ಶಿಲ್ಪಿಗಳ ಪರಿಚಯಗಳನ್ನು ಆದಷ್ಟು ಬೇಗ ಹೊರತರುವ ಇಚ್ಛೆ ನನ್ನದಾಗಿದೆ.

ಪಿ. ಆರ್. ತಿಪ್ಪೇಸ್ವಾಮಿ

ಅರ್ಪಣೆ



ಪಟೇಲಗಿರಿಯಿಂದ
ಕಲಾರಂಗಕ್ಕೆ
ನನ್ನನ್ನು ಬಿಟ್ಟುಕೊಟ್ಟ
ಕಲಾಭಿಮಾನಿಗಳೂ
ದೈವಭಕ್ತರೂ
ಉದಾರ ದಾನಿಗಳೂ ಆದ
ನನ್ನ ತಾತ
ಕೈ. ಪಟೇಲ್ ತಿಪ್ಪಯ್ಯನವರ
ಪುಣ್ಯಸ್ಮರಣೆಗೆ.

ಪರಿವಿಡಿ

*ಕೆ. ವೆಂಕಟಪ್ಪ

ಕಲಾವಿದ ಶ್ರೀ ವೆಂಕಟಪ್ಪನವರು ಕನ್ನಡನಾಡಿನ ಒಂದು ಅಮೂಲ್ಯ ಆಸ್ತಿ. ಇಂಥ ಕಲಾವಿದರು ಇಡೀ ಭಾರತದಲ್ಲಿಯೇ ಒಬ್ಬಿಬ್ಬರು ಮಾತ್ರ ಇರುವರೆಂದರೆ ಅದೇನೂ ಅತಿಶಯೋಕ್ತಿಯಲ್ಲ. ಬಾಲ್ಯದಲ್ಲಿಯೇ ರಾಜಾಶ್ರಯವು ದೊರಕಿದ ಕಾರಣ ವಿಕಸಿತವಾದ ಇವರ ಕಲಾಪ್ರತಿಭೆಯ ಕುಸುಮ ಅನೇಕ ವರ್ಷಗಳ ಕಾಲ ತನ್ನ ಸೌರಭವನ್ನು ಬೀರುತ್ತಾ ಬಂದಿದೆ. ಆದರೂ ಸೌರಭವನ್ನು ಅನುಭವಿಸಿದವರು ವಿರಳರೆಂದೇ ಹೇಳಬೇಕು. ಕೇಂದ್ರ

---

* ೧೯೬೫ನೇ ಮೇ ತಿಂಗಳಲ್ಲಿ ಶ್ರೀ ಕೆ. ವಿ. ಯವರು ನಮ್ಮನ್ನಗಲಿದುದು ನಮ್ಮ ದೌರ್ಭಾಗ್ಯ.

ಲಲಿತಕಲಾ ಅಕಾಡೆಮಿಯವರು ಶ್ರೀಯುತರನ್ನು ದಿನಾಂಕ ೬-೮-೧೯೭೨ ರಂದು ಗೌರವಿಸಿದರು. ಈ ಭಾರತ ಮಾತೆಯ ಸುಪುತ್ರನನ್ನು ಬೆಂಗಳೂರಿನ ಶ್ರೀಯುತರ ಸ್ವಗೃಹದಲ್ಲಿಯೇ ಗೌರವಿಸಿದುದು ಒಂದು ಹೆಮ್ಮೆಯ ವಿಷಯ.

ಅವರ ಸಂದರ್ಶನ ಇಲ್ಲಿದೆ....

ಅನೇಕ ತಿಂಗಳುಗಳ ತರುವಾಯ ಹಿರಿಯ ಕಲಾಸಾಧಕ ಶ್ರೀ ಕೆ. ವೆಂಕಟಪ್ಪನವರನ್ನು ಮತ್ತೆ ನೋಡುವ ಸದವಕಾಶ ಒದಗಿತು. ೧೯೭೨ರ ಜುಲೈ ೨೮ರ ಶನಿವಾರ ಸಂಜೆ ಮಲ್ಲೇಶ್ವರದ ಹದಿನೆಂಟನೇ ಕ್ರಾಸಿನ ಆ ವಿಶಾಲ ಬಯಲಿನ ನಡುವೆ ಇರುವ ಅವರ ಸೌಧವನ್ನು ತಲುಪಿದಾಗ, ಅಲ್ಲಿನ ಸನ್ನಿವೇಶ, ಆ ಸುತ್ತಣ ದಟ್ಟವಾದ ಮರಗಳು ಅಲ್ಲಲ್ಲಿ ಬೆಳೆದ ಗಿಡಮರಗಳೂ, ನಾಲ್ಕಾರು ಹುತ್ತಗಳೂ, ಈ ನಡುವೆ ಬೀಗಮುದ್ರೆಯಾದ ವಿಶಾಲ ಸೌಧದೊಳಗೆ ಏಕಾಂಗಿಯಾಗಿ ಭಾರತದ ಹೆಮ್ಮೆಯ ಕಲಾವಿದ ಅದೇ ಕಲಾಧ್ಯಾನದಲ್ಲಿ ಮಲಗಿರುವ ದೃಶ್ಯವನ್ನು ಕಂಡು ಮನಸ್ಸು ಗಂಭೀರವಾಯಿತು.

ಅಂದು ಇಲ್ಲಿಗೆ ಎರಡು ವರ್ಷಗಳ ಹಿಂದೆ ಪ್ರಥಮಬಾರಿಗೆ ಕಲಾಯೋಗಿಯನ್ನು ಕಾಣುವ ಪುಣ್ಯದಿನದ ನೆನಪು ಕಣ್ಣ ಮುಂದೆ ಹಾದು ಹೋಯಿತು. ಅವರ ಸಹಾಯಕ ಬಂದು ಬಾಗಿಲನ್ನು ತೆಗೆದು ಒಳಗೆ ಕರೆದೊಯ್ದಾಗ ಹೊರಕೋಣೆಯಲ್ಲಿ ನಿಂತ ನಮಗೆ ಮೊದಲು ಕಣ್ಣಿಗೆ ಬಿದ್ದ ದೃಶ್ಯ "ನಿಮ್ಮ ಜೋಡುಗಳನ್ನು ದಯವಿಟ್ಟು ಇಲ್ಲಿಯೇ ಬಿಡಿ" ಎಂಬ ಇಂಗ್ಲಿಷ್ ಹಾಗೂ ಕನ್ನಡದ ದ್ವಿಭಾಷಾಫಲಕ. ಅದನ್ನು ಕಂಡು ಮನಸ್ಸಿನಲ್ಲಿ ಯಾವುದೋ ದೇಗುಲಕ್ಕೆ ಹೋಗುವ ಅನುಭವವಾಯಿತು. ಕಲಾವಿದರು ತಮ್ಮ ಬದುಕಿನಲ್ಲಿ ಕಲಾಸಾಧನೆಯಲ್ಲಿ ಯಾವ ರೀತಿಯ ಅಚ್ಚುಕಟ್ಟನ್ನು ಕಾಪಾಡಿಕೊಂಡು ಬಂದಿದ್ದಾರೆ ಎಂಬುದಕ್ಕೆ ಒಳಗಿನ ವಾತಾವರಣವೂ ಪೋಷಕವಾಯಿತು.

ಒಂದೆರಡು ದೊಡ್ಡಕೋಣೆಗಳನ್ನು ದಾಟಿ ಎಡಕ್ಕೆ ತಿರುಗಿದರೆ ಶ್ರೀ ಕೆ. ವಿ. ಯವರು ಮಂಚದ ಮೇಲೆಯೇ ಸ್ವಾಗತ ಬಯಸಿದರು. ಸುಲಭ ಪ್ರಚಾರಕ್ಕಾಗಲೀ, ಪ್ರಶಂಸೆಗಳಿಗಾಗಲೀ ಜಗ್ಗದ ನಿಷ್ಠಾವಂತ ಕೆ. ವಿ. ಯವರನ್ನು ಕಂಡ ನಮ್ಮ ಹೃದಯ ಗೌರವದಿಂದ ಬಾಗಿತು.

ಕೆ. ವಿ. ಯವರು ಇಂದೂ ಎಂದಿನಂತೆ ಹಾಸಿಗೆಯನ್ನು ಹಿಡಿದೇ

ಇದ್ದಾರೆ. ಅನಾರೋಗ್ಯದ ಭಾರದಲ್ಲಿ ಅವರ ಶಕ್ತಿ ಕುಗ್ಗಿದಂತೆ ಕಂಡರೂ ಅವರ ಮುಖದ ತೇಜಸ್ಸು ಅಚ್ಚಳಿಯದಿದೆ. ಕಣ್ಣಿನಲ್ಲಿ ಅದೇ ಹೊಳಪು. ಅದೇ ಸೂಕ್ಷ್ಮದೃಷ್ಟಿ. ಹಾಗೆಯೇ ಸ್ಫುಟವಾಗಿ ಸ್ವಚ್ಛವಾಗಿ ಮಾತನಾಡುವ ಭಂಗಿ.

ತಪಸ್ವಿ ಕಲಾವಿದ

ಎಪ್ಪತ್ತೈದರ ಗಡಿಯಲ್ಲಿರುವ ಕೆ. ವಿ. ಯವರಿಗೆ ತಮ್ಮ ಅಪಾರ ವರ್ಷದ ಬಹುಮುಖ ಕಲಾಸಾಧನೆಯ ತರುವಾಯ ಈ ವಿಶ್ರಾಂತಿ ಅಗತ್ಯ ವಾಯಿತೇನೋ ಎಂದು ನನಗೆ ತೋರಿದರೂ ಅವರು ತಮ್ಮ ಮೈಯಲ್ಲಿ ಅಣುರಕ್ತವಿರುವವರೆವಿಗೂ ಕುಂಚವನ್ನು ಕೆಳಗಿಡುವವರಲ್ಲ. ಅನೇಕ ವರ್ಷ ಗಳು ಅವರ ಸಹಪಾಠಿಯಾಗಿದ್ದ ಶೃತಿ ವೀಣೆಯೂ ಈಗ ಮೌನ ತಾಳಿದೆ. ಮತ್ತೊಂದು ಕೊಠಡಿಯಲ್ಲಿ ವರ್ಣ ತೂಲಿಕೆಗಳೂ, ಫಲಕಗಳೂ, ಚಿತ್ರ ರಚನಾ ಚೌಕಟ್ಟುಗಳೂ ನಿರ್ಜೀವವಾಗಿ ಬಿದ್ದಂತೆ ಕಾಣುತ್ತವೆ. ಕಲಾಗಾರ ದಲ್ಲಿ ಆಳೆತ್ತರದ ' ಪ್ಲಾಸ್ಟರ್ ಆಫ್ ಪ್ಯಾರಿಸ್ 'ನ ನಾಲ್ಕು ದೊಡ್ಡ ದೊಡ್ಡ ರಿಲೀಫ್‌ಗಳ ಮೇಲೆ ತೆಳುವಾದ ಕಾಗದವನ್ನು ಹೊದಿಸಿದೆ. ಮತ್ತೊಂದು ಕೋಣೆಯಲ್ಲಿ ಅವರ ಅಪೂರ್ವ ಶಿಲ್ಪಕೃತಿಗಳಾದ ರವೀಂದ್ರರು ಹಾಗೂ ಮಾಣಿ, ವೃತ್ತಾಕಾರದಲ್ಲಿ ಸಿದ್ಧಾರ್ಥ ಕೃತಿಗಳ ಮೇಲೆ ತೆಳ್ಳನೆಯ ಶುಭ್ರ ವಸ್ತ್ರವನ್ನು ಮುಚ್ಚಿದೆ. ಕೆ. ವಿ. ಯವರ ಸಹಪಾಟಿಗಳು ಇಷ್ಟೆ! ವಿಶಾಲವಾದ ಸೌಧದಲ್ಲಿ ತಮ್ಮ ಕಲಾಕೃತಿಗಳ ನಡುವೆ ಏಕಾಂಗಿಯಾಗಿ ಇರುವ ಈ ಕಲಾ ತಪಸ್ವಿ ಜನಜಂಗುಳಿಯನ್ನಾಗಲೀ, ಸುಖಭೋಗಗಳನ್ನಾಗಲೀ ಬಯಸಿದವ ರಲ್ಲ. ಕಲಾರಾಧನೆಯೊಂದನ್ನೇ ತಮ್ಮ ಜೀವನದ ಉಸಿರಾಗಿ ತಮ್ಮ ಬಾಳಿನ ಸರ್ವಸ್ವವಾಗಿ ಉಳಿಸಿಕೊಂಡು ಬಂದವರು.

ಕಲೆಯ ಬಗ್ಗೆ ಮಾತನಾಡುತ್ತ ಒಮ್ಮೆ "ಕಲೆಯಲ್ಲಿ ನಮ್ಮ ಜನಕ್ಕೆ ಅಭಿರುಚಿ ಕಡಿಮೆ" ಎಂದು ನುಡಿದು ದೃಷ್ಟಿಯನ್ನು ಒಂದು ಕಡೆ ಹೊರಳಿಸಿದರು. ಆ ಮಾತಿನ ಹಿಂದೆ ಅವರ ಬದುಕಿನಲ್ಲಿನ ಕಟುಸತ್ಯ ಅಡಗಿದಂತಿತ್ತು. ಈ ಕಲಾವಿದನ ಹಿರಿಮೆಯನ್ನು ಅರಿತೂ ನಮ್ಮ ಜನ ಅವ ರನ್ನು ಔದಾಸೀನ್ಯದಿಂದ ಕಂಡಿತು. ನಾಡಿಗೆ ಅವರಿಂದ ಹೆಚ್ಚು 'ಕಲಾಸೇವೆಯ

ಅವಕಾಶವಿಲ್ಲದಂತಾಯಿತು. ಆದರೂ ಕೆ. ವಿ. ಯವರ ಉಳಿದಿರುವ ಅಲ್ಪ ಸ್ವಲ್ಪ ಕೃತಿಗಳೇ ನಮ್ಮ ನಾಡಿನ ಅಮೂಲ್ಯ ಆಸ್ತಿ.

ರಚನಾಕೌಶಲ

ಕೆ. ವಿ. ಯವರ ಕಲಾಗಾರದಲ್ಲಿನ ಅವರ ಅಮರ ಕೃತಿಗಳಲ್ಲಿ ಇನ್ನೂ ಅನೇಕವು ಉಳಿದಿವೆ. ಪ್ಲಾಸ್ಟರ್‌ನ ರಿಲೀಫ್ ಕೆಲಸದಲ್ಲಿ ಇವರು ಚಿತ್ರಕಲೆಯಲ್ಲೇ ಅದ್ವಿತೀಯವಾದ ಪ್ರೌಢಿಮೆಯನ್ನು ತೋರಿದ್ದಾರೆ. ಇದು ವರ್ಣರಹಿತ ಕಲೆ. ಆದರೂ ವರ್ಣಗಳ ಪ್ರಭಾವವನ್ನೇ ತರಬೇಕು. ಅವುಗಳ ರಚನೆಯಲ್ಲಿ ಉಬ್ಬು ತಗ್ಗುಗಳ ಕುಶಲತೆ ಬಹು ಮುಖ್ಯವಾದುದು. ಅದು ಎಷ್ಟು ಸೂಕ್ಷ್ಮವಾಗಿರುತ್ತದೋ ಎಷ್ಟು ತೆಳುವಾಗಿರುತ್ತದೋ ಅಷ್ಟೂ ಶಿಲ್ಪಿಯ ಕಲಾತಜ್ಞತೆ ವ್ಯಕ್ತವಾಗುತ್ತದೆ; ಅಷ್ಟೂ ಕಲಾರಚನೆ ಕಷ್ಟವಾಗುತ್ತದೆ. ಉಡುಪು ಹಾಗೂ ಚರ್ಮಗಳ ವ್ಯತ್ಯಾಸವನ್ನು ತೋರಿಸಬೇಕಾಗುತ್ತದೆ. ಕೆ. ವಿ. ಯವರ ನಾಲ್ಕು ದೊಡ್ಡ ರಿಲೀಫ್ ಕೃತಿಗಳು ಅವರ ಕಲಾಗಾರದಲ್ಲಿ ದೃಷ್ಟಿಯನ್ನು ಸೆಳೆಯುತ್ತವೆ. ಅರಣ್ಯದ ನಡುವೆ ಗುಹೆಯೊಂದರಲ್ಲಿ ತನ್ನ ಗುರು ದ್ರೋಣಾಚಾರ್ಯರ ಪ್ರತಿಮೆಯನ್ನು ಇಟ್ಟುಕೊಂಡು ಧನುರ್ವಿದ್ಯಾಭ್ಯಾಸದಲ್ಲಿ ತೊಡಗಿರುವ ಏಕಲವ್ಯನ ಶ್ರದ್ಧಾಸಕ್ತಿಗಳು ಅನುಪಮವಾಗಿ ವ್ಯಕ್ತವಾಗುವಂತಿರುವ ಕೃತಿ ಒಂದು ಕಡೆ ಇದ್ದರೆ, ಮತ್ತೊಂದು ಕಡೆ ಅದೇ ಮಹಾಭಾರತದಿಂದ ಆರಿಸಿಕೊಂಡ ದೃಶ್ಯದಲ್ಲಿ ಕೌರವ ಪಾಂಡವರಿಗೆ ದ್ರೋಣಾಚಾರ್ಯರು ಬಿಲ್ವಿದ್ಯೆಯ ಶಿಕ್ಷಣ ಕೊಡುತ್ತಿರುವ ರಮ್ಯ ನೋಟವು ಅಸದೃಶವಾಗಿದೆ. ಇವುಗಳ ಎದುರಿನಲ್ಲಿ ಶಿವತಾಂಡವದ ಅಪೂರ್ವಕೃತಿ ಆಕರ್ಷಕವಾದ ಭಂಗಿಯಲ್ಲಿ ಹೃದಯವನ್ನು ಸೆಳೆಯುತ್ತದೆ. ಇವೆಲ್ಲಕ್ಕಿಂತಲೂ ಮಿಗಿಲೆನಿಸುವ “ ಶಕುಂತಲೆಯ ಬೀಳ್ಕೊಡುಗೆ ” ದೃಶ್ಯ ಅಸಾಧಾರಣ ಕೃತಿ. ತನ್ನ ಪತಿಯ ರಾಜಗೃಹಕ್ಕೆ ತೆರಳುತ್ತಿರುವ ಶಕುಂತಲೆಯ ಮುಖದಲ್ಲಿ ಮೂರು ಭಾವಗಳನ್ನು ಕಲಾವಿದರು ತಂದಿದ್ದಾರೆ. ತನ್ನ ಪತಿಯನ್ನು ಸೇರುವ ಸಂತೋಷ ಒಂದು ಕಡೆಯಾದರೆ, ತನ್ನ ಆಪ್ತೇಷ್ಟರನ್ನು ಬಿಟ್ಟು ತೆರಳುವ ವೇದನೆ ಮತ್ತೊಂದು ಕಡೆ. ಹೊಸಜನ ಹೊಸಸ್ಥಳದ ಅನುಭವವನ್ನು ಹೊಂದುವ ಕುತೂಹಲಜನಕಸಂಕೋಚ ಒಂದು ಕಡೆ. ಹೀಗೆಯೇ

ಸಿದ್ಧಾರ್ಥನ ನಿರ್ಗಮನದೃಶ್ಯದಲ್ಲಿಯೂ ಶಾಂತಭಾವವು ಅಪೂರ್ವವಾಗಿ ವ್ಯಕ್ತಪಟ್ಟಿದೆ. ಪ್ರತಿಮೆಗಳಲ್ಲಿ "ರವೀಂದ್ರ"ರ ಕೃತಿ ವಿಶಿಷ್ಟವಾದುದು. ೧೯೩೨ ರಲ್ಲಿ ಮೈಸೂರಿಗೆ ರವೀಂದ್ರರು ಬಂದಾಗ ಅವರ ಐದಾರು ಭಂಗಿಗಳ ಭಾವಚಿತ್ರಗಳ ನೆರವಿನಿಂದ ರಚಿಸಿದ ಕೃತಿ ಇದು. ಮಹಾಕವಿಯ ಕೂದಲ ಎಳೆಎಳೆಗಳನ್ನೂ ಭಾವಪೂರ್ಣಮುಖಮುದ್ರೆಯನ್ನೂ ತರುವುದರಲ್ಲಿ ಶಿಲ್ಪಿ ತಮ್ಮ ಪ್ರತಿಭೆಯಲ್ಲಿ ಮೆರೆದಿದ್ದಾರೆ. ಕೆ. ವಿ. ಯವರು ತಮ್ಮ ಕಲಾ ಕೃತಿಗಳಿಗೆ ಹೇಗೆ ಗಣ್ಯವ್ಯಕ್ತಿಗಳನ್ನು ಆರಿಸಿಕೊಳ್ಳುತ್ತಿದ್ದರೋ ಹಾಗೆಯೇ ಸಾಮಾನ್ಯರ ಬದುಕನ್ನೂ ನಿರ್ಲಕ್ಷಿಸಿಲ್ಲ. ಅವರ "ಮಾಣಿ" ಈ ದೃಷ್ಟಿಯಿಂದ ಅಪೂರ್ವ ಕೃತಿ. ಈ ಮುಗ್ಧಬಾಲಕನ ಸಹಜಭಾವನೆಗಳನ್ನೂ, ಅವನ ನೈಜ ಸ್ವರೂಪದಲ್ಲಿ ಶಿಲ್ಪಿಗಳು ಅತ್ಯಂತ ಸಹಜತೆಯಿಂದ ತಂದಿದ್ದಾರೆ. ಕಿವಿಯ ಸುತ್ತುಮುರಿ, ಬೋಳುತಲೆಯ ನಡುವೆ ಬತ್ತಿಯಂತಿರುವ ಪುಡಿಜುಟ್ಟು- ಹೀಗೆ ವಿಚಿತ್ರವಾಗಿ ತೋರುವ ಈ ಕೃತಿಯನ್ನು ಯಾರೂ ಮರೆಯುವಂತಿಲ್ಲ. ಅಲ್ಲಿಯೇ ನೆಲದ ಮೇಲೆ ಯಾರೋ ಅಜಾಗರೂಕತೆಯಿಂದ ತುಳಿಯಲ್ಪಟ್ಟು ಭಿನ್ನವಾದ ಸಿದ್ಧಾರ್ಥ ಮೋಹಕವಾದ ತಾಮ್ರದ ರಿಲೀಫ್ ಕೃತಿ. ಅದನ್ನು ಅಲ್ಲಿ ಹಾಗೆಯೇ ಇರಿಸಲಾಗಿದೆ. ಅವರಿಗೆ ತುಂಬ ಆಪ್ತರಾಗಿ ಕಲೆಗೆ ತುಂಬು ಹೃದಯದಿಂದ ಪ್ರೋತ್ಸಾಹಮಾಡಿದ ದಿವಂಗತ ಕೃಷ್ಣರಾಜ ಒಡೆಯರ ಹಾಗೂ ಅವರ ಆಪ್ತಕಾರ್ಯದರ್ಶಿ ಸರ್. ಇ. ಮೆಕಾನಿಕೆ ಮತ್ತು ಅರಮನೆಯ ಇಂಜಿನಿಯರ್ ರಾಘವೇಲುನಾಯಿಡು ಈ ಮೂವರ ಭಾವಚಿತ್ರಗಳು ಮಾತ್ರ ಭಿತ್ತಿಯಲ್ಲಿ ತೂಗಾಡುತ್ತಿವೆ.

ರಾಜಾನುಗ್ರಹ

ಕೆ. ವಿ. ಯವರೊಡನೆ ಕಳೆದ ಎರಡು ಗಂಟೆಗಳಲ್ಲಿ ಬದುಕಿನ ಅಪೂರ್ವ ಅವಕಾಶಗಳಿದ್ದಂತೆ ಯಾವುದೋ ರಸಯಾತ್ರೆಯಿಂದ ಹೊರಬಂದ ವಿಶಿಷ್ಟ ಅನುಭವ ನಮ್ಮ ಮನಸ್ಸಿನ ಮೇಲೆ ಅಚ್ಚಳಿಯದೆ ನಿಂತಿತು.

ಪ್ರಸಿದ್ಧ ಕಲಾವಿದರಾದ ದುರ್ಗದ ಕೃಷ್ಣಪ್ಪನವರ ಮಕ್ಕಳು ಶ್ರೀ ಕೆ. ವೆಂಕಟಪ್ಪನವರು. ತಮ್ಮ ಬಾಲ್ಯ, ಯೌವನಗಳನ್ನು ವಿಶೇಷವಾಗಿ ಮೈಸೂರಿನಲ್ಲಿ ಕಳೆದರು. ಚಾಮರಾಜ ಕಲಾಶಾಲೆಯಲ್ಲಿ ಶ್ರೀ ಕೆ.

ರಾಮಕೃಷ್ಣನ್ ಅವರ ನೇತೃತ್ವದಲ್ಲಿ ಕಲಾಭ್ಯಾಸವನ್ನು ನಡೆಸಿ ತಮ್ಮ ಮುಂದಿನ ಕಲಾಸಾಧನೆಗೆ ಉತ್ತಮ ಬುನಾದಿಯನ್ನು ಹಾಕಿಕೊಂಡರು. ಅರಮನೆಯ ಕಟ್ಟಡದ ಕಾಲದಲ್ಲಿ ನೂರಾರುಜನ ಕಲಾವಿದರು ಅಲ್ಲಿ ಕೆಲಸ ಮಾಡಬೇಕಾದ ಸಂದರ್ಭ ಬಂದಾಗ ಬಾಲಕ ಕೆ. ವಿ. ಯವರಿಗೂ ಅಲ್ಲಿ ಉದ್ಯೋಗದಲ್ಲಿ ಅವಕಾಶ ದೊರಕಿದ್ದಿತು. ಆಗಲೇ ನುರಿತ ಕಲಾವಿದರಂತೆ ಕೈಚಳಕವನ್ನು ತೋರುತ್ತ ಈ ಬಾಲಕ ತಮ್ಮಷ್ಟೇ ಸಮಾನವಾದ ಸಂಭಾವನೆಯನ್ನು ಪಡೆಯುತ್ತಿದ್ದುದನ್ನು ಕಂಡು ಕೆಲವರು ಗೊಣಗಾಡಿ "ಮೀಸೆ ಹೊತ್ತ" ತಮ್ಮಂತೆಯೇ ಆ ಬಾಲಕನನ್ನು ಪುರಸ್ಕರಿಸುತ್ತಿದ್ದುದನ್ನು ನೋಡಿ ಪ್ರತಿಭಟಿಸಲು—ಕೆ. ವಿ. ಯವರು "ಮೀಸೆಯಲ್ಲ ಕೆಲಸ ಮಾಡುವುದು ಹಸ್ತ" ಎಂದು ಚಾತುರ್ಯದಿಂದ ಉತ್ತರಿಸಿ ಅವರನ್ನೆಲ್ಲಾ ನಗಿಸಿದ್ದರಂತೆ. ಒಮ್ಮೆ ಇವರ "ಸಿಂಹ—ಸಿಂಹಿಣಿ" ಎಂಬ ಚಿತ್ರವನ್ನು ಅರಮನೆಯ ಅಧಿಕಾರಿಗಳೊಬ್ಬರು ಕಂಡು, ಅದು ರಾಜರ ದೃಷ್ಟಿಗೂ ಬಿದ್ದು ಅವರು ಈ ಚಿತ್ರ ಬಾಲಕನ ಕೃತಿ ಎಂದು ನಂಬದೆ ಒಂದು ಸಣ್ಣ ಪರೀಕ್ಷೆಯನ್ನು ನಡೆಸಿ ಅವರ ಕಲಾಕೌಶಲವನ್ನು ಮೆಚ್ಚಿ ನೂರು ರೂಪಾಯಿಗಳ ಬಹುಮಾನವನ್ನು ನೀಡಿ ಪ್ರೋತ್ಸಾಹಿಸಿದ್ದರು. ಹೀಗೆ ರಾಜದೃಷ್ಟಿಗೆ ಬಿದ್ದ ಈ ಬಾಲ ಕಲಾವಿದನಿಗೆ ಮುಂದೆ ತನ್ನ ಹೆಚ್ಚಿನ ಕಲಾಭ್ಯಾಸಕ್ಕೆ ಅವಕಾಶಗಳು ಒದಗಿಬಂದವು. ಶ್ರೀ ಕೃಷ್ಣರಾಜ ಒಡೆಯರು ಇವರನ್ನು ಹೆಚ್ಚಿನ ಕಲಾಶಿಕ್ಷಣಕ್ಕೆ, ಕಲ್ಕತ್ತಕ್ಕೆ ಕಳಿಸಬೇಕಾದರೆ ಒಬ್ಬ ಪ್ರತ್ಯೇಕ ಶಿಕ್ಷಕರನ್ನು ನೇಮಿಸಿ ಇಂಗ್ಲೀಷನ್ನು ಕಲಿಸಬೇಕಾಯಿತು. ಈ ಮೊದಲೇ ಪಾಶ್ಚಾತ್ಯ ಕಲಾಸಂಪ್ರದಾಯವನ್ನು ಕೈಗೂಡಿಸಿಕೊಂಡು ಮದರಾಸು ಚಿತ್ರಕಲಾಪರೀಕ್ಷೆಗಳಲ್ಲಿ ಡಿಪ್ಲೊಮಾಗಳಿಸಿದ್ದರು. ಶ್ರೀ ಕೃಷ್ಣರಾಜರ ಪ್ರೋತ್ಸಾಹದಿಂದ ೧೯೦೮ ರಲ್ಲಿ ಸರ್ಕಾರದ ವಿದ್ಯಾರ್ಥಿವೇತನ ಪಡೆದು ಕಲ್ಕತ್ತ ಕಲಾಶಾಲೆಯಲ್ಲಿ ಉನ್ನತ ಶಿಕ್ಷಣದ ಅವಕಾಶ ಒದಗಿ ಬಂದಿತು. ಇಲ್ಲಿ ಪೆರ್ಸಿ ಬ್ರೌನ್ ಹಾಗೂ ಅವನೀಂದ್ರನಾಥ ಠಾಕೂರರ ಮಾರ್ಗದರ್ಶನವು ಇವರಿಗೆ ದೊರೆಯಿತು. ಎರಡು ವರ್ಷಗಳಲ್ಲಿ ಹಿಂದಿರುಗಬೇಕಾಗಿದ್ದ ಶ್ರೀಯುತರು ಆರೇಳುವರ್ಷಗಳ ಅಭ್ಯಾಸ ಮಾಡಿಕೊಂಡರು. ದೇಶದ ನಾನಾ ಚಿತ್ರಕಲಾ ಸಂಗ್ರಹಾಲಯಗಳನ್ನು ಸಂದರ್ಶಿಸಿ ಬಂದರು. ೧೯೧೦ ರಲ್ಲಿ ಲಂಡನ್ನಿನಿಂದ ಮಿಸೆಸ್ ಹೆರಿಂಗ್

ಹ್ಯಾವಲ್ ತಮ್ಮ ೪೦ ನೇ ವಯಸ್ಸಿನಲ್ಲಿ ಅಜಂತ ಗುಹಾಲಯಗಳ ಭಿತ್ತಿ ಚಿತ್ರಗಳ ಅಭ್ಯಾಸವನ್ನು ನಡೆಸಲು ಬಂದಿದ್ದರು. ಈ ಸಂದರ್ಭದಲ್ಲಿ ಅವರ ಜೊತೆಯಲ್ಲಿ ಅಧ್ಯಯನಕ್ಕೆ ಪರ್ಸಿ ಬ್ರೌನಿಯವರು ತಮ್ಮ ನೆಚ್ಚಿನ ಶಿಷ್ಯರಲ್ಲಿ ಇಬ್ಬರಾದ ನಂದಲಾಲಬೋಸ್ ಮತ್ತು ವೆಂಕಟಪ್ಪನವರನ್ನು ಕಳಿಸಿದ್ದರು. ಹೆಚ್ಚಿನ ಶಿಲ್ಪಕಲಾ ಪರಿಚಯಕ್ಕಾಗಿ ಇಟಲಿಗೆ ತೆರಳುವ ಅವಕಾಶ ಶ್ರೀಯುತ ರಿಗೆ ಮೊದಲನೆಯ ಮಹಾಯುದ್ಧದಿಂದಾಗಿ ನಿಂತುಹೋಯಿತು. ಅನಂತರ ೧೯೧೬ ರಲ್ಲಿ ಮೈಸೂರಿಗೆ ಹಿಂದಿರುಗಿದ ಮೇಲೆ ಸಂಗೀತದಲ್ಲಿ ವ್ಯಾಮೋಹ ಹೆಚ್ಚಾಗಿ ಶ್ರೀ ಕೃಷ್ಣರಾಜ ಒಡೆಯರ ಅಭಿಮತದಂತೆ ವೈಣಿಕ ಶಿಖಾಮಣಿ ಶೇಷಣ್ಣನವರಲ್ಲಿ ಏಳು ವರ್ಷಗಳಕಾಲ ವೀಣಾಭ್ಯಾಸವನ್ನು ಮಾಡಿದರು. ಇದೇ ಸಂದರ್ಭದಲ್ಲಿ ಅವರ ಅಮರ ಕೃತಿ "ವೀಣಾ ಹುಚ್ಚು" ಜಲವರ್ಣದಲ್ಲಿ ರಚಿತವಾಯಿತು. ಇದೇ ವೇಳೆಯಲ್ಲಿ ಅಬನೀಂದ್ರನಾಥರು ಬಿಟ್ಟುಕೊಟ್ಟ ಕಲ್ಕತ್ತ ಕಲಾಶಾಲೆಯ ಮುಖ್ಯಾಧಿಕಾರಿ ಸ್ಥಾನಕ್ಕೆ ಕರೆ ಬಂದಿದ್ದರೂ ಶ್ರೀಯುತರು ಅದಕ್ಕೆ ಮನಗೊಡಲಿಲ್ಲ.

ಕಲಾರಾಧನೆ

೧೯೨೩ ರಲ್ಲಿ ಕೃಷ್ಣರಾಜಒಡೆಯರ ಅಪೇಕ್ಷೆ ಮೇರೆಗೆ ಅರಮನೆಯಲ್ಲಿ ಶಿಲ್ಪಕೃತಿಗಳ ರಚನೆಗೆ ತೊಡಗಿದಾಗ ಅರಸರು ನೀಡಿದ ಕಲಾಪ್ರೋತ್ಸಾಹ ಚಿರಸ್ಮರಣೀಯವಾದದು. ಆಗ ರಚಿಸಿದ ಕೆಲವು ರಿಲೀಫ್‌ಗಳು ಅರಮನೆಯಲ್ಲಿವೆ. ಇದೇ ಸಂದರ್ಭದಲ್ಲಿ ದೆಹಲಿಯ ವೈಸ್‌ರಾಯ್ ಭವನದ ಶೃಂಗಾರಕ್ಕೆ ಕರೆ ಬಂದಿದ್ದರೂ ಶ್ರೀಯುತರು ಅದನ್ನು ಒಪ್ಪಿಕೊಳ್ಳದೆ ಕನ್ನಡ ನಾಡಿನಲ್ಲೇ ನಿಂತು ಕಲಾಸೇವೆಗೆ ಬದುಕನ್ನು ಮೀಸಲಾಗಿಟ್ಟುದುದು ನಿಜಕ್ಕೂ ಅಭಿನಂದನೀಯ.

"ಕೆ. ವಿ." ಯವರ ಕಲಾಪ್ರೌಢಿಮೆಯನ್ನು ಮೆಚ್ಚಿಕೊಂಡಿದ್ದ ರಾಜರು ಅವರನ್ನು ಯಾವ ಕಟ್ಟುಕಟ್ಟಲೆ ಇಲ್ಲದೆ ಸಾಧಾರಣ ಉಡುಪಿನಲ್ಲೇ ಸಂದರ್ಶನಮಾಡುವ ಅವಕಾಶವನ್ನು ನೀಡಿದ್ದರು. ಕೆಲವು ಕಾಲ ಚಾಮುಂಡಿ ಬೆಟ್ಟದ ಮೇಲೆ ಬಾಡಿಗೆ ಮನೆಯಲ್ಲಿದ್ದು ಪ್ರಕೃತಿ ದೃಶ್ಯಗಳನ್ನೂ ಚಿತ್ರಿಸಿದ್ದರು. ನೀಲಗಿರಿಯಲ್ಲಿಯೂ ನಿಸರ್ಗದೃಶ್ಯಗಳನ್ನು ಆಯಾಋತುವಿಗೆ

ತಕ್ಕಂತೆ ರಚಿಸಿಕೊಂಡು ಬಂದರು. ಅವರ ಕಲೆಗಾರಿಕೆಯಲ್ಲಿ ಅತಿಸೂಕ್ಷ್ಮ ರೇಖಾವಿನ್ಯಾಸ, ವರ್ಣವೈಖರಿಯನ್ನು ಕಾಣಬಹುದು. ಬಿಳಿವರ್ಣವನ್ನು ಉಪಯೋಗಿಸದೇ ಕೃತಿ ರಚಿಸುವ ಚಮತ್ಕಾರ ಅವರೊಬ್ಬರದೇ ಎನ್ನಬೇಕು. ಶ್ರೀ ಕೃಷ್ಣರಾಜಒಡೆಯರು ದಿವಂಗತರಾದಮೇಲೆ ಅರಮನೆಯಲ್ಲಿ ಕಲೆಗೆ ಸರಿಯಾದ ಪ್ರೋತ್ಸಾಹವಿಲ್ಲದೆ ಶ್ರೀಯುತರು ಬೆಂಗಳೂರಿಗೆ ಬಂದು ನೆಲಸ ಬೇಕಾಯಿತು.

ಸಂಗೀತ, ಚಿತ್ರ, ಶಿಲ್ಪ ಕಲೆಗಳಲ್ಲಿ ಇದ್ದಷ್ಟೇ ಅಭಿರುಚಿಯನ್ನು ನಾಟಕ ಕಲೆಯಲ್ಲಿ ಪಡೆದಿದ್ದ ಶ್ರೀಯುತರು ದಿವಂಗತ ವರದಾಚಾರ್ಯರ ಅಪೂರ್ವ ಅಭಿನಯ ಕಲೆಗೆ ಮಾರು ಹೋಗಿದ್ದರು. ಅನೇಕ ಬಾರಿ ಅವರಿಗೆ ನೇರವಾಗಿ ಹಣ ಕೈಸೇರಲೆಂದು ಸ್ವತಃ (ಮೈಸೂರಲ್ಲಿ) ತಾವೇ ಬೂತಿನಲ್ಲಿ ಕುಳಿತು ಟಿಕೇಟು ಮಾರಿದ ಪ್ರಸಂಗಗಳೂ ಉಂಟು. ಕಲೆಗೆ. ಕಲಾವಿದರಿಗೆ ಅಪಚಾರ ವಾದರೆ ಧೈರ್ಯವಾಗಿ ಪ್ರತಿಭಟಿಸುವ ಕೆಚ್ಚಿನ ವ್ಯಕ್ತಿಯಾದ ಇವರು ಒಮ್ಮೆ ಕಲ್ಕತ್ತದ ರಾಮಕೃಷ್ಣ ಕಾರ್ಯಾಲಯದವರು ತಮ್ಮ ಪತ್ರಿಕೆಯಲ್ಲಿ ಇವರ ಕಲಾಕೃತಿಯ ಛಾಯಾಚಿತ್ರವೊಂದನ್ನು ಹಿಂದುಮುಂದಾಗಿ ಮುದ್ರಿಸಿದುದ ರಿಂದ, ಕಲ್ಕತ್ತದ ಹೈಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿ ಜಯ ಗಳಿಸಿದರು. ತಮ್ಮ ಪ್ರತಿವಾದಿಗೆ ಕೇವಲ ಒಂದೇ ರೂಪಾಯಿ ದಂಡವನ್ನು ವಿಧಿಸಿದರೂ ಸೋದರ ಕಲಾವಿದರಿಗೆ ಒಂದು ಗೌರವ ಪ್ರತಿಷ್ಠೆಗಳನ್ನು ತಂದು ಕೊಟ್ಟಂತಾಯಿತೆಂದು ಇವರ ಐರೋಪ್ಯ ವಕೀಲರು ಪ್ರಶಂಸೆಯ ಮಾತು ಗಳನ್ನಾಡಿದ್ದರು .ತಮ್ಮ ಹಕ್ಕುಬಾಧ್ಯತೆಗಾಗಿ ಯಾರನ್ನಾದರೂ ಪ್ರತಿಭಟಿಸುವ ಧೈರ್ಯಶಾಲಿ ಇವರೊಬ್ಬರೇ ಎನ್ನಬಹುದು.

ಕೆ. ವಿ. ಯವರು ಜಲವರ್ಣ, ಪ್ರಕೃತಿಚಿತ್ರಗಳ ಜೊತೆಗೆ ದಂತದ ಫಲಕದ ಮೇಲೆ ಜಲವರ್ಣದ ರೂಪಚಿತ್ರ, ಹಾಗೂ ಕಾವ್ಯ ಕಥಾಚಿತ್ರ ಗಳನ್ನು ರಚಿಸುತ್ತಾ ಬಂದಿದ್ದಾರೆ. ಮೈಸೂರಿನ ಜಗನ್ಮೋಹನ ಚಿತ್ರ ಶಾಲೆಯಲ್ಲಿ ಇವರ 'ವೀಣಾಹುಚ್ಚು' 'ರಾಧಾ ಹರಿಣಿ' 'ಅರ್ಧನಾರೀಶ್ವರ' ನೀಲಗಿರಿ ದೃಶ್ಯಗಳು ಇಂದಿಗೂ ಕಲಾಭಿಮಾನಿಗಳನ್ನು ಆಕರ್ಷಿಸುತ್ತಿವೆ. ಅಲ್ಲದೆ ಇವರ ಅನೇಕ ಕಲಾಕೃತಿಗಳು ಅಲ್ಲಲ್ಲಿ ಹಿತೈಷಿಗಳ ಮನೆಗಳಲ್ಲಿವೆ.

ಕೆ. ವಿ. ಯವರು ಹುಟ್ಟುಕಲಾವಿದರು. ಕಲಾವಿದನಲ್ಲಿ ಸಹಜವಾದ

ಏಕಾಂತಪ್ರಿಯತೆ ಇವರಲ್ಲಿ ಮನೆಮಾಡಿಕೊಂಡಿದೆ. ಸಂಜೆಯ ವೇಳೆ ಗಾಳಿ ಸಂಚಾರ ಹೊರಟಾಗ ನಡುವೆ ಕಲೆಗೆ ಸಂಬಂಧಪಟ್ಟ ಯಾವುದಾದರೂ ಭಾವ ಹೊಳೆದರೆ ಕೂಡಲೇ ಚಿತ್ರಾಗಾರಕ್ಕೆ ಧಾವಿಸಿ ಬರುತ್ತಿದ್ದಂತೆ ಎಷ್ಟೋ ವೇಳೆ ರಾತ್ರಿ ನಿದ್ರೆಯ ಸಮಯದಲ್ಲಿಯೂ ಎದ್ದು ಕುಳಿತು ಚಿತ್ರ ರಚನೆಯಲ್ಲಿ ತೊಡಗುತ್ತಿದ್ದರಂತೆ. ' The Studio is closed for public until further notice. Please do not disturb ' ಎಂದು ಮುಂಬಾಗಿಲಿನ ಮೇಲೆ ಬೋರ್ಡನ್ನು ತೂಗು ಹಾಕಿದ್ದರೂ, ಸಮಾಧಾನವಿಲ್ಲದೆ ಹೊರಗೆ ಬೀಗವನ್ನು ಹಾಕಿಸಿ ಹಿಂಬಾಗಿಲಿನಿಂದ ಒಳಗೆ ಸೇರಿ ಕಾರ್ಯಮಗ್ನರಾಗುತ್ತಿದ್ದ ಇವರಲ್ಲಿ ಇದೇ ಶಿಸ್ತು ನಿಯಮಗಳು ಕೊನೆಯವರೆಗೂ ಉಳಿದು ಬಂದಿವೆ. ಅನಗತ್ಯವಾಗಿ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯದ ಕೆ. ವಿ. ಯವರ ಕಲಾಸಾಧನೆಯು ಅಷ್ಟೇ ದೊಡ್ಡದು. ಅವರ ಅಪ್ಪಟ ಹೃದಯ, ನಿಷ್ಕಪಟ ಸ್ವಭಾವದ ಇವರು ಕಲೆಯಷ್ಟೇ ಹಿರಿಮೆಯನ್ನು ತಮ್ಮ ವ್ಯಕ್ತಿತ್ವದಲ್ಲೂ ಸಾಧಿಸಿಕೊಂಡಿದ್ದಾರೆ. ಕಲಾಯೋಗಿ, ಕಲಾತಪಸ್ವಿ ಎಂಬೆಲ್ಲ ಮಾತುಗಳು ಇವರ ಹಿರಿಯ ಆದರ್ಶ ಜೀವನದ ಮುಂದೆ ಸಾಲದೇನೋ ಎನಿಸುತ್ತದೆ. ಭಾರತದ ಆದರ್ಶ ಕಲಾವಿದರಾದ ಕೆ. ವಿ. ಯವರು ಎಂದಿಗೂ ತಾವು ಕಲಾವಿದ್ಯಾರ್ಥಿ ಎಂದೇ ಕರೆದುಕೊಳ್ಳುತ್ತಿದ್ದುದು ಬರಿಯ ಪ್ರಚಾರದ ಬೆನ್ನು ಬಿದ್ದಿರುವ ಶುಷ್ಕಕಲಾವಿದರನೇಕರಿಗೆ ಮಾರ್ಗದರ್ಶನವಾಗಿದೆ. My knowledge in fine Arts is a drop in the ocean ಎಂಬ ಅವರ ನುಡಿ ಎಲ್ಲ ಕಲಾವಿದರನ್ನೂ ಎಚ್ಚರಿಸುವಂತಿದೆ. ಭಾರತದ ಕಲಾ ಸಂಪತ್ತಿಗೆ ಕರ್ನಾಟಕ ಅರ್ಪಿಸಿದ ಹೆಮ್ಮೆಯ ಕಾಣಿಕೆ ಶ್ರೀ ಕೆ. ವೆಂಕಟಪ್ಪನವರು.

(15-8-1962)



ಎಸ್. ನಂಜುಂಡಸ್ವಾಮಿ

ಮೈಸೂರಿನ ಜನಭರಿತವಾದ ಸಯ್ಯಾಜಿರಾವ್ ರಸ್ತೆಯಲ್ಲಿ ಕೆ. ಆರ್. ಆಸ್ಪತ್ರೆಯ ಕಡೆ ಹೋದಂತೆಲ್ಲ ಜನಜಂಗುಳಿ ಕಮ್ಮಿಯಾಗುತ್ತ ಬಂದು, ಆಸ್ಪತ್ರೆಯ ಎದುರಿನಲ್ಲಿಯೇ ಇರುವ ಶ್ರೀ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಭವ್ಯಭವನ ಗೋಚರಿಸುತ್ತದೆ. ಅಲ್ಲಿನ ಪ್ರದರ್ಶನಾಲಯವನ್ನು ನೋಡುವುದಕ್ಕೆ ಬದಲಾಗಿ ಹಿಂಬದಿಯ ದ್ವಾರದಿಂದ ಹಾದು, ಮಹಡಿಯ ಮೆಟ್ಟಲುಗಳನ್ನೇರಿ ಬಲಕ್ಕೆ ತಿರುಗಿ ಸ್ವಲ್ಪ ಮುಂದೆ ಹೋದರೆ ಅಲ್ಲಿ ಒಂದು

ಚಿತ್ರಶಾಲೆ ಸಿಕ್ಕುತ್ತದೆ. ಅದರ ಸೌಂದರ್ಯಕ್ಕೆ ಮಾರುಹೋಗದೆ ಇನ್ನೂ ಮುಂದೆ ಹೋದರೆ, ವಿದ್ಯಾರ್ಥಿಗಳಿಂದ ತುಂಬಿರುವ ಒಂದು ಶಿಕ್ಷಣಶಾಲೆ ದೊರೆಯುತ್ತದೆ. ಅಲ್ಲಿ ಯಾರನ್ನಾದರೂ "ಶ್ರೀ ಎಸ್. ಎನ್. ಸ್ವಾಮಿಯವರು ಯಾರು?" ಎಂದರೆ-ಶಾಲೆಯ ಒಂದು ಪಾರ್ಶ್ವದಲ್ಲಿ ಕುರ್ಚಿಯೊಂದರ ಮೇಲೆ ಕುಳಿತು ಮೇಜೊಂದರ ಬೆನ್ನಿನ ಮೇಲೆ ಬಾಗಿ ಯಾವುದೋ ಕೆಲಸದಲ್ಲಿ ಲೀನವಾಗಿರುವ ಓರ್ವ ವ್ಯಕ್ತಿ ಕಣ್ಣಿಗೆ ಬೀಳುತ್ತಾರೆ. ಸ್ವಲ್ಪ ಗುಂಡಾದ ತಲೆ, ಬಿಳಿಮಿಶ್ರ ಕಪ್ಪು ಗುಂಗುರು ಕೂದಲು, ಅಚ್ಚಗಪ್ಪಿನ ಗಂಭೀರ ಮುಖದಲ್ಲಿ ಹೊಳೆಯುವ ಸುಲೋಚನ, ಕಂದು ಬಣ್ಣದ ಗೀರುಗೀರು ಅಂಗಿ, ಕೊರಳಿನಲ್ಲಿ ಕಂದುವರ್ಣದ ಟೈ, ನಡುವಿನಲ್ಲಿ ಅಂಗಿಯನ್ನು ನುಂಗಿಕೊಂಡಿರುವ ಶರಾಯಿಯನ್ನು ಅಪ್ಪಿಕೊಂಡಿರುವ ಮಂದವಾದ ಕೆಂದವರ್ಣದ ಬೆಲ್ಟು, ಕಾಲಿನಲ್ಲಿ ಸಾದಾರೀತಿಯ ಪಾದರಕ್ಷೆ, ಇವುಗಳನ್ನು ಧರಿಸಿ ತಮ್ಮ ಕಾರ್ಯದಲ್ಲಿ ತನ್ಮಯರಾದಂತಿದ್ದರೂ, ವಿದ್ಯಾರ್ಥಿಗಳಕಡೆ ಆಗಾಗ ದೃಷ್ಟಿ ಹರಿಸುತ್ತಿರುವ ಶ್ರೀಯುತರು ಕಂಡುಬರುತ್ತಾರೆ. ಮೇಜಿನ ಒಂದು ಮೂಲೆಯಲ್ಲಿ ಅವರ ಕುಲಾವಿ ಕುಳಿತಿರುತ್ತದೆ. ಕುರ್ಚಿಯ ಒಂದು ಕೋಡಿನಲ್ಲಿ ಅವರ ಸಾಮುಗ್ರಿಯನ್ನೊಳಗೊಂಡ ಕೈಚೀಲ ತೂಗುತ್ತಿರುತ್ತದೆ. ನಶ್ಯದ ಡಬ್ಬಿ ಮೇಜಿನ ಅಂಚಿನಲ್ಲಿಯೇ ಇಣಿಕಿ ನೋಡುತ್ತಿರುತ್ತದೆ. ಅರೆ ತೆರೆದ ಕಪಾಟದಲ್ಲಿ ಅವರು ಆಗಾಗ ತನ್ಮಯರಾಗಿ ಚಿತ್ರಿಸಿ ಎಸೆದ ಅನೇಕ ಸಣ್ಣಸಣ್ಣ ಜಲವರ್ಣದ ಚಿತ್ರಗಳು ಅಸ್ತವ್ಯಸ್ತವಾಗಿ ಬಿದ್ದಿರುತ್ತವೆ. ಬಿಡುವಿದ್ದಾಗಲೂ .ಇವರು ಕಾಲವನ್ನು ವ್ಯರ್ಥವಾಗಿ ಕಳೆಯರೆಂಬುದಕ್ಕೆ ಈ ಚಿತ್ರಗಳೇ ಸಾಕ್ಷಿ ಎಂಬಂತಿರುತ್ತವೆ. ವಿದ್ಯಾರ್ಥಿಗಳ ವಿಚಾರಶಕ್ತಿ ಬೆಳೆಯಲು ಅವರಿಗೆ ಸ್ವಾತಂತ್ರ್ಯವಿತ್ತಿದ್ದರೂ ಅವರನ್ನು ಒಂದು ಬಿಗಿಯಲ್ಲಿ ನಿರ್ವಹಿಸುವುದು ಕಂಡುಬರುತ್ತದೆ. ಹತ್ತಿರ ಹೋಗಿ ನಮಸ್ಕಾರ ಮಾಡಿದರೆ, ಕನ್ನಡಕದ ಮರೆಯಲ್ಲಿ ಒಮ್ಮೆ ನೋಡಿ, ಪರಿಚಿತರಂತೆ 'ಬನ್ನಿ ಬನ್ನಿ' ಎಂದು ಪಕ್ಕದ ಸ್ಟೂಲನ್ನು ತೋರಿಸುತ್ತಾರೆ.

ಕಲೆಯ ಕುಟೀರದಲ್ಲಿ ಕಲಾಬ್ರಹ್ಮನಂತೆ ಕುಳಿತಿರುವ ಈ ಸೌಮ್ಯ ವ್ಯಕ್ತಿಯಲ್ಲಿ ಅಡಗಿರುವ ಕಲಾಶಕ್ತಿ ಯಾರಿಗೆ ಗೋಚರಿಸೀತು! ಹೊರನೋಟದಿಂದ, ವೇಷಭೂಷಣಗಳಿಂದ ಓರ್ವ ವ್ಯಕ್ತಿಯ ವೈಶಿಷ್ಟ್ಯವನ್ನು ಅಳೆಯಲಾದೀತೆ? ಶ್ರೀ ನಂಜುಂಡಸ್ವಾಮಿಯವರ ಕಲಾಕೃತಿಗಳನ್ನು

ನೋಡಿಬಂದವರು ಅಂಥ ಉನ್ನತ ಕೃತಿಗಳನ್ನು ಸೃಜಿಸಿದ ಮಹದ್ವ್ಯಕ್ತಿ ಇವರೇ—ಎಂದು ಮೂಗಿನ ಮೇಲೆ ಬೆರಳಿಟ್ಟಾರು!

ಹೌದು, ಇವರೂ ಎಸ್. ಎನ್. ಸ್ವಾಮಿಯವರೇ. ಆದರೆ ಕಲಾವಿದ ಎಸ್. ನರಸಿಂಹಸ್ವಾಮಿಯುವರಲ್ಲ, ಕಲಾವಿದ ಎಸ್. ನಂಜುಂಡಸ್ವಾಮಿಗಳಿವರು.

೧೯೫೩ ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಬಂದಿದ್ದವರು, ಮೈಸೂರಿನ ವೃತ್ತಿಶಿಕ್ಷಣ ಶಾಲೆಯ ಪ್ರದರ್ಶನಾಲಯದ ಭಾಗಕ್ಕೆ ಕಾಲಿಟ್ಟೊಡನೆಯೇ ಅಲ್ಲಿನ ಕಲಾವೈಭವವನ್ನು ಕಂಡು ಮಂತ್ರಮುಗ್ಧರಾಗದೆ ಇರಲಿಲ್ಲ. ಅಲ್ಲಿನ ಚಿತ್ರಕೃತಿಗಳ ಸಾಲಿನಲ್ಲಿ ಅತ್ಯಂತ ಆಕರ್ಷಕವಾಗಿ ಗೋಚರಿಸಿದ ಅಪೂರ್ವ ಕಲಾಕೃತಿಯನ್ನು ನೋಡಿ ತಣಿಯದವರಾರು? ರಾಜನೋರ್ವನು ಠೀವಿಯಿಂದ ಕುಳಿತು ತನ್ನ ಪರಿವಾರದೊಡನೆ ಓರ್ವ ಸುಂದರಿಯ ನಟನ ಕೌಶಲವನ್ನು ಈಕ್ಷಿಸುತ್ತಿರುವ ದೃಶ್ಯವನ್ನು ರಚಿಸಿದ ಶ್ರೀ|| ಎಸ್. ಎನ್. ಸ್ವಾಮಿಯವರನ್ನು ಮನಸಾರೆ ಹೊಗಳದವರಾರು? ನೃತ್ಯಾವಲೋಕಿಗಳ ವಿವಿಧ ಭಾವಭಂಗಿಗಳು, ಅವರವರ ವೇಷಭೂಷಣಗಳು, ಸನ್ನಿವೇಶಕಲ್ಪನೆ, ಹಿನ್ನೆಲೆ, ನಟಿಯ ನಟನಾಚಾತುರ್ಯ, ಅವಳ ಮುಖದ ಮಂದಹಾಸ ಮುಂತಾದುವನ್ನು ಚಿತ್ರಿಸುವಲ್ಲಿ ತುಂಬ ನಿಪುಣತೆಯನ್ನು ತೋರಿರುವ ಶ್ರೀಯುತರ ಕಲಾಪ್ರೌಢಿಮೆ ಅದ್ಭುತವಾದುದು.

ಶ್ರೀ ಸ್ವಾಮಿಯವರು ಕುಶಲಕಲೆಯ ಎಲ್ಲ ಪ್ರಕಾರಗಳಲ್ಲಿಯೂ ಅದ್ವಿತೀಯ ಪ್ರೌಢಿಮೆಯನ್ನು ಗಳಿಸಿಕೊಂಡು ಕರ್ಣಾಟಕದ ಹೆಮ್ಮೆಯ ಕಲಾವಿದರೊಲ್ಲೊಬ್ಬರೆನಿಸಿಕೊಂಡಿದ್ದಾರೆ. ರೇಖಾಚಿತ್ರಗಳಲ್ಲಿಯೇ ಆಗಲಿ, ತೈಲಚಿತ್ರ, ಜಲವರ್ಣಚಿತ್ರಗಳಲ್ಲಿಯೇ ಆಗಲಿ ಇವರು ತೋರುವ ಚಾಕಚಕ್ಯತೆ ಮತ್ತಾರಿಂದಲೂ ಸಾಧ್ಯವಾಗದೋ ಎಂಬಷ್ಟು ಅಪ್ರತಿಮವಾಗಿರುತ್ತದೆ. ಪ್ರಕೃತಿಯ ಯಾವುದೇ ವರ್ಣಗಳನ್ನು ಕಣ್ಣಿಗೆ ಕಟ್ಟುವಂತೆ ಸಹಜ ಸುಂದರವಾಗಿ ಕೃತಿಯಲ್ಲಿ ಮೂಡಿಸುವ ದೈವದತ್ತವಾದ ಶಕ್ತಿಯನ್ನು ಇವರು ಪಡೆದಿದ್ದಾರೆ. ಮೈಸೂರಿನ ವಾಣೀವಿಲಾಸ ಮೊಹಲ್ಲದಲ್ಲಿರುವ ಮಹಾಜನ ಹೈಸ್ಕೂಲಿನ ಭಿತ್ತಿಯೊಂದರ ಮೇಲೆ ಇವರಿಂದ ರಚಿತವಾದ ಶಾರದಾ ದೇವಿಯ ಚಿತ್ರವನ್ನು ನೋಡಿದವರು ಇವರ ಈ ಹಿರಿಮೆಯನ್ನು ಅರಿತಾರು.

ಶ್ರೀಯುತರ 'ಕಬೀರ್' ತೈಲಚಿತ್ರದಲ್ಲಿಯೂ ಮುಂಜಾವಿನ ನಸುಗೆತ್ತಲ ಪ್ರಶಾಂತವಾತಾವರಣದ ಕಲ್ಪನೆ ಕಂಡವರನ್ನು ಮೂಕಗೊಳಿಸುವಂತಿದೆ. ಮೈಸೂರಿನ ವಸ್ತುಪ್ರದರ್ಶನಕ್ಕೆ ಕಾಲಿಟ್ಟೊಡನೆಯೇ ಅಲ್ಲಿನ ಕಟ್ಟಡವೊಂದರ ಮೇಲೆ, ಎದುರಿನಲ್ಲಿಯೇ ಇವರಿಂದ ರೂಪಿಸಲ್ಪಟ್ಟ ಶ್ರೀಮನ್ ಮಹಾ ರಾಜರವರ ಭಾವಚಿತ್ರವನ್ನು ಎಲ್ಲರೂ ನೋಡಿಯೇ ಇದ್ದಾರೆ. ಆಗಾಗ ವಸ್ತುಪ್ರದರ್ಶನದಲ್ಲಿಯೂ ಕೃತಿಗಳು ಶೋಭಿಸಿವೆ.

ಚದುರಂಗರ 'ಸ್ವಪ್ನಸುಂದರಿ,' ಕಣವಿಯವರ 'ಮಧು ಚಂದಿರ', ದೇವೀ ರಪ್ಪನವರ 'ಬೆಳುವಲದ ಮಡಿಲಲ್ಲಿ' ಕರಾಕೃ ಅವರ ಜಾನಪದ ಸಾಹಿತ್ಯ ಸಂಕಲನಗಳಲ್ಲಿ ಶ್ರೀಯುತರು ರಚಿಸಿರುವ ಕೃತಿಗಳನ್ನು ನೋಡಿದ ಯಾರಾ ದರೂ ಇವರ ಕಲಾ ಪ್ರೌಢಿಮೆ ಎಷ್ಟೆಂಬುದನ್ನು ಅರಿತಾರು. ಅಶ್ಲೀಲ ಮುಖ ಚಿತ್ರಗಳನ್ನೊಳಗೊಂಡು ಪ್ರಕಟವಾಗುತ್ತಿರುವ ಈಗಿನ ಕಾಲದ ಅನೇಕ ಕೃತಿ ಗಳನ್ನು ನೋಡಿದವರು, ಅಂಥ ಸನ್ನಿವೇಶವೇ ಆದರೂ ಈ ಎಲ್ಲ ಕೃತಿಗ ಳಲ್ಲಿ ಎಷ್ಟು ಅರ್ಥಪೂರ್ಣವಾಗಿ ಶ್ರೀಯುತರ ಕುಂಚ ಹರಿದಿದೆ ಎಂಬುದನ್ನು ನೋಡಬಹುದಾಗಿದೆ.

ಶ್ರೀ|| ಎಸ್. ನಂಜುಂಡಸ್ವಾಮಿಯವರು ಎಲೆಮರೆಯ ಹೂವಿನಂತೆ, ಗೃಹವಾಸಿಯಾದ ತಪಶ್ಚಕ್ರವರ್ತಿಯಂತೆ ಆಡಂಬರವಿಲ್ಲದ ಸಾಮಾನ್ಯ ಜೀವನ ನಡೆಸುತ್ತಾ ಚಿತ್ರಕಲೆಯಲ್ಲಿ ಅಲೌಕಿಕ ಸಿದ್ಧಿಯನ್ನು ಸಾಧಿಸಿದ್ದಾರೆ. ಪ್ರಶಾಂತ ವಾತಾವರಣದ ಒಂಟಿ ಕೊಪ್ಪಲಿನಲ್ಲಿ ಸಣ್ಣ ಮನೆ ಒಂದರಲ್ಲಿ ವಾಸಿ ಸುತ್ತ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲಾಅಧ್ಯಾಪಕ ವೃತ್ತಿಯಲ್ಲಿ ದ್ದರು. ನಿವೃತ್ತರಾದಮೇಲೆ ತಮ್ಮ ತಾಯಿಯ ಊರಾದ ಯರಗಂಬಳ್ಳಿ ಪ್ರಶಾಂತವಾತಾವರಣದಲ್ಲಿ ಸ್ವಲ್ಪದಿನ ಇದ್ದರು. ಶ್ರೀಯುತರು ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಅಣ್ಣಂದಿರ ಮಕ್ಕಳು. ವಂಶಪಾರಂಪರ್ಯವಾಗಿ ಬಂದ ಶಿಲ್ಪಕಲೆಯ ಸಂಪ್ರದಾಯ ಇವರಲ್ಲೂ ನೆಲೆಸಿ, ಚಿತ್ರ ಕಲೆಗೆ ಶಾಸ್ತ್ರೀಯ ಅಡಿಪಾಯವನ್ನು ಕೊಟ್ಟಿದೆ. ಇವರು ತಮ್ಮ ಚಿಕ್ಕಂದಿನಿಂದ ಬಡತನದಲ್ಲಿ ಬಳಲಿ, ಅಪಾರ ಕಷ್ಟಗಳನ್ನೆದುರಿಸಿ, ಅಲ್ಪ ಸಂಬಳದ ಉಪಾ ಧ್ಯಾಯ ವೃತ್ತಿಯನ್ನಂಗೀಕರಿಸಿ ಜೀವನದ ಸಾಹಸದಲ್ಲಿ ಗಟ್ಟಿಗರಾಗಿದ್ದಾರೆ. ಅಂತೆಯೇ ಕಲಾಭ್ಯಾಸದಲ್ಲಿ ಆಳವಾಗಿ ಪರಿಶ್ರಮಿಸಿ, ಸ್ವತಃ ಸಂಶೋಧನೆ

ಗಳನ್ನು ನಡೆಸಿ, ಕಲೆಯ ಒಳಗುಟ್ಟನ್ನೆಲ್ಲಾ ಅರಿತಿದ್ದಾರೆ. ಇವರ ಪ್ರತಿಭೆಗೆ ತಕ್ಕ ಸನ್ಮಾನ ಈವರೆಗೆ ದೊರೆತಿಲ್ಲ. ಸದಾ ಹಸನ್ಮುಖಿಗಳು. ಮಾತು ಮಾತಿಗೂ, ಪ್ರತಿಘಳಿಗೆಗೂ ಕಲೆಯ ವಿಚಾರ, ಕಲೆಯ ಚರ್ಚೆ, ಕಲೆಯ ಅನುಭವದ ಮಾತುಕತೆ, ಕಲೆಯ ಆರಾಧನೆಯ ಆನಂದ ಇವರಲ್ಲಿ ಕಾಣಬರುವವು. ಡಂಭಾಚಾರದ, ಸತ್ವಹೀನವಾದ ಮಾತುಗಳಿಗೆ ಇವರು ಮರುಳಾಗುವವರಲ್ಲ. ಪಾಶ್ಚಿಮಾತ್ಯ ಉನ್ನತ ಕಲಾವಿದರ ಕೃತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಆ ಕಲೆಯ ದೃಷ್ಟಿಕೋನವನ್ನೂ, ಕಲೆಯ ಮಟ್ಟವನ್ನೂ ಸಂಪೂರ್ಣ ಅರಿತಿದ್ದಾರೆ; ಅರಿತು ಅದರಂತೆ ನಡೆದಿದ್ದಾರೆ; ಕೃತಕೃತ್ಯರಾಗಿದ್ದಾರೆ.

ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳ ಪುಣ್ಯ ಕಥೆಗಳನ್ನು ಓದುವುದು, ಕೇಳುವುದು ಅವರಿಗೆ ಒಂದು ಹಬ್ಬದಂತೆ. ಅಲ್ಲಲ್ಲಿಯ ರಸಸನ್ನಿವೇಶಗಳ ಚಿತ್ರಗಳನ್ನು ಮನದಲ್ಲಿ ಮೂಡಿಸಿಕೊಂಡು ಕಲೆಯಲ್ಲಿ ರೂಪಿಸಿ ಆನಂದಪಡುವುದು ಇವರಿಗೆ ಸಾಮಾನ್ಯವಾಗಿದೆ. ಶ್ರೀಯುತರ ಗೆಳೆಯರಲ್ಲಿ ಸಾಹಿತಿಗಳು ಮತ್ತು ಕಲೆಗಾರರೇ ಹೆಚ್ಚು. ಮಮತೆಯ ಗೆಳೆಯರಾಗಿದ್ದವರೆಂದರೆ ದಿವಂಗತ ಕೈಲಾಸಂ. ಶ್ರೀಯುತ ಸ್ವಾಮಿಯವರು ಕೈಲಾಸಂರೊಡನೆ ಪುರಾಣ ಕಥೆಗಳ ವಿಚಾರವಾಗಿ ದೀರ್ಘವಾಗಿ ಚರ್ಚೆ ನಡೆಸುತ್ತಿದ್ದುದು ಈಗಲೂ ಜ್ಞಾಪಕಕ್ಕೆ ಬರುತ್ತಿದೆ. ಇವರಿಬ್ಬರ ವಾಗ್ಯುದ್ಧ, ಒಡಂಬಡಿಕೆ, ಸಹೃಕಮತ್ಯಗಳನ್ನು ನಾವು ಶ್ರೀ ಸ್ವಾಮಿಗಳವರಲ್ಲಿ ಶಿಷ್ಯವೃತ್ತಿಯಲ್ಲಿದ್ದಾಗ ಚೆನ್ನಾಗಿ ಕೇಳಿದ್ದೇವೆ, ನೋಡಿದ್ದೇವೆ.

ಶ್ರೀ ಸ್ವಾಮಿಯವರಿಗೆ ಅರಮನೆಯ ಪೂಜ್ಯ ಕಲಾವಿದರಾಗಿದ್ದ ದಿವಂಗತ ಕೆ. ಕೇಶವಯ್ಯನವರ ನೆರವು ಸಿಕ್ಕಿ, ಕಲಾಸಾಧನೆಯು ಪಕ್ವವಾಯಿತು. ಅನಂತರ ಬೊಂಬಾಯಿಯ ಜೆ. ಜೆ. ಕಲಾಶಾಲೆಯಲ್ಲಿ ಅಭ್ಯಾಸ ಮಾಡಿ ಹೆಚ್ಚಿನ ಅನುಭವವನ್ನು ಪಡೆದರು. ದಿವಂಗತರಾದ ಶ್ರೀ ನಾಲ್ವಡಿ ಕೃಷ್ಣರಾಜ ಪ್ರಭುಗಳವರ ಪ್ರೋತ್ಸಾಹ ಶ್ರೀಯುತರಿಗೆ ಸಿಕ್ಕಿದ ಪರಿಣಾಮವಾಗಿ ಇವರ ಕಲಾ ಪ್ರೌಢಿಮೆಯ ಮಹತ್ವವು ಪ್ರಕಾಶನಾಗಲು ಅವಕಾಶವಾಯಿತು. ಅಂದು ಇವರಿಂದ ಚಿತ್ರಿತವಾದ ಕೆಲವು ಅಭೂತಪೂರ್ವ ತೈಲ ವರ್ಣಚಿತ್ರಗಳು ಅಂದಿನ ಮಹಾರಾಜರಿಂದ ಮೆಚ್ಚಿಗೆಗೆ ಪಾತ್ರವಾಗಿ

ಅರಮನೆಯ ಕಲ್ಯಾಣಮಂಟಪವನ್ನು ಅಲಂಕರಿಸಿದುವು. ಅವುಗಳನ್ನು ಈಗಲೂ ಅಲ್ಲಿ ನೋಡಬಹುದಾಗಿದೆ.

ಶ್ರೀ ನಂಜುಂಡಸ್ವಾಮಿಯವರು ತಮಗೆ ಚಿತ್ರಕಲೆಯಲ್ಲಿ ಬೇಸರವಾದಾಗ ದಂತ ಮತ್ತು ಗಂಧದಲ್ಲಿ ಸುಂದರ ಮೂರ್ತಿಗಳನ್ನು ನಿರ್ಮಿಸುವುದೂ ಉಂಟು. ಈ ಕಲೆಯಲ್ಲಿಯೂ ಇವರು ಅಪಾರವಾದ ಪ್ರೌಢಿಮೆಯನ್ನು ವ್ಯಕ್ತಪಡಿಸಿದ್ದಾರೆ. ಬೇಲೂರಿನ ಶಿಲಾಬಾಲಕಿಯರಿಂದ ಸ್ಫೂರ್ತಿಗೊಂಡು ಇವರು ರಚಿಸಿರುವ ಒಂದು ಆಕೃತಿ ಮತ್ತು ಗಣಪತಿ—ಇವು ತುಂಬಾ ಮೋಹಕವಾಗಿವೆ. ಅನೇಕ ಚಿತ್ರಗಳು, ಮೂರ್ತಿಗಳು ಪ್ರದರ್ಶನಾಲಯಗಳಲ್ಲಿ ಪ್ರಶಸ್ತಿ ಗಳಿಸಿವೆ. ಪ್ರದರ್ಶನಾಲಯಗಳ ಕೈಪಿಡಿಗಳಲ್ಲಿ ಇವರ ಅನೇಕ ಚಿತ್ರಗಳು ಮುದ್ರಿತವಾಗಿವೆ. ಜಯಾಪಜಯ, ಹೊಗಳಿಕೆ ತೆಗಳಿಕೆಗಳಿಗೆ ಗಮನಕೊಡದೆ ಕಲೆಯ ಸಂಶೋಧನೆಯಲ್ಲಿ, ರಹಸ್ಯಭೇದನದಲ್ಲಿ, ಗುರಿಯ ಸಾಧನೆಯಲ್ಲಿ ಸಾಗುತ್ತಿದ್ದಾರೆ. ಇವರು ವರ್ಣಸಂಯೋಜನೆಯಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ ಇವರ ಶಿಷ್ಯವರ್ಗಕ್ಕೆ ಅತ್ಯಂತ ಸಹಾಯವಾಗಿ, ಕಲೆಯ ರಸದೂಟವನ್ನನುಭವಿಸುವ ಸುಯೋಗವು ಬಂದಿತು. ಪ್ರಾಚೀನ ಕಲಾವಿದರ ಕಲಾಸಾಧನೆಯ ವೈವಿಧ್ಯತೆಯನ್ನೂ, ಕಲೆಯನ್ನು ನೋಡುವ ಉನ್ನತದೃಷ್ಟಿಯನ್ನೂ ತಿಳಿಯುವ ಮನಃಪ್ರವೃತ್ತಿ ಇವರಲ್ಲಿಲ್ಲದೆ ಇಲ್ಲ. ಇವರು ಸತ್ಯದ ಕಡೆ ಸದಾ ತೀವ್ರ ಗಮನಕೊಡುವವರು.

ಕಲೆಯಲ್ಲಿ ಆಳವಾದ ಪಾಂಡಿತ್ಯವಿಲ್ಲದೆ ಕೇವಲ ಕಲೆಯ ಸೋಗಿನಲ್ಲಿ ಪ್ರಸಿದ್ಧಿಗೆ ಬರುವ ಜನರೇ ಈ ಕಾಲದಲ್ಲಿ ಹೆಚ್ಚು. ನಿಜವಾದ ಕಲಾರಾಧಕರಾಗಿ, ಎಲೆಮರೆಯ ಕಾಯಿಯಂತೆ ಕಂಡರೂ ಕಾಣದಂತಿದ್ದು, ಒಳಗೆ ಹುದುಗಿಕೊಂಡ ಕಲಾನೈಪುಣ್ಯತೆಯನ್ನು ಹೊಂದಿರುವ ಶ್ರೀಯುತರಂತಹವರು ಎಲ್ಲಿಯೋ ಅಪರೂಪ. ಅಂಥವರ ಹೆಸರು ಇಂದು ಹೊರಬರದಿದ್ದರೇನು? ಮುಂದಿನ ಪೀಳಿಗೆಗೆ ದಾರಿ ತೋರಬಲ್ಲ, ಬಹುಕಾಲ ನಿಲ್ಲಬಲ್ಲ ಸತ್ವಯುತವಾದ ಇವರ ಕೃತಿಗಳಿಂದ ಇವರ ಹೆಸರು ಮುಂದೆ ಅಚಲವಾಗಿ ನಿಲ್ಲಬಲ್ಲದು. "ಹಿತ್ತಲಗಿಡ ಮದ್ದಲ್ಲ"ವೆಂಬ ನಾಣ್ನುಡಿಯಂತೆ ನಮ್ಮವರು ಇಂಥವರ ವಿಚಾರವನ್ನು ತಿಳಿಯದೆಯೋ, ನೋಡದೆಯೋ ಕಣ್ಣಿದ್ದು ಕುರುಡರಂತಿರುವುದು ತುಂಬಾ ಶೋಚನೀಯ. ತಡವಾದರೇನಂತೆ? ಇವರ ಕಲಾ ಪರಿಶ್ರಮ

ದಿಂದ ಇವರ ಹೆಸರು ಅಖಂಡವಾಗಿ ಎಲ್ಲರ ಮನೆಮಾತಾಗುವುದು ಸತ್ಯ. ಜನ ಇನ್ನು ಎಚ್ಚರವಾಗಬೇಕು. ಸತ್ಯಾಸತ್ಯತೆಯನ್ನು ತಿಳಿಯಬೇಕು. ಕಲೆಯ ಮಹತ್ಪರಿಚಯವನ್ನು ಪಡೆಯಬೇಕು. ಕಲಾವಿದರಲ್ಲಿರುವ ಕಲಾ ತಾರತಮ್ಯ ವನ್ನು ತೂಗಿನೋಡಿ ಇಂತಹ ಉನ್ನತ ಕಲಾವಿದರಿಗೆ ಪ್ರೋತ್ಸಾಹ ನೀಡಿ ಅಮರವಾಗಿ ನಿಲ್ಲಬಲ್ಲ ಕೃತಿಗಳು ಹೊರಬರುವಂತೆ ಪ್ರೋತ್ಸಾಹಿಸಬೇಕು. ಈ ಉಭಯ ಸಾಮರಸ್ಯದಿಂದ ಕನ್ನಡ ನಾಡಿನ ಕಲಾಕೀರ್ತಿ ಚಿರವಾಗಿ ನಿಲ್ಲುವುದು.

ಯಾವ ವ್ಯಕ್ತಿಯ ಕಲಾಕುಶಲತೆಯ ಅಂತರ್ಯವನ್ನು ಅಳೆಯಬೇಕಾದರೂ ಪೂರ್ಣವಾದ ಕಲಾದೃಷ್ಟಿ ಬೇಕು. ಶ್ರೀಯುತರ ಮೇಧಾಶಕ್ತಿಯು ಹೇಗೆ ಅದ್ವಿತೀಯವಾಗಿದೆಯೆಂಬುದನ್ನು ತಿಳಿಯಲು ಅವರ ತೈಲ ಚಿತ್ರಗಳನ್ನು ಒಮ್ಮೆ ಸಂದರ್ಶಿಸಬೇಕು. ಶ್ರೀಯುತರ ಕಲಾಕೌಶಲ್ಯದ ನೆರಳಿನಲ್ಲಿ ಅನೇಕ ಶಿಷ್ಯರು ಆಶ್ರಯಪಡೆದು ಈಗ ಖ್ಯಾತಿಯ ಶಿಖರವೇರುತ್ತಿದ್ದಾರೆ. ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಶ್ರೀ ಶಂಭು, ಶ್ರೀ ಮಾ. ಈ. ಗುರು, ಶ್ರೀ ರಾಮಚಂದ್ರಪ್ಪ, ಶ್ರೀ ಮೂರ್ತಿ ಇವರೇ ಸಾಕು. ಇವರೆಲ್ಲಾ ತೀವ್ರವಾದ ಕಲಾಸಾಧನೆಯಲ್ಲಿ ತೊಡಗಿ ಕಲಾಮಾತೆಯ ಕೃಪಾದೃಷ್ಟಿಯಲ್ಲಿ ಪ್ರಮುಖರೆನಿಸುತ್ತಿದ್ದಾರೆ.

ಶ್ರೀ॥ ಎಸ್. ನಂಜುಂಡಸ್ವಾಮಿಯವರು ಕರ್ಣಾಟಕದ ಕಲಾದೇಗುಲದಲ್ಲಿ ಉನ್ನತವಾಗಿ ಬೆಳಗುತ್ತಿರುವ ಒಂದು ರತ್ನಕಲಸ ಕನ್ನಡದ ಆಸ್ತಿ. ಅವರಂಥ ಸುಸಂಸ್ಕೃತ ಮೇಧಾವಿ ಕಲಾವಿದರಿಂದ ನಮ್ಮ ಚಿತ್ರಕಲೆಯ ಭವ್ಯ ಪರಂಪರೆ ಜೀವಂತವಾಗಿದೆ, ಅಮರವಾಗಿದೆ.



ಆರ್. ಎಸ್. ಎನ್.

ಮೈಸೂರಿನ ಮಾರ್ಕೆಟ್ ಸಮೀಪದ ಸಿಟಿ ಬಸ್ ನಿಲ್ದಾಣದಲ್ಲಿ ಎನ್. ಆರ್. ಮೊಹಲ್ಲದ ಬಸ್ಸಿಗಾಗಿ ಕಾದು ನಿಂತ ಸಮಯ. ಬೆನ್ನ ಹಿಂದೆ ಬಿಳಿಯ ಪೈಜಾಮ, ತೆಳ್ಳನೆ ಪಂಜಾಬಿ ಜುಬ್ಬ ಧರಿಸಿದ ವ್ಯಕ್ತಿ ಹಿಂದೆ ನಿಂತಂತಾಗಿ ಹಿಂದೆ ತಿರುಗಿದಾಗ ' ಆರ್. ಎಸ್. ಎನ್.' ಅವರನ್ನು ಕಂಡು ಹರ್ಷವಾಯಿತು. ಶಸ್ತ್ರಚಿಕಿತ್ಸೆಗೆ ಆಸ್ಪತ್ರೆ ಸೇರಿದ್ದ ಆರ್. ಎಸ್. ಎನ್. ಅವರನ್ನು ವರ್ಷದಿಂದ ಕಂಡಿರಲಿಲ್ಲ. ಆರೋಗ್ಯ ಸುಧಾರಿಸಿದೆ; ಮುಖದಲ್ಲಿ

ಮತ್ತೆ ಕಾಂತಿ ಮೂಡಿದೆ. ಕನ್ನಡಕದೊಳಗಿಂದ ತೂರಿ ಬರುವ ಅದೇ ಮೊನಚಾದ ದೃಷ್ಟಿ. ಮಟ್ಟಸವಾದ ಅರೆನೆರತ ಗಡ್ಡ, ಆರ್. ಎಸ್. ಎನ್. ಅವರು ಹೊಸ ವ್ಯಕ್ತಿಯಂತೆ ಕಂಡರು.

ಲಲಿತಕಲಾ ಅಕಾಡಮಿಯ ಪ್ರದರ್ಶನದ ವಿಷಯ ಬಂದು ಅವರು ವ್ಯಂಗ್ಯವಾಗಿ ನಕ್ಕರು.

"ಆ ಬಗ್ಗೆ ಓದಿದ್ದೆ.... ..."

"ಮೈಸೂರು ದಸರಾ ಕಲಾಪ್ರದರ್ಶನದಲ್ಲಿ ಆಗುತ್ತಿದ್ದಂತೆ ಅಲ್ಲಿಯೂ ಪಕ್ಷಪಾತಗಳು ತಾನೆ!" ಎಂದರು.

ನಿರ್ದಾಕ್ಷಿಣ್ಯವಾದ, ಸ್ಪಷ್ಟ ವಾಗ್ವೈಖರಿಯ ಕಟ್ಟುನಿಟ್ಟಾದ ವ್ಯಕ್ತಿ ಆರ್. ಎಸ್. ಎನ್.

'ನವ್ಯ ಕಲೆ'ಯ ಮಾತು ಬಂತು.

"ಅರ್ಧ ಶತಮಾನದಿಂದ ವಿಶ್ವದಲ್ಲಿ ನವ್ಯಕಲೆಯ ಪ್ರಯೋಗಗಳು ನಡೆಯುತ್ತಿವೆಯಾದರೂ ಯಾವ ರೂಪ ತಾಳುತ್ತಿವೆಯೋ ನೋಡಬೇಕಾಗಿದೆ. ಮನೆಗೆ ಬನ್ನಿ 'ಪೋಲೆಂಡ್' ಸಂಚಿಕೆಗಳನ್ನು ಇರಿಸಿರುವೆ, ಅದರಲ್ಲಿ ನವ್ಯಕಲೆ ಯಾವ ಸ್ವರೂಪ ತಾಳಿದೆ ಎಂಬುದು ಆಶ್ಚರ್ಯವಾಗುತ್ತದೆ" ಎಂದರು.

ಆರ್. ಎಸ್. ಎನ್. ಮನೆಗೆ ಕರೆದರೇನೋ ನಿಜ. ಎರಡು ಮೂರು ಮೈಲಿಗಳ ಆಚೆ ಕೆಸರೆಯ ಕೊಟ್ಟ ಕೊನೆಯ ಮನೆಯ ಆ ಪ್ರಶಾಂತ ನೆಲೆ ಒಮ್ಮೆ ದೃಷ್ಟಿಯಲ್ಲಿ ಹಾದು ಹೋಯಿತು. ಮನೆಯ ಮೂರೂ ಕಡೆ ಕವಿದುಕೊಂಡ ದಟ್ಟವಾದ ತೋಟಗಳು ನಗರದ ವಾತಾವರಣವನ್ನು ಮರೆಸುತ್ತವೆ. ಆದರೂ ಅವರು ದೂರದ ಹಳ್ಳಿಯೊಂದರಲ್ಲಿ ನಿಸರ್ಗದ ನಡುವೆ ಒಂದು ಗುಡಿಸಲಿನಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆಯುವ ಬಯಕೆಯನ್ನು ವ್ಯಕ್ತಪಡಿಸುತ್ತಾರೆ. ಜಗತ್ ಪ್ರಸಿದ್ಧ ಕಲಾವಿದರಾದ ಇವರು ಇಂದು ಎಲ್ಲಿಯೋ ಯಾವುದೋ ಮೂಲೆಯಲ್ಲಿ ಯಾರ ದೃಷ್ಟಿಗೂ ಬೀಳದಂತೆ ಕಲೆಯ ತವರು ಮನೆಯಾದ ಮೈಸೂರಿನಲ್ಲೇ ಇದ್ದಾರೆಂದರೆ ಒಂದು ದೃಷ್ಟಿಯಲ್ಲಿ ವ್ಯಥೆಯಾಗುತ್ತದೆ. ಮತ್ತೊಂದು ದೃಷ್ಟಿಯಲ್ಲಿ ಇಂಥ ಉತ್ಕೃಷ್ಟ ಕಲಾವಿದ ನಮ್ಮ ನಡುವೆ ಇರುವರಲ್ಲಾ ಎಂದು ಹೆಮ್ಮೆ ಎನಿಸುತ್ತಿದೆ. ಆದರೂ

ಆರ್. ಎಸ್. ಎನ್. ರಂಥ ಉಜ್ವಲ ಕಲಾವಿದನ ಸ್ಥಿತಿ ಯಾರಾದರೂ ಕಂಬನಿ ಮಿಡಿಯುವಂಥದೆ! ಏನೇ ತೊಂದರೆ ಇರಲಿ, ಏನೇ ಅಡಚಣೆಗಳಿರಲಿ, ಇಳಿ ವಯಸ್ಸಿನ ಯಾವುದೋ ಕೊರತೆ ಇರಲಿ ಈ ಅವಿವಾಹಿತ ಏಕಾಂಗಿ ಕಲಾವಿದ ಏಕಾಂತ ವಾಸವನ್ನೇ ಅನುಭವಿಸುತ್ತಿದ್ದಾರೆ. ಕನ್ನಡ ನಾಡಿನ ಏಕೆ, ಭಾರತದ ಮೇಧಾವಿ ಕಲಾವಿದರೆಂದರೆ ಇವರೊಬ್ಬರೇ!

ಕುಶಲಿಯಾದ ಕಲಾವಿದ ಯಾವ ಅನುಭವವನ್ನು ಬೇಕಾದರೂ ತನ್ನ ಕಲಾವಸ್ತುವಾಗಿ ಬಳಸಿಕೊಳ್ಳಬಲ್ಲ. ಅಲ್ಲದೆ ಓರ್ವ ಕಲಾವಿದನಿಗೆ ಕಲೆಯ ಎಲ್ಲಾ ಪ್ರಕಾರಗಳೂ ಒಲಿಯುವುದು ತೀರ ಅಪರೂಪ. ಅಸಾಧಾರಣ ಪ್ರತಿಭಾಶಾಲಿಯಾದ ಕಲಾ ಸಾಧಕನ ಬಹುದಿನದ ಸಾಧನೆಯಿಂದ ಇಂಥ ಅಪೂರ್ವಸಿದ್ಧಿ ಕೈಗೂಡಬಹುದು. ಆರ್. ಸೀತಾಪತಿ ನಾಯಿಡು (ಆರ್. ಎಸ್. ಎನ್.) ಅವರಲ್ಲಿ ಚಿತ್ರ ಹಾಗೂ ಶಿಲ್ಪ ಎರಡೂ ಕಲೆಗಳ ಸಂಗಮವನ್ನು ಗುರುತಿಸಬಹುದು. ಪೆನ್ನಿನಿಂದ ಪ್ಲಾಸ್ಟರ್ ತನಕ ಯಾವುದೇ ಕಲಾಮಾಧ್ಯಮದಲ್ಲಾದರೂ ಅವರು ವರಕಲಾವಿದರಾಗಿದ್ದಾರೆ. ಅವರ ವಿಶಿಷ್ಟಕಲ್ಪನಾವೈಖರಿ, ಉಜ್ವಲಪ್ರತಿಭಾಶಕ್ತಿಗಳನ್ನು ಅವರ ಯಾವ ಕಲಾಕೃತಿಗಳಲ್ಲಾದರೂ ಗಮನಿಸಬಹುದು. ಇವು 'ಆರ್.ಎಸ್.ಎನ್.'ರ ಕೃತಿಗಳೇ ಎಂದು ಯಾವ ಕೃತಿಯ ರಾಶಿಯಲ್ಲಾದರೂ ವ್ಯಕ್ತವಾಗಿರುತ್ತವೆ. ಅವಕ್ಕೆ ಅಂಥ ವೈವಿಧ್ಯವೂ ಇರುತ್ತದೆ.

ಚಿತ್ರಕಲೆಯಲ್ಲಂತೂ ವಿಡಂಬನಾತ್ಮಕ ರೇಖಾಚಿತ್ರದಿಂದ ವರ್ಣಚಿತ್ರಗಳವರೆಗೆ ಅವರ ತೂಲಿಕೆ ಕಲಾಸೃಷ್ಟಿಯನ್ನು ಮೆರೆದಿದೆ. ವಿಶ್ವದಲ್ಲಿಯೇ ಇವರನ್ನು ಹೋಲುವ ವ್ಯಂಗ್ಯ ಚಿತ್ರಕಾರರು ಶಿಲ್ಪಿಗಳು ಎಲ್ಲೋ ಕೆಲವು ಮಂದಿ. ಆರ್. ಎಸ್. ಎನ್. ಮೊದಲಿನಿಂದಲೂ ಸಂಪ್ರದಾಯಕಲೆಯನ್ನು ಒಪ್ಪಿದವರಾದರೂ ಅಂದಚಂದಗಳ ಅಂಧಾನುಕರಣೆಗೆ ಮಾರುಹೋದವರಲ್ಲ. ಬರೀತಾಂತ್ರಿಕವಾಗಿ, ಯಾಂತ್ರಿಕವಾಗಿ ಉಳಿಯಲಿಲ್ಲ. ಯಾರೊಬ್ಬರ ಯಾವೊಂದರ ಪ್ರಭಾವಕ್ಕೂ ಬಲಿಬೀಳಲಿಲ್ಲ. ಜೀವನದ ಸಿಹಿಕಹಿಗಳ ತೂಗಾಟದಲ್ಲಿ ಬೆಳೆದುಬಂದ ಈ ಹಿರಿಯ ಜೀವಿಗೆ ಸಾಮಾನ್ಯ ಮಾನವರ ಬಗ್ಗೆಯೂ ಅಪಾರ ಅನುಕಂಪ, ಆದರ, ಸಹಾನುಭೂತಿ ಮೈಗೂಡಿಬಂದಿವೆ. ಅವರ ಕಲೆ ಸಹಜ, ಸರಳ ಮತ್ತು ಸುಂದರ.

ಇವರು ರಚಿಸುವ ಚಿತ್ರಗಳ ರೇಖೆಗಳಲ್ಲಿ ಜೀವಂತತೆ, ಸಾದೃಶ್ಯತೆ ತುಂಬಿ ತುಳುಕುತ್ತವೆ. ರೇಖೆಗಳಲ್ಲಿ ಅದ್ಭುತನಿರೂಪಣೆ, ಗತಿ, ವಿನ್ಯಾಸ ಸೂಚಿಸುವ ಮಿತವ್ಯಯ ನೂತನಶೈಲಿಯಿಂದಾಗಿ ಸಾಮರಸ್ಯವನ್ನು ಕಾಣು ವೆವು. ಸತ್ವಪೂರಿತ ಕಲೆಗಾರಿಕೆ ಇವರದು. ಇವರು ಎಳೆಯುವ ಪ್ರತಿಯೊಂದು ಗೆರೆಯೂ ಅವರ ಹೃದಯದ ಅಂತರಾಳದಿಂದ ನೇರ ಚಿಮ್ಮಿ ಬಂದಂತಿದೆ. ಅವರ ರೇಖಾಚಿತ್ರಗಳ ವಸ್ತುವಿಶೇಷ, ಕಲ್ಪನಾಶಕ್ತಿ ಅಪೂರ್ವವಾದುದು.

ಅವರು ಪ್ಲಾಸ್ಟರಿನ ಉಬ್ಬಚ್ಚಿನ ಭಾವಚಿತ್ರವಾಗಲಿ, ಶಿಲ್ಪಿಕೃತಿ ಯಾಗಲಿ ಬರಿಯಮಣ್ಣಿನ ಮುದ್ದೆಯಾಗಿ ತೋರದೆ ಜೀವಂತವ್ಯಕ್ತಿತ್ವವೇ ಮೂರ್ತಿವೆತ್ತಂತೆ ಭಾವಪೂರ್ಣವಾಗಿ ರಚಿಸಲ್ಪಟ್ಟಿರುತ್ತವೆ.

ಅವರ ವ್ಯಕ್ತಿತ್ವ ಎಷ್ಟು ಸರಳವೋ ಅವರು ಗಳಿಸಿರುವ ಪಾಂಡಿತ್ಯ ಅಷ್ಟೇ ಪ್ರೌಢ. ಅವರ ಜೀವನ ತುಂಬ ಕ್ರಾಂತಿಕಾರಕ. ಅವರು ಹುಟ್ಟಿದ್ದು ಬೆಂಗಳೂರು. ತಂದೆ ರಂಗಸ್ವಾಮಿ ನಾಯಿಡು. ತಾಯಿ ರಂಗನಾಯಕಮ್ಮ. ಬಾಲ್ಯದ ವಿದ್ಯಾಭ್ಯಾಸ ಬೆಂಗಳೂರಿನಲ್ಲೂ, ಕೆಲವುವರ್ಷಕಾಲ ತಿರುಚನಾಪಳ್ಳಿ ಯಲ್ಲಿಯೂ ಜರುಗಿತು. ಅನಂತರ ಧಾರವಾಡದಲ್ಲಿ ಮುಂದುವರೆಯಿತು. ಅಲ್ಲಿ ಆಟಪಾಟದಲ್ಲಿ ಚರ್ಚಾಕೂಟದಲ್ಲಿ ಅವರದೇ ಹೆಚ್ಚು ಪ್ರಭಾವ. ಪೂನಾದ ಫರ್ಗುಸನ್ ಕಾಲೇಜಿನಲ್ಲಿ ಅವರು ವ್ಯಾಸಂಗಮಾಡುತ್ತಿದ್ದಾಗ ಯೂತ್ ಕಾಂಗ್ರೆಸ್ ಚಳುವಳಿಯಲ್ಲಿ ಓಡಾಡತೊಡಗಿದರು. ೧೯೩೨ರಲ್ಲಿ ಮೊದಲಬಾರಿಗೆ ಆರು ತಿಂಗಳ ಸಾದಾಸಜವನ್ನು ಜೈಲಿನಲ್ಲಿ ಕಳೆದರು. ೧೯೩೪ ರಲ್ಲಿ ಮತ್ತೆ ಎರಡನೆ ಬಾರಿಗೆ ಕಠಿಣಶಿಕ್ಷೆಗೊಳಗಾದರು. ಅವರಿದ್ದ ಜೈಲಿನಲ್ಲಿ ಪೂಜ್ಯ ಗಾಂಧಿಯವರೇ ಅಲ್ಲದೆ ಮಹದೇವಭಾಯಿ, ಜಮ್ನಲಾಲ್ ಬಾಜಾಜ್—ಮುಂತಾದ ಗಣ್ಯವ್ಯಕ್ತಿಗಳೂ ಇದ್ದರು. ಆ ಜೈಲಿನಲ್ಲಿ ಪ್ರಾಂತೀಯ ಪಕ್ಷಪಾತ ತೋರಲಾಗುತ್ತಿತ್ತು. ಇದನ್ನು ಶ್ರೀ ನಾಯಿಡು ಪ್ರತಿಭಟಿಸಿದರು. ಇದನ್ನು ಸಹಿಸಲಾರದೆ ಜೈಲ್‌ಕೋರ್ಟ್ ಮತ್ತೆ ಸಜಾ ಹೆಚ್ಚಿಸಿತು. ನಾಯಿಡು ಅವರ ಗಲಾಟೆ ಅಲ್ಲಿಗೆ ಮುಗಿಯಲಿಲ್ಲ. ಹೇಳತೀರ ದಾಯಿತು ಪ್ರತಿಭಟನೆ. ಇದನ್ನು ಸಹಿಸಲಾಗದೆ ಅಲ್ಲಿದ್ದ ಜೈಲು ಅಧಿಕಾರಿ ಕರ್ನಲ್ ಶ್ರೀ ಭಂಡಾರಿಯವರು ಗಾಂಧಿಯವರ ಮೂಲಕ ನಾಯಿಡು ಅವ ರಿಗೆ ಹೇಳಿಸಿ ಗಲಾಟೆಯನ್ನು ತಣ್ಣಗೆ ಮಾಡಬೇಕಾಯಿತು. ಆಗ ಅವ.

ರೊಡನೆ ಜರ್ಮನ್ ದಿನಪತ್ರಿಕೆಯ ಸಂಪಾದಕರೊಬ್ಬರು ಇದ್ದರು. ಅವರ ಜೊತೆ ಬಿದ್ದಮೇಲೆ ಸಿಗರೇಟು ಚುಟ್ಟಾ ಸುಡುವುದರಲ್ಲಿ ಅಗ್ರಗಣ್ಯರಾದರು ನಾಯಿಡು. ಕಾಂಗ್ರೆಸ್ ದಿನಾಚರಣೆಯಂದು ಜೈಲಿನಲ್ಲಿದ್ದ ತನ್ನ ಮಿತ್ರರ ಸಹಾಯದಿಂದ ಜೇಡಿಮಣ್ಣು ತರಿಸಿ ರಾತ್ರಿಯೆಲ್ಲಾ ನಿದ್ದೆಗೆಟ್ಟು ನಾಲ್ಕು ಅಡಿ ಪ್ರಮಾಣದ ಕ್ರಾಂತಿವೀರ ಲೆನಿನ್ನನ ಮೂರ್ತಿಯನ್ನು ಸೃಜಿಸಿಟ್ಟರು.

ಜೈಲುವಾಸ ಮುಗಿದು ಹೊರಬಂದ ಮೇಲೆ ನಾಯಿಡು ಅವರ ಹೃದಯವೇ ಕೊಂಚ ಬೇರೆಯಾಯಿತು. ಅವರ ಮನೋಮಂದಿರಕ್ಕೆ ಯಾವುದೋ ಭೂತಚೇಷ್ಟೆ ಬಂದು ಸೇರಿದಂತಾಯಿತು. ಹೃದಯ ತಲ್ಲಣಗೊಳಿಸುವ ಕಿರಿಕಿರಿ ವಾತಾವರಣದಲ್ಲಿ ಬೆಳೆಯತೊಡಗಿದರು. ಜುಗುಪ್ಸೆಗೊಂಡ ಅವರು ಬೊಂಬಾಯಿಯಲ್ಲಿ ತಾವಿದ್ದ ಮಹಡಿಯಿಂದ ಕೆಳಕ್ಕೆ ಧುಮಕಿ ಜೀವನವನ್ನು ಅಂತ್ಯಗೊಳಿಸುವ ಅವರ ಯತ್ನ ವಿಫಲವಾಯಿತು. ಈ ಮನೋವಿಪ್ಲವವನ್ನ ಮರೆಯಲು ಪುಸ್ತಕಗಳ ಮೊರೆಹೊಕ್ಕರು. ಯುವಕರನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಹುರುದುಂಬಿಸುವ ಸಲುವಾಗಿ ಒಂದು ಯುವಜನ ಸಂಸ್ಥೆ ಕಟ್ಟಿಕೊಂಡರು. ಈ ಮೂಲಕ ಒಂದು ಕ್ರಾಂತಿಕಾರಿ ಪತ್ರಿಕೆಯೂ ಹೊರಬಂದಿತು. ಪೊಲೀಸ್ ಚಿತ್ರಗುಪ್ತರ ದೃಷ್ಟಿ ನಾಯಿಡು ಅವರ ಮೇಲೆ ಹೊರಳಿತು. ಶ್ರೀ ನಾಯಿಡು ಅವರು ಡಾ|| ಮೆಹತಾ, ಮತ್ತು ಬೆಹರಾಂ ಅವರೊಡನೆ ನೆಲಮಾಳಿಗೆಗೆ ಸರಿಯಬೇಕಾಯಿತು. ಅಲ್ಲಿ ಕ್ರಾಂತಿವೀರರ ಚರಿತ್ರೆಗಳ ಅಧ್ಯಯನಕ್ಕೆ ಒಳ್ಳೆ ಸದವಕಾಶ ದೊರೆಯಿತು. "ಫ್ರೀ ಪ್ರೆಸ್ಸಿನ" ಸಂಪಾದಕ ಶ್ರೀನಿವಾಸನ್ ಮತ್ತು ವಾಣಿಜ್ಯೋದ್ಯಮಿ ದೀಕ್ಷಿತ್‌ಜೀ ಅವರೂ ಆಗಾಗ ನಾಯಿಡುಜೊತೆ ಕಲೆತು ಸಮಾಲೋಚನೆ ಮಾಡಿಕೊಂಡು ಹೋಗುತ್ತಿದ್ದರು. ಶ್ರೀ ನಾಯಿಡು ಅವರ ಉಪಟಳ ಉಲ್ಬಣವಾಯಿತು. ಗುಪ್ತಚಾರರು ಎಡೆಬಿಡದೆ ಅವರನ್ನು ಪತ್ತೆ ಹಚ್ಚಲು ಪ್ರಯತ್ನಿಸಿದರು. ಕೊನೆಗೆ ನಾಯಿಡು ಅವರ ಕೈಗೆ ಸಿಕ್ಕಿಬಿದ್ದರು. ಕೆಲವು ತಿಂಗಳಕಾಲ ಶಿಕ್ಷೆ ಅನುಭವಿಸಬೇಕಾಯಿತು.

ರಾಜಕೀಯ ಬುದ್ಧಿಜೀವಿಗಳಾಗಿದ್ದ ಮೇಹರಾಲಿ, ಮೀನೂ ಮಸಾನಿ, ಅಶೋಕಮೆಹ್ತಾ ಮುಂತಾದವರ ಜೊತೆಯಲ್ಲಿ ನಾಯಿಡು ಅವರೂ ಸೇರಿಕೊಂಡರು. ಅವರೆಲ್ಲಾ ಸೇರಿ ಸಮಾಜವಾದ ಪಕ್ಷ ಕಟ್ಟಿದರು ಆ ಮೂಲಕ

ಭಾರತದ ಆರ್ಥಿಕವಿಷಯದ ಬಗ್ಗೆ " ಪಿಕ್ಟೋರಿಯಲ್ ಎಕನಾಮಿಕ್ಸ್ "— ಎಂಬ ಸಚಿತ್ರವಾರಪತ್ರಿಕೆಯನ್ನು ಪ್ರತಿ ವಾರವೂ ಎಡೆಬಿಡದೆ ಪ್ರಕಟಿಸುತ್ತಿದ್ದರು. ಇಲ್ಲಿ ನಾಯಿಡು ಅವರ ಪಾತ್ರ ಬಹು ಹೆಚ್ಚಿನದಾಗಿತ್ತು. " ಅಂಥ ಸಚಿತ್ರಜಾಗೃತ ಪತ್ರಿಕೆಯನ್ನು ಭಾರತದಲ್ಲಿ ಮತ್ತೆ ನೋಡಲಿಲ್ಲ " ಎನ್ನುತ್ತಾರೆ ಶ್ರೀ ಆರ್. ಎಸ್. ಎನ್. ಆಗಾಗ ಇದರ ಕ್ರಾಂತಿಕಾರಿ ವ್ಯಂಗ್ಯ ಚಿತ್ರಗಳನ್ನು ' ನ್ಯಾಷನಲ್ ಫ್ರಂಟ್ ' ಪತ್ರಿಕೆಯವರು ಪ್ರಕಟಿಸುತ್ತಿದ್ದರು.

ಈ ಕ್ರಾಂತಿಕಾರಕ ನಾಯಿಡು ಒಮ್ಮೆ ಇಂಗ್ಲೆಂಡಿಗೆ ಹೊರಟರು. ತಮ್ಮ ಖರ್ಚಿನಲ್ಲಿ ಅವರು ಲಂಡನ್ ಮುಟ್ಟುವ ಮೊದಲೇ ಅಲ್ಲಿನ ಪೋಲೀಸ್ ಅಧಿಕಾರಿಗಳಿಗೆ ನಾಯಿಡು ಬಗ್ಗೆ ವಿವರಣೆ ಮುಟ್ಟಿತು. ಶ್ರೀಯುತರನ್ನು ' ಸ್ಕಾಟ್ಲೆಂಡ್ ಯಾರ್ಡ್ ' ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಒಂದು ಗಂಟೆಯಕಾಲ ಅಲ್ಲಿ ಕೂರಿಸಿದ್ದರೂ ಏನನ್ನೂ ವಿಚಾರಿಸಲಿಲ್ಲ. " ತಾವು ಇನ್ನು ಹೋಗಬಹುದೆಂದು " ಹೇಳಿ ಕಳುಹಿಸಿದರು.

ಆದರೆ ನಾಯಿಡು ಅವರ ಹಿಂದೆ ಪೋಲೀಸ್ ಗೂಢಚಾರರು ಮಾತ್ರ ನಕ್ಷತ್ರಕರಂತೆ ಬಿಡದೆ ಬೆನ್ನುಹತ್ತಿ ತಿರುಗುತಿದ್ದರು.

ಲಂಡನ್ನಿನಲ್ಲಿ ಶ್ರೀ ನಾಯಿಡು ಅವರು ಇರುವಷ್ಟು ದಿನವೂ ಕಾರ್ಮಿಕರ ಗುಂಪಿನಲ್ಲಿ ಬೆರೆತಿದ್ದರು. ಅವರೊಡನೆ ಜ್ಯೋತಿಬಸು. ರಜನಿಪಟೇಲ್, ಕುಮಾರ ಮಂಗಲಂ ಮುಂತಾದ ಭಾರತೀಯರು ಇದ್ದುಕೊಂಡು ಕೊಂಚ ನೆರವಾಗಿದ್ದರು. ಲಂಡನ್ನಿನಿಂದ ಮಾಸ್ಕೋವಿಗೆ ಹೋಗಬೇಕೆಂಬ ನಾಯಿಡು ಅವರ ಆಸೆ ದ್ವಿತಿಯ ಮಹಾಯುದ್ಧ ಪ್ರಾರಂಭದಿಂದಾಗಿ ಆಗಲಿಲ್ಲ. ಹೇಗಾದರೂಮಾಡಿ ತಪ್ಪಿಸಿಕೊಂಡಾದರೂ ಮಾಸ್ಕೋ ಮುಟ್ಟಬೇಕೆಂದಿದ್ದ ಅವರಿಗೆ ಬೆಂಬತ್ತಿದ್ದ ಗುಪ್ತಚಾರಮಿತ್ರರಿಂದಾಗಿ ದಾರಿ ಸುಗಮವಾಗಲಿಲ್ಲ. ಅದೇ ವೇಳೆಗೆ ಇಂಡಿಯಾದಿಂದ ಶ್ರೀನಾಯಿಡು ಅವರಿಗೆ ಕರೆಯೊಂದು ಬಂದು ಬೇಗ ಹಿಂತಿರುಗುವಂತೆ ಮಾಡಿತು. ವಾಪಾಸಾಗಲು ಜಹಜಿನಲ್ಲಿ ಶ್ರೀಯುತರಿಗೆ ಅವಕಾಶ ದೊರಕಲಿಲ್ಲ. ಇಂಡಿಯಾ ದೇಶದ ಓರ್ವ ವಿದ್ಯಾರ್ಥಿಯ ನೆರವಿನಿಂದಾಗಿ ಶ್ರೀ ನಾಯಿಡು ಬೇಗ ತಮ್ಮ ಮಾತೃದೇಶ ಮುಟ್ಟಿದರು.

ಬೊಂಬಾಯ ಕೆಲವು ವರ್ಷಗಳ ಜೀವದದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಇವರ ಪಾತ್ರ ತುಂಬಾ ಕ್ರಾಂತಿಕಾರಕವಾಗಿತ್ತು. ಒಮ್ಮೆ ಗುಜ

ರಾತಿನ ಸ್ವಾರ್ಥಲಂಪಟರ ವ್ಯಂಗ್ಯಚಿತ್ರವನ್ನು ಶೀಶೆಯೊಂದರ ಆಕೃತಿಯಲ್ಲಿ ರಚಿಸಿ ಪ್ರಕಟಿಸಿದರು. ಆ ಚಿತ್ರದ ಬಗ್ಗೆ ಎಲ್ಲಾ ಕಡೆಯೂ ಗುಲ್ಲೋ ಗುಲ್ಲು. ಯಾರಬಾಯಿಯಲ್ಲಿಯೂ ಆ ಚಿತ್ರದ ಮಾತೇ! ಕೊನೆಗೆ ಬೆಂಕಿ ಪೊಟ್ಟಣದ ಮೇಲೆಯೂ ಕಾಣಿಸಿಕೊಂಡಿತು. ಬೊಂಬಾಯಿಂದ ಕಲ್ಕತ್ತದವರೆಗೂ ಹರಡಿತು.

ಬೊಂಬಾಯಿ ಜೀವನಕ್ಕೆ ಬೇಸರಗೊಂಡು ನೇರ ಬೆಂಗಳೂರಿಗೆ ಬಂದು ಸೇರಿದರು. ಮಡಿವಾಳದಲ್ಲಿ ಕೆಲವು ವರ್ಷ ಕಳೆದರು. ೧೯೫೭ ರಲ್ಲಿ ಪ್ರಶಾಂತ ನಗರವಾದ ಮೈಸೂರಿಗೆ ಬಂದು ಸೇರಿದರು. ನಗರದ ವಾತಾವರಣವನ್ನು ಮರೆಸುವ ಕೆಸರೆಯ (ರಾಜೇಂದ್ರನಗರ) ಕೊನೆಯ ಮನೆಯ ಪ್ರಶಾಂತ ನೆಲೆಯಲ್ಲಿ ಅವರ ವಾಸ. ಈ ಪ್ರತಿಭಾಶಾಲಿ ಕಲಾವಿದ ಏಕಾಂತವಾಸವನ್ನು ಅನುಭವಿಸುತ್ತಿದ್ದಾರೆ. ವಿಶ್ವದಲ್ಲಿಯೇ ಹೆಸರಾಂತ ಕಲಾವಿದರೆನಿಸಿಕೊಳ್ಳುವ ಕಲಾಶಕ್ತಿ ಇರುವ ಅವರು ತಮ್ಮ ಯಾವುದೋ ಅನಿವಾರ್ಯ ಒತ್ತಡದಿಂದ ತೆರೆಮರೆಗೆ ಸರಿದಂತೆ ಕಾಣುವುದು ಖೇದದ ಸಂಗತಿ.

ಆರ್. ಎಸ್. ಎನ್. ಅವರ ವ್ಯಕ್ತಿತ್ವ ಎಷ್ಟು ನಿರಾಡಂಬರ. ನನ್ನನ್ನು ಒಳಗೆ ಕರೆದರು, ಅವರ ಮಂಚದಮೇಲೆಯೇ ಕೂರಿಸಿದರು. ಕಲೆಯಬಗ್ಗೆ ರಾಜಕೀಯದ ಬಗ್ಗೆ ಇನ್ನೂ ಅನೇಕ ವಿಷಯಗಳ ಬಗ್ಗೆ ಆಳವಾಗಿ ಅದ್ಭುತವಾಗಿ ಮಾತನಾಡುವ ಈ ವಿಶಿಷ್ಟ ವ್ಯಕ್ತಿತ್ವಕ್ಕೆ ಬೆರಗಾಗಿ ಕುಳಿತೆ. ತಮ್ಮ ವಾಗ್ಝರಿಯ ವೈಖರಿಯಲ್ಲಿ ನಮ್ಮನ್ನು ಮುಳುಗಿಸಿಬಿಡುತ್ತಾರೆ. ಅವರ ಕೊಠಡಿ ಪುಟ್ಟದು. ಅಷ್ಟೇ ಅಚ್ಚುಕಟ್ಟು. ಎದುರಿನ ಗೋಡೆಯಲ್ಲಿ ಗಾಂಧೀಜಿ ಫೋಟೋ ರಷ್ಯಾದ ನಾಯಕನೊಬ್ಬನ ಭಾವಚಿತ್ರ ಇಷ್ಟು ಹೊರತು ಮತ್ತೇನೂ ಇಲ್ಲ. ಅವರ ಪಕ್ಕದಲ್ಲಿ ಪುಟ್ಟಫ್ಯಾನ್. ಕೈಗೆನಿಲುಕುವಂತೆ ಪುಸ್ತಕಗಳ ಕಪಾಟು. ಬೆನ್ನಿನ್ನ ಬಳಿ ದೀಪ.

"ಟೀ ಮಾಡಲೇ?........" ಎಂದರು ಆರ್. ಎಸ್. ಎನ್.

ಇವರೂಡನೆ ಸಂಭಾಷಣೆಗೆ ಕುಳಿತರೆ ತಾವು ತಿಳಿದ ಅಪಾರ ಜ್ಞಾನ ಭಂಡಾರವನ್ನು ನಮ್ಮ ಮುಂದೆ ಎಳೆ ಎಳೆಯಾಗಿ ಬಿಚ್ಚುತ್ತಾರೆ. ನಡು ನಡುವೆ ಏನೋ ತಲೆಯಲ್ಲಿ ಆತಂಕ ಉಂಟಾದಂತಾಗಿ "ಹಾಳು ಆ ಕುಳ್ಳ

ತಲೆ ಮೇಲೆ ಹೊಡೆಯುತ್ತಾನೆ ಸ್ವಾಮಿ" ಎನ್ನುತ್ತಾರೆ. ಒಮ್ಮೊಮ್ಮೆ ಅವರ ಮಾತುಗಳಿಂದಾಗಿ ನಮಗೆ ದಿಗಿಲಾಗುತ್ತದೆ.

"ಭೂತ ಚೇಷ್ಟೆ ನನ್ನಮೇಲೆ ಬಂದಿದೆ. ಇದು ನನ್ನ ಜೀವನದ ಮೇಲೂ, ನನ್ನ ಕಲೆಯ ಮೇಲೂ ಉಂಟಾಗಿದೆ. ಇದರ ಉಪದ್ರವ ಸಹಿಸ ಲಾರೆ. ಈ ಬಗ್ಗೆ ನೆಹರೂರವರಿಗೂ ಪತ್ರ ಬರೆದಿದ್ದೇನೆ ಓದಿ" ಎಂದು ಪ್ರತಿಯನ್ನು ಕೈಗಿತ್ತಿದ್ದರು ಒಮ್ಮೆ...." ಇದು ಸುಳ್ಳು ಎಂದು ತಿಳಿಯಬೇಡಿ; ಬೇಕಾದರೆ ವಿಚಾರಣೆಗೆ ಒಂದು ಸಂಸ್ಥೆ ಗೊತ್ತುಮಾಡಿ" ಎನ್ನುತ್ತಾರೆ.

ತಾವಿರುವ ಮನೆಯಲ್ಲಿ ಆರಾಮು ಕುರ್ಚಿಯಲ್ಲಿ ಒಬ್ಬರೇ ಕುಳಿತಿರು ತ್ತಾರೆ. ಯಾವುದೋ ಮಗುವೊಂದು ಬಂದು ಇವರ ಎದುರಿನ ಗೇಟಿನ ಬಳಿ ನಿಂತು "ಚಾಕ್ಲೆಟ್ ಚಾಕ್ಲೆಟ್" ಎಂದು ಕೂಗುತ್ತದೆ. ಇವರ ಮನಸ್ಸು ನೆಮ್ಮದಿಯಲ್ಲಿದ್ದರೆ ತಕ್ಷಣ ಎದ್ದು ಕೋಣೆಯಿಂದ ಏನನ್ನೋ ತಂದು ಆ ಮಗುವಿನ ಕೈಗಿಡುತ್ತಾರೆ. ಆ ಮಗು ಹೋದ ಕೊಂಚ ವೇಳೆಯಲ್ಲಿ ಒಬ್ಬೊಬ್ಬ ರಾಗಿ ಆ ಸುತ್ತಿನ ಮನೆ ಮಕ್ಕಳ ದಂಡೇ ಬರುತ್ತದೆ.

"ನಂಗೇ........ನಂಗೇ"....

"ಮಂಜೆ ಸಾಬ್"....

ಎಲ್ಲರನ್ನೂ ತೃಪ್ತಿಗೊಳಿಸಿ ಕಳುಹಿಸುತ್ತಾರೆ.

ಒಮ್ಮೊಮ್ಮೆ ಇವರ ಮನೆಯ ಮುಂದಿನ ರಸ್ತೆಯ ಕಡೆ ಇವರ ದೃಷ್ಟಿ ಹರಿಸುತ್ತಾ ಕುಳಿತಿರುತ್ತಾರೆ. ಅವರ ಮೊಹಲ್ಲಾದಿಂದ ಯಾವು ದಾದರೂ 'ಸಿಟಿ'ಯ ಕಡೆ ಬಂಡಿಯೊಂದು ಹೊರಟಿತೆಂದರೆ ಹತ್ತಾರು ಪುಟ್ಟ ಮಕ್ಕಳು ಬಂಡಿ ಏರುತ್ತವೆ. ನಾಯ್ಡು ಕುಳಿತಿರುವ ಬಾಗಿಲು ಕಡೆ ಆ ಮಕ್ಕಳು ನೋಡಿ ಕೈ ಬೀಸುತ್ತವೆ. ಶ್ರೀ ನಾಯ್ಡು ಅವರೂ ಪ್ರತಿಯಾಗಿ ಕೈ ಬೀಸುತ್ತಾರೆ. ಅವರ ವಾತ್ಸಲ್ಯ ಮಮತೆ ಪ್ರೇಮ ಕಂಡ ನಮಗೆ ವಿಸ್ಮಯವಾಗದಿರದು.

ಇಂದಿಗೂ ಅವರು ತಮ್ಮ ಕೆಲಸ ಕಾರ್ಯಗಳನ್ನು ತಾವಾಗಿಯೇ ಮಾಡಿಕೊಳ್ಳುವ ಅನಿವಾರ್ಯತೆ ಅವರ ಪಾಲಿಗೆ ಮೀಸಲಾಗಿದೆ. ಬೇಸರ ವಾದರೆ ಲೇಖನಿಯನ್ನು ಎತ್ತಿಕೊಂಡು ಮಿತ್ರರಿಗೆ ಕಾರ್ಡಿನಲ್ಲಿ ಚಿತ್ರಗಳನ್ನು ಒಕ್ಕಣೆಗಳನ್ನು ಬರೆದು ಪೋಸ್ಟ್ ಮಾಡುವ ಹವ್ಯಾಸವನ್ನು ಇಟ್ಟುಕೊಂಡಿ

ದ್ದಾರೆ ಆರ್. ಎಸ್. ಎನ್. ಅವರ ಇಂಥ ಅಪೂರ್ವವಾದ ಪೋಸ್ಟ್ ಕಾರ್ಡು ಗಳನ್ನು ಸಂಗ್ರಹಿಸಿ ಇಡುವುದೇ ಕೆಲವು ಮಿತ್ರರಿಗೆ ಹಬ್ಬವೆನಿಸಿದೆ.

ವರಶಿಲ್ಪಿಗೆ ಯಾವ ರಾಷ್ಟ್ರಪ್ರಶಸ್ತಿಯೂಬೇಕಿಲ್ಲ. ಯಾವ ಸನ್ಮಾನ ಸಮಾರಂಭಗಳೂ ಬೇಕಿಲ್ಲ. ಆದರೆ ಇಂಥ ಉಜ್ವಲ ಕಲಾವಿದನನ್ನು ನಾವು ಪಡೆದಿದ್ದೇವೆ ಎಂಬ ಹೆಮ್ಮೆ ಮಾತ್ರ ನಮಗೆ ಇದ್ದರೆ ಸಾಕೇ ?



ಎಂ. ವೀರಪ್ಪ

"ಕಲೆ ಜೀವನದ ಕಾವು ನೋವುಗಳಿಂದ ಮೂಡಿಬಂದ ವಸ್ತು. ಮೂಡಿದಲ್ಲಿಯೇ ರೂಢಿಯಾಗುವ ಶಿಸ್ತು ಅದಕ್ಕಿದೆ. ಅದರ ಸಹಜತೆ ಬೆಲೆಗೆ ಬಾರದು, ಎರವಿಗೂ ಬಾರದು. ಇಂಥ ಸಹಜತೆ ಎಲ್ಲರಿಗೂ ದೊರಕದು." ಆದರೆ ಮೈಸೂರಿನ ಒಂಟಿಕೊಪ್ಪಲಿನ ಪ್ರಶಾಂತ ವಾತವರಣದಲ್ಲಿ ಬಾಳುತ್ತಿರುವ ಶ್ರೀ ಎಮ್. ವೀರಪ್ಪನವರಲ್ಲಿ ದಾಂಗುಡಿಯಿಟ್ಟು ಹಬ್ಬಿ ಹರಡುತ್ತಿರುವ ಕಲಾಲತೆಯನ್ನು ನಾವು ಕಾಣಬಹುದಾಗಿದೆ. ಕಲೆ ಸಾಹಿತ್ಯಗಳ ಸಹಜತೆ

ಯನ್ನು ಶ್ರೀ ಕುವೆಂಪುರವರ "ಉದಯರವಿ," ಶ್ರೀ ಚದುರಂಗರ "ಚದುರಂಗ ಭವನ," ಶ್ರೀ ಎಂ. ವೀರಪ್ಪನವರ "ಚಿತ್ರಾಲಯ" ಇವುಗಳಲ್ಲಿ ಸಂದರ್ಶಿಸ ಬಹುದು, ಈ ಆಲಯಗಳಲ್ಲಿ ಸದಾ ಕುಶಲ ಕಲಾಜ್ಯೋತಿ ಬೆಳಗುತ್ತಿದೆ. "ಎಲ್ಲಿ ಅನುಭವ ಮತ್ತು ದರ್ಶನ ಭಾಗಕ್ಕಿಂತ ಕರ್ಮಕುಶಲತೆ ಹೆಚ್ಚೋ ಅಲ್ಲಿ ಕಲೆಯ ಅಂತಸ್ತು ಅದ್ವಿತೀಯವಾದದ್ದು." ಇದನ್ನು ಶ್ರೀಮಾನ್ ಎಂ. ವೀರಪ್ಪ ನವರ "ಚಿತ್ರಾಲಯ"ದಲ್ಲಿ ಕಾಣಬಹುದಾಗಿದೆ.

"ಚಿತ್ರಾಲಯ" ಸಹಜವಾಗಿಯೂ ಒಂದು ಪುಟ್ಟ ಜಗನ್ಮೋಹನ ಬಂಗಲೆಯೇ ಆಗಿದೆ. ನಾಲ್ಕು ಗೋಡೆಗಳಲ್ಲೂ, ನಾನಾರೀತಿಯ ವರ್ಣ ರಂಜಿತ ಚಿತ್ರಪಟಗಳು ಕಾಣುತ್ತಿವೆ. ಒಂದೆಡೆ ಭಕ್ತಿ ಬಂಡಾರಿ ಬಸವಣ್ಣ ನವರ 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ' ಎಂದು ಸಾರುವ ತೈಲಚಿತ್ರ ರಂಜಿಸುತ್ತಿದೆ. ಬಸವಣ್ಣನವರು ರಚಿಸಿರುವ ವಚನಗಳಿಗೆ ಅನು ಸಾರವಾಗಿ ಚಿತ್ರಿತವಾಗಿರುವ ಅನೇಕ ಚಿತ್ರಗಳು ಮತ್ತೊಂದೆಡೆ ಶೋಭಿಸು ತ್ತಿವೆ. ಅಜಂತದಲ್ಲಿ ಕಾಣುವ "ತಾಯಿ ಮಗು"ವಿನ ಕರುಣಾಜನಕ ಚಿತ್ರ ಮಗದೊಂದುಕಡೆ ಇದೆ. ಪ್ರಕೃತಿಯ ಪ್ರತಿರೂಪಾದ ಗೇರುಸೊಪ್ಪೆ ಜಲಪಾತ, ಚಾಮುಂಡಿಬೆಟ್ಟದ ದೃಶ್ಯ ಇತ್ಯಾದಿ ಮೈಸೂರಿನ ಕಿರೀಟಪ್ರಾಯ ವಾದ ನೋಟಗಳು ಅಲ್ಲಲ್ಲಿ ರಾರಾಜಿಸುತ್ತಿವೆ. ಭಾರತೀಯ ಜನಜೀವನದ ಯಾತ್ರಿಕರ ಚಿತ್ರವನ್ನು ಪಾಶ್ಚಿಮಾತ್ಯ ರೀತಿಯಲ್ಲಿ ಚಿತ್ರಿಸಿರುವುದು— ಪೌರಾತ್ಯ ಪಾಶ್ಚಿಮಾತ್ಯ ಚಿತ್ರಕಲಾ ಸಂಯೋಜನೆಯನ್ನು ಪ್ರದರ್ಶಿಸಿ, ನಮ್ಮನ್ನೂ ಕಲಾಯಾತ್ರೆಗೆ ಕರೆಯುವಂತಿದೆ. ಇಂಥವುಗಳಿಂದ ಅಲಂಕೃತ ವಾದ ಈ ಆಲಯಕ್ಕೆ ನಿಜವಾಗಿಯೂ 'ಚಿತ್ರಾಲಯ' ಹೆಸರು ಒಪ್ಪ ಬೇಕಾದ್ದೆ. ಶ್ರೀಯುತರ ನೆನಪಾದಾಗಲೆಲ್ಲಾ ಚಿತ್ರಾಲಯದ ಕಡೆ ಮನಸ್ಸು ಹೋಗದೇ ಇರದು. ಮತ್ತೆ ಮತ್ತೆ ಸಂದರ್ಶಿಸಿ, ಕೊಂಚವೇಳೆಯಾದರೂ ತಂಗಿಬಂದರೆ ಮನಸ್ಸಿನ ಬೇವನ್ನು ಮರೆಯಬಹುದಾಗಿದೆ.

ನಿಷ್ಠೆಯಿಂದಲೂ, ಸ್ವಚ್ಛತೆಯಿಂದಲೂ ಕಲಾಮಾತೆಯನ್ನು ಆರಾಧಿಸಿ ದಲ್ಲಿ, ಕಷ್ಟ ಕಾರ್ಪಣ್ಯಗಳು ದೂರವಾಗಿ ಸುಖ ಸಂತೋಷ ಸಿಗಬಲ್ಲುದು ಎಂಬುದನ್ನು ಶ್ರೀಯುತರು ತೋರಿಸಿಕೊಟ್ಟಿದ್ದಾರೆ. ಇವರು ಕೇವಲ ಚಿಕ್ಕವ ರಾಗಿದ್ದಾಗಲೇ ಚಿತ್ರಬರೆಯುವುದರಲ್ಲಿ ಹೆಚ್ಚು ಆಸಕ್ತಿ ತೋರುತ್ತಾ ಬಂದರು.

ಸೇಲಂ ಜಿಲ್ಲೆಯ ಡೆಂಕಣೀಕೋಟೆಯಲ್ಲಿ ತಮ್ಮ ಬಾಲ್ಯವನ್ನು ಕಳೆದರು. ವಿದ್ಯಾಭ್ಯಾಸಕ್ಕೆಂದು ರಾಜಧಾನಿಗೆ ಬಂದ ಇವರನ್ನು ಹುಟ್ಟುಗುಣವಾದ ಕಲೆ ಕೆಣಕದೆ ಬಿಡಲಿಲ್ಲ. ಇದರ ಫಲವಾಗಿ ಹೈಸ್ಕೂಲಿಗೇ ವಿದ್ಯಾಭ್ಯಾಸ ಮುಕ್ತಾಯಗೊಳ್ಳಬೇಕಾಯಿತು.

೧೯೧೮ರಲ್ಲಿ ಶ್ರೀಯುತರು ರಾಜಧಾನಿಯ ಶ್ರೀ ಚಾಮರಾಜೇಂದ್ರ ಕಲಾಶಾಲೆಗೆ ಸೇರಿದರು. ಶ್ರೀ ಡಿ. ಕೃಷ್ಣಯ್ಯನವರೇ ಆಗ ಕಲಾತರಗತಿಯ ಅಧ್ಯಾಪಕರಾಗಿದ್ದರು. ಶಾಲೆಗೆ ಸೇರಿದ ಕೊಂಚ ಕಾಲದಲ್ಲಿಯೇ ಶ್ರೀಯುತರಿಗಿದ್ದ ಕಲಾಮಹಿಮೆಯಿಂದ ಘನಸರ್ಕಾರದವರು ಕೊಡುತ್ತಿದ್ದ ವಿದ್ಯಾರ್ಥಿವೇತನ ದೊರೆತು ಶ್ರೀಯುತರು ಬೊಂಬಾಯಿಯ ಕಲಾಶಾಲೆಯನ್ನು ಸೇರಿದರು. ಕೈ ಪಳಗಿದ್ದುದರಿಂದ ಒಮ್ಮೆಗೇ ಮೂರನೆ ತರಗತಿಯಿಂದ ಕಲಾಭ್ಯಾಸ ಮಾಡಲು ಅವಕಾಶ ದೊರಕಿತು. ಏಳು ವರ್ಷಗಳು ವೇತನ ಪಡೆದು ಅವಿಶ್ರಾಂತವಾಗಿ ದುಡಿದರು. ಆಗ ಶಾಲೆಯ ಪ್ರಿನ್ಸಿಪಾಲರು ಗ್ಲಾಡ್‌ಸ್ಟೋನ್ ಸಾಲೋಮನ್ ಕಲಾವಿದ ಎಂ. ವಿ. ಧುರಂಧರ್ ಕಲಾಧ್ಯಾಪಕರು. ಶ್ರೀಯುತರು ಶ್ರದ್ಧೆ ಮತ್ತು ಸಾಧನೆಯಿಂದ ಪತ್ರಿವರ್ಷವೂ ತರಗತಿಗೆ ಪ್ರಥಮರಾಗಿಯೇ ಉತ್ತೀರ್ಣರಾಗುತ್ತಾ ಬಂದರು. ಅಂದಿನಿಂದ ತಮ್ಮ ಅಧ್ಯಾಪಕರುಗಳಿಗೆ ಮೆಚ್ಚಿನ ಶಿಷ್ಯರಾದರು, ಪ್ರಾಧ್ಯಾಪಕರ ಪ್ರೀತಿಗೆ ಪಾತ್ರರಾದರು. ಪ್ರತಿ ವರ್ಷವೂ ಕೊನೆಯ ತರಗತಿಯ ವಿದ್ಯಾರ್ಥಿಗಳನ್ನು ಮಾತ್ರ ಪ್ರವಾಸಗಳಿಗೆ ಕರೆದು ಕೊಂಡು ಹೋಗಿಬರುವುದು ವಾಡಿಕೆಯಾಗಿದ್ದಿತು ಇಂಥ ಸದವಕಾಶ ಶ್ರೀ ಯುತರಿಗೆ ಕೇವಲ ಮೂರನೆಯ ತರಗತಿಯಲ್ಲಿ ಇದ್ದಾಗಲೇ ದೊರೆತುದು ಅವರು ಕಲಾಭ್ಯಾಸದಲ್ಲಿ ತೋರಿದ ಜಾಣ್ಮೆ ಎಂದೇ ತೋರುತ್ತದೆ.

೧೯೧೯ ರಿಂದ ೧೯೨೭ರ ವರೆಗೆ ಬೊಂಬಾಯಿನ ಯಾಂತ್ರಿಕ ಜೀವನವನ್ನು ಸಹಿಸಿದರಾದರೂ ಅವರಿಗೆ ಕಲಾಸಂಸ್ಕಾರದಿಂದ ಸರ್ಕಾರದ ವೇತನ ದೊರೆತು ಕಲಾರಾಧನೆಯಲ್ಲಿ ಅದಾವುದನ್ನೂ ಲೆಕ್ಕಿಸದೆ ಅವರು ತಮ್ಮ ಸಾಧನೆಯನ್ನು ಮುಂದುವರಿಸಿಕೊಂಡು ಪ್ರವರ್ಧ ಮಾನಕ್ಕೆ ಬಂದರು.

ಒಮ್ಮೆ ಅಜಂತಕ್ಕೆ ಹೋದಾಗ ಅವರು ಮನಸ್ಸಿಟ್ಟು ಚಿತ್ರಿಸಿದ “ತಾಯಿ ಮಗು” ಮತ್ತು “ಅಜಂತದ ಭಿತ್ತಿ ಚಿತ್ರ” ಪಟಗಳು ಅಸಾಧಾರಣವಾಗಿದ್ದವು. ಇವುಗಳಲ್ಲಿನ ಕಲಾನೈಪುಣ್ಯತೆಯನ್ನು ಕಂಡು ಎಲ್ಲರೂ ಬೆರ

ಗಾದರು. ತಕ್ಷಣ ಅಜಂತದ ಭಿತ್ತಿ ಚಿತ್ರಪಟ ಶ್ರೀಮಂತರೊಬ್ಬರ ಭವ್ಯಾಲಯವನ್ನು ಸೇರಿತು. "ಅಜಂತ ಸಂದರ್ಶನ" ಇವರನ್ನು ಪರಿವರ್ತನೆ ಮಾಡಿತು. ಭಾರತೀಯ ಕಲೆಯಲ್ಲಿ ಹೆಚ್ಚು ಪರಿಶ್ರಮ ಹೊಂದಲು ಅಜಂತದ ಚಿತ್ರಗಳೆಲ್ಲಾ ಪ್ರೇರೆಪಿಸಿದುದರ ಪರಿಣಾಮದಿಂದಲೋ, ಏನೋ, ಅಂದಿನಿಂದ ಅವರು ಭಾರತೀಯ ಕಲೆಯಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾ ಬಂದರು. ಎಲ್ಲಿ ನಿಂತರೂ ಭಾರತ, ಎಲ್ಲಿಕುಳಿತರೂ ಭಾರತ ಎಂಬ ಧ್ವನಿ ಮಿಡಿದಿರಬೇಕು.

ಶ್ರೀಯುತರ ಕಲಾಸ್ವಚ್ಛತೆಗೆ ಸಾಕ್ಷಿಯಂತಿರುವ ಶುಭ್ರ ಧವಳವಾದ ಉಡುಪು, ಐವತ್ತರ ಗಡಿ ಮೀರಿದ್ದರೂ ದೃಢವಾದ ಕಾಯ, ಎಂಥವರನ್ನೂ ಮಿತ್ರರನ್ನಾಗಿ ಮಾಡಿಕೊಳ್ಳುವ ನಗುಮುಖ. ಸತ್ಯಸಾಧನೆಯೊಂದನ್ನೇ ತಮ್ಮ ಜೀವನದ ಗುರಿಯನ್ನಾಗಿಟ್ಟುಕೊಂಡಿರುವ ಶ್ರೀಯುತರು 'ಕಲೆಯು ಬದುಕಿನ ಪ್ರತಿಬಿಂಬದಂತಿರಬೇಕು, ಜನರಿಂದ ಕೆಲಸ ಮಾಡಿಸುವಂಥದಾಗಬೇಕು, ಮನಸ್ಸನ್ನೂ ಜೀವನವನ್ನೂ ಹಗುರಗೊಳಿಸುವಂತಹುದಾಗಬೇಕು,'......ಎಂಬ ಧೋರಣೆಯೊಡನೆ ಬೊಂಬಾಯಿನಿಂದ ರಾಜಧಾನಿಗೆ ಬಂದರು. ಹಾಗೆ ಬಂದವರೇ ೧೯೨೭ ರಲ್ಲಿ ಶ್ರೀ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದರು. ಕೇವಲ ಕೆಲವೇ ತಿಂಗಳಲ್ಲಿ ಆಗಿನ ಅಧಿಕಾರದರ್ಪದಿಂದಲೋ ಏನೋ ಶಾಲೆಯಿಂದ ಹೊರಬರುವ ಕಹಿ ಪ್ರಸಂಗ ಬಂದುದು ಈ ಶಾಲೆಯ ದುರದೃಷ್ಟವೇಸರಿ. ಇಂಥ ಸಾವಿರ ಕಷ್ಟಗಳನ್ನು ಲೆಕ್ಕಿಸದೆ ಸತ್ಯಪ್ರತಿಪಾದನೆಯಲ್ಲಿ ದಿಟ್ಟತನದಿಂದ ಮುಂದೆ ಬಂದ ಶ್ರೀಯುತರಿಗೆ ಜೀವನ ಮಾರ್ಗಕ್ಕೆ ದಾರಿಮಾಡಿಕೊಳ್ಳುವುದೇನೂ ಕಷ್ಟವಾಗಿರಲಿಲ್ಲ. ಅದೇ ವರ್ಷ "ಬೊಂಬಾಯಿ ಆರ್ಟ್ಸ್‌ಸ್ಟೂಡಿಯೋ" ಎಂಬುದನ್ನು ತೆರೆದು ಚಿತ್ರಕಲೆ ಮತ್ತು ಛಾಯಾಚಿತ್ರಕಲೆಯಲ್ಲಿ ನಿರತರಾದರು. ಇದರಲ್ಲಿ ಜಯಗಳಿಸಿ ತಮ್ಮ ವೃತ್ತಿಯನ್ನು ವಿಸ್ತರಿಸಿ "ಮೈಸೂರು ಟಾಯ್ಸ್ ಕೊ" ಎಂಬ ಆಟದ ಸಾಮಾನಿನ ಕಾರ್ಖಾನೆಯನ್ನು ೧೯೩೬ ರಲ್ಲಿ ಸ್ಥಾಪಿಸಿದರು. ಇಲ್ಲಿ ತಯಾರುಮಾಡಿದ ಆಟದ ಸಾಮಾನುಗಳು ಮಕ್ಕಳ ಜ್ಞಾನವಿಕಾಸಕ್ಕೆ ಶ್ರೇಷ್ಠಸಾಧನವಾಗಿರುವುದರಿಂದ, ಈ ಕೆಲಸಕ್ಕೆ ಎಲ್ಲೆಲ್ಲೂ ಪುರಸ್ಕಾರ ಸಿಕ್ಕಿತು. ಪಾಶ್ಚಿಮಾತ್ಯ ದೇಶಗಳಲ್ಲೂ ಈ ಕೃತಿಗಳು ಪ್ರಸರಿಸಿ ಮೈಸೂರಿನ ಕಲಾಕೀರ್ತಿಯನ್ನು ಕೊಂಡಾಡುವಂತಾಯಿತು. ಮಕ್ಕಳ

ಗೆಂದೇ ಬರೆದು ಅಚ್ಚುಹಾಕಿಸಿದ ಇವರ 'ವಿಮಲ ಡ್ರಾಯಿಂಗ್ ಬುಕ್' ಮಕ್ಕಳಿಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೂ ಸಹಾಯಕವಾಗಿದೆ.

"ಕಲಾವಿದ ತನ್ನ ಕಾಲಿನಮೇಲೆ ಹೇಗೆ ನಿಲ್ಲಬಲ್ಲ" ಎಂಬುದಕ್ಕೆ ಶ್ರೀಯುತರು ನಿದರ್ಶನರಾಗಿರುವರು. ಈ ಕಲೆಯನ್ನು ವೃತ್ತಿಯಂತೆ ಅಳವಡಿಸಿ ಸುಗಮವಾದ ಜೀವನವನ್ನು ಹೇಗೆ ಸಾಧಿಸಬಹುದು ಎಂಬುದನ್ನು ತೋರಿಸಿದ ಪರಿಣಾಮವಾಗಿಯೋ ಏನೋ, ಇಂದಿನ ಪ್ರಜಾಸರ್ಕಾರದವರ ದೃಷ್ಟಿ ಶ್ರೀಯುತರ ಮೇಲೆ ಬೀಳದೇ ಇರಲಿಲ್ಲ. ಮೈಸೂರಿನ ಕೈಗಾರಿಕಾ ಉದ್ಯಮಕ್ಕೆ ಹೆಚ್ಚು ನೆರವನ್ನು ತೆಗೆದುಕೊಳ್ಳಲೋಸುಗ ಶ್ರೀಯುತರಿಗೆ ೧೯೪೭ ರಲ್ಲಿ ಅದೇ ಶಾಲೆಗೆ ಕಲಾಪ್ರಾಧ್ಯಾಪಕರಾಗಿ ಕರೆ ಬಂದಿತು.

ಶಾಲೆಗೆ ಒಂದು ವಿಶೇಷ ಕಳೆ ಬಂದಿತು. ಕಲಾ ತರಗತಿಗಳಿಗೂ ನವಚೇತನ ಮೂಡಿತು ಬಡವರಾದ ಕಲಾ ವಿದ್ಯಾರ್ಥಿಗಳ ಮೇಲೆ ಇವರ ಕರುಣಾಮಯ ದೃಷ್ಟಿ ಬಿದ್ದಿತು. ಕಲಾತರಗತಿಗಳನ್ನು ಹೇಗಾದರೂ ಮಾಡಿ ಮಾರ್ಪಡಿಸಬೇಕೆಂದಿದ್ದ ಬಹುದಿನದ ಇವರ ಬಯಕೆಗೆ ಪುಟಕೊಟ್ಟಂತಾಯಿತು. ನಾನಾ ತೊಂದರೆಗಳಿದ್ದರೂ ಕೂಡ ಕೂಲಂಕಷವಾಗಿ ಬಿಡಿಸಿ ಶಾಲೆಯಲ್ಲಿದ್ದ ಲೋಪದೋಷಗಳನ್ನು ಹೋಗಲಾಡಿಸುವಂತಾದುದು ಶ್ರೀಯುತರ ಒಂದು ವಿಶೇಷ ಗುಣದಿಂದಲೇ. ಸಮಾಜದಲ್ಲಿ ಬೆರೆತು, ನಾನಾತರದ ವಿಚಾರ ವಿನಿಮಯಗಳಲ್ಲಿ ಗೆದ್ದುಬಂದ ಈ ನಿಪುಣರಿಗೆ ಈ ಕೆಲಸವೇನೂ ಕಷ್ಟವಾಗಲಿಲ್ಲ.

ಕ್ರಮೇಣ ಶ್ರೀಯುತರ ಸೇವಾದೃಷ್ಟಿ ಎಲ್ಲೆಡೆಯಲ್ಲೂ ಬೆಳಗಿ ೧೯೫೦ ರಲ್ಲಿ ಅದೇ ಶಾಲೆಯ ಕಲಾವಿಭಾಗದ ಉನ್ನತ ಹುದ್ದೆಗೇರಿದರು. "ಬಾಡುವ ಬಳ್ಳಿಗೆ ನವಚೇತನ ಮೂಡಿದಂತೆ" ಬಳಲಿದ ಶಾಲೆಯು ಕ್ರಮೇಣ ಚೇತರಿಸಿಕೊಳ್ಳಲು ಶ್ರೀಯುತರ ಅವಿಶ್ರಾಂತ ದುಡಿಮೆಯೇ ಕಾರಣವಾಯಿತು. ಇವರ ಪಾಲಿಗೆ ಬಂದ ಚಿತ್ರಕಲೆ, ಲೋಹ, ದಂತ ಮತ್ತು ಗಂಧದ ಕೆತ್ತನೆ, ಎನಾಮಿಲ್, ಇನ್ಲೆ, ಮಾಡಲಿಂಗ್ ಮುಂತಾದ ತರಗತಿಗಳ ಮೇಲ್ವಿಚಾರಣೆಯ ಜವಾಬ್ದಾರಿ ಇವರ ಹೊಣೆಯಾಯಿತು. ಶಾಲೆಯಲ್ಲಿ ಅನೇಕ ಬದಲಾವಣೆಗಳಾದುವು. ಹೆಚ್ಚು ಜನರಿಗೆ ಕೆಲಸ ಸಿಗುವಂತೆ ಮಾಡಿದ್ದರಿಂದ ಕೆಲಸಗಾರರ ಸಂಖ್ಯೆಯೂ ಹೆಚ್ಚಿತು. ತಯಾರಾದ ವಸ್ತುಗಳು

ಬೇಗ ಮಾರಾಟವಾದುವು. ನಿಂತುಹೋಗಿದ್ದ ಜ್ಞಾನಾರ್ಜನಾ ಪ್ರವಾಸ (Exculsion) ದ ವ್ಯವಸ್ಥೆ ಮತ್ತೆ ಪ್ರಾರಂಭವಾಯಿತು. ವಿಶ್ವವಿದ್ಯಾನಿಲಯದ ಮತ್ತು ಇತರ ವಿದ್ಯಾರ್ಥಿಗಳಿಗಾಗಿ ಒಪ್ಪೊತ್ತಿನ (Part—time class) ಕಲಾತರಗತಿಗಳು ಬೇರೆ ಆರಂಭವಾದುವು. ಸರ್ಕಾರದ ಮತ್ತು ಕೈಗಾರಿಕಾ ಡೈರೆಕ್ಟರವರ ಬೆಂಬಲ ಪ್ರೋತ್ಸಾಹವೇ ಶ್ರೀಯುತರ ಉತ್ಸಾಹದ ಸೇವೆಗೆ ಕಾರಣವೆನ್ನಬಹುದು.

ಮೈಸೂರಿನ ಧವಳಕೀರ್ತಿ ಬೆಳಗುವಂತೆ ದೆಹಲಿಯ ರಾಷ್ಟ್ರಪತಿಭವನದಲ್ಲಿ "ಮೈಸೂರಿನ ಕಲಾಕೃತಿಗಳನ್ನು ಜೋಡಿಸಿಡಲು ಶ್ರೀ ವೀರಪ್ಪನವರನ್ನು ಸರ್ಕಾರದ ಪರವಾಗಿ ದೆಹಲಿಗೆ ಕಳುಹಿಸಲಾಯಿತು. ಅಲ್ಲಿ ಇದ್ದ ಕೆಲವೇ ದಿನಗಳಲ್ಲಿ ಬಿಡುವುಮಾಡಿಕೊಂಡು ಅವರು "ಬಿರ್ಲಾ ದೇವಾಲಯ," "ಕೆಂಪುಕೋಟೆ" ಮುಂತಾದ ಸುಂದರ ಚಿತ್ರಗಳನ್ನು ರಚಿಸಿಕೊಂಡು ಬಂದರು ಶ್ರೀಯುತರು ಸರ್ಕಾರಿ ಹುದ್ದೆಯಲ್ಲಿದ್ದು ಕಾಲಾವಕಾಶ ಇಲ್ಲದಿದ್ದರೂ ಕಲಾರಾಧನೆಗಾಗಿ ಬಿಡುವುಮಾಡಿಕೊಂಡು 'ತಮ್ಮ ಚಿತ್ರಾಲಯ'ದಲ್ಲಿ "ಗಣಪತಿ ಉತ್ಸವ"ದ ದೊಡ್ಡ ತೈಲಚಿತ್ರದ ರಚನೆಯಲ್ಲಿ ತೊಡಗಿ ಅದನ್ನು ಪೂರ್ಣಗೊಳಿಸಿದುದು ಆಶ್ಚರ್ಯವೇ ಸರಿ. ಕಲೆ ಬೇರೂರಿದರೆ ಕಾಲ, ವಯಸ್ಸು, ಅಧಿಕಾರ ಯಾವುದನ್ನೂ ಲಕ್ಷಿಸುವುದಿಲ್ಲವೆನ್ನುವುದಕ್ಕೆ ಇದೊಂದು ನಿದರ್ಶನ.

ರಷ್ಯಾ, ಚೀಣಾ, ಮುಂತಾದ ಕಡೆಗಳಲ್ಲಿ ಅಲ್ಲಲ್ಲಿನ ರಾಷ್ಟ್ರಭಕ್ತರ ಉನ್ನತ ಕಲಾಕೃತಿಗಳನ್ನು ರಚಿಸಿರುವಂತೆ, ಭಾರತೀಯ ರಾಷ್ಟ್ರನಾಯಕರ ಚಿತ್ರರಚನೆಗೆ ತೊಡಗಿರುವವರು ನಮ್ಮ ಕಲಾವಿದರಲ್ಲಿ ತೀರ ವಿರಳ. ಶ್ರೀ ವೀರಪ್ಪನವರು ರಾಷ್ಟ್ರಮಣಿಗಳಿಗೆ ಸಂಬಂಧಪಟ್ಟ ಅನೇಕ ಕಲಾಕೃತಿಗಳನ್ನು ನಿರ್ಮಿಸಿರುವುದು ತುಂಬಾ ಹೆಮ್ಮೆಯ ವಿಷಯ. ಅವುಗಳಲ್ಲಿ ಅತಿ ಮುಖ್ಯವೆನಿಸಬಹುದಾದುವು, ಎರಡು 'ಗಾಂಧೀಜಿ ಅಟ್ ಪ್ರೇಯರ್' ಮತ್ತು 'ಬಾಪುವಿನ ದಿವ್ಯಯಾತ್ರೆ.' ಒಂದರಲ್ಲಿ ಬಾಪೂಜಿಯು ವಿಶಾಲವಾದ ಮರದ ನೆರಳಿನ ಅಡಿಯಲ್ಲಿ ತಮ್ಮ ಸುತ್ತಲೂ ನವಭಾರತ ನಿರ್ಮಾಣದಲ್ಲಿ ತೊಡಗಿರುವ ದೇಶಭಕ್ತರೊಂದಿಗೆ ಎತ್ತರವಾದ ವೇದಿಕೆಯ ಮೇಲೆ ಕುಳಿತು ಪ್ರಾರ್ಥನೆಗೈಯ್ಯುವ ಚಿತ್ರಣ. ಇಲ್ಲಿ ನಮ್ಮ ಮೈಸೂರಿನ ರಾಜಕಾರಣಿಗಳನ್ನು ಗುರುತಿಸಬಹುದು. ಇಲ್ಲಿ ಬಳಸಿರುವ ಬಣ್ಣ, ರೇಖಾವಿನ್ಯಾಸ ನಿಜಕ್ಕೂ

ಸ್ವಾಭಾವಿಕವಾಗಿವೆ. ಮತ್ತೊಂದು ಚಿತ್ರ ಬಾಪುವಿನ ಪ್ರಾಣಪಕ್ಷಿ ಹಾರಿ ಹೋದ ದಿನದ ಚಿತ್ರಣವಾಗಿದೆ. ನಮ್ಮ ರಾಷ್ಟ್ರಭಕ್ತರು ಬಾಪುವಿನ ದೇಹದ ಸುತ್ತಲೂ ಸುತ್ತುಗಟ್ಟಿಕೊಂಡು ಚಿಂತಾಜನಕರಾಗಿರುವ ಚಿತ್ರಣ. ಆತನ ಪ್ರಾಣಪಕ್ಷಿ ತಿಳಿಯಾದ ಆಕಾಶದಲ್ಲಿ ಸ್ವರ್ಗಕ್ಕೆ ತೆರಳುತ್ತಿರುವ ಅಪೂರ್ವ ಚಿತ್ರಣ ಇದು. ಇಲ್ಲಿನ ಸನ್ನಿವೇಶ, ವರ್ಣಗಳ ಬಳಕೆ, ವಾತಾವರಣ ಸಹಜ ವಾಗಿಯೂ ಸ್ವಚ್ಛವಾಗಿಯೂ ಮೂಡಿ ಬಂದಿವೆ. ಇವು ನನ್ನುವರಿಗೆ ಅತ್ಯಂತ ಪ್ರಿಯವಾದುವುಗಳೆಂದು ಹೇಳಬಹುದು.

ಶ್ರೀಯುತರು ಜಪಾನ್ ಪ್ರವಾಸವನ್ನು ಕೈಕೊಂಡು, ಅದನ್ನು ಮುಗಿಸಿ ಕೊಂಡು ಬಂದಮೇಲೆ, ತಮ್ಮ ಸರ್ಕಾರೀ ಅಧಿಕಾರದಿಂದ ಬಿಡುಗಡೆ ಹೊಂದಿ ದರೂ ವಿಶ್ರಾಂತಿ ಪಡೆಯದ ಜಪಾನ್ ಮಾದರಿಯ ಕುಶಲ ಕೈಗಾರಿಕೆಯ ಉದ್ಯಮದಲ್ಲಿ ತೊಡಗಿರುವುದು ಶ್ರೀಯುತರ ಒಂದು ವಿಶೇಷ ಗುಣವೇ ಸರಿ.

ಶ್ರೀಯುತರಲ್ಲಿ ಕಲಾಕಿರಣದ ಕೀರ್ತಿಯನ್ನು ಸತತ ಉಳಿಸಬಲ್ಲ ಒಂದು 'ಹೂ' ರಾರಾಜಿಸುತ್ತಿದೆ. ಆ 'ಹೂ' ವೇ ಇವರ ದ್ವಿತೀಯ ಪುತ್ರರಾದ ಎಂ. ವಿ. ಶಿವಣ್ಣನವರು. ಇವರು ಈಗಾಗಲೇ ಮದರಾಸು ಕಲಾಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಲಾಸಾಧನೆ ಪರೀಕ್ಷೆ ಮತ್ತು ಬೊಂಬಾಯಿ ಉದ್ಯಮ ಪರೀಕ್ಷೆಗಳಲ್ಲಿ ಯಲ್ಲಿ ತೊಡಗಿರುವುದು ಒಂಡು ಶುಭಸೂಚನೆಯೇ ಸರಿ. ಶ್ರೀಯುತರ ಮನೆತನ ತುಂಬಿದ 'ಹೂ, ಬಳ್ಳಿಯಂತೆ.' ಕರ್ಣಾಟಕದ ಎಲ್ಲೆಡೆಯಲ್ಲೂ ಆ ಬಳ್ಳಿ ತನ್ನ ಸುವಾಸನೆಯೊಡನೆ ಘಮಘಮಿಸಿ ಪಸರಿಸು ವಂತಾಗಲಿ.



ಎಫ್. ಎಂ. ಸೂಫಿ

'ಸೂಫಿ'ಯವರ ಜ್ಞಾಪಕ ಬಂದಾಗಲೆಲ್ಲಾ ಅವರು ಆಗಿಂದಾಗ್ಗೆ "ಶಿವ ಕೊಡಬೇಕು, ನಾವು ಅನುಭವಿಸಬೇಕು" ಎಂದು ಹೇಳುತ್ತಿದ್ದುದು ನೆನಪಾಗುತ್ತದೆ. ಪ್ರಾತಃಕಾಲದಿಂದ ಸಂಜೆಯವರೆಗೆ ಇವರು ಚಿತ್ರಕಲೆಯಲ್ಲಿ ತಲ್ಲೀನರಾಗಿರುವುದೇ ಒಂದು ವೈಶಿಷ್ಟ್ಯ. ಪ್ರಕೃತಿದೇವಿಯ ಪ್ರಫುಲ್ಲದೃಶ್ಯಗಳನ್ನೂ, ಸ್ವಂತಕಲ್ಪನೆಯ ಚಿತ್ರಗಳನ್ನೂ, ತಾವು ಅಭ್ಯಸಿಸಿದ ಪ್ರಾಣಿಗಳನ್ನೂ ಬಹು ಹೃದಯಂಗಮವಾಗಿ ಚಿತ್ರಿಸುತ್ತಾರೆ. ಮೃಗಾಲಯವನ್ನು

ಮನೆಯಂತೆ ತಿಳಿದು ಅಲ್ಲಿನ ಎಲ್ಲರೀತಿಯ ಮೃಗ, ಪ್ರಾಣಿ, ಪಕ್ಷಿಗಳನ್ನೂ ಚಿತ್ರಿಸುವ ಮರ್ಮವನ್ನು ತಿಳಿದು, ಕೆಲವು ವರ್ಷಗಳಕಾಲ ವಿದ್ಯಾರ್ಥಿಯಂತೆ ದುಡಿದರು. ಹಾಗೆಯೇ ವೃತ್ತಪತ್ರಿಕೆಗಳಿಗೂ ಮತ್ತು ಪುಸ್ತಕಗಳ ರಕ್ಷಾಕವಚ ಗಳಿಗೂ ಅಂದವಾದ, ಭಾವಗರ್ಭಿತವಾದ ಚಿತ್ರಗಳನ್ನು ಬರೆಯಲು ಆರಂಭಿಸಿ ದರು. ಇದು ಅವರ ಉಪಜೀವನ ಸಾಗುವುದಕ್ಕೆ ಕೊಂಚ ನೆರವು ನೀಡಿತು.

ಚಿತ್ರಕಲೆಯಲ್ಲಿ ಆಸೆ, ಆಕಾಂಕ್ಷೆ ಇವರಿಗೆ ಬಂದುದು ಇವರ ತಂದೆ ಯವರಿಂದ. ಮೇಲಾಗಿ ಹೆಚ್ಚಿನ ಸ್ಫೂರ್ತಿ ಕೊಟ್ಟವರೆಂದರೆ ಮೈಸೂರಿನ ಕಲಾ ವಿದರಾಗಿದ್ದು ಅರಮನೆಯಲ್ಲಿ ಸೇವೆ ಸಲ್ಲಿಸಿ ಅನಂತರ ಕಾಬೂಲಿನಲ್ಲಿ 'ಸ್ಕೂಲ್ ಆಫ್ ಆರ್ಟ್ಸ್' ಶಾಲೆಯನ್ನು ತೆರೆದ ಮಹನೀಯರಾದ ಜನಾಬ್ ಲೇಟ್ ಅಬ್ದುಲ್ ಹಜೀಜ್‌ರವರು. ಸೂಫಿ ೧೯೩೯ ರಲ್ಲಿ ಮೈಸೂರಿನ ಚಾಮರಾ ಜೇಂದ್ರ ಟೆಕ್ನಿಕಲ್ ಶಾಲೆಗೆ ಸೇರಿ ಕಲಾಭ್ಯಾಸ ಮಾಡತೊಡಗಿದರು. ಶ್ರೀಯುತ ರಾದ ಕೆ. ಕೇಶವಯ್ಯ, ಟಂಕಸಾಲೆ, ವೇಣುಗೋಪಾಲನಾಯ್ಡು ಇವರುಗಳು ಜನಾಬರ ಗುರುಗಳಾಗಿದ್ದರು. ಶಾಲೆಯ ಅಭ್ಯಾಸ ನಾಲ್ಕುವರ್ಷಗಳಕಾಲ ನಡೆದ ಮೇಲೆ ತಮ್ಮ ಉನ್ನತ ಆಸೆ ಕೈಗೂಡದಕಾರಣ ಎರಡು ವರ್ಷಗಳ ಕಾಲ ಮೃಗಶಾಲೆಯನ್ನು ಹೊಕ್ಕು ಕೂಲಂಕುಷವಾಗಿ ಪ್ರತಿಯೊಂದು ಪ್ರಾಣಿ ಯನ್ನೂ ಮನಸ್ಸಿಟ್ಟು ಚಿತ್ರಿಸಲು ಅಭ್ಯಾಸಮಾಡಿದರು. ಪ್ರಾಣಿಗಳ ಮತ್ತು ಪಕ್ಷಿಗಳ ಹಾವ ಭಾವ, ಬೆಡಗು, ಬಣ್ಣಗಳ ರೀತಿ ನೀತಿ ಕರಗತವಾಗಲು ಇವರು ಹಗಲಿರುಳು ಶ್ರಮಿಸಿದರು.

ಎಷ್ಟು ಕಷ್ಟಕಾರ್ಪಣ್ಯಗಳು ಬಂದರೂ ಇವರು ಎದೆಗುಂದದೆ ಧೈರ್ಯ ವಾಗಿ ಎದುರಿಸಿ, ಕಲಾಭ್ಯಾಸ ಮಾಡಿಬರಲು ಟೊಂಕಕಟ್ಟಿ, ಬೊಂಬಾಯಿಗೆ ೧೯೩೬ ರಲ್ಲಿ ತೆರಳಿದರು. ಬೊಂಬಾಯಿ ತಲುಪಿದ ತಕ್ಷಣ ಜೆ. ಜೆ. ಸ್ಕೂಲಿಗೆ ಸೇರಲು ಅನುಕೂಲವಾಗದಿದ್ದುದರಿಂದ 'ಬ್ರಿಟಿಷ್ ಇಂಡಿಯಾ ಪ್ರೆಸ್ಸಿ'ನಲ್ಲಿ ರೇಖಾಚಿತ್ರಗಳನ್ನು ರಚಿಸಿಕೊಡುವ ಉದ್ಯಮಕ್ಕೆ ಸೇರಿದರು. ಅನಂತರ ಮೈಸೂರು ಸರ್ಕಾರದಿಂದ ಪ್ರತಿ ಮಾಹೆ ೩೫ ರೂ. ಗಳ ವಿದ್ಯಾರ್ಥಿವೇತನ ದೊರೆತುದು ಇವರ ಪುಣ್ಯವೇ ಸರಿ. ಬಹಳ ಶ್ರದ್ಧೆಯಿಂದ ಕಲಾಭ್ಯಾಸ ಆರಂಭಿಸಿದ ಪರಿಣಾಮವಾಗಿ ತಮ್ಮ ನಾಲ್ಕನೇ ತರಗತಿಯಲ್ಲಿ ತರಗತಿಯ ಪ್ರಥಮ ಬಹುಮಾನವನ್ನು ಪಡೆದರು. ಇವರ ಕಲಾನೈಪುಣ್ಯತೆಯಿಂದ

ತಮ್ಮ ಶಾಖೆಯ ಡೈರೆಕ್ಟರಾದ ಜೆ. ಡಿ. ಜರಾಲ್ಡರ್ ಮತ್ತು ಕಲಾಧ್ಯಾಪಕರಾದ ಭೋಸ್ಲೆಯವರ ದೃಷ್ಟಿಗೆ ಬಿದ್ದು ಹೆಚ್ಚಿನ ಪ್ರೀತಿಗೆ ಪಾತ್ರರಾಗಿ ಅನೇಕ ವಿಷಯವನ್ನು ತಿಳಿದುಕೊಂಡರು. ಅನಂತರ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನ ವೇತನವನ್ನೂ ಪಡೆದರು. ಬೊಂಬಾಯಿಯ ಕಲಾವಿದ ಸರ್ದಾರ್‌ಸಿಂಗ್‌ರಲ್ಲಿಯೂ ಬಿಡುವಾದ ವೇಳೆಯಲ್ಲಿ ಕಲಾಭ್ಯಾಸ ಮಾಡುತ್ತಿದ್ದರು.

ಸಂಜೆಯ ಸಮಯದಲ್ಲಿ ಸಮುದ್ರದ ತೀರದಲ್ಲೋ, ಮಸೀದಿಯ ಮೂಲೆಯಲ್ಲೋ ಕುಳಿತು ಕಲಾಭ್ಯಾಸ ಮಾಡುವುದು, ಇಲ್ಲವೇ ಕಲಾಜಗತ್ತಿನಲ್ಲಿ ತಲ್ಲೀನರಾಗುವುದು ಇವರ ಸಂಪ್ರದಾಯ. ತಾವು ರೇಖಾಗಣಿತದಲ್ಲಿ ಕೊಂಚ ಪರಿಶ್ರಮ ಪಡೆದಿದ್ದುದರಿಂದ ತಮ್ಮ ಗೆಳೆಯರಿಗೆ ಮನಮುಟ್ಟುವಂತೆ ಇದರ ಅಭ್ಯಾಸವನ್ನು ಮಾಡಿಸುತ್ತಿದ್ದರು. ೧೯೩೯ರಲ್ಲಿ ಸ್ಕೂಲಿನ ಪರವಾಗಿ ಅಜಂತಾ, ಎಲ್ಲೋರ ಮುಂತಾದ ಕಲಾ ಕೇಂದ್ರಗಳಿಗೆ ಪ್ರವಾಸ ಹೋಗಿ ಅಭ್ಯಾಸಮಾಡಿ ಬರಲು ಸದವಕಾಶವನ್ನು ಪಡೆದರು. ಅಲ್ಲಿನ ಭಾರತೀಯ ಕಲೆಯು ಪಾಶ್ಚಿಮಾತ್ಯರ ಕಲೆಗಿಂತ ಕಡಿಮೆ ಇಲ್ಲ ಎಂಬುದನ್ನು ಅರಿತರು. ಇವರಿಗೆ ಪ್ರಿಯವಾಗಿದ್ದ, ನಿತ್ಯವೂ ಸಂದರ್ಶಿಸುತ್ತಿದ್ದ, ಅಗಾಧ ಪ್ರೇಮವನ್ನಿಟ್ಟಿದ್ದ 'ಜುಮ್ಮಾ ಮಸೀದಿ'ಯನ್ನು ಸುಂದರವಾಗಿ ಚಿತ್ರಿಸಿ ಅದರ ಉನ್ನತ ಅಧಿಕಾರಿಗಳಿಗೆ ಕಾಣಿಕೆಯ ರೂಪದಲ್ಲಿ ಕೊಟ್ಟು ಮೆಚ್ಚಿಗೆ ಪಡೆದರು.

ಜನಾಬರು ಅವಿಶ್ರಾಂತವಾಗಿ ಕಲೆಯನ್ನು ಅಭ್ಯಸಿಸಿ ಜಿ. ಡಿ. ಪದವಿಯನ್ನು ಪಡೆದು ಮೈಸೂರಿಗೆ ಹಿಂತಿರುಗಿದ ಕೂಡಲೆ ಚಾಮರಾಜೇಂದ್ರ ಶಾಲೆಯಲ್ಲಿ ಕೊಂಚ ವೇತನದಮೇಲೆ ಅಧ್ಯಾಪಕವೃತ್ತಿಗೆ ಸೇರಿಕೊಂಡರು. ಅವರು ಹೆಚ್ಚು ಶ್ರದ್ಧೆ ಇಟ್ಟಿದ್ದ ಪ್ರಾಣಿಗಳ ಚಿತ್ರದಲ್ಲಿ ಸಿದ್ಧಹಸ್ತದ ಕಲಾವಿದರೆಂಬ ಕೀರ್ತಿಗಳಿಸಿದರು. ಇವರು ಆಧುನಿಕ ರೀತಿಯನ್ನೇ ಬಯಸುವವರು; ಮೂಢ ನಂಬಿಕೆಗಳನ್ನಾಗಲೀ, ಹಳೆಯ ಸಂಪ್ರದಾಯವನ್ನಾಗಲೀ ನಂಬುವವರಲ್ಲ. ಪ್ರಕೃತಿಯಲ್ಲಿ ಯಥಾವತ್ತಾಗಿ ಕಾಣಬರುವ ವಸ್ತುಗಳನ್ನು ಅಭ್ಯಾಸ ಬಲದಿಂದ ನಂಬುವವರಾಗಿದ್ದಾರೆ. ಜನರ ಸುಖ, ದುಃಖ, ಸತ್ಯ, ಸೌಂದರ್ಯ, ಜೀವನದ ಘಟನೆಗಳನ್ನು ಕಂಡರೆ ಪಂಚಪ್ರಾಣ. ಈ ಸನ್ನಿವೇಶಗಳನ್ನು ಚಿತ್ರಿಸಲು ಹಾತೊರೆಯುತ್ತಾರೆ.

ಇವರ ಚಿತ್ರಗಳು ಕನ್ನಡನಾಡಿಗೆ ಅಪಾರ ಗೌರವವನ್ನು ತಂದಿವೆ. ಇವುಗಳಲ್ಲಿ ಸುಂದರವಾಗಿ, ಸ್ಪಷ್ಟವಾಗಿ, ಹೃದಯಂಗಮವಾಗಿ, ಕಲಾ ಪ್ರಪೂರ್ಣವಾಗಿ ಪ್ರಜ್ವಲಿಸುವ ಚಾಕಚಕ್ಯತೆ ಕಂಡುಬರುವುದು. ದಸರಾ ವಸ್ತು ಪ್ರದರ್ಶನಗಳಲ್ಲಿ ಇವರ ಕೃತಿಗಳಿಗೆ ಅನೇಕ ಬಹುಮಾನಗಳು ದೊರೆತುದಲ್ಲದೆ ಎಲ್ಲವೂ ತಕ್ಷಣ ಮಾರಾಟವಾಗುವುದೇ ಇವರ ಕಲಾಪ್ರತಿಭೆಗೆ ಸಾಕ್ಷಿಯಾಗಿದೆ.

ಜನಾಬ್ ಸೂಫಿಯವರು ಕನ್ನಡ ಕಲಾಕ್ಷೇತ್ರದಲ್ಲಿ ಹೊಂಬೆಳ ಕನ್ನು ಬೀರಿದರು. ನವೀನ ರೀತಿಯಲ್ಲಿ ಹಾದಿಯನ್ನು ಹಸನು ಮಾಡಿದರು. ಕಲೆಯ ಹೆಸರಿನಲ್ಲಿ ಹಣದ ಸುಲಿಗೆ ಇವರಿಗೆ ಸಲ್ಲದು. ಬಡತನದ ಕಷ್ಟದಲ್ಲಿ ಬೆಂದರೂ ಹಣದ ಆಸೆಗೆ ಕಲೆಯನ್ನು ಕೊಲೆಗೀಡುಮಾಡುವ ಮನೋವೃತ್ತಿ ಇವರಿಗಿಲ್ಲ. ಜನರ ಹೊಗಳಿಕೆಯಿಂದ ಬರುವ ಒಣ ಪ್ರತಿಷ್ಠೆಗೆ ಇವರು ಎಂದೂ ಮನ ಸೋಲರು. ಜನಾಬರು ಶಾಂತಿಪ್ರಿಯರು. ಅಲ್ಪ ವೇತನ ಬರಲಿ. ಬಡತನ ಬೆನ್ನಟ್ಟಿಬರಲಿ ಧರ್ಮದ ದೃಷ್ಟಿಯಿಂದ ದೂರವಾಗುವವರಲ್ಲ. ಶತ್ರು ಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವ ದೊಡ್ಡ ಗುಣವೂ ಇವರಲ್ಲಿದೆ. ಯಾವಾಗಲೂ ಹಸನ್ಮುಖಿಗಳಾಗಿ, ಸೌಮ್ಯರೀತಿಯ ಆಡಂಬರವಿಲ್ಲದ ಸ್ವಚ್ಛ ಉಡುಪು ಧರಿಸುತ್ತಾರೆ.

ಜನಾಬರಿಗೆ ಹೆಸರು ತಂದ ಚಿತ್ರಗಳೆಂದರೆ 'ಜಿಪ್ಸಿ ಕುಕ್ಕರ್;' 'ದಿ ರೆಸ್ಟ್;' 'ಆನ್ ದಿ ಅಲರ್ಟ್;' 'ಬ್ಲೂ ಪೀಕಾಕ್' ಮುಂತಾದ ಚಿತ್ರ ಗಳು. ಇವು ವರ್ಣವಿನ್ಯಾಸ, ಬೆಳಕು ಕತ್ತಲು, ಗಾಳಿ, ವಾತಾವರಣ, ದಿಗಂತದ ಸ್ವಚ್ಛ ಛಾಯೆ—ಎಲ್ಲ ದೃಷ್ಟಿಯಲ್ಲೂ ಉನ್ನತವಾಗಿರುತ್ತವೆ.

"ದಿ ಜಿಪ್ಸಿ ಕುಕ್ಕರ್"—ಎಂಬ ಕೃತಿಯಲ್ಲಿ, ಒಬ್ಬ ತಿರುಕ ಹೆಂಗಸು ಊರಿಂದ ಊರಿಗೆ ನಡೆದುಬಂದು ಬೇಸತ್ತು, ಅಡಿಗೆ ಕೆಲಸದಲ್ಲಿ ತೊಡಗಿರು ವುದನ್ನು ಕಾಣಬಹುದಾಗಿದೆ. ಆಕೆಯ ಸುತ್ತಮುತ್ತಣ ವಾತಾವರಣ ಅಂಧ-ಕಾರತೆಯ ಬಟ್ಟಬಯಲು. ಅಡಿಗೆಯ ಒಲೆಯ ಬೆಂಕಿಯಿಂದ ಬರುವ ನಸು ಮಬ್ಬು ಬೆಳಕು ಮಾತ್ರ ಆಕೆಯ ಬಾಡಿದ ಭವಣೆಯ ಮುಖವನ್ನು ಸ್ಪಷ್ಟ ವಾಗಿ ತೋರಿಸುತ್ತದೆ. ಆಕೆ ಉಟ್ಟಿರುವ ಚಿಂದಿಬಟ್ಟೆ, ಉಪಯೋಗಿಸುವ ಅಡಿಗೆಯ ಮುರುಕು ಮಣ್ಣಿನ ಮಡಕೆ, ಮತ್ತು ತುಸು ಆಹಾರ, ಎಲ್ಲವನ್ನೂ ಸೂಕ್ಷ್ಮವರ್ಣಗಳಲ್ಲಿ ಕಾಣಿಸಿರುವುದು ಒಂದು ವಿಸ್ಮಯವೇ ಸರಿ. ಬೆಂಕಿಯಲ್ಲಿ

ಕಂಡುಬರುವ ವಿವಿಧ ಬಣ್ಣಗಳೂ ಪ್ರಕೃತಿಸಿದ್ಧವಾದುವುಗಳಾಗಿವೆ. ಇಂತಹ ಚಿತ್ರ ಮಧ್ಯಪ್ರಾಂತ್ಯದ ಕಲಾಪ್ರೇಮಿಯೊಬ್ಬರನ್ನು ಆಕರ್ಷಿಸಿ, ಅವರ ಮನೆಯ ಅಲಂಕಾರಸಾಧನವಾಗಿದೆ.


"ದಿ ಅಲರ್ಟ್" — ಎಂಬುದು ಭಯಂಕರ ಸನ್ನಿವೇಶವನ್ನು ತೋರಿಸುವ ಚಿತ್ರ. ಆದರೂ ಒಂದು ರಮ್ಯವಾದ ಅಗಾಧತೆ ಇದೆ, ಅದರಲ್ಲಿ. ಕಗ್ಗತ್ತಲೆಯ ದಟ್ಟವಾದಕಾಡಿನಲ್ಲಿ ಸೂರ್ಯನ ಸೂಕ್ಷ್ಮಕಿರಣಗಳು ಯಾವ ಸಂದಿನಿಂದಲೋ ತೂರಿಬಂದು, ನೀಳವಾಗಿ ನಿಂತ ನೀರಿನಮೇಲೂ, ದಾಹದ ಬಾಧೆಯಿಂದ ಬಳಲಿ ನೀರು ಕುಡಿಯಲು ಕಾತುರತೆಯಿಂದ ಬಂದ ಚಿರತೆಯ ಮುಖದ ಮೇಲೂ ಬಿದ್ದಿವೆ. ಚಿರತೆಯಲ್ಲಿ ಕಂಡುಬರುವ ಭಯೋತ್ಪಾದಕ ಭಾವಗಳೂ, ಮತ್ತು ಸಹಜ ವರ್ಣಗಳ ಸೃಷ್ಟಿಯೂ ಕಲಾಮಯವಾಗಿವೆ. ಚಿರತೆಯ ಪ್ರತಿಬಿಂಬವು ನಿಂತ ನೀರಿನಲ್ಲಿ ಅಚ್ಚಳಿಯದೆ ಕಾಣುವ ಸ್ವರೂಪ ಸ್ವಾಭಾವಿಕವಾಗಿದೆ. ಇಂಥ ಅಪ್ರತಿಮಚಿತ್ರ ಹೈದರಾಬಾದಿನ ಶ್ರೀಮಂತ ರೊಬ್ಬರ ಗೋಡೆಯಮೇಲೆ ರಂಜಿಸುತ್ತಿದೆ.

"ದಿ ರೆಸ್ಟ್"—ಎಂಬುದರಲ್ಲಿ ಬಿಳಿದಾದ ಒಂದು ಜೊತೆ ನವಿಲುಗಳು ತಮ್ಮ ಪುಕ್ಕಗಳನ್ನು ಕೆದರಿಕೊಂಡು ಲವಲವಿಕೆಯಿಂದ ವಿಶ್ರಾಂತಿಯನ್ನು ಪಡೆಯುವುವೋ ಎನ್ನುವಂತಹ ಚಿತ್ರ. ಈ ನವಿಲುಗಳು, ಒಂದು ಇನ್ನೊಂದನ್ನು ಪ್ರೇಮದೃಷ್ಟಿಯಿಂದ ನೋಡುವ ನೋಟವನ್ನು ಸೂಚಿಸುತ್ತಿರುವಂತಿವೆ. ಅವುಗಳ ಅಂಗಾಂಗಗಳ ಸೊಗಸು, ಬೆಡಗು ಬಿನ್ನಾಣ, ಎಲ್ಲವೂ ಪ್ರೇಮಪೂರಿತ ಚಿಹ್ನೆಯನ್ನು ಬೀರುವಂತಿವೆ. ಉದ್ಯಾನವನದಲ್ಲಿ ಕಂಡುಬರುವ ಮರ, ಬಳ್ಳಿ, ಪೊದೆ, ಪುಷ್ಪ, ರೆಂಬೆ, ಕೊಂಬೆ, ಎಲೆ, ಗರಿ, ಹಣ್ಣು, ಹಸುರುಹುಲ್ಲು ಎಲ್ಲವೂ ಬಹು ಸ್ವಾಭಾವಿಕವಾದ ಪ್ರಕೃತಿಯ ರಚನೆಯಂತೆ ಇದೆ. ದಿಗಂತವನ್ನು ತೋರುವುದರಲ್ಲೂ ಸೂಫಿಯವರು ತಮ್ಮ ಕುಂಚದ ಸಾಹಸವನ್ನು ತೋರಿಸುತ್ತಾರೆ. ಚಿತ್ರ ಎಷ್ಟಾದರೂ ಕೃತಕ, ನಿಜ. ಆದರೆ ಇಲ್ಲಿ ನವಿಲುಗಳ ಸೃಷ್ಟಿ ನಿಜವಾಗಿಯೂ ಅಪ್ರತಿಮ. ಇದೇ ತೆರನಾದ ಮೂರು ಬಿಳಿಯ ನವಿಲುಗಳು ಹುಲ್ಲುಹಾಸಿನ ಮೇಲೆ ಉಲ್ಲಾಸವಾಗಿ ಪ್ರಕೃತಿಯ ಬೆಡಗಿಗೆ ಮನಸೋತಂತೆ ಹರ್ಷಪೂರ್ಣವಾದ ನೋಟವನ್ನು ಬೀರುವ ಬಗೆ ಯಾರನ್ನಾದರೂ ಮುಗ್ಧಗೊಳಿಸುವಂತಿದೆ.

ಇನ್ನೊಂದು ಚಿತ್ರದಲ್ಲಿ ವನರಾಣಿಯೊಬ್ಬಳು ನವಿಲೊಂದನ್ನು ಹಿಡಿದು ಕೊಂಡು ಮರದ ನೆರಳನ್ನಾಶ್ರಯಿಸಿ ನಿಂತಿರುವ ಗಂಭೀರ ಠೀವಿಯನ್ನು ಚಿತ್ರಿಸುವುದರಲ್ಲಿ ಜನಾಬ್ ಸೂಫಿಯವರು ತಮ್ಮ ಕಲಾಪ್ರೌಢಿಮೆಯನ್ನು ವ್ಯಕ್ತಪಡಿಸಿದ್ದಾರೆ. ಅವಳ ಮುಖಭಾವ, ಉಡಿಗೆ, ತೊಡಿಗೆ, ಮೈಬಣ್ಣ, ಸನ್ನಿವೇಶಕ್ಕೆ ತಕ್ಕಂತೆ ಚಿತ್ರಿತವಾಗಿರುವ ಮಾಟವಾದ ಶರೀರ ಮುಂತಾದುವುಗಳಲ್ಲಿ ಅವರ ಕೈಚಳಕವನ್ನು ನೋಡಬಹುದು. ನಿಬಿಡವಾದ ಕಾಡುಮರಗಳ ಸಂದಿನಿಂದ ತೂರಿಬಂದ ಹೊಂಗಿರಣಗಳು ಆಕೆಯ ಶರೀರಕಾಂತಿಯನ್ನು ಹೆಚ್ಚಿಸುವಂತಿವೆ.

ಮೈಸೂರಿನ ಮಂಡಿ ಮೊಹಲ್ಲದ ಒಂದು ಸಾಮಾನ್ಯ ಮನೆಯಲ್ಲಿದ್ದು ಕೊಂಡು ಕಲಾರಾಧನೆಯಲ್ಲಿ ಭವ್ಯತೆಗೇರಿರುವ ನಿರಾಡಂಬರವ್ಯಕ್ತಿ ಜನಾಬ್ ಸೂಫಿಯವರ ಚಿತ್ರಕಲೆ ಅಪೂರ್ವವಾದುದು; ಅಮರವಾದುದು.

ಅವರ ಮೃದುಮಧುರವಾಣಿಯಂತೆಯೇ ಅವರ ಕಲಾಕೃತಿಗಳೂ ಶೋಭಿಸುತ್ತವೆ. ಸದಾ ಪ್ರಸನ್ನಮುಖಿಗಳಾಗಿರುವ ಜನಾಬರ ಅಪೂರ್ವ ಕಲಾ ಪ್ರೌಢಿಮೆಗೆ ಯಾರಾದರೂ ತಲೆತೂಗಿಯಾರು; ಮೆಚ್ಚಿ ಮಣಿದಾರು. ಸೂಫಿಯವರ ಕೀರ್ತಿಜ್ಯೋತಿ ಅಮರವಾಗಿ ಬೆಳಗಲಿ.



ವೈ. ನಾಗರಾಜು

"ಕೋಗಿಲೆಗೆ ಸುಸ್ವರವು ಸಹಜವಾಗಿರುವಂತೆ ಕಲಾಜೀವಿಗೆ ಕಲೆ ಸಹಜವಾಗಿರುತ್ತದೆ." ಕಲಾವಿದನು ಪ್ರಕೃತಿಯಲ್ಲಿ ಹುದುಗಿರುವ ಸೌಂದರ್ಯವನ್ನು ಹೊರಪಡಿಸುವವನಾಗಿರುತ್ತಾನೆ. ಕಲೆಯ ನೆಲೆಯನ್ನು ಸದಾ ಕಾಣಲು ಹೆಣಗುವವನಾಗಿರುತ್ತಾನೆ. ಜೀವಂತಹೃದಯವಿರುವ ಕಲಾವಿದ, ಜೀವಂತ ಕಲಾಕೃತಿಗಳನ್ನು ಸೃಷ್ಟಿಸುತ್ತಾನೆ.

ಕಲೆಯ ಹಿರಿಮೆಯನ್ನು ತೋರಬಲ್ಲ ಅನೇಕ ಜನ ಕಲಾವಿದರು ನಮ್ಮ ನಾಡಿನಲ್ಲಿದ್ದಾರೆ. ಆದರೆ, ಅವರ ಆ ಚೈತನ್ಯ, ಆ ಪ್ರತಿಭೆ, ಎಲ್ಲವೂ ಹಿಡಿಹಿಟ್ಟಿನ ಕರಾಳ ಹೋರಾಟದಲ್ಲಿ ಕಮರುತ್ತಿವೆ. ಇಂಥ ಒಂದು ಪರಿಸ್ಥಿತಿಯಿಂದ ಪುಣ್ಯವಶಾತ್ ದೂರವಿದ್ದು ವಂಶಪಾರಂಪರ್ಯವಾದ ಕಲಾವೃತ್ತಿಯನ್ನು ಧೈರ್ಯಗೆಡದೆ, ದಿಟ್ಟತನದಿಂದ ಕೈಕೊಂಡು, ಭಾವಚಿತ್ರರಚನೆಯಲ್ಲೇ ಕೀರ್ತಿ ಶಿಖರವನ್ನೇರಿದವರಲ್ಲಿ ಶ್ರೀ ವೈ. ನಾಗರಾಜು ಅವರು ಪ್ರಮುಖರು.

'ಸುಂದರವಾದದ್ದನ್ನು ನಿರೂಪಿಸುವವನೇ ಸುಂದರ' ಎಂಬ ಆಯೋಕ್ತಿಯಂತೆ, ಕಲಾವಿದನು ಸೌಂದರ್ಯನಿರ್ಮಾಣದಲ್ಲಿ ಮಿಲನವನ್ನು ಅಪೇಕ್ಷಿಸಿ ಆನಂದವಲ್ಲಿ ತಲ್ಲೀನನಾಗುತ್ತಾನೆ. ಈ ಕಲೆಯೇ ಲಲಿತಕಲೆ (Fine Arts). ಇದು ಉದ್ಯಮಕಲೆ (Commercial Arts) ಯಿಂದ ದೂರವಿದೆ. ಹೊಟ್ಟೆಯ ಹೋರಾಟಕ್ಕೆ ನೆರವಾಗುವುದೇ ಉದ್ಯಮಕಲೆಯ ಮುಖ್ಯ ಗುರಿ. ಜೀವನವು ದುರ್ಭಲವಾದಾಗ ಲಲಿತಕಲೆಯ ಹಾದಿಯಿಂದ ಉದ್ಯಮಕಲೆಯ ಕಡೆ ಮನಸ್ಸು ತಿರುಗುತ್ತದೆ. ಈ ಗುರಿಯ ಅಂಚಿನೆಡೆಗೆ ವಿಧಿ ಪ್ರತಿಭಾನ್ವಿತ ಶ್ರೀ ನಾಗರಾಜು ಅವರನ್ನು ಸೆಳೆಯಲೆತ್ನಿಸಿದೆ. ಇಷ್ಟೆಲ್ಲಕ್ಕೂ ಅವರಿಗೆ ಸಿಗುತ್ತಿದ್ದ ಪ್ರೋತ್ಸಾಹ ಕಡಿಮೆಯಾದದ್ದು, ರಾಜ ಮಹಾರಾಜರುಗಳ, ಸಾರ್ವಜನಿಕರ, ಸರ್ಕಾರದ ಅಲಕ್ಷ್ಯಗಳು ಕಾರಣವೆಂದರೂ ತಪ್ಪಾಗದು.

ಉದ್ಯಾನನಗರಿಯಾದ ಮೈಸೂರೇ ಇವರು ಹುಟ್ಟಿ ಬೆಳೆದೂರು. ಐವತ್ತರ ಗಡಿಮೀರಿದ ಇವರು ಸದಾ ಹಸನ್ಮುಖಿಗಳಾಗಿರುತ್ತಾರೆ. ತುಂಬು ಶರೀರ, ಗಂಭೀರವಾದ ನಡಿಗೆ, ಸ್ಪಷ್ಟವಾದ ಭಾಷೆ, ಶುಭ್ರವಾದ ಉಡುಪು. ಮನೆಬಿಟ್ಟು ಹೊರಟರೆಂದರೆ ಮೈಸೂರಿನ ಧವಳಕೀರ್ತಿಯನ್ನು ತೋರಿಸುವ ಜರತಾರಿ ಕಂಬಿಪೇಟ ತಲೆಯಲ್ಲಿ ಮೆರೆಯುತ್ತಿರುತ್ತದೆ. ತುಂಬಾ ಸರಸಿಗಳು. ಅಲ್ಲದೆ ಅನುಭವಶಾಲಿಗಳು. ವಂಶಪಾರಂಪರ್ಯವಾಗಿ ರಕ್ತಗತವಾದ ಕಲೆ ಇವರನ್ನು ಬೇರೆ ಉದ್ಯಮಕ್ಕೆ ಬಿಡಲಿಲ್ಲ. ೧೯೨೦ ರಲ್ಲಿ ಮೈಸೂರಿನ ಶ್ರೀ ಚಾಮರಾಜೇಂದ್ರ ಚಿತ್ರಶಾಲೆಯಲ್ಲಿ ಕಲಾಭ್ಯಾಸವನ್ನು ಮುಗಿಸಿ ೧೯೨೧ ರಲ್ಲಿ ಮದರಾಸು ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗ್ಗೆ ಮೈಸೂರು ಚಿತ್ರಶಾಲೆಯಲ್ಲಿ ಮಿ॥ ಹಾರಾಲ್ಡ್ ಜಿ. ಆಲ್‌ಡರ್‌ಟ್ನರವರು

ಪ್ರಿನ್ಸಿಪಾಲರಾಗಿದ್ದರು. ಶ್ರೀಯುತರು ಅಲ್ಲಿ ಕಲಾಭ್ಯಾಸವನ್ನು ಪೂರ್ತಿಗೊಳಿಸಿದಾಗ್ಯ ಯೋಗ್ಯತಾಪತ್ರದಲ್ಲಿ "He is a heriditary Artist of considerable abilities" ಎಂದು ಬರೆದಿರುವುದರಲ್ಲಿ ಅಚ್ಚರಿಯೇನಿಲ್ಲ. ಆಗ ಶ್ರೀಯುತರ ಮುಖ್ಯ ಗುರುಗಳಾಗಿದ್ದವರು ದಿವಂಗತ ಕೆ. ಕೇಶವಯ್ಯ ಮತ್ತು ಶ್ರೀ ಆರ್. ರಾಮಕೃಷ್ಣನ್‌ರವರು. ಇವರುಗಳ ಶಿಷ್ಯತ್ವದಲ್ಲಿ ಶ್ರೀಯುತರ ಕಲೆ ಪ್ರಕಾಶಗೊಂಡಿತು.

ಶ್ರೀಯುತರ ತಾತಂದಿರಾದ ಲೇಟ್ ಶ್ರೀ ವೈ. ಸುಂದರಯ್ಯನವರು ಅರಮನೆಯ ಚಿತ್ರಕಾರರಾಗಿದ್ದರು. ತಂದೆ, ದಿವಂಗತ ವೈ. ಯಲ್ಲಪ್ಪನವರು ಅರಮನೆಯ ಡ್ರಾಫ್ಟ್ಸ್‌ಮ್ಯನ್ ಉದ್ಯಮದಲ್ಲಿದ್ದರು. ಈ ಹಿರಿಯರಿಬ್ಬರ ಕೃಪಾಕಟಾಕ್ಷದಿಂದ ಶ್ರೀಯುತರಲ್ಲಿ ಕಲೆ ಹುಟ್ಟಿ ಬೆಳೆಯಿತು. ಅಲ್ಲದೆ, ಸರ್ ಮಿರ್ಜಾರವರು ಶ್ರೀಯುತರ ಕಲಾಕೃತಿಗಳನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿ ೧೯೩೨ ರಿಂದಲೇ ಇವರನ್ನು ಅರಮನೆಯ ಚಿತ್ರಕಾರರನ್ನಾಗಿ ನೇಮಿಸಿ ಪ್ರೋತ್ಸಾಹಿಸುತ್ತಾ ಬಂದರು. ಅಂದಿನಿಂದ ಇವರು ಅರಮನೆಯಲ್ಲಿ ರಾಜವರ್ಗದವರ ಭಾವಚಿತ್ರಗಳ ರಚನೆಯಲ್ಲಿ ತೊಡಗಿದರು.

ಮೈಸೂರು ದೇಶದ ಕಲಾವಿದರಲ್ಲಿ ಪಾಶ್ಚಾತ್ಯದೇಶಗಳಿಗೆ ಹೋಗಿ ಅಲ್ಲಿಯ ಕಲೆಯ ಪರಿಚಯ ಮಾಡಿಕೊಂಡು ಬರುವ ಸುಯೋಗ ಶ್ರೀಯುತರಿಗೊಬ್ಬರಿಗೇ ದೊರೆತುದು. ೧೯೩೭ ರಲ್ಲಿ ಫ್ರಾನ್ಸ್ ಮತ್ತು ಇಂಗ್ಲಂಡ್ ದೇಶಗಳ ಕಲಾಕೇಂದ್ರಗಳೆನಿಸಿದ ಪ್ಯಾರಿಸ್ ಮತ್ತು ಲಂಡನ್ ಪಟ್ಟಣಗಳ ಪ್ರಖ್ಯಾತ ಚಿತ್ರ ಮತ್ತು ಶಿಲ್ಪ ಕಲಾವಸ್ತು ಸಂಗ್ರಹಾಲಯಗಳನ್ನೂ, ಚಿತ್ರ ಕಲಾ ಪ್ರದರ್ಶನಗಳನ್ನೂ ಮತ್ತು ಕಲಾಪ್ರೌಢವಿದ್ಯಾಶಾಲೆಗಳನ್ನೂ ಪ್ರೇಕ್ಷಣೀಯ ಸ್ಥಳಗಳನ್ನೂ ಭೇಟಿಮಾಡಿಕೊಂಡು, ಆ ದೇಶಗಳ ಕಲಾನುಭವವನ್ನು ಪಡೆದು ಬರುವ ಸದವಕಾಶ ನಮ್ಮ ಹಿಂದಿನ ಪ್ರಭುಗಳಿಂದ ಅವರಿಗೆ ದೊರೆಯಿತು.

ಶ್ರೀಯುತರು ಮನಮೋಹಕವಾದ ಲಂಡನ್ ನಗರವನ್ನು ಸಂದರ್ಶಿಸಿದಾಗ ಅಲ್ಲಿನ ಸುಮಾರು ಇಪ್ಪತ್ತು ಪ್ರಮುಖ ಕಲಾಪ್ರದರ್ಶನಾಲಯಗಳಲ್ಲಿ 'ರಾಯಲ್ ಅಕ್ಯಾಡಮಿ ಎಗ್ಜಿಬಿಷನ್,' 'ನ್ಯಾಷನಲ್ ಆರ್ಟ್ ಗ್ಯಾಲರಿ,' 'ಇಂಡಿಯನ್ ಮ್ಯೂಸಿಯಂ,' 'ಬ್ರಿಟಿಷ್ ಮ್ಯೂಸಿಯಂ,' 'ನ್ಯಾಷನಲ್

ಪೋರ್ಟ್‌ರೇಟ್ ಗ್ಯಾಲರಿ,' 'ಆಲ್‌ಬರ್ಟ್ ಮ್ಯೂಸಿಯಂ' ಮುಂತಾದ ಮುಖ್ಯ ಕಲಾಕ್ಷೇತ್ರಗಳನ್ನು ಈಕ್ಷಿಸಿ ಮನಗಂಡು ಬಂದರು.

ಪ್ಯಾರಿಸ್ ನಗರದ ಸುಮಾರು ಹದಿನಾಲ್ಕು ಶಿಲ್ಪ ಮತ್ತು ಚಿತ್ರಾಲಯಗಳಲ್ಲಿ"ಲೂಜಂಬರ್ಗ್ ಆರ್ಟ್‌ಗ್ಯಾಲರಿ ಆಫ್ ಆರ್ಟ್ಸ್ ಕಾಂಟೆಂಪೊರರೀಸ್," "ಸ್ಕೂಲ್ ಆಫ್ ಆರ್ಟ್ಸ್", "ವರ್ಸೇಲ್ ಮ್ಯೂಸಿಯಂ", "ದಿ ಲವರ್ಸ್ ಮ್ಯೂಸಿಯಂ ಅಂಡ್ ಗ್ಯಾಲರಿ" ಮುಂತಾದವುಗಳನ್ನು ಕಂಡು ಅಲ್ಲಿನ ವಿಚಾರಗಳನ್ನು ತಿಳಿದುಕೊಂಡು ಬಂದರು.

"ಪಾಶ್ಚಿಮಾತ್ಯ ಕಲಾಸಂಪ್ರದಾಯದಲ್ಲಿ ಆ ದೇಶದವರು ಬಹಳ ಮುಂದುವರೆದಿದ್ದಾರೆ. ನಮ್ಮದೇಶದ ಪ್ರಾಚೀನ ಸೂಕ್ಷ್ಮಚಿತ್ರಗಳನ್ನೂ ಮತ್ತು ನವೀನ ಹಿಂದೂ (ಇಂಡಿಯನ್ ಆರ್ಟ್) ಪದ್ಧತಿಯ ಸೂಕ್ಷ್ಮ ರೇಖಾಚಿತ್ರಗಳನ್ನೂ ಅನುಸರಿಸಲು ಅವರಿಗೆ,ಸುಲಭಸಾಧ್ಯವಲ್ಲ" ಎಂದು ಶ್ರೀಯುತರ ಅಭಿಮತ. ವಿದೇಶಗಳಲ್ಲಿ ಒಂದೊಂದು ಊರಿನಲ್ಲೂ ಗ್ರಾಮದಲ್ಲೂ, ಚಿತ್ರಕಲಾ ವಸ್ತುಸಂಗ್ರಹಾಲಯಗಳಿರುವಂತೆ ನಮ್ಮ ದೇಶದಲ್ಲೂ ಆಗಬೇಕು. ಅಲ್ಲಿನ ಮಕ್ಕಳು ಸೌಂದರ್ಯ, ಸಂಸ್ಕೃತಿಯ ಸಾನ್ನಿಧ್ಯದಲ್ಲಿ ಬೆಳೆಯುವಂತೆ ನಮ್ಮವರೂ ಬೆಳೆಯುವಂತಾಗಬೇಕು. ಪಾಶ್ಚಿಮಾತ್ಯ ಕಲಾವಿದರಂತೆ ದೊಡ್ಡ ದೊಡ್ಡ ಚಾರಿತ್ರಿಕ ಚಿತ್ರಗಳನ್ನು ರಚಿಸಬೇಕು ಎಂಬ ಹೆಬ್ಬಯಕೆ ಅವರಿಗೆ ಮೂಡಿತು. ಶ್ರೀಯುತರು ಪಾಶ್ಚಿಮಾತ್ಯ ದೇಶಗಳಿಂದ ಅಪಾರ ಅನುಭವವನ್ನು ಪಡೆದುಬಂದಮೇಲೆ ಭಾವಚಿತ್ರಗಳ ರಚನೆಯ ಕಡೆ ಇವರು ಹೆಚ್ಚು ದೃಷ್ಟಿ ಬೀರಿದರು. ಅರಮನೆಯ ಪ್ರೋತ್ಸಾಹವೂ ದೊರೆಯಿತು. ನೂರಾರು ಭಾವಚಿತ್ರಗಳು ಸಹಸ್ರಾರು ಮಂದಿಯ ಮನಸ್ಸನ್ನು ಆಕರ್ಷಿಸಿದುವು.

ಒಮ್ಮೆ ಅರಮನೆಯ ಕಲ್ಯಾಣಮಂಟಪವನ್ನು ಶೃಂಗರಿಸಲು ರಾಜರ ಮೆರವಣಿಗೆಯ ವೈಭವಪೂರಿತವಾದ ಚಿತ್ರಗಳನ್ನು ಸಿದ್ಧಗೊಳಿಸುವ ಸದವಕಾಶ ಮೈಸೂರಿನ ಕಲಾವಿದರಿಗೆ ಮಾತ್ರ ದೊರಕಿತು. ಶ್ರೀಯುತರು ಇದರಲ್ಲಿಯೂ ಅಪಾರವಾದ ಪ್ರೌಢಿಮೆಯನ್ನು ತೋರಿದರು. ಹಾಗೆ ರಚಿಸಿದ ಅಲ್ಲಿನ ಚಿತ್ರಗಳಲ್ಲಿ ಶ್ರೀಯುತರು ಬಳಸಿರುವ ಕುಂಚದ ಓಟ, ರೀತಿ, ರಚನೆ, ಅಪ್ರತಿಮವಾದುದು. ಬಣ್ಣಗಳ ಜೋಡಣೆ, ನೆಳಲು--ಬೆಳಕು, (Light and shade,) ವಾತಾವರಣ (Atmosphere) ಕ್ಕೆ ಅನುಗುಣವಾದ ವಸ್ತು

(subject) ಎಲ್ಲವೂ ಕಲಾಪೂರಿತವಾಗಿವೆ. ಇವರ ಮತ್ತೊಂದು ಭವ್ಯ ಚಿತ್ರವೆಂದರೆ "೭x೧೦" ಅಡಿಗಳ ವಿಸ್ತಾರದ ಚೌಕಟ್ಟಿನಲ್ಲಿ ಕಂಗೊಳಿಸುತ್ತಿರುವ "Picture of four generations" ಎಂಬ ಮಹಾರಾಜರುಗಳ ತೈಲಚಿತ್ರ. ಇದು ಎಂಥವರನ್ನಾದರೂ ಮುಗ್ಧರನ್ನಾಗಿ ಮಾಡುವಂತಹುದು. ಈ ಚಿತ್ರ ಅಮೂಲ್ಯವಾದುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಗತಿಸಿದ ನಮ್ಮ ಮಹಾರಾಜರು ಶ್ರೀಯುತರ ಈ ಕಲಾಪ್ರೌಢಿಮೆಗೆ ಮನಸೋತು ಇವರನ್ನು ಬಹುಮಾನಿಸಿ ಗೌರವಿಸಿದರು.

ಶ್ರೀಯುತರು ರಚಿಸಿದ ಚಿತ್ರಗಳು ಈಗಲೂ ಭರತಪುರದ ರಾಜರ ಒಡ್ಡೋಲಗದಲ್ಲೂ, ರಾಜಧಾನಿಯ ಪುರಭವನದಲ್ಲೂ, ಜಗನ್ಮೋಹನ ಬಂಗಲೆಯ ರಂಗಭೂಮಿಯಮೇಲೂ ಕಾಣಸಿಗುತ್ತವೆ. ಈ ಅಭೂತಪೂರ್ವ ಜಲವರ್ಣ ಚಿತ್ರಗಳು ಎಲ್ಲರನ್ನೂ ಸದಾ ತಣಿಸುತ್ತಿವೆ.

ಶ್ರೀಯುತರ ಭವ್ಯವಾದ ಮನೆ ಕೃಷ್ಣರಾಜೇಂದ್ರ ಆಸ್ಪತ್ರೆ ರಸ್ತೆಯಲ್ಲಿದೆ. ಮನೆಯ ಹೊರಗಡೆ "ರಾಜೂಸ್ ಆರ್ಟ್ಸ್ ಸ್ಟುಡಿಯೋ" ಎಂಬ ಬೋರ್ಡು ೧೯೪೭ ರಿಂದಲೂ ಕಲಾಪ್ರಿಯರನ್ನು ಸ್ವಾಗತಿಸುತ್ತಿದೆ. ನಿಲಯದ ನಡುಮನೆ ಒಂದು ಅಪೂರ್ವ ಕಲಾಕ್ಷೇತ್ರವೇ ಆಗಿದೆ. ಗೋಡೆಯಲ್ಲಿ ವಿವಿಧ ವರ್ಣರಂಜಿತ ಭಾವಚಿತ್ರಗಳೂ, ಪ್ರಕೃತಿಚಿತ್ರಗಳೂ ಕಂಗೊಳಿಸುತ್ತಿವೆ. ಒಂದುಕಡೆ ತಮ್ಮ ಕುಟುಂಬವರ್ಗದವರ ಚಿತ್ರಗಳು, ಮತ್ತೊಂದು ಕಡೆ ಸೀಮೆಸುಣ್ಣದಿಂದಲೇ ರಚಿಸಿದ ಭಾವಚಿತ್ರಗಳು ; ಇವು ಎಂಥ ಕಲಾಭಿಮಾನಿಗಳನ್ನಾದರೂ ಆಕರ್ಷಿಸದಿರವು. ಮಗದೊಂದೆಡೆ ಪಾಶ್ಚಿಮಾತ್ಯ ಕಲಾಗ್ರಂಥಗಳ ರಾಶಿ. ತಮ್ಮ ಪ್ರವಾಸವೇಳೆಯಲ್ಲಿ ತಮ್ಮ ದೃಷ್ಟಿಗೆ ಬಿದ್ದ ಅಮೂಲ್ಯ ಗ್ರಂಥಗಳನ್ನೆಲ್ಲಾ ಕೊಂಡುತಂದು ಶೇಖರಿಸಿರುತ್ತಾರೆ; ಅವುಗಳನ್ನು ಪೂರ್ಣವಾಗಿ ಅಭ್ಯಸಿಸಿರುತ್ತಾರೆ. ಅವುಗಳ ಪರಿಶ್ರಮದಿಂದ ತಮ್ಮ ಕಲೆಯನ್ನು ಹೆಚ್ಚು ಪಕ್ವಗೊಳಿಸಿಕೊಂಡರು. ಭಾವಚಿತ್ರರಚನೆಯಲ್ಲಿ ಪರಿಪೂರ್ಣತೆಯನ್ನು ಮುಟ್ಟಿರುವರೆಂದು ಹೇಳುವುದಕ್ಕೆ ಅಲ್ಲಿ ಇರುವ ಹತ್ತಾರು ತೈಲಚಿತ್ರಗಳು ಏಕೆ, ಕೆಲಸಕ್ಕೆ ಬಾರದುವೆಂದು ಅಲಕ್ಷಿಸುವ, ಬಣ್ಣದ ಸೀಮೇಸುಣ್ಣದಿಂದಲೇ ರಚಿತವಾಗಿರುವ ಭಾವಪೂರ್ಣ ಭಾವಚಿತ್ರಗಳೇ ಸಾಕ್ಷಿಯಾಗಿವೆ.

ಕಳೆದ ಆರೇಳು ವರ್ಷಗಳಿಂದಲೂ ಮೈಸೂರು ದಸರಾ ವಸ್ತುಪ್ರದರ್ಶನ ಶಾಲೆಯಲ್ಲಿ ಪೂಜ್ಯ ಬಾಪುವಿನ ೧೨॥ ಅಡಿ ಎತ್ತರದ ತೈಲಚಿತ್ರವು ಲಕ್ಷಾಂತರ ಜನರ ಕಣ್ಣನ್ನು ಆಕರ್ಷಿಸಿದೆ. ಇದು ಶ್ರೀಯುತರ ಶ್ರಮದ ಫಲ. ಪ್ರತಿ ವರ್ಷವೂ ತಮ್ಮ ನೂರಾರು ಕೆಲಸಗಳ ಮಧ್ಯೆ ಹೊಸ ಹೊಸ ಭಾವಚಿತ್ರಗಳನ್ನು ರಚಿಸಿ ಪ್ರದರ್ಶನಾಲಯದಲ್ಲಿ ಸ್ಪರ್ಧಿಸುವ ಕೆಚ್ಚೆದೆಯನ್ನು ಕಂಡರೆ ಯಾರಿಗೆ ತಾನೆ ಸೋಜಿಗವೆನಿಸದು? ಇವರ ಭಾವಚಿತ್ರಗಳಿಗೆ ಅನೇಕ ಬಹುಮಾನಗಳು ದೊರೆತು ಇವರು ಜನರ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ.

"ಮಾಡರನ್ ಆರ್ಟ್ಸ್" ಬಗ್ಗೆ ಶ್ರೀಯುತರು ಮಾತನಾಡುತ್ತಾ 'ಅದು ಒಂದು ಬಗೆಯ ಕಲೆ, ಅದನ್ನು ಕಂಡರೆ ಮನಸ್ಸಿಗೆ ಬೇಸರವಾಗುವುದು' ಎಂದರು. 'ತೆನ್ನಾಲಿರಾಮಕೃಷ್ಣ'ನ ಕಲೆಯಲ್ಲೇ ನಾವು ಮುಂದುವರಿಯಬಾರದೆಂದೂ, ಸತ್ವಯುತ ಕಲೆಯ ಕಡೆ ಸಾಗಬೇಕೆಂದೂ ಅವರ ಅಭಿಪ್ರಾಯ. ಕಷ್ಟಪಡದೆ ಯಾವುದೋ ವಸ್ತುವನ್ನು ಹಿಡಿದು, ತೋಚಿದ್ದನ್ನು ಮನಬಂದಂತೆ ಗೀಚಿ ಅಸಂಬದ್ಧ ಬಣ್ಣಗಳಿಂದ ಜನರನ್ನು ಮರಳು ಮಾಡುವ ಈ ನವೀನ ಕಲೆಯ ಕಡೆ ನಮ್ಮ ಯುವಕರು ಹೋಗಬಾರದೆಂಬುದೆ ಶ್ರೀಯುತರ ಹಿತನುಡಿ. 'ನವೀನ ಕಲೆ ಕೈಲಾಗದವನ ಕೆಲಸವೇ ವಿನಃ ಶ್ರಮದಾನಿ ಕಲಾವಿದನ ಕಲೆ ಅಲ್ಲ. ಅಲ್ಲದೆ ಇದು ಪ್ರಕೃತಸಿದ್ಧನಾದ ಹುಟ್ಟುಕಲಾವಿದನನ್ನು ಸಾರ್ವಜನಿಕರಿಂದ ಅಲಕ್ಷಿಸುವಂತೆ ಮಾಡಿ ಜೀವನ ಮಾರ್ಗದ ಪೇಚಾಟಕ್ಕೆ ಸಿಕ್ಕಿಸುವ ಕಲೆಯಾಗಿ ಪರಿಣಮಿಸಿದೆ' ಎಂಬುದು ಅವರ ಅಭಿಪ್ರಾಯವಾಗಿದೆ.

ದೇಶದ ಹಿರಿಮೆಗಾಗಿ, ಗತವೈಭವದ ಚಾರಿತ್ರಿಕ ನೆನಪಿಗಾಗಿ, ದೊಡ್ಡ ದೊಡ್ಡ ಚಿತ್ರಕೃತಿಗಳನ್ನು ನಮ್ಮ ಕಲಾವಿದರಿಂದಲೇ ನಿರ್ಮಿಸುವಂತೆ ಎಲ್ಲಾ ತರದ ಅವಕಾಶ ಸಿಗಬೇಕು. ಮೈಸೂರಿನ ಕೀರ್ತಿಯ ಕಲಶದಂತಿರುವ ಕನ್ನಂಬಾಡಿಯ ವೃಂದಾವನವು ಸೊಗಸಾದ ಶಿಲ್ಪಕಲಾಕೃತಿಗಳಿಂದ ಮೆರೆಯುವಂತಾಗಬೇಕೆಂದು ಇವರು ಆಶಿಸುತ್ತಾರೆ. ಕಲೆ ಕಲೆ ಎಂದು ಬೇಕಾದಷ್ಟು ಮಾತನಾಡುತ್ತೇವೆ, ನ್ಯಾಯವಾಗಿ ಅದಕ್ಕಾಗಿ ಶ್ರಮಿಸುವವರೂ, ಸಹಕರಿಸುವವರೂ, ಪ್ರೋತ್ಸಾಹಿಸುವವರೂ ನಮ್ಮಲ್ಲಿ ತೀರ ವಿರಳ. ಹಿಂದಿನ ರಾಜಮಹಾರಾಜರುಗಳು ಪ್ರತಿವರ್ಷವೂ ದಸರ ಕಲಾಪ್ರದರ್ಶನದಲ್ಲಿ ಸತ್ವಪೂರಿತ

ಚಿತ್ರಗಳನ್ನು ಕೊಂಡು ಜಗನ್ಮೋಹನಬಂಗಲೆಯಲ್ಲಿರಿಸಿ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ಏತಕ್ಕೋ ಅದು ಈಗ ತೀರ ಕಡಿಮೆಯಾಗಿರುವುದು ಶೋಚನೀಯ ಸಂಗತಿ.

ಯಾವ ಕಲಾವಿದನೇ ಆಗಲಿ ಮನಬಂದಕಡೆ ಎಲ್ಲವನ್ನೂ ಕಲಿಯಲು ಹೋಗಲಾರನು. ಕಲೆ ಅನಂತವಾದದು. ಅದರಲ್ಲಿ ಒಂದು ಅಣುವನ್ನು ಕಲಿತರೂ ಸಾಕು, ಅವನೇ ಕಲಾಕೋವಿದನಾಗುತ್ತಾನೆ. ಭಾವಚಿತ್ರ, ಪ್ರಕೃತಿಚಿತ್ರ, ರೇಖಾಚಿತ್ರ ಇತ್ಯಾದಿ ವಿಭಾಗಗಳಲ್ಲಿ ಯಾವುದನ್ನು ಆರಿಸಿ ಕೊಂಡರೂ ಸಹಜ ಕಲಾವಿದನೇ ಆಗುತ್ತಾನೆ. ಚಾಮರಾಜೇಂದ್ರ ಶಾಲೆ ಯಿಂದ ಹೊರಬಂದ ಕೆಲವು ವಿದ್ಯಾರ್ಥಿಗಳ ಬರಡು ಜೀವನವನ್ನು ನೆನೆದು ವ್ಯಸನವನ್ನು ಸೂಚಿಸುತ್ತಾರೆ.

ಶ್ರೀಯುತರು ಕಲೆಯ ಬಗ್ಗೆ ಕಾಣುತ್ತಿರುವ ಉಜ್ವಲ ಕನಸು ನನಸಾ ಗಲಿ; ಅವರ ಅಪಾರ ಪರಿಶ್ರಮ ಎಲ್ಲರಿಗೂ ದೊರಕುವಂತಾಗಲಿ; ಅವರು ಕಲಾವಿದರಿಗೆ ಮಾರ್ಗದರ್ಶಕರಾಗಲಿ; ಕನ್ನಡನಾಡಿನ ಹಿರಿಮೆ ಮತ್ತಷ್ಟು ಬೆಳಗುವಂತಾಗಲಿ; ಶ್ರೀಯುತರ ಕಲಾನೈಪುಣ್ಯತೆ ಎಲ್ಲೆಡೆಯಲ್ಲೂ ಪಸರಿಸಲಿ. ಹಾಗೆಯೇ ಜನತೆ ಕಲೆಯ ಮಟ್ಟವನ್ನರಿದು ಕಲಾವಿದರಿಗೆ ಪ್ರೋತ್ಸಾಹ ನೀಡುವುದಾದರೆ, ಕಲೆಯು ಮನೆ, ಮನಗಳಲ್ಲಿ ಬೆಳಗುವಂತಾದರೆ ಕಲಾ ವಿದರು ತಲೆಯೆತ್ತಿಕೊಂಡಾರು; ಮತ್ತಷ್ಟು ಉತ್ಕೃಷ್ಟ ಕಲಾಕೃತಿಗಳನ್ನು ನೀಡಿಯಾರು.

ಶ್ರೀಮಾನ್ ವೈ. ನಾಗರಾಜು ಅವರು ತಮ್ಮ ಕಲಾಪ್ರೌಢಿಮೆಯಿಂದ ಕನ್ನಡಿಗರ ಮೆಚ್ಚಿಗೆಗೆ ಪಾತ್ರರಾಗುವುದರಲ್ಲಿ ಯಾವ ಸಂಶಯವೂ ಇಲ್ಲ.



ವೈ. ಸುಬ್ರಹ್ಮಣ್ಯರಾಜು.

" ಕಲಾವಿದ ರಸಿಕ. ಅಂತರಂಗ ಬಹಿರಂಗಗಳ ಸೌಂದರ್ಯವನ್ನು ಸಂಪೂರ್ಣವಾಗಿ ಅರಿತ ತೇಜೋನ್ಮುಖಿ. ಕಲಾಕೃತಿಗಳ ಮೂಲಕ ಎಲ್ಲರ ಹೃದಯವನ್ನು ಸೂರೆಗೊಳ್ಳುವ ಸಹಜ ಸೌಮ್ಯಮೂರ್ತಿ. ಆತ್ಮಾನಂದವೇ ಕಲಾನಂದವೆಂದು ತಿಳಿದ ನಿರ್ಮಲ ಕಲೋಪಾಸಕ. ಅವನಲ್ಲಿ ಅವಿತಿಡಲಾಗದ ಅನುಭವಗಳ ಆಂತರಿಕ ಆವೇಶ ಒತ್ತಡಗಳಿಂದ ತನ್ನ ಜೀವನವನ್ನೇ ತೇದು ನಾನಾ ರೀತಿಯಲ್ಲಿ ಕೇವಲ ಕುಂಚದಲ್ಲೇ ಸಮಾಜಕ್ಕೆ ಮನಮುಟ್ಟುವಂತೆ ರಚಿಸಿ ಬೋಧಿಸುವ ಸ್ವಪ್ರಕಾಶಿ. ವ್ಯಕ್ತಿ ಹೃದಯವನ್ನು ಪ್ರಕಟಿಸುವ ಮುಖ

ಅವನ ಆಸ್ತಿ. ಅವನು ಸೌಂದರ್ಯವನ್ನು ಎಲ್ಲದರಲ್ಲೂ ಕಾಣಬಲ್ಲ"—ಈ ಎಲ್ಲಾ ಗುಣಗಳು ಶ್ರೀವರ್ಾ ವೈ. ಸುಬ್ರಹ್ಮಣ್ಯರಾಜು ಅವರಲ್ಲಿ ಪಡಿ ಮೂಡಿವೆ.

'ಸದ್ಭಾವನೆಗಳು, ನಿರ್ಮಲ ಹೃದಯಗಳಲ್ಲೇ ಉದ್ಭವಿಸುವುದು' ಎಂಬುದು ಶ್ರೀಯುತರ ಅನುಭವದ ಮಾತು. 'ಕಲಾವಿದನಾದವನು ಹೊಲಸುಚಿತ್ರಗಳ ರಚನೆಗೆ ಹೋಗಬಾರದೆಂದೂ, ಒಳ್ಳೊಳ್ಳೆಯ ವಿಚಾರಾತ್ಮಾಕ ಭಾವನೆಗಳಿಂದ ಸಮಾಜವನ್ನು ರಚಿಸುವಂತೆ ಮಾಡಬೇಕೆಂಬುದೇ ಇವರ ವಾದ. ಶ್ರೀಯುತರು ರಚಿಸುವ ಚಿತ್ರಗಳಲ್ಲಿ ಒಂದೊಂದೂ ವೈವಿಧ್ಯತೆಯಿಂದ ಕೂಡಿ ಪುರಾಣ ಮತ್ತು ಚಾರಿತ್ರಿಕ ನೋಟದಲ್ಲಿ ಬಾಹ್ಯಪ್ರಪಂಚದಿಂದ ಆಧ್ಯಾತ್ಮದ ಕಡೆಗೆ ನಮ್ಮನ್ನು ಸೆಳೆಯುತ್ತವೆ. ಇದರ ಪರಿಣಾಮವಾಗಿಯೇ ಚಾರಿತ್ರಿಕ ಅಥವಾ ಪೌರಾಣಿಕ ವಸ್ತುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಸಂಯೋಗ (Composition) ಚಿತ್ರಗಳಾಗಿ ರಚಿಸುವುದೆಂದರೆ ಶ್ರೀಯುತರಿಗೆ ಹೆಚ್ಚು ಅಭಿರುಚಿ. ಇದಕ್ಕೆ ನಿದರ್ಶನಕೊಡುವುದಾದರೆ ಶ್ರೀಯುತರು ರಚಿಸಿರುವ 'ಅಕ್ರೂರನು ಮಥುರೆಗೆ ಕೃಷ್ಣ ಬಲರಾಮರನ್ನು ಕರೆದೊಯ್ಯು'ವ ಸುಂದರ ಜಲವರ್ಣದ ಪೌರಾಣಿಕ ಚಿತ್ರ ಯಾರ ಮನಸ್ಸನ್ನಾದರೂ ಸೆಳೆಯುತ್ತದೆ. ಇಲ್ಲಿ ಕೃಷ್ಣ-ಬಲರಾಮರನ್ನು ಬೀಳ್ಕೊಡುವ ಗೋಪಿಕಾಸ್ತ್ರೀಯರು ಅಗಲಿಕೆಯನ್ನು ಸಹಿಸಲಾರದೆ ಪರಿತಪಿಸುವ ನೋಟ ಮನೋಜ್ಞವಾಗಿದೆ. ಇಲ್ಲಿ ಬಳಸಿರುವ ಬಣ್ಣಗಳ ಜೋಡಣೆ, ರೇಖೆಗಳ ಮಾಟ, ಭಾವನಾಪೂರ್ವಕವಾದ ಮುಖ, ವಾತಾವರಣ, ಎಲ್ಲವೂ ಸ್ವಾಭಾವಿಕವಾಗಿವೆ. ಈ ರೀತಿಯಲ್ಲಿ ಅನೇಕ ಚಿತ್ರಗಳನ್ನು ರಚಿಸಿದ್ದಾರೆ. ಇಷ್ಟೇ ಉತ್ತಮ ಮಟ್ಟದ ಚಿತ್ರಗಳೆಂದರೆ ಶ್ರೀಯುತರು ರಚಿಸಿರುವ ಲಕ್ಷ್ಮೀ ಮತ್ತು ಸರಸ್ವತಿಯರ ಭಾವ ಚಿತ್ರಗಳು. ದಸರಾ ಮೆರವಣಿಗೆ, ಅನೇಕ ತೈಲವರ್ಣದ ಮತ್ತು ಜಲವರ್ಣದ ಭಾವಚಿತ್ರಗಳೂ, ಸ್ವಾತಂತ್ರ್ಯೋದಯಕ್ಕೆ ಸಂಬಂಧಿಸಿದ ಉತ್ಕೃಷ್ಟ ಕೃತಿಗಳೂ ಶ್ರೀಯುತರ ಕೀರ್ತಿಯನ್ನು ಸಾರುವಂತಿವೆ.

ಇಷ್ಟು ಉನ್ನತ ಮಟ್ಟಕ್ಕೆ ಏರಿದ ಈ ಕಲಾವಿದರು ಅಜ್ಜ ಮುತ್ತಜ್ಜರ ಕಾಲದಿಂದಲೂ ಬೆಳೆದು ಬಂದ ಮನೆತನದ ಕಲೆಯ ನೆರಳಿನಲ್ಲಿಯೇ ಅಭಿವೃದ್ಧಿಗೇರಿದರು. ಸದಾ ನಗೆ ಮೊಗದ ನಿರಾಡಂಬರ ವ್ಯಕ್ತಿಗಳಿವರು. ಯಾರ

ನ್ನಾದರೂ ತಮ್ಮ ಸರಳವಾಣಿಯಿಂದ ಆಕರ್ಷಿಸಬಲ್ಲ ಶಕ್ತಿ ಇವರಿಗಿದೆ. ಯಾವ ವಿಷಯವನ್ನು ವಿವರಿಸಬೇಕಾದರೂ ಅನೇಕ ನಿದರ್ಶನಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡೇ ಮನಮುಟ್ಟುವಂತೆ ಹೇಳುತ್ತಾರೆ. ಕಲೆಯ ವಿಚಾರದಲ್ಲಿ ಮಾತನಾಡುವಾಗಲೂ ಅಷ್ಟೇ. ತುಂಬಾ ವಿನೋದಪ್ರಿಯರು. ಬೇರೊಬ್ಬರಲ್ಲಿರುವ ಕುಂದನ್ನು ತೋರಿಸುವಾಗ ಅವರ ಮನ ನೋಯಿಸದೆ ಹಾಸ್ಯದ ಚಟಾಕಿಯನ್ನು ಹಾರಿಸುವುದರಲ್ಲಿ ತುಂಬಾ ಕುಶಲಿಗಳು.

೧೯೧೭ ರಲ್ಲಿ ಶ್ರೀಯುತರು ಮೈಸೂರಿನಯಲ್ಲಿ ಜನಿಸಿದರು. ಇವರ ತಾತಂದಿರಾದ ದಿವಂಗತ ಸುಂದರಯ್ಯನವರು ಅರಮನೆಯ ಕಲಾವಿದ ರಾಗಿದ್ದರು. ತಂದೆಯವರಾದ ದಿವಂಗತ ಯಲ್ಲಪ್ಪನವರು ಅರಮನೆಯ ಡ್ರಾಫ್ಟ್ಸ್‌ಮನ್ ಆಗಿದ್ದರು. ಮಗನೂ ತಮ್ಮಂತೆಯೇ ಕಲಾಸಕ್ತಿ ತೋರಿದುದ ರಿಂದ ಚಾಮರಾಜೇಂದ್ರ ಕಲಾಶಾಲೆಗೆ ಪಾರ್ಟ್‌ಟೈಂ ವಿದ್ಯಾರ್ಥಿಯಾಗಿ ಸೇರಿಸಿ ಮದರಾಸು ಪರೀಕ್ಷೆಯ ಒಂದೊಂದು ಮೆಟ್ಟಿಲನ್ನೂ ಸುಲಭವಾಗಿ ಹತ್ತಲು ಅನುಕೂಲ ಮಾಡಿದರು. ಅರಮನೆಯಿಂದ ಪಡೆದ ವಿದ್ಯಾರ್ಥಿ ವೇತನ, ಚಾಮರಾಜೇಂದ್ರ ಕಲಾಶಾಲೆಯ ಉತ್ತೇಜನದಿಂದ ಕಲಾಭ್ಯಾಸ ಮುಂದುವರಿಯಿತು.

ವಿದ್ಯಾಭ್ಯಾಸ ಮುಂದುವರಿಯದಿರಲು ಕಾರಣ ಕಲಾಸಕ್ತಿ ಎಂದೇ ಹೇಳಬೇಕು. ಅವಿಶ್ರಾಂತವಾಗಿ ಎರಡುವರ್ಷ ಅಭ್ಯಸಿಸಿ ಚಾಮರಾಜೇಂದ್ರ ಕಲಾಶಾಲೆಯಿಂದ ಹೊರಬಂದರು. ೧೯೩೬ ರಲ್ಲಿ ಮದ್ರಾಸು ಸರ್ಕಾರಿ ಕಲಾ ಪರೀಕ್ಷೆಗಳಲ್ಲೂ ಉತ್ತೀರ್ಣರಾಗಿ ಡಿಪ್ಲೊಮ ಪಡೆದರು.

ಇವರ ಚಾತುರ್ಯಕ್ಕೆ ಮೆಚ್ಚಿದ ಚಾಮರಾಜೇಂದ್ರ ಕಲಾಶಾಲೆಯ ಮುಖ್ಯಾಧಿಕಾರಿಗಳಾಗಿದ್ದ ಮಿ|| ಎಚ್. ಜಿ. ಆಲ್ಸ್ಟರ್‌ಟನ್‌ರವರು ಶ್ರೀಯುತ ರನ್ನು "ಡೆಕೊರೇಟಿವ್ ಆರ್ಟ್" ಉಪಾಧ್ಯಾಯರಾಗಿ ತಮ್ಮ ಶಾಲೆಗೆ ತೆಗೆದುಕೊಂಡರು. ಒಂದೆರಡು ವರ್ಷಗಳನಂತರ ಕೆಲಸ ಮಾಡಿದಮೇಲೆ ಶ್ರೀಯುತರಿಗೆ ವಿಶೇಷ ಪರಿಶ್ರಮ ಹೊಂದಬೇಕೆಂಬ ಬಯಕೆಗೆ ಸರಿಯಾಗಿ ಸರ್ಕಾರದ ವಿದ್ಯಾರ್ಥಿವೇತನ ದೊರೆತುದರಿಂದ ಬೊಂಬಾಯಿಯ 'ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್' ಎಂಬ ಕಲಾಶಾಲೆಗೆ ಅಭ್ಯಾಸಕ್ಕಾಗಿ ತೆರಳಿದರು.

ಆ ಶಾಲೆಯಲ್ಲಿ ಇವರ ಪಾಂಡಿತ್ಯವನ್ನು ಪರೀಕ್ಷಿಸಿ, ಮೆಚ್ಚಿ, ಒಮ್ಮೆಲೇ ನಾಲ್ಕನೆ ತರಗತಿಗೆ ಸೇರಿಸಿದರು. ಆಗ್ಗೆ ಅಲ್ಲಿ ಕ್ಯಾಪ್ಟನ್ ಗ್ಲಾಡ್‌ಸ್ಟೋನ್ ಸಾಲೊಮನ್, ಎಂ. ವಿ. ಧುರಂಧರ್, ಎ. ಎನ್. ಥ್ಯಾಕರ್, ಇನ್ನೂ ಹಲವಾರು ಅಧ್ಯಾಪಕರುಗಳಿದ್ದರು. ಐದು ವರ್ಷದ ಶಿಕ್ಷಣವನ್ನು ಎರಡು ವರ್ಷಗಳಲ್ಲಿ ಅಭ್ಯಸಿಸಿ, ಡೆಕೊರೇಟಿವ್ ತರಗತಿಯಲ್ಲಿ ಒಂದು ವರ್ಷ ವ್ಯಾಸಂಗ ಮಾಡಿ ಮೈಸೂರಿಗೆ ಹಿಂತಿರುಗಿದರು.

ಆಗ್ಗೆ ಚಾಮರಾಜೇಂದ್ರ ಕಲಾಶಾಲೆಯ ಮುಖ್ಯಾಧಿಕಾರಿಗಳಾಗಿದ್ದ ಶ್ರೀ ಎಸ್. ರಾಮಸ್ವಾಮಯ್ಯಂಗಾರ್ಯರು ಶ್ರೀಯುತರಿಂದ, ದಸರಾ, ವರ್ಧಂತಿ ಮೆರವಣಿಗೆ ಮತ್ತು ಶಿಕಾರಿಚಿತ್ರಗಳನ್ನು ಮಾಡಿಸಿ ಪ್ರೋತ್ಸಾಹಿಸುತ್ತಾ ಬಂದರು. ಅದೇ ಕಾಲದಲ್ಲಿ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಮುಖ್ಯಾಧಿಕಾರಿಗಳಾಗಿದ್ದ, ಮಾಜಿಮಂತ್ರಿಗಳೂ ಮಾಜಿ ಗ್ವಾಲಿಯರ್ ದಿವಾನರೂ ಆಗಿದ್ದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಆ ಮಿಲ್ಲಿಗೆ ಬೇಕಾದ ಪ್ರಚಾರಪ್ರದರ್ಶನ ಚಿತ್ರಗಳನ್ನು ಮಾಡಿಸಿ ಉತ್ತೇಜನಕೊಡುತ್ತಾ ಬಂದರು.

ಅರಮನೆಯ ಕಲಾವಿದರಾಗಿದ್ದ ಜನಾಬ್ ಅಬ್ದುಲ್ ಅಜೀಜ್ ಸಾಹೇಬರು ಮಾಡಿದ ದಸರಾಮೆರವಣಿಗೆಚಿತ್ರ ಸರಿಬಾರದೆ ಅರ್ಧಕ್ಕೇ ನಿಂತುಹೋದುದನ್ನು ಶ್ರೀಯುತರು ಪೂರೈಸಿಕೊಟ್ಟರು. ಲೇ|| ಎ. ವಿ. ಸುಬ್ರಹ್ಮಣ್ಯರಾಜೇ ಅರಸಿನವರು ಮತ್ತು ರಾಜಸೇವಾಸಕ್ತ ಶ್ರೀ ರಾಮರಾಯರು ಶ್ರೀಮನ್ ಮಹಾರಾಜರ ಅಪ್ಪಣೆಯಂತೆ ಕಲ್ಯಾಣಮ್ಮಂಟಪದ ಇಪ್ಪತ್ತೆಂಟು ಪ್ಯಾನೆಲ್ಲುಗಳಲ್ಲಿ ಪ್ರಥಮತಃ ವರ್ಧಂತಿ ಮೆರವಣಿಗೆಯ ಚಿತ್ರ ಮತ್ತು ಜಂಬೂಸವಾರಿ ಉತ್ಸವದ ಚಿತ್ರ, ಇವೆರಡರ ಮಧ್ಯದಲ್ಲಿ ಶ್ರೀರಾಮನು ದುರ್ಗಾಷ್ಟಮಿಯ ದಿನ ಆಯುಧಪೂಜೆಯನ್ನು ಮಾಡುತ್ತಿರುವಂತೆ ಒಂದು ಸಂಯೋಗಚಿತ್ರವನ್ನು ಮಾಡಿಸಿ ಹೆಚ್ಚಿಗೆ ಪ್ರೋತ್ಸಾಹಿಸಿದರು. ಅಲ್ಲಿನ ಇಪ್ಪತ್ತೆಂಟು ಪ್ಯಾನೆಲ್‌ಗಳಲ್ಲಿ ಆರನ್ನು ಇವರು ಸಿದ್ಧಗೊಳಿಸಿದ್ದಾರೆ. ಪ್ರತಿಯೊಬ್ಬ ಕಲಾಭಿಮಾನಿಯೂ ನೋಡಬೇಕಾದ ಕಲಾಪೂರ್ಣ ಚಿತ್ರಗಳಿವು.

ಅರಮನೆಯ ದರ್ಬಾರ್‌ಹಾಲ್ ಸಭೆಯ ಮೇಲ್ಛಾವಣಿ ಒಂದು ಅದ್ಭುತವಾದ ಸೀಲಿಂಗ್ (Design) ಮಾಡಿಸಬೇಕೆಂಬ ಆಕಾಂಕ್ಷೆಯಿಂದ ಆಳಿದ ಮಹಾರಾಜರು ಹಿಂದೂಸ್ಥಾನದ ಎಲ್ಲಾ ಕಲಾವಿದರಿಗೆ ಡಿಸೈನುಗಳನ್ನು ಕಳುಹಿಸಿ

ಕೊಡಬೇಕೆಂದು ಪತ್ರಿಕೆಗಳ ಮುಖೇನ ಪ್ರಚಾರಪಡಿಸಿದ್ದರು. ಈ ಸ್ಪರ್ಧೆ ಯಲ್ಲಿ ಶ್ರೀಯುತರಿಗೂ ಒಂದು ಬಹುಮಾನ ದೊರೆಯಿತು.

ಅರಮನೆಯ ಗುರುಮನೆಯಾದ ಶ್ರೀ ಪರಕಾಲಸ್ವಾಮಿಗಳ ಮಠದಲ್ಲಿ ಶ್ರೀ ವೇದಾಂತ ದೇಶಿಕರ್ ಮೊದಲಾದ ಗುರುಪರಂಪರೆಯ ದೊಡ್ಡ ಚಿತ್ರ ವನ್ನು ಈಗಿನ ಸ್ವಾಮಿಗಳವರು ಮಾಡಿಸಿ ಬಹುಮಾನಿಸಿದರು. ಈ ತೈಲ ಚಿತ್ರಕೃತಿಯಿಂದಾಗಿ ಚಾಮರಾಜೇಂದ್ರ ಕಲಾಶಾಲೆಯ ಉಪಾಧ್ಯಾಯರಾಗಿ ಸೇರಲು ಶ್ರೀಮಾನ್ ಎಸ್. ಜಿ. ಶಾಸ್ತ್ರಿ ಮತ್ತು ಶ್ರೀಮಾನ್ ಎ್. ಜಿ. ಪಾವಂಜಿಯವರ ಕೃಪೆಯೇ ಕಾರಣವೆನ್ನುತ್ತಾರೆ, 'ರಾಜು' ಅವರು.

ಶ್ರೀಯುತರ ಚಿತ್ರಗಳಿಗೆ ಸಿಮ್ಲಾ, ಬೊಂಬಾಯಿ, ಮದರಾಸ್, ಕೊಡೈಕನಾಳ್, ತಿರುವಾಂಕೂರ್, ಬೆಂಗಳೂರು, ಮತ್ತು ಮೈಸೂರು ದಸರಾ ಪ್ರದರ್ಶನಗಳಲ್ಲಿ ಅನೇಕ ಸುವರ್ಣ ಮತ್ತು ರಜತ ಪದಕಗಳು ಬಂದಿವೆ. 'ನ್ಯಾಷನಲ್‌ವಾರ್‌ಫ್ರಂಟ್ ಅಂಡ್ ವಾರ್‌ಸಪ್ಲೈ' ಪ್ರದರ್ಶನಗಳಲ್ಲಿ ಬೇಕಾದ ಚಿತ್ರಗಳನ್ನು ಶ್ರೀಮಾನ್ ಜೆ. ಬಿ. ಮಲ್ಲಾರಾಧ್ಯರು ಬರೆಸಿ ಪ್ರೋತ್ಸಾಹಿಸಿದರು. ಶ್ರೀ ಎಂ. ವೀರಪ್ಪನವರ ಆಡಳಿತದಲ್ಲೂ ಗೃಹಕೈಗಾ ರಿಕೆಗೆ ಸಂಬಂಧಿಸಿದ ಕೆಲವು ಚಿತ್ರಗಳನ್ನೂ ರಾಷ್ಟ್ರಪತಿ ಭವನಕ್ಕಾಗಿ ಬೇಲೂರು ಹಳೆಯಬೀಡು ಮೊದಲಾದ ಚಿತ್ರಗಳನ್ನು ಮಾಡಿಸಿ ಪ್ರೋತ್ಸಾಹಿ ಸುತ್ತಾ ಬಂದು, 'Recrowning of India' ಎಂಬ ದೊಡ್ಡ ತೈಲಚಿತ್ರ ವನ್ನು ಮಾಡಲು ಎಲ್ಲಾ ವಿಧವಾದ ನೆರವನ್ನು ನೀಡಿದ್ದಾರೆ.

'Recrowning of India' ಚಿತ್ರ ಯಾರನ್ನಾದರೂ ಮೂಕರ ನ್ನಾಗಿ ಮಾಡಿಸುವಷ್ಟು ಸುಂದರವಾದ ಕೃತಿರತ್ನ. ಭಾರತಮಾತೆಗೆ ಕಿರೀಟ ಧಾರಣೆಮಾಡುವ ಈ ಚಿತ್ರದಲ್ಲಿ ಬಾಪೂಜಿಯವರೇ ತಮ್ಮ ಎರಡು ಕೈಗ ಳಿಂದಲೂ ಕಿರೀಟವನ್ನು ಭಾರತಾಂಬೆಗೆ ತೊಡಿಸುತ್ತಿರುವರು. ಹೂಮಾಲೆ ಯಿಂದ ಅಲಂಕೃತವಾದ ನಮ್ಮ ತ್ರಿವರ್ಣಧ್ವಜವನ್ನು ನೆಹರೂರವರು ಎಡಗ ಡೆಗೆ ನಿಂತು ಹಿಡಿದಿರುವರು. ಭಾರತಮಾತೆಯ ಒಂದು ಪಕ್ಕದಲ್ಲಿ ರಾಜೇಂದ್ರ ಪ್ರಸಾದ್, ರಾಧಾಕೃಷ್ಣನ್, ಅಮೃತ್‌ಕೌರ್, ರಾಜಾಜಿ, ಡಾ|| ಪಟ್ಟಾಭಿ, ಸುಭಾಷ್, ಗೋವಿಂದವಲ್ಲಭ ಪಂತ್, ಅಜಾದ್, ಸರೋಜಿನಿನಾಯಿಡು, ಮತ್ತೊಂದು ಕಡೆ ಪಟೇಲ್, ಕೆ. ಸಿ. ರೆಡ್ಡಿ, ಚಾಮರಹಿಡಿದಿರುವ ಬಲದೇವ್

ಸಿಂಗ್; ನಮ್ಮ ರಾಜಪ್ರಮುಖರು, ಇತರೆ ರಾಜರು, ನಮ್ಮ ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ, ಕತ್ತಿಯನ್ನು ಕೈಲಿ ಹಿಡಿದು ತಲೆಬಾಗಿ ಅರ್ಪಿಸುವಂತಿರುವ ಹೈದರಾಬಾದಿನ ನಿಜಾಮರನ್ನು ಕಾಣಬಹುದಾಗಿದೆ. ಮುಂದುಗಡೆ ಸ್ತ್ರೀಯರು ಮಾತೆಯನ್ನು ಪೂಜಿಸುತ್ತಿರುವುದು, ಮಾತೆಯ ಹಿಂಭಾಗದಲ್ಲಿ ಶುಭ್ರವಾದ ನೀಲಿವರ್ಣದ ಆಕಾಶ ಎಲ್ಲವೂ ಮನೋಹರವಾಗಿ ಚಿತ್ರಿತವಾಗಿವೆ. ಇದು ಈಗ ಚಾಮರಾಜೇಂದ್ರ ಕಲಾಶಾಲೆಯ ಪ್ರದರ್ಶನ ಕೋಣೆಯಲ್ಲಿ ತೂಗುಹಾಕಿದೆ.

ಶ್ರೀಯುತರು ನಿಜವಾದ ಕಲಾಗುರುಗಳು, ಕಲಾಮಾರ್ಗದರ್ಶಕರು. ಆದರ್ಶ ಕಲಾಧ್ಯಾಪಕರಾಗಲು ಎಲ್ಲಾ ಸದ್ಗುಣಗಳೂ ಇವರಲ್ಲಿವೆ. ತರಗತಿಗಳಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗೆ ಕೂಲಂಕಷವಾಗಿಯೂ, ವಿಚಾರಾತ್ಮಕವಾಗಿಯೂ, ಅಪಾರ ಪರಿಶ್ರಮದಿಂದ ಅಭಿಪ್ರಾಯಗಳನ್ನು ಮನಮುಟ್ಟುವಂತೆ ಸದಾ ನೀಡುತ್ತಿರುವರು. ವಿದ್ಯಾರ್ಥಿದೆಸೆಯಲ್ಲಿ ಸೋಮಾರಿಯಾಗಿ ಕಾಲ ಕಳೆಯುತ್ತಾರೆಂದರೆ ಆಗದು. ಛಾಯಾಗ್ರಹಣ (Photography) ಬಂದು ಕಲಾವಿದರನ್ನು ಮೂಲೆಗೆ ತಳ್ಳುವಂತಾಗಿದೆ. ಕಲಾವಿದರಾದವರು ಅದರ ನೆರವನ್ನು ಪಡೆಯಬಾರದೆಂಬುದೇ ಶ್ರೀಯುತರ ವಾದ. ವ್ಯಂಗ್ಯಚಿತ್ರ ಬರೆಯುವವರನ್ನು ಕಂಡರೂ ಅಷ್ಟೆ. ಲಲಿತ ಕಲೆಯ ಮುನ್ನಡೆಗೆ ಅವುಗಳೆಲ್ಲಾ ಅಡ್ಡಿ ಎಂದೇ ಅವರ ಅಭಿಪ್ರಾಯ. ವ್ಯಂಗ್ಯಮಾತುಗಳ ಛಾಟಿಯಿಂದ ದುರ್ನಡತೆಗೆ ಹೋಗುವ ವಿದ್ಯಾರ್ಥಿಗಳನ್ನು ಸನ್ಮಾರ್ಗಕ್ಕೆ ಎಳೆಯುವರು. ವಿದ್ಯಾರ್ಥಿಗಳನ್ನು ತರಬೇತು ಮಾಡುವುದೆಂದರೆ ತುಂಬಾಪ್ರೀತಿ. ತಿರುಳಿಲ್ಲದೆ ಮೆರೆಯುವ ಕಲಾಸಾಧಕರ ತಪ್ಪನ್ನು ಧೈರ್ಯವಾಗಿ ತೋರಿಸಿ ಅವರ ಪ್ರಗತಿಗೆ ದಾರಿ ತೋರಿಸಬಲ್ಲ ಗುರುವೆನಿಸಿ, ಶ್ರೀಯುತರು ಅಪಾರ ಪ್ರತಿಭಾವಂತರೆನಿಸಿಕೊಂಡಿದ್ದಾರೆ.

ಚಿತ್ರ ಬರೆಯಲು ತೆಗೆದುಕೊಳ್ಳುವ ವಸ್ತು. ವಿಷಯಗಳಲ್ಲಿ 'ರಾಜು' ಅವರು ತುಂಬಾ ಜಾಣರು. ಭಾರತ ಮತ್ತು ಪಾಶ್ಚಿಮಾತ್ಯ ಕಲೆಗಳೆರಡನ್ನೂ ಆಳವಾಗಿ ಅಭ್ಯಾಸಮಾಡಿದ್ದಾರೆ. ಅವೆರಡರ ಸಮ್ಮಿಳನದಿಂದ ತಮ್ಮದೇ ಆದ ನವೀನಮಾರ್ಗದಲ್ಲಿ ಸಾಗಿದ್ದಾರೆ.

ವಿದ್ಯಾರ್ಥಿಗಳನ್ನು ತರಬೇತು ಮಾಡುವ ಚಾಕಚಕ್ಯತೆ ಇರುವ

ಹಿರಿಯ ಕಲಾವಿದ ಶ್ರೀ ರಾಜು ಅವರನ್ನು ಬೆಂಗಳೂರಿನ ಮಾರಾಟ ಕೇಂದ್ರದ (Arts & crafts Show Room) ಯಜಮಾನರನ್ನಾಗಿ ಮಾಡಿ ಕೈ ಕಟ್ಟುವಂತೆ ಮಾಡಲಾಗಿತ್ತು. ಆಗ ವಿದ್ಯಾರ್ಥಿವೃಂದಕ್ಕೆ ಅನ್ಯಾಯವಾಗಿತ್ತು. ಶ್ರೀಯುತರು ಬಿಡುವು ದೊರೆತಾಗಲೆಲ್ಲಾ ತಮ್ಮ ನೆಚ್ಚಿನ ಮಿತ್ರರಾದ ಕಲಾವಿದ ಎಸ್. ಆರ್. ಅಯ್ಯಂಗಾರ್, ಎಚ್. ಎಸ್. ಇನಾಮತಿಯವರೊಂದಿಗೆ ಕಲೆತು ಕಲಾಪ್ರಪಂಚದಲ್ಲಿ ತಲ್ಲೀನರಾಗುತ್ತಿದ್ದರು. ಶ್ರೀ ರಾಜುರವರಿಂದ ಇನ್ನಷ್ಟು ಉತ್ಕೃಷ್ಟ ಕೃತಿಗಳು ರಚಿತವಾಗಲಿ. ಅವರ ಅಪಾರ ಕಲಾಕುಶಲತೆಯ ಅರಿವು ಕಿರಿಯರಿಗೂ ದೊರೆತು, ಕಲಾಜ್ಯೋತಿಗಳಾಗಿ ಎಲ್ಲೆಲ್ಲೂ ಬೆಳಗಲೆಂದು ಅಪೇಕ್ಷಿಸೋಣ.



ಎನ್. ಎಸ್. ಸುಬ್ಬಕೃಷ್ಣ

ಇಲ್ಲಿಗೆ ಹನ್ನೆರಡು ವರ್ಷಗಳ ಹಿಂದೆ ೧೯೪೫ ರಲ್ಲಿ ಬೊಂಬಾಯಿಯಿಂದ ಬಂದಿದ್ದ ನನ್ನ ಕೆಲವು ಮಿತ್ರರೊಡನೆ ಬೆಂಗಳೂರಿನ ಪ್ರೇಕ್ಷಣೀಯ ನೆಲೆಗಳನ್ನು ಈಕ್ಷಿಸಲು ಹೋಗಿದ್ದೆನು. ಆ ಸಂದರ್ಭದಲ್ಲಿ ಮಲ್ಲೇಶ್ವರದಲ್ಲಿರುವ ಪಿಂಗಾಣಿ ಕಾರ್ಖಾನೆಗೂ ಹೋಗಿಬರುವ ಅವಕಾಶವನ್ನೂ ಕಲ್ಪಿಸಿಕೊಂಡೆವು. ತಾತಾ ವಿಜ್ಞಾನಮಂದಿರದಿಂದ ಹೊರಟದ್ದು ಅದರ ಎದುರಿನಲ್ಲೇ ಇರುವ ಪಿಂಗಾಣಿ ಕಾರ್ಖಾನೆಗೆ ನಡೆದೆವು. ಪಿಂಗಾಣಿಯ ಪದಾರ್ಥಗಳಮೇಲೆ ನಾನಾ

ಬಗೆಯ ಚಿತ್ರ ವೈವಿಧ್ಯತೆಗಳನ್ನು ಆಗಾಗ ನೋಡುತ್ತಿದ್ದ ನಾವು ಅದರ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಉದ್ದೇಶದಿಂದ ಅಲ್ಲಿಗೆ ಹೋದೆವು. ಎಲ್ಲದಕ್ಕೂ ಮುಖ್ಯವಾಗಿ ಆ ಪದಾರ್ಥಗಳ ಮೇಲೆ ಚಿತ್ರಗಳನ್ನು ಬಿಡಿಸುವ ಕ್ರಮವನ್ನು ನೋಡುವ ಕುತೂಹಲ ಹೆಚ್ಚಾಗಿದ್ದಿತು. ನೇರವಾಗಿ ಚಿತ್ರಗೃಹದ ಕಡೆ ನಡೆದೆವು.

ಕಲಾವಿದರೊಬ್ಬರು ಮೇಜಿನ ಮುಂದೆ ಕುಳಿತು ಸುತ್ತಲೂ ಬಣ್ಣದ ಬಟ್ಟಲುಗಳನ್ನು ಹರಡಿಕೊಂಡು ತಲ್ಲೀನರಾಗಿ ಮಣ್ಣಿನ ಪಾತ್ರೆಯೊಂದರ ಮೇಲೆ ಚಿತ್ರವನ್ನು ಬಿಡಿಸುತ್ತಿದ್ದರು. ಆ ಕೊಠಡಿಯಲ್ಲಿ ಚಿತ್ರಿಸಲ್ಪಟ್ಟ ಅನೇಕ ಪಾತ್ರೆಗಳು ಅಲ್ಲಲ್ಲಿ ಹರಡಿಕೊಂಡು ನಮ್ಮ ಮನವನ್ನು ಸೆಳೆದವು. ಒಂದೊಂದರ ಮೇಲೂ ಒಂದೊಂದು ಬಗೆಯ ಬೆಡಗಿನ ಚಿತ್ರಗಳು ನಾನಾ ಬಣ್ಣಗಳಲ್ಲಿ ರಂಜಿಸುತ್ತಿದ್ದವು. ಹೂ ಬಳ್ಳಿಗಳೂ, ಪ್ರಕೃತಿ ಚಿತ್ರಗಳೂ, ಮೃಗಪಕ್ಷಿಗಳೂ ಮುಂತಾಗಿ ಹಲವು ಬಗೆಯ ರಮ್ಯ ಕಲಾಕೃತಿಗಳನ್ನು ಕಲಾವಿದರು ಸೊಗಸಾಗಿ ಬಿಡಿಸಿದ್ದರು. ಶ್ರೀಯುತರ ಪರಿಚಯ ನಮಗೆ ಆದಾಗ ಅವರೇ ಶ್ರೀ ಎನ್. ಎಸ್. ಸುಬ್ಬಕೃಷ್ಣ ಎಂದು ಕೇಳಿ ಬಹಳ ಸಂತೋಷವಾಯಿತು. ಅವರನ್ನು ನೋಡಲೇಬೇಕೆಂಬ ಬಹುದಿನದ ಹಂಬಲ ಅಂದು ಪೂರೈಸಿತು.

ಶ್ರೀಯುತರ ಹೆಸರು ಮೈಸೂರಿನ ಕಲಾಭಿಮಾನಿಗಳಿಗೆ ಆವೇಳೆಗಾಗಲೇ ತುಂಬ ಪರಿಚಿತವಾಗಿತ್ತು. ನಮ್ಮ ಕಲಾಶಾಲೆಯಲ್ಲಿ ಮೂಲೆಯೊಂದರಲ್ಲಿ ಹಳೆಯ ಚಿತ್ರಗಳ ರಾಶಿಯ ನಡುವೆ ಉತ್ತಮ ಚಿತ್ರಗಳನ್ನು ಹುಡಿಕಿ ನೋಡುವ ಚಾಳಿ ನಮ್ಮದಾಗಿತ್ತು. ಆ ರಾಶಿಯಲ್ಲಿ ಉತ್ತಮವಾದವುಗಳನ್ನು ಒಂದೆಡೆ ಸೇರಿಸಿ ಅವುಗಳನ್ನು ನೋಡಿ ನೋಡಿ ಆನಂದಿಸುವುದೇ ನಮ್ಮ ಕೆಲಸವಾಗಿತ್ತು. ಆ ಚಿತ್ರಗಳು ಇದೇ ಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದವರು ಮಾಡಿ ತೊರೆದು ಹೋದವುಗಳು. ಪ್ರತಿವರ್ಷವೂ ಅನೇಕರ ಅಭ್ಯಾಸಿ ಚಿತ್ರಗಳು ಹೀಗೆ ಈ ರಾಶಿಗೆ ಸೇರುತ್ತಿರುತ್ತವೆ. ಹೊಸ ಹೊಸದಾಗಿ ಬಂದ ವಿದ್ಯಾರ್ಥಿಗಳಿಗೆ ಅವು ಉತ್ತಮ ಮಾರ್ಗದರ್ಶಕವಾಗುತ್ತವೆ. ಉತ್ತಮ ಸ್ಫೂರ್ತಿಯನ್ನೂ ನೀಡುತ್ತವೆ. ಅಷ್ಟೇ ಅಲ್ಲದೆ ಕಲಾವಿದರ ಪರಿಚಯವೂ ಅವರ ಕಲಾಭ್ಯಾಸದ ಮಟ್ಟವೂ ಅರ್ಥವಾಗುತ್ತದೆ. ಆ ಗುಂಪಿನಲ್ಲಿ ನಾನು ಬಹಳವಾಗಿ ಮೆಚ್ಚಿಕೊಂಡ ಕಲಾಕೃತಿಗಳೆಂದರೆ ಶ್ರೀ ಸುಬ್ಬಕೃಷ್ಣ ಅವರದು.

ನಮ್ಮ ಕಲಾಶಾಲೆಯ ಹಿಂಭಾಗದ ಬೀದಿಯೊಂದನ್ನು ಆರಿಸಿಕೊಂಡು ಜಲ ವರ್ಣದಲ್ಲಿ ತುಂಬ ಸಹಜವಾಗಿ ಚಿತ್ರಿಸಿದ ಕಲಾಕೃತಿಯೊಂದು ಬಹು ಆಕರ್ಷಣೆಯನ್ನುಂಟುಮಾಡಿತು. ಆ ಬೀದಿಗೆ ಹೋದಾಗಲೆಲ್ಲಾ ಈಗಲೂ ಶ್ರೀಯುತರ ಆ ಚಿತ್ರವೇ ಕಣ್ಣಿಗೆ ಕಟ್ಟಿದಂತಾಗುತ್ತದೆ. ಆ ವೇಳೆಗಾಗಲೇ ಶ್ರೀಯುತರ ಕಲಾಪ್ರೌಢಿಮೆ ಯಾವ ಮಟ್ಟದ್ದೆಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಂಡಿದ್ದೆವು. ಆಗಿನ ಉತ್ತಮ ಕಲಾಸಾಧಕರಲ್ಲಿ ಶ್ರೀಯುತರಿಗೆ ಉತ್ತಮ ಸ್ಥಾನವೂ ಇದೆ ಎಂಬುದನ್ನು ತಿಳಿದಿದ್ದೆವು. ಆದುದರಿಂದಲೇ ಅವರ ಚಿತ್ರಗಳನ್ನು ಎಲ್ಲಿದ್ದರೂ ಹುಡಿಕಿಕೊಂಡು ಹೋಗಿ ನೋಡಿ ಬರುತ್ತಿದ್ದೆವು.

ಮೈಸೂರಿನ ದಸರಾ ಕಲಾಪ್ರದರ್ಶನದಲ್ಲಿ ಪ್ರತಿವರ್ಷವೂ ಆ ದಿನಗಳಲ್ಲಿ ಶ್ರೀಯುತರ ಕೀರ್ತಿ ಮೆರೆಯುತ್ತಲೇ ಇದ್ದಿತು. ಬೇಲೂರು ಹಳೆಯಬೀಡು, ಸೋಮನಾಥಪುರ, ಶ್ರೀರಂಗಪಟ್ಟಣ, ಹಂಪೆ ಮುಂತಾದ ಚಾರಿತ್ರಿಕ ನೆಲೆ ಗಳಿಗೆ ಹೋಗಿ ಅಲ್ಲಿನ ಅವಶೇಷಗಳನ್ನೂ ಶಿಲ್ಪಕಲೆಗೆ ಹೆಸರಾದ ಗುಡಿ ಗೋಪುರಗಳನ್ನೂ ಮನೋಹರವಾಗಿ ಚಿತ್ರಿಸಿಕೊಂಡು ಬಂದ ಶ್ರೀಯುತರ ಚಿತ್ರಗಳು ಕಲಾಪ್ರದರ್ಶನದ ಭಿತ್ತಿಯ ಬಹುಭಾಗವನ್ನು ಆಕ್ರಮಿಸಿ ಪ್ರೇಕ್ಷ ಕರ ದೃಷ್ಟಿಯನ್ನೂ ಸೆಳೆದುಬಿಡುತ್ತಿದ್ದುವು. ಕಲಾಭಿಮಾನಿಗಳು ಗುಂಪು ಗುಂಪಾಗಿ ನಿಂತು ಆದಷ್ಟು ನೆಲೆಗಳನ್ನು ನೋಡಿ ಆನಂದಿಸುತ್ತಿದ್ದ ನೆನಪು ಈಗಲೂ ನನ್ನ ಮನಸ್ಸಿನಲ್ಲಿ ನಿಂತಿದೆ. ನೈಜ ಪ್ರಕೃತಿಚಿತ್ರಕಾರರಾಗಿ ಬಂದ ಹಲವೇ ಮಂದಿಗಳ ಅಗ್ರ ಪಙ್ತಿಯಲ್ಲಿ ಶ್ರೀಯುತರು ನಿಲ್ಲಬಲ್ಲರೆಂಬು ದಕ್ಕೆ ಅವರ ಅಂದಿನ ಅನೇಕ ನೈಸರ್ಗಿಕ ಕಲಾಕೃತಿಗಳು ನಿದರ್ಶನವಾಗಿವೆ. ಜಗನ್ಮೋಹನ ಚಿತ್ರಶಾಲೆಯಲ್ಲಿ ಇವರ ಇಂಥ ಉತ್ತಮ ಪ್ರಕೃತಿಚಿತ್ರ ಗಳನ್ನು ಈಗಲೂ ನೋಡಬಹುದಾಗಿದೆ. ಶ್ರೀಯುತರು ಈಗ ಮೈಸೂರಿನಿಂದ ಬಹಳ ದೂರದಲ್ಲಿದ್ದರೂ ಅವರ ಕಲಾಸೇವೆಯನ್ನು ನೆನಪಿಗೆ ತರುವಂತೆ ಈ ಚಿತ್ರಗಳು ಮನೋಲ್ಲಾಸಕಾರಿಯಾಗಿವೆ.

ಉನ್ನತ ಅಧಿಕಾರದಲ್ಲಿ ಇದ್ದುಕೊಂಡು ಕಲೆ ಸಾಹಿತ್ಯ ಇತ್ಯಾದಿಗಳನ್ನು ಆದರಿಸುವವರು ನಮ್ಮಲ್ಲಿ ತುಂಬಾ ವಿರಳ. ಎಲ್ಲೋ ಅಲ್ಲೊಬ್ಬರು ಇಲ್ಲೊ ಬ್ಬರು ಕಾಣಬರುತ್ತಾರೆ. ಮಂತ್ರಿಪದವಿಯಂಥ ಗಣ್ಯಸ್ಥಾನಕ್ಕೆ ಹೋದವರಂತೂ ಈ ದೃಷ್ಟಿಯತ್ತ ತಮ್ಮ ಮನವನ್ನೂ ಹರಿಸುವುದೇ ಕಷ್ಟ. ಆದರೆ ಅಂಥ ಉನ್ನತ

ಸ್ಥಾನದಲ್ಲಿದ್ದು ಮೈಸೂರಿನ ಕಲಾವಿದರಿಗೆ ಉತ್ತೇಜನಕೊಟ್ಟ ಕೆಲವು ಗಣ್ಯರನ್ನು ಈಗಲೂ ಕೃತಜ್ಞತೆಯಿಂದ ನೆನೆಯಬಹುದಾಗಿದೆ. ಅಂಥವರಲ್ಲಿ ಸರ್ ಮಿರ್ಜಾ, ಮಾಜಿ ಮಂತ್ರಿ ಶ್ರೀ ಎಂ. ಎ. ಶ್ರೀನಿವಾಸನ್, ಮಾಜಿ ಮುಖ್ಯಮಂತ್ರಿ ಕೆ. ಹನುಮಂತಯ್ಯ ಮುಂತಾದ ಕೆಲವರ ಹೆಸರನ್ನಾದರೂ ಇಲ್ಲಿ ಉದಾಹರಿಸಬಹುದಾಗಿದೆ. ಶ್ರೀ ಶ್ರೀನಿವಾಸನ್ ಅವರು ಇಲ್ಲಿನ ಅನೇಕ ಕಲಾವಿದರಿಗೆ ಆಧಾರಸ್ತಂಭದಂತಿದ್ದು ಬಹುಮುಖ್ಯವಾದ ಪ್ರೋತ್ಸಾಹವನ್ನೂ ನೀಡಿದ್ದಾರೆ. ಶ್ರೀ ಸುಬ್ಬಕೃಷ್ಣ ಅವರು ಪ್ರೋತ್ಸಾಹಕ್ಕೆ ಪಾತ್ರರಾದವರಲ್ಲಿ ಒಬ್ಬರು.

ಮೈಸೂರು ಸೀಮೆಯ ಮಂತ್ರಿಗಳಾಗಿದ್ದು ನಿವೃತ್ತರಾಗಿ ಗ್ವಾಲಿಯರ್‌ನ ಮುಖ್ಯ ಮಂತ್ರಿಗಳಾಗಿ ಹೋದ ಶ್ರೀ ಎಂ. ಎ. ಶ್ರೀನಿವಾಸನ್ ಅವರು ತಮ್ಮ ಮೆಚ್ಚಿನ ಕಲಾವಿದರಾದ ಸುಬ್ಬಕೃಷ್ಣ ಅವರನ್ನು ಬೆಂಗಳೂರಿನ ಪಿಂಗಾಣಿ ಕಾರ್ಖಾನೆಯಿಂದ ೧೯೪೪ರಲ್ಲಿ ಅಲ್ಲಿಗೆ ಕರೆಸಿಕೊಂಡರು. ಅವರ ನೆರವಿನಿಂದಲೇ ಇಲ್ಲಿನ ಪಿಂಗಾಣಿ ಕಾರ್ಖಾನೆಯಲ್ಲಿ ಏಳುವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದ ಸುಬ್ಬಕೃಷ್ಣ ಅವರಿಗೆ ಗ್ವಾಲಿಯರ್‌ನ ಪಿಂಗಾಣಿ ಕಾರ್ಖಾನೆಯಲ್ಲಿ ಉತ್ತಮದರ್ಜೆಯ ಚಿತ್ರಕಾರರ ವೃತ್ತಿ ದೊರೆಕಿತು. ಅಂದಿನಿಂದ ಇಂದಿನವರೆಗೂ ಶ್ರೀಯುತರು ಅಲ್ಲಿಯೇ ಇದ್ದು ಸೇವೆ ನಡೆಸುತ್ತಿದ್ದಾರೆ. ಕಾರ್ಖಾನೆಯ ಕಲಾವೃತ್ತಿ ಜೀವನಕ್ಕಾದರೆ ವಿರಾಮಕಾಲದಲ್ಲಿ ಜೀವನಕ್ಕೆ ಅಂಟಿಬಂದ ಕಲಾಕಾಂಕ್ಷೆ ಕೀರ್ತಿಗಾಗಿದೆ. ಅನೇಕ ಬಗೆಯಲ್ಲಿ ಕಲಾಸೇವೆಯನ್ನು ನಡೆಸುತ್ತಾ ಶ್ರೀಯುತರು ಮೈಸೂರಿನ ಕೀರ್ತಿಯನ್ನು ಸಾರುತ್ತಾ ಬಂದಿದ್ದಾರೆ.

ಗ್ವಾಲಿಯರ್‌ಗೆ ಬಂದ ತರುಣದಲ್ಲಿಯೇ ಶ್ರೀಯುತರ ಕಲಾಪ್ರತಿಭೆ ಅಲ್ಲೆಲ್ಲಾ ಪ್ರಸರಿಸಿ ಗ್ವಾಲಿಯರ್‌ನ ವಿಧಾನಸಭೆಗೆ ಪೂಜ್ಯ ಬಾಪೂಜಿಯವರ ಪೂರ್ಣಾಕೃತಿಯ ಭಾವಚಿತ್ರವನ್ನು ತೈಲವರ್ಣದಲ್ಲಿ ಬರೆಯುವ ಅವಕಾಶ ದೊರಕಿತು. ಆ ಚಿತ್ರದ ಉದ್ಘಾಟನೆ ಭಾರತದ ಮುಖ್ಯಮಂತ್ರಿಯಾಗಿದ್ದ ಉಕ್ಕಿನ ಮನುಷ್ಯ ಸರ್ಧಾರ್ ಪಟೇಲರಿಂದ ಆಯಿತು. ಸರದಾರರು ಆ ಭವ್ಯ ಕಲಾಕೃತಿಯನ್ನು ಬಹುವಾಗಿ ಪ್ರಶಂಸಿಸಿ ಸುಬ್ಬಕೃಷ್ಣ ಅವರ ಕೌಶಲಕ್ಕೆ ತಲೆದೂಗಿದ್ದರು. ಗ್ವಾಲಿಯರ್‌ನ ಕಲಾಭಿಮಾನಿಗಳೂ ಒಬ್ಬೊಬ್ಬರಾಗಿ ಬಂದು

ಆ ಚಿತ್ರದ ಸಹಜತೆಗೆ ಜೀವಕಳೆಗೆ ಬೆರಗಾಗಿ ಪ್ರಶಂಸೆಯ ಮಾತುಗಳನ್ನಾಡಿ ಹೋಗುತ್ತಿದ್ದರು. ಮೈಸೂರಿನ ಕಲಾವಿದರೊಬ್ಬರ ಮಾತು ಆಗ ಅಲ್ಲಿ ಎಲ್ಲೆಲ್ಲಿಯೂ ಕೇಳಿಬರುವಂತಾಯಿತು.

ಶ್ರೀ ಸುಬ್ಬಕೃಷ್ಣ ಅವರು ಕೇವಲ ನೈಸರ್ಗಿಕ ಚಿತ್ರಗಳಲ್ಲಿಯೇ ನಿಸ್ಸೀಮರಲ್ಲದೆ ರೂಪಚಿತ್ರ ಕಲೆಯಲ್ಲಿಯೂ ಅದ್ವಿತೀಯ ಶಕ್ತಿಯನ್ನೂ ಆ ವೇಳೆಗಾಗಲೇ ಗಳಿಸಿಕೊಂಡಿದ್ದರೆಂಬುದಕ್ಕೆ ಈ ಚಿತ್ರ ನಿದರ್ಶನವಾಯಿತು. ಕಾರ್ಖಾನೆಯ ಗೊಂದಲದ ನಡುವಿನಲ್ಲಿದ್ದರೂ ಈ ರೀತಿ ಚಿತ್ರಕಲೆಯನ್ನು ವೃದ್ಧಿಸಿಕೊಂಡು ಖ್ಯಾತಿಪಡೆದವರು ತೀರ ವಿರಳ. ಶ್ರೀಯುತರದು ಇದೊಂದು ಸಾಹಸವೆಂದೇ ಹೇಳಬೇಕು. ಅವರ ಶ್ರದ್ಧೆ ಆಸಕ್ತಿಗಳೇ ಇದಕ್ಕೆ ಮೂಲ ಕಾರಣ.

೧೯೫೧ರಲ್ಲಿ ದೆಹಲಿಯಲ್ಲಿ ನಡೆದ ಅಖಿಲಭಾರತ ಸಾಂಸ್ಕೃತಿಕ ಪ್ರದರ್ಶನದಲ್ಲಿ ಶ್ರೀಯುತರ ನೈಜಕಲಾಕೃತಿಗಳು ರಾಷ್ಟ್ರಪತಿಗಳ ಕಣ್ಣಿಗೆ ಬಿದ್ದವು. ಅವುಗಳಿಂದ ಆಕರ್ಷಿತರಾದ ಬಾಬು ರಾಜೇಂದ್ರಪ್ರಸಾದರು ಆ ಚಿತ್ರಗಳ ಬಗ್ಗೆ ಬಹು ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಕಲಾವಿದರ ಬಗ್ಗೆ ಕುತೂಹಲವನ್ನು ವ್ಯಕ್ತಪಡಿಸಿದರು. ಅಲ್ಲಿಯೇ ಇದ್ದ ಮಾನ್ಯ ದಿವಾಕರರು ಶ್ರೀ ಸುಬ್ಬಕೃಷ್ಣರವರ ವಿಷಯವಾಗಿ ಬಾಬೂಜಿಯವರಿಗೆ ವಿವರಿಸಿದರು. ಇದರಿಂದಾಗಿ ರಾಷ್ಟ್ರಾಧ್ಯಕ್ಷರ ಭಾವಚಿತ್ರವನ್ನು 'ಸಿಟ್ಟಿಂಗ್' ಪಡೆದು ಚಿತ್ರಿಸುವ ಒಂದು ಅಪೂರ್ವ ಅವಕಾಶ ಶ್ರೀಯುತರ ಪಾಲಿಗೆ ದೊರಕಿದುದು ಕನ್ನಡಿಗರು ಹೆಮ್ಮೆ ಪಡಬಹುದಾದ ವಿಷಯ. ಆ ಕಲಾಕೃತಿಯೂ ಕೂಡ ಅತ್ಯಂತ ಆಕರ್ಷಣೀಯವಾಗಿದ್ದು ಪ್ರಮುಖರ ಪ್ರಶಂಸೆಯನ್ನು ಗಳಿಸಿತು. ಹಾಗೆಯೇ ಇನ್ನೂ ಅನೇಕ ಭಾರತ ಮುಖಂಡರ ಭಾವಚಿತ್ರಗಳನ್ನು ಬಿಡಿಸುವ ಸದಾವಕಾಶವೂ ದೊರಕಿತು. ಈ ಚಿತ್ರಗಳನ್ನೆಲ್ಲಾ ರಾಷ್ಟ್ರಪತಿ ಭವನದಲ್ಲಿ ಇಂದಿಗೂ ತೂಗುಹಾಕಲಾಗಿದೆ. ಅವು ಮೈಸೂರಿನ ಕೀರ್ತಿಯನ್ನು ಸಾರುವಂತೆ ಶೋಭಿಸುತ್ತಿವೆ.

ದಿಲ್ಲಿಯಿಂದ ಗ್ವಾಲಿಯರ್‌ವರೆಗೆ ಶ್ರೀಯುತ ಸುಬ್ಬಕೃಷ್ಣರ ಕೀರ್ತಿಯ ಬಳ್ಳಿ ಹಬ್ಬಿತು. ಲಕ್ನೋ, ಹಿಮಾಲಯದ ನೈನಿತಾಲ, ಪಾಟ್ನಾ, ರಾಂಚಿ, ಭೂಪಾಲ್, ಕಲ್ಕತ್ತಾ ಮುಂತಾದಕಡೆಗಳಲ್ಲಿನ ಸರ್ಕಾರಿ ಭವನಗಳಲ್ಲೂ,

ಸಂಘ ಸಂಸ್ಥೆಗಳಲ್ಲೂ ಇವರ ಭಾವಚಿತ್ರಗಳು ಭಿತ್ತಿ ಭಿತ್ತಿಗಳಲ್ಲಿ ಮೆರೆಯುವ ಸೌಲಭ್ಯ ಒದಗಿಬಂದಿತು.

ಶ್ರೀಯುತರು ನಾಡಿನ ಅನೇಕ ಗಣ್ಯಮಹನೀಯರ ಚಿತ್ರಗಳನ್ನು 'ಸಿಟಿಂಗ್' ಮೂಲಕವೇ ಚಿತ್ರಿಸಿರುವುದು ಒಂದು ಹೆಮ್ಮೆಯ ವಿಷಯ. ಪಂಡಿತ್ ನೆಹರೂರವರು ತಮ್ಮ ಬಹುಮುಖ ಕಾರ್ಯಕ್ರಮಗಳ ನಡುವೆ ಬಿಡುವುಮಾಡಿಕೊಂಡು ತಮ್ಮ ಭಾವಚಿತ್ರವನ್ನು ರಚಿಸಲು ಪ್ರಪ್ರಥಮವಾಗಿ 'ಸಿಟಿಂಗ್' ಕೊಟ್ಟುದುದು ಶ್ರೀಯುತರಿಗೇ ಮೊದಲು. ವಿಶ್ವದ ಶಾಂತಿದೂತ ನೆನಿಸಿ ಭಾರತದ ಜೀವನಾಡಿಯಾಗಿದ್ದ ನೆಹರೂಜಿ ಶ್ರೀಯುತರಿಗೆ ಈ ಅವ ಕಾಶವನ್ನು ಕೊಟ್ಟಿರುವುದು ಅಚ್ಚರಿಯ ಸಂಗತಿಯೇ ಸರಿ. ಕುರ್ಚಿಯೊಂದರ ಮೇಲೆ ಗಂಭೀರವಾಗಿ ಯಾವುದೋ ಭಾವಗಾಂಭೀರ್ಯದಲ್ಲಿ ಮುಳುಗಿದಂತೆ ಅಪೂರ್ವ ಜವಾಬ್ದಾರಿಯನ್ನು ಹೊತ್ತಂತೆ ಮುಖ ಗಂಭೀರವಾಗಿದೆ. ದೃಷ್ಟಿ ಯಲ್ಲಿ ಏನೋ ಒಂದು ಬಗೆಯ ಪ್ರಸನ್ನತೆ ಕಾಣುತ್ತದೆ. ಶುಭ್ರವಾದ ಬಿಳಿಯ ಮಡಿಕೆಯ ಟೋಪಿಯ ಸಂದಿನಿಂದ ಅವರ ಬೆಳ್ಳಿ ಕೂದಲು ಇಣುಕು ಹಾಕಿದೆ ಮುಖದ ಸುಕ್ಕುಗೆರೆಗಳು ಪಂಡಿತ್‌ಜೀಯವರ ಸಾಹಸ ಜೀವನವನ್ನು ಅವಿ ರಳ ಉತ್ಸಾಹವನ್ನೂ ಮೆರೆಯುವಂತಿವೆ. ತುಂಬು ಕಾಲರಿನ ಬಿಳಿಯ ನಿಲು ವಂಗಿಯನ್ನು ತೊಟ್ಟು ಹೂವೊಂದನ್ನು ಗುಂಡಿಗೆ ಸಿಕ್ಕಿಸಿಕೊಂಡು ಮುಂಗೈ ಗಳನ್ನು ಜೋಡಿಸಿಕೊಂಡು ಕುಳಿತಿದ್ದಾರೆ. ಮುಂಗೈನ ಮೇಲಿನ ಕೆಂಗೂದ ಲುಗಳೂ ನರಗಳೂ ಸೂಕ್ಷ್ಮವಾಗಿ ಕಾಣುವಂತೆ ಬಹು ಚತುರತೆಯಿಂದ ಬಿಡಿಸಿದ್ದಾರೆ. ಅವರ ಮೇಲುಜೇಬಿನಲ್ಲಿ ಶಾಂತಿಯ ಸಂದೇಶವನ್ನು ಸಾರುವ ಭಾಗ್ಯಶಾಲಿ ಪೆನ್ನೊಂದು ತಾನೂ ನೆಹರೂರವರ ಬಾಳಿನಲ್ಲಿ ಪ್ರಮುಖ ಶಕ್ತಿ ಎಂಬಂತೆ ಇಣಿಕಿಹಾಕಿದೆ. ಈ ಚಿತ್ರವನ್ನು ಶ್ರೀಯುತರು ಬಹು ಸಹಜವಾಗಿ ಬಿಡಿಸಿದ್ದಾರೆ.

ಹೀಗೆಯೇ ಆರ್. ಆರ್. ದಿವಾಕರ್, ದಿ॥ ಮಾವಳಂಕರ್, ಸರ್ದಾರ್ ಪಟೇಲ್, ಸಿ. ಡಿ. ಬಿರ್ಲಾ ಮುಂತಾದವರ ಭಾವಚಿತ್ರಗಳ ಜೊತೆಗೆ ಪಾಶ್ಚಿ ಮಾತ್ಯ ಪ್ರಮುಖರನೇಕರ ರೂಪಚಿತ್ರಗಳನ್ನೂ ರಚಿಸಿದ್ದಾರೆ. ಶ್ರೀ ಬಿರ್ಲಾ ರವರ ರೂಪಚಿತ್ರ ಒಂದು ನೈಜ ಕಲಾಕೃತಿ. ಶ್ರೀ ನೆಹರೂರವರು ಈ ಚಿತ್ರದಲ್ಲಿ ಬಿರ್ಲಾರವರಿಂದ ರತ್ನಹಾರ ಒಂದನ್ನು ಕೊರಳಿಗೆ ಹಾಕಿಸಿಕೊಳ್ಳುತ್ತಿದ್ದಾರೆ.

ಇಬ್ಬರ ಮುಖದಲ್ಲಿಯೂ ಮಧುರ ನಗೆ ಚಿಮ್ಮಿದೆ. ನೆಳಲು ಬೆಳಕುಗಳ ಸಂಯೋಗ ಬಹು ಪ್ರಶಾಂತವಾಗಿ ತೋರುತ್ತದೆ. ವಿಮಾನ ನಿಲ್ದಾಣದಲ್ಲಿ ಶ್ರೀ ನೆಹರೂರವರನ್ನೂ ಸ್ವಾಗತಿಸುವ ಸಂದರ್ಭದಲ್ಲಿನ ಚಿತ್ರವಿದು. ದಿವಾಕರರ ಭಾವಚಿತ್ರ ಮತ್ತೊಂದು ತೈಲವರ್ಣದ ಕಲಾಕೃತಿ. ಮುಖದ ಮಂದಗಾಂಭೀರ್ಯವನ್ನೂ ಕಣ್ಣುಗಳಲ್ಲಿ ಸಜೀವ ಕಳೆಯನ್ನೂ ಬಿಡಿಸುವುದರಲ್ಲಿ ಈ ಚಿತ್ರ ವೈಶಿಷ್ಟ್ಯಪೂರ್ಣವಾಗಿದೆ. ಹೆಸರಿಸಬಹುದಾದ ಇನ್ನೊಂದು ಕೃತಿ ಎಂದರೆ ೧೮೮೭ ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬದುರ್‌ದೀನ್ ತ್ಯಾಬಜಿ ಎಂಬುವರ ಭಾವಚಿತ್ರ, ಇಂದು ಇದು ರಾಜಭವನದಲ್ಲಿದೆ. ಇಲ್ಲಿ ಭಾವಚಿತ್ರವನ್ನು ಮೀರಿಸುವಂಥ ಸಹಜತೆಯನ್ನು ಈ ಚಿತ್ರದಲ್ಲಿ ಕುಂಚದಿಂದ ಒಡಮೂಡಿಸಿದ್ದಾರೆ. ಕನ್ನಡಕದ ಹೊರಗೆ ಕಾಣುವ ತೆರೆದ ಕಣ್ಣುಗಳು. ಒಂಕಿ ಒಂಕಿಯಾಗಿ ಆದರೂ ಓರಣವಾಗಿ ಹಬ್ಬಿಕೊಂಡಿರುವ ಗಡ್ಡ ಮೀಸೆಗಳೂ; ತೆಕ್ಕೆಯ ಮಾದರಿಯಲ್ಲಿ ಸುತ್ತಿದ ರುಮಾಲು ಮುಂತಾದುದನ್ನು ಬಹು ಜಾಣ್ಮೆಯಿಂದ ಬಿಡಿಸಿದ್ದಾರೆ. ಮೇಲಂಗಿಯ ಹೊಳಪುಗಳೂ ಅದರ ಮೇಲಿನ ಕಸೂತಿಗಳೂ ಮೇಲು ಹೊದಿಕೆಯ ಅಂಚಿನ ಅಲಂಕಾರಗಳೂ ಮುಂತಾದುವನ್ನು ತುಂಬ ಶ್ರಮದಿಂದ ಚಿತ್ರಿಸಿದ್ದಾರೆ. ಮೈಸೂರು ಸರ್ಕಾರದವರು ವಿಧಾನ ಸಭೆಗೆ ಶ್ರೀಯುತರಿಂದ ಸರ್ದಾರ್ ಪಟೇಲರ ಪೂರ್ಣಾಕೃತಿಯ ಚಿತ್ರವೊಂದನ್ನು ಮಾಡಿಸಿದ್ದಾರೆ. ಇವರ ಭಾವಚಿತ್ರಗಳಲ್ಲಿ ನಾವು ಕಾಣುವ ಒಂದು ವೈಶಿಷ್ಟ್ಯವೆಂದರೆ ಸಜೀವಸೌಂದರ್ಯ. ವ್ಯಕ್ತಿಗಳು ಎದ್ದುಬರುತ್ತಾರೋ ಎಂಬಷ್ಟು ಸಹಜವಾಗಿ ಬಿಡಿಸಬಲ್ಲ ಒಂದು ಅದ್ಭುತ ಕೌಶಲ ಇವರ ಕರಗತವಾಗಿದೆ. ಕನ್ನಡದ ಕೆಲವೇ ಭಾವಚಿತ್ರ ರಚನಾಕಲಾವಿದರಲ್ಲಿ ಇವರೂ ಸಹ ಉತ್ತಮ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಅಂತೆಯೇ ಅತ್ಯುನ್ನತ ಕಲಾಕೃತಿಗಳನ್ನು ಉತ್ತಮ ಮಟ್ಟದಲ್ಲಿ ನೀಡುತ್ತಾ ಬಂದಿದ್ದಾರೆ.

ಪ್ರಕೃತಿಚಿತ್ರಗಳಲ್ಲಿ ಜಲವರ್ಣಚಿತ್ರಗಳೇ ಹೆಚ್ಚು. ಅವುಗಳಲ್ಲಿ ಕಾಶಿಯ ಸ್ನಾನಘಟ್ಟದ ಚಿತ್ರವನ್ನು ಹೆಸರಿಸಬಹುದಾಗಿದೆ. ಇದೇ ವಸ್ತುವನ್ನು ಆರಿಸಿಕೊಂಡು ಅನೇಕ ಕಲಾವಿದರು ಕೃತಿಗಳನ್ನು ರಚಿಸಿದ್ದಾರೆ. ಆದರೆ ಇವರ ಚಿತ್ರದಲ್ಲಿನ ಸಹಜತೆ ಸನ್ನಿವೇಶ ಕಲ್ಪನೆ, ವರ್ಣಮೋಡಿ, ನೆಳಲು ಬೆಳಕುಗಳ ವೈಖರಿ, ಕುಂಚದ ಓಟ, ಸೂಕ್ಷ್ಮಕಲೆಗಾರಿಕೆ ಮುಂತಾದುವುಗಳನ್ನು ಇತರರಲ್ಲಿ

ಕಾಣಲಾರೆವು. ಒಂದೇ ದೃಶ್ಯವನ್ನು ಕಲಾವಿದರು ತಮ್ಮ ತಮ್ಮ ದೃಷ್ಟಿಗೆ ತಕ್ಕಂತೆ ಹಲವು ಕೋನಗಳಲ್ಲಿ ವಸ್ತುವನ್ನು ನಿಟ್ಟಿಸಿ ಚಿತ್ರಣಕ್ಕೆ ಆರಿಸಿ ಕೊಳ್ಳಬಹುದು. ಆ ಆಯ್ಕೆಯಲ್ಲಿ ಚಿತ್ರದ ಸೊಬಗಿನ ರಹಸ್ಯ ಅಡಗಿರುತ್ತದೆ. ಅನೇಕ ಕಲಾವಿದರು ಪರಾಜಿತರಾಗುವುದು ಈ ದೃಷ್ಟಿಯಲ್ಲೇ. ಇರುವ ವಸ್ತುವನ್ನು ಇರುವಂತೆಯೇ ನೋಡಿದರೂ ಅದರ ಸೌಂದರ್ಯವನ್ನು ಅಳೆಯುವ ಕೋನ ಬೇರೆಯದಾಗಿರಬೇಕು. ಕಲಾವಿದ ತನ್ನ ಸೂಕ್ಷ್ಮದೃಷ್ಟಿಗೆ ತಕ್ಕಂತೆ ವಸ್ತುವನ್ನು ಆಯ್ಕೆಮಾಡಿಕೊಳ್ಳುತ್ತಾನೆ. ಶ್ರೀ ಸುಬ್ಬಕೃಷ್ಣರ ಪ್ರಕೃತಿಚಿತ್ರಗಳಲ್ಲಿ ಈ ದೃಷ್ಟಿಯ ವೈಶಿಷ್ಟ್ಯವನ್ನು ನಾವು ಕಾಣಬಹುದು. ಕಾಶಿಯ ಚಿತ್ರದಲ್ಲಿಯೂ ಅವರ ಕಲಾದೃಷ್ಟಿ ಮೆಚ್ಚತಕ್ಕುದಾಗಿದೆ. ಮುಗಿಲು ಮುಟ್ಟುವಂಥ ಉನ್ನತ ಸೌಧಗಳೂ ಅವುಗಳನ್ನು ಎಟುಕಿಸಿಕೊಳ್ಳುವಂತೆ ಮೇಲೆದ್ದಿರುವ ಗುಡಿಗೋಪುರಗಳೂ ಸಣ್ಣಪುಟ್ಟ ಕಟ್ಟಡಗಳೂ ಈ ಚಿತ್ರದ ಹಿನ್ನೆಲೆಯಾಗಿವೆ. ಗಂಗಾನದಿಯ ಪವಿತ್ರ ಜಲ ಈ ಕಟ್ಟಡಗಳ ಬಳಿಯೇ ಹರಿದು ಸಾಗಿದೆ. ಅವುಗಳ ಪ್ರತಿಬಿಂಬ ಗಂಗೆಯ ತೆರೆಗಳ ವೇಗದಲ್ಲಿ ಜನರ ಕುಲಕುವಿಕೆಯಲ್ಲಿ ಕರಗಿಹೋಗಿದೆ. ನೂರಾರುಜನ ಯಾತ್ರಿಕರೂ ಸ್ನಾನಾದಿ ಕಾರ್ಯಗಳಲ್ಲಿ ತೊಡಗಿದ್ದಾರೆ. ಬಿಸಲಿನ ತಾಪಕ್ಕೆ ಅಡ್ಡವಾಗಿ ಹಿಡಿದ ಬಿಳಿಯ ಕರಿಯ ಕೊಡೆಗಳು ಪ್ರಶಾಂತವಾದ ನೆರಳನ್ನು ಅಲ್ಲಲ್ಲಿ ಚಲ್ಲಿವೆ. ಕಟ್ಟಡಗಳ ಒಂದೊಂದು ಪಾರ್ಶ್ವದಲ್ಲಿ ನಸುಗಪ್ಪಿನ ತೆರೆಯನ್ನು ಬಿಟ್ಟಂತೆ ನೆರಳು ಚೆಲ್ಲಿಕೊಂಡು ಸೂರ್ಯನ ಇಳಿಮುಖವನ್ನು ತೋರುತ್ತದೆ. ಮತ್ತೊಂದು ಮುಖದಲ್ಲಿ ಗೋಡೆಗಳ ಮೇಲೆ ಬಿಸಿಲಿನ ಬೆಳ್ಳಿಯ ಚಾಟಿ ಮಿರುಗುತ್ತಿದೆ. ಇಂಥ ಸಹಜ ಸುಂದರವಾದ ನೈಸರ್ಗಿಕ ಚಿತ್ರ ಶ್ರೀಯುತರ ಪ್ರಕೃತಿ ಚಿತ್ರ ರಚನಾ ಕೌಶಲಕ್ಕೆ ಒಂದು ಕನ್ನಡಿ ಇದ್ದಂತೆ. ಇಂಥ ಚಿತ್ರಗಳ ಸ್ಫೂರ್ತಿಗೆ ಶ್ರೀಯುತರ ಹುಟ್ಟೂರು ಕಾರಣ ಇರಬಹುದು. ಅಲ್ಲಿನ ನದಿ ಅಲ್ಲಿನ ಭವ್ಯದೇವಾಲಯಗಳೂ ಸಾಲುಬೀದಿಗಳೂ ಮುಂತಾದುವು ಸ್ಫೂರ್ತಿಯನ್ನಿತ್ತಿರಬಹುದೆಂದರೆ ಆಶ್ಚರ್ಯವೇನಲ್ಲ.

ದಕ್ಷಿಣ ಕಾಶಿ ಎಂದು ಪ್ರಸಿದ್ಧವಾಗಿರುವ ನಂಜನಗೂಡು ಶ್ರೀಯುತರ ಹುಟ್ಟೂರು. ಊರಿನ ನೆರೆಯಲ್ಲಿ ಕಪಿಲಾನದಿ ವರ್ಷಕಾಲವೂ ವೈಯ್ಯಾರದಿಂದ ಹರಿಯುತ್ತದೆ. ಶ್ರೀ ನಂಜುಂಡೇಶ್ವರನ ಉನ್ನತವೂ ಭವ್ಯವೂ ಆದ

ದೇವಾಲಯ ಊರಿಗೆ ಒಂದು ಕೀರ್ತಿಯನ್ನು ತಂದಿದೆ. ಸಹಸ್ರಾರುಜನ ಯಾತ್ರಿಕರು ಇಲ್ಲಿಗೆ ಬಂದುಹೋಗುತ್ತಾರೆ. ಒಟ್ಟಿನಲ್ಲಿ ಇದೊಂದು ಪವಿತ್ರ ವಾದ ಯಾತ್ರಾಸ್ಥಳ. ಇಂಥ ಪವಿತ್ರ ನೆಲೆಯಲ್ಲಿ ಶ್ರೀಯುತರು ನಲವತ್ತು ವರ್ಷಗಳ ಹಿಂದೆ ದಿ|| ಶ್ರೀನಿವಾಸರಾಯರ ಏಕಮಾತ್ರ ಪುತ್ರರಾಗಿ ಜನ್ಮ ತಾಳಿದರು. ಚಿಕ್ಕಂದಿನ ಆರಂಭದ ಕಲಿಕೆ ಮನೆಯಲ್ಲಿಯೂ ನಡೆಯಿತು. ಮನೆಯ ಗೋಡೆಗಳಲ್ಲಿ ತೂಗುಹಾಕಿದ್ದ ರವಿವರ್ಮನ ಲಕ್ಷ್ಮೀ ಸರಸ್ವತಿ ಮುಂತಾದ ಚಿತ್ರಗಳು ಬಾಲದೃಷ್ಟಿಯನ್ನು ಆಕರ್ಷಿಸಿದುವು. ಅಕ್ಷರ ಕಲಿಕೆಯ ಜೊತೆಯಲ್ಲಿಯೇ ಚಿತ್ರಾವಲೋಕನ ಅವರಂತೆ ತಾವೂ ಬರೆಯಬೇಕೆಂಬ ಹಂಬಲ ತಲೆದೋರಿದುವು. ಚಿತ್ರಪಟಗಳನ್ನು ನೋಡಿ ಅವುಗಳಂತೆಯೇ ಬರೆಯಲು ಪ್ರಯತ್ನಿಸುತ್ತಿದ್ದರು. ಯಾವಚಿತ್ರವೇ ಕಣ್ಣಿಗೆ ಬಿದ್ದರೂ ಅವುಗಳ ಮುಂದೆ ನಿಂತು ಅಲ್ಲಿನ ವರ್ಣ ವೈಖರಿಯನ್ನೂ ರೇಖಾವಿನ್ಯಾಸವನ್ನೂ ಚಿತ್ತಾಕರ್ಷಕ ಸೌಂದರ್ಯವನ್ನು ವಿಸ್ಮಯದಿಂದ ನೋಡುತ್ತಿದ್ದರು. ತಾವೂ ಅಂಥ ಚಿತ್ರಗಳನ್ನು ಬರೆಯಲು ಸಾಧ್ಯವೇ ಎಂದು ಎಣಿಕೆಹಾಕುತ್ತಿದ್ದರು. ನದಿಯ ದಡದ ಮಂಟಪಗಳನ್ನೂ ದೇವಾಲಯದ ಗೋಪುರಗಳನ್ನೂ ಸುಂದರ ಸ್ತಂಭಗಳನ್ನೂ ಗರಿಯ ಮುಸುಕನ್ನೂ ಒದೆದು ವರ್ಷವೆಲ್ಲಾ ನಿದ್ದೆಮಾಡುವ ನಂಜನಗೂಡು ತೇರನ್ನೂ, ಅಲ್ಲಿನ ಕಟ್ಟಡಗಳನ್ನೂ ಮರಗಿಡಗಳನ್ನೂ ತಮ್ಮ ಅಂಕುಡೊಂಕುಗೆರೆಗಳಲ್ಲಿ ಕೈಗೆಸಿಕ್ಕಿದ ಹಾಳೆಗಳ ಮೇಲೆಲ್ಲಾ ಚಿತ್ರಿಸುವ ಒಂದು ಹವ್ಯಾಸ ಬೆಳೆದುಬಂದಿತು. ಕ್ರಮಕ್ರಮೇಣ ಚಿತ್ರಕಲೆಯಲ್ಲಿ ಅಭಿರುಚಿ ಹೆಚ್ಚಿ ಸ್ವಲ್ಪ ಪ್ರಗತಿಯೂ ತೋರಿಬಂದಿತು. ಇವರ ಚಿತ್ರಗಳನ್ನು ನೋಡಿದ ಅವರಿವರು "ನೀನೊಬ್ಬ ದೊಡ್ಡ ಚಿತ್ರಕಾರನಾಗುತ್ತೀಯೇ—" ಎಂದು ಬೆನ್ನುತಟ್ಟುತ್ತಿದ್ದರು. ಬಾಲಕನ ಈ ಹುಚ್ಚು ತಂದೆಯವರಿಗೂ ತಿಳಿಯದಿರಲಿಲ್ಲ. ಮಾತೃಶ್ರೀಯವರಂತೂ ತಮ್ಮ ಕುಮಾರನ ಮುದ್ದುಚಿತ್ರಗಳನ್ನು ಕಂಡು ಕೌತುಕವನ್ನು ವ್ಯಕ್ತಪಡಿಸುತ್ತಿದ್ದರು. ಹೀಗೆಯೇ ಎಲ್ಲ ಕಡೆಗಳಿಂದಲೂ ಶ್ರೀಯುತರ ಕಲಾಭ್ಯಾಸಕ್ಕೆ ಉತ್ತೇಜನವೇ ದೊರೆತಂತಾಯಿತು. ಚಿತ್ರಾಭ್ಯಾಸದ ಗೀಳಿನ ಅಲೆಯ ಹೊಡೆತ ವಿದ್ಯಾಭ್ಯಾಸದ ಕಡೆಯ ಗಮನವನ್ನು ಕರಗಿಸುತ್ತಾ ಬಂತು. ತಮ್ಮ ಹತ್ತು ಹನ್ನೆರಡನೆ ವಯಸ್ಸಿನಲ್ಲಿಯೇ ಪುಸ್ತಕ ಸ್ಲೇಟುಗಳಿಗೆ ಕೈಮುಗಿದು ಕಲಾಸರಸ್ವತಿಯನ್ನು ಆಹರ್ನಿಶಿಯೂ ಆರಾಧಿಸ

ತೊಡಗಿ ವಿಚಿತ್ರ ಕಲ್ಪನೆಗಳನ್ನು ಕಟ್ಟುತ್ತಾ ಬಂದರು. ಅಂತೆಯೇ ಅಭ್ಯಾಸ ವನ್ನು ಮುಂದುವರಿಸಿದರು.

ತಮ್ಮ ಕುಮಾರನಲ್ಲಿಯೂ ಈ ಕಲಾವ್ಯಾಮೋಹವನ್ನು ಕಂಡ ಶ್ರೀಮಾನ್ ಶ್ರೀನಿವಾಸರಾಯರು ಅದಕ್ಕೆ ಉತ್ತೇಜನಕಾರಿಯಾದ ಮಾರ್ಗವನ್ನು ಯೋಚಿಸತೊಡಗಿದರು. ಸ್ನೇಹಿತರೊಬ್ಬರ ಸಲಹೆಯಂತೆ ೧೯೨೭ ರಲ್ಲಿ ಶ್ರೀಯುತರು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿದರು. ಅಲ್ಲಿ ಆಗಿನ ಕಲಾಪ್ರವೀಣರಾದ ಶ್ರೀ ಕೆ. ಕೇಶವಯ್ಯ ಶ್ರೀ ಪಾವಂಜಿ ಮುಂತಾದ ಕಲಾಗುರುಗಳ ಮಾರ್ಗದರ್ಶನದಲ್ಲಿ ಐದುವರ್ಷ ಗಳಕಾಲ ಉತ್ತಮ ಶಿಕ್ಷಣವನ್ನು ಪಡೆದು ಹೊಸ ಉತ್ಸಾಹದಿಂದ ಹೊರ ಬಂದರು. ಶ್ರೀಯುತರು ವಿದ್ಯಾರ್ಥಿದೆಸೆಯಲ್ಲಿದ್ದಾಗ ಬೊಂಬಾಯಿನ ಕಲಾ ಶಾಲೆಯಲ್ಲಿ ಕಲಾವಿದ್ಯಾರ್ಥಿಗಳಿಗಾಗಿ ಕಲಾಕೃತಿಗಳು ಬಂದಿದ್ದವು. ಅವು ಗಳಲ್ಲೆಲ್ಲಾ ಶ್ರೀಯುತರ "ಆಲದ ಬಿಳಲು" ಎಂಬ ಚಿತ್ರವು "ವಿದ್ಯಾರ್ಥಿಗಳ ಮಟ್ಟವನ್ನು ಮೀರಿದ್ದೆಂದು" ಪ್ರಶಂಸಿಸಲ್ಪಟ್ಟು ಪತ್ರಿಕೆಯಲ್ಲಿ ಪ್ರಕಟನೆ ಯನ್ನು ಪಡೆಯಿತು. ಇಷ್ಟೇ ಅಲ್ಲದೆ ತಮ್ಮ ಅಭ್ಯಾಸದ ಅವಧಿಯಲ್ಲಿ ಅನೇಕ ಬಹುಮಾನಗಳನ್ನು ಪಡೆದು ತಮ್ಮ ಕಲಾಗುರುಗಳ ಮೆಚ್ಚಿಕೆಗೆ ಪಾತ್ರ ರಾಗಿದ್ದರು.

ತಮ್ಮ ಕಲಾಭ್ಯಾಸವನ್ನು ಮುಗಿಸಿ ಮುಂದೆ ಬೊಂಬಾಯಿಗೆ ಹೋಗಿ ವ್ಯಾಸಂಗಮಾಡಬೇಕೆಂಬ ಅಭಿಲಾಷೆ ಇದ್ದರೂ ಆ ಪರಿಸ್ಥಿತಿಯಲಿ ಸಾಧ್ಯ ವಾಗದೆ ಮೈಸೂರಿನಲ್ಲಿಯೇ ಇದ್ದುಕೊಂಡು ಕೆಲವು ವರ್ಷಗಳಕಾಲ ಸ್ವತಂತ್ರ್ಯ ವಾಗಿ ಚಿತ್ರಕಲೆಯನ್ನು ಮುಂದುವರಿಸಿಕೊಂಡು ಬಂದರು. ಸಾಧ್ಯವಾದೆಡೆ ಗಳಲ್ಲೆಲ್ಲಾ ಪ್ರವಾಸಮಾಡಿ ಸ್ಕಾಕಷ್ಟು ಸಾಧನೆ, ಅಭ್ಯಾಸ ನಡೆಸಿ ಉತ್ತಮ ಮಟ್ಟದ ನೈಸರ್ಗಿಕ ಚಿತ್ರಗಳನ್ನು ಬಿಡಿಸುತ್ತಾ ಬಂದರು. ಇವರ ಚಿತ್ರಗಳ ನೇಕವಕ್ಕೆ ಭಾರತ ಕಲಾಪ್ರದರ್ಶನಗಳಲ್ಲಿ ಬಹುತೇಕ ಬಹುಮಾನಗಳು ದೊರೆತು ಮಾರಾಟದ ಸೌಲಭ್ಯವೂ ಒದಗುತ್ತಾ ಬಂದಿತು. ೧೯೩೪ ರಿಂದ ೪೦ ರವರೆಗೆ ಆರುವರ್ಷಗಳಕಾಲ ಕೊಡೈಕನಾಲ್ ಕಲಾಪ್ರದರ್ಶನದಲ್ಲಿ ಇವರ ಐತಿಹಾಸಿಕಪ್ರಕೃತಿ ಚಿತ್ರಗಳಿಗೆ ನಿರಂತರವಾಗಿ ಪ್ರಥಮ ಬಹುಮಾನಗಳ ಸುರಿಮಳೆಯೇ ಆಯಿತು. ಮೈಸೂರಿನ ದಸರಾ ಪ್ರದರ್ಶನದಲ್ಲಿ ೧೯೪೫ ರಲ್ಲಿ

ಇವರ ಒಂದು ಭಾವಚಿತ್ರಕ್ಕೆ ಶ್ರೀಮದ್ ಯುವರಾಜರ ರಜತಪಾತ್ರೆ ದೊರಕಿತು. ಮೈಸೂರಿನ ಕಲಾವಿದರಿಗೆ ಈ ಪ್ರಶಸ್ತಿ ದೊರೆತದ್ದು ಅದೇ ಪ್ರಪ್ರಥಮ. ಶ್ರೀಯುತರು ಎರಡುಬಾರಿ ಈ ಬಹುಮಾನವನ್ನು ಗಳಿಸಿದ್ದಾರೆ. ಬೊಂಬಾಯಿನ ಕಲಾಶಾಲೆಯ ಸುವರ್ಣಮಹೋತ್ಸವ ಸಂಚಿಕೆಯಲ್ಲಿ ಇವರ "ಬಿಸಿ: ಮಂಡ್ಯ" ಎಂಬ ಜಲವರ್ಣದ ಚಿತ್ರವನ್ನು ಪ್ರಕಟಿಸಿದ್ದುದು ಮೈಸೂರಿನ ಕಲಾವಿದರಿಗೊಂದು ಗೌರವ. ಹೀಗೆಯೇ ಶ್ರೀಯುತರ ಚಿತ್ರ ಪ್ರಗತಿ ಮುಂದುವರಿದು ಇಂದು ಅವರನ್ನು ಖ್ಯಾತಕಲಾವಿದನನ್ನಾಗಿ ಮಾಡಿದೆ. ಅವರ ಇಂದಿನ ಯಶಸ್ಸಿಗೆ ಅವರ ನಿಷ್ಠಾವಂತ ಜೀವನವೇ ಕಾರಣ.

ಚಿತ್ರಕಲಾರಾಧಕರಾದ ಶ್ರೀಯುತರಿಗೆ ಸಂಗೀತಕಲೆಯೂ ಆಕರ್ಷಿಸಿ ಅದರ ಅಭ್ಯಾಸವನ್ನು ನಡೆಸಿದ್ದಾರೆ. ಯಾರೊಡನೆಯೂ ಹೆಚ್ಚಾಗಿ ಬೆರೆಯುವುದಾಗಲೀ ವ್ಯರ್ಥ ಕಾಲ ಕಳೆಯುವುದಾಗಲೀ ಇವರ ಸ್ವಭಾವವಲ್ಲ. ಸತತವಾದ ಅಭ್ಯಾಸಬಲದಿಂದ ಮುಂದೆ ಬಂದ ಶ್ರೀಯುತರು ಈಗಲೂ ಬಿಡುವು ಮಾಡಿಕೊಂಡು ಕಲಾಕೃತಿ ರಚಿಸುತ್ತಲೇ ಬಂದಿದ್ದಾರೆ.

ಬೆಂಗಳೂರಿನ ಕೆಂಪೇಗೌಡ ಪ್ರತಿಮೆಗೆ ಮೂಲ ರೇಖಾ ಚಿತ್ರವನ್ನು ನೀಡಿದವರೂ ಇವರೇ.

ಒಮ್ಮೆ ಬದರಿನಾಥ ಪ್ರವಾಸವನ್ನು ಕೈಕೊಂಡು ದಾರಿಯಲ್ಲಿನ ಹೃಷಿಕೇಶಕ್ಕೆ ಹೋದಾಗ ಅಲ್ಲಿ ಶ್ರೀಯುತರ ಕಲಾಕೃತಿಗಳನ್ನು ನೋಡಿ ಮೆಚ್ಚಿದ ಅಲ್ಲಿನ ಶ್ರೀ ಶಿವಾನಂದಸ್ವಾಮಿಗಳು ಅಲ್ಲಿನ ಪ್ರಾರ್ಥನಾಮಂದಿರದಲ್ಲಿ "ಕಲಾವಿಭೂಷಣ" ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದರು. ಶ್ರೀಯುತರಿಗೆ ಈ ಬಿರುದು ಎಲ್ಲಾ ದೃಷ್ಟಿಯಿಂದಲೂ ಒಪ್ಪುತ್ತದೆ.

ಎನ್. ಹನುಮಯ್ಯ

ಪ್ರಕೃತಿಚಿತ್ರರಚನೆಯಲ್ಲಿ "ವಿಖ್ಯಾತಕಲಾವಿದರಾದ ಪಾಶ್ಚಿಮಾತ್ಯರೆಂದರೆ ಜರ್ಾ ಕಾನ್‌ಸ್ಟೇಬಲ್ ಸಿಜಾನಿ, ಕೊರಟ್, ವಿನ್‌ಸೆಂಟ್ ವ್ಯಾನ್ ಗಾಗ್, ಪಿಕಾಸೋ, ಬ್ರೂಗೆಲ್, ಫ್ರೆಡರಿಕ್ ಜೇವೀನ್, ಟರ್‌ನರ್, ಮೋನೆಟ್, ಗೋಗಿನ್, ಟೈಲರ್ ಮುಂತಾದವರು. ಇವರ ಪ್ರಕೃತಿ ಚಿತ್ರಗಳಲ್ಲಿ ನಾವು ಜೀವಂತ ರೇಖೆಗಳನ್ನೂ ಬಣ್ಣಗಳನ್ನೂ ಕಾಣುವೆವು. ಅಷ್ಟೇ ಅಲ್ಲ; ಮಾನವರ ಬಾಳಿಗೆ ಹೊಂದಿಕೊಳ್ಳುವ ಸ್ವಾಭಾವಿಕತೆಯನ್ನೂ ತೋರಿ

ಸುವ ಅಪೂರ್ವ ಚಿತ್ರಗಳಾಗಿರುತ್ತವೆ ಅವು. ನೈಸರ್ಗಿಕ ಚಿತ್ರಣದಲ್ಲೂ ಸಂಯೋಗ ಸಂವಿಧಾನವಲ್ಲಿ ಸಮರಸದ ಸಾಮರ್ಥ್ಯವು ಕಾಣುವುದು. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ನಾಡಿನಲ್ಲಿ ಆ ಬಗೆಯ ಕಲಾವಿದರು ತೀರಾ ವಿರಳವೆನಿಸುತ್ತದೆ.

ರಾತ್ರಿಯವೇಳೆ ಚಾಮುಂಡಿಬೆಟ್ಟದ ನಂದೀಶನ ಮುಂಭಾಗದಲ್ಲಿ ರಸಿಕ ನಾದವನು ನಿಂತು ಸುಂದರ ನಗರವನ್ನು ವೀಕ್ಷಿಸಬೇಕು. ನಿಶಿಯ ನಭೋ ಮಂಡಲದಲ್ಲಿ ಮೆರೆಯುವ ಲಕ್ಷೋಪಲಕ್ಷ ತಾರೆಗಳಂತೆ ರಾಜಧಾನಿಯನ್ನು ಅಲಂಕರಿಸಿ ಬೆಳಗುವ ವಿದ್ಯುತ್ ದೀಪಸ್ತೋಮ ಕಂಗೊಳಿಸುತ್ತದೆ. ಈ ಭವ್ಯ ನೋಟದ ಒಂದು ಅಪೂರ್ವ ಕಲಾಕೃತಿ ಒಮ್ಮೆ ದಸರಾ ವಸ್ತುಪ್ರದರ್ಶ ನಾಲಯದಲ್ಲಿ ಕಲಾಪ್ರೇಮಿಗಳನ್ನು ಬೆರಗುಗೊಳಿಸಿತ್ತು. ಅದನ್ನು ಕಂಡಾಗ ಲೆಲ್ಲಾ ಆ ದೃಶ್ಯವನ್ನು ಸೃಷ್ಟಿಸಿದ ಕಲಾವಿದರ ಬಗ್ಗೆ ವಿಶ್ವಾಸ, ಗೌರವ ಮೂಡಿಬರುತ್ತದೆ. ಆ ಕಲಾವಿದರು ಮೈಸೂರಿನ ಚಾಮರಾಜ ಕಲಾಶಾಲೆ ಯಲ್ಲಿ ಅಭ್ಯಾಸಮಾಡಿದವರೆಂದಮೇಲಂತೂ ಪ್ರೀತಿ ಗೌರವದ ಜೊತೆಗೆ ಅಭಿ ಮಾನವೂ ಸ್ವಾಭಾವಿಕ. ಅದರ ಕರ್ತೃಗಳೇ ಶ್ರೀ ಹನುಮಯ್ಯನವರು.

ಶ್ರೀಯುತರು ಜನಿಸಿದ್ದು ರಾಜಧಾನಿಯಲ್ಲಿ. ವ್ಯಾಪಾರಿ ಶ್ರೀ ನಾಗಯ್ಯ ನವರು ಇವರ ತಂದೆ. ಮಗನಲ್ಲಿದ್ದ ಕಲಾಸಕ್ತಿಗೆ ಅವರು ಪ್ರೋತ್ಸಾಹ ಕೊಡುತ್ತಾ ಬಂದರು. ಕಲಾವಿದನಾಗಬೇಕೆಂಬ ಬಯಕೆ ಬಾಲ್ಯದಿಂದ ಕೂಡಿ ಬಂದಿತ್ತು. ಅಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೇ ಅವರು ಮದರಾಸಿನ ಪ್ರೌಢ ಕಲಾಪರೀಕ್ಷೆಗಳಲ್ಲಿ ಪ್ರಥಮ ತರಗತಿಯಲ್ಲೇ ಉತ್ತೀರ್ಣರಾದರು.

ಶ್ರೀಯುತರು ರಾಜಧಾನಿಯ ಕೃಷ್ಣರಾಜ ಮೊಹಲ್ಲದ ತೊಗರಿಬೀದಿ ಯಲ್ಲಿನ ತಮ್ಮ ಸ್ವಂತ ಗೃಹದಲ್ಲಿ, ಪುಟ್ಟ ಸಂಸಾರದೊಡನೆ ವಾಸಿಸುವರು. ಇವರ ಮಹಡಿಯ ಕೋಣೆ ಒಂದು ಕಲಾಸಾಮಗ್ರಿಗಳ ಉಗ್ರಾಣ. ನೂರಾರು ಪುಸ್ತಕಗಳು, ಚಿತ್ರ ಪಟಗಳು ಒಂದೆಡೆ ಮುಖ ತೋರುತ್ತವೆ. ಬೇರೊಂದೆಡೆ ನಾನಾ ಕಡೆಯಿಂದ ಬಂದ ಮೆಚ್ಚಿಗೆಯ ಪತ್ರಗಳ ರಾಶಿ ಇಣಿಕಿ ಹಾಕುತ್ತದೆ. ಮಗದೊಂದೆಡೆ ಕುಂಚ ಫಲಕಗಳು ವಿಶ್ರಾಂತಿಹೊಂದಿ ಎಷ್ಟೋ ವರ್ಷಗಳಾದ ವಲ್ಲಾ ಎಂದು ಚಿಂತಿಸುವಂತಿವೆ. ಇವೆಲ್ಲವನ್ನೂ ನೋಡಿದಾಗ ಕಲೆಯಿಂದಲೇ ಜೀವನ ದುರ್ಲಭವೆಂಬುದನ್ನು ಹನುಮಯ್ಯನವರು ಮನಗಂಡಿರುವಂತಿದೆ.

ಶ್ರೀಯುತರಿಗೆ ನಿಸರ್ಗದಲ್ಲಿ ಯಾವುದೂ ಬೇಡವೆನಿಸಲಿಲ್ಲ. ಹಳ್ಳಿಯ ಬದುಕಿನ ಸಹಜ ಚಿತ್ರಣಗಳಾದ ಒಡ್ಡರಬಂಡಿ, ಹುಲ್ಲುಮೆದೆ, ಮುರುಕು ಗುಡಿಸಲು, ಬಣವೆ, ಕೋಳಿ, ಮೇಕೆ, ದನ, ಕುರಿ, ಹೊಲಸು ಗೋಡೆಗಳು, ಬಡವರಬಳಗ ಮುಂತಾದ ಸಾಮಾನ್ಯವಸ್ತುಗಳಲ್ಲಿ ಶ್ರೀಯುತರಿಗೆ ಪಂಚಪ್ರಾಣ. ಜನರಿಗೆ ಪ್ರಿಯವಾದ ಕಲೆಯನ್ನೇ ಸೃಷ್ಟಿಸುವುದರಲ್ಲಿ ಇವರು ಅಗ್ರಗಣ್ಯರು. ೧೯೪೫ ರಲ್ಲಿ ಕಲ್ಕತ್ತ ಚಿತ್ರಪ್ರದರ್ಶನದಲ್ಲಿ ಇವರು ರಚಿಸಿದ ಚಿತ್ರಗಳನ್ನು ನೋಡಿ ಮೆಚ್ಚಿದ ಕಲಾಭಿಮಾನಿ ಡಿ. ಎಫ್. ಸ್ಪೀಕರರು ತಮ್ಮ ಪತ್ರ ಒಂದರಲ್ಲಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ.

ನಮ್ಮವರೇ ಆದ ಡಾ|| ಪಟ್ಟವರ್ಧನರು ನಾಗಪುರದಿಂದ ಹೊಗಳಿ ಪತ್ರ ಬರೆದಿರುವರು.

ಶ್ರೀಯುತರು ' ಕಸದಲ್ಲಿ ರಸವಿದೆ ' ಎಂಬುದನ್ನು ಅರಿತು, ಹಳ್ಳಿಯ ಜೀವನದಲ್ಲಿ ಹೊಸತನವನ್ನು ತೋರಿಸಿಕೊಡಬಲ್ಲ ಸಾಮರ್ಥ್ಯವನ್ನು ತಮ್ಮ ಕುಂಚದ ಮೂಲಕ ತೋರಿಸಿದರು. ಹಳ್ಳಿಯೊಂದರಲ್ಲಿ ಮಳೆಬಂದು ತಗ್ಗಿನಲ್ಲಿ ನಿಂತ ನೀರಿನಲ್ಲಿ ಸುತ್ತಮುತ್ತಣ ಗಿಡಮರ ಬಳ್ಳಿಗಳ ಪ್ರತಿಬಿಂಬದ ದೃಶ್ಯ, ಮಕ್ಕಳು ಕೆಸರಿನಲ್ಲಿ ಆಟವಾಡುವ ದೃಶ್ಯ, ನಮ್ಮ ನಾಡಿನ ಬಡತನವನ್ನು ತೋರಿಸುವ ಮುರುಕು ಮನೆಯ ದೃಶ್ಯ, ನಾಡಿನ ಹೆಸರಾಂತ ಕೇಸರಿ ಬಣ್ಣದ ಚೆನ್ನಕೇಸರಿಮರಗಳ ಚಿತ್ರ, ಆಲದ ಮರವು ತನ್ನ ಬಿಳಲನ್ನು ಬಿಟ್ಟು ಬೇರೂರಿ ನಿಂತು ರವಿಯ ಕಿರಣಗಳು ನಿಬಿಡವಾದ ಎಲೆಗಳ ಸಂದಿನಲ್ಲಿ ತೂರಿಬಂದು ನೆಳಲು ಬೆಳಕನ್ನು ತೋರುವ ರಮ್ಯ ಚಿತ್ರ — ಇವೇ ಮೊದಲಾದ ಪ್ರಕೃತಿಸಹಜ ಚಿತ್ರಗಳನ್ನು ರಚಿಸುವುದರಲ್ಲಿ ಶ್ರೀ ಹನುಮಯ್ಯನವರ ಕುಂಚ ನಿಸ್ಸೀಮವೆನಿಸಿತು.

ಇವರ ಇನ್ನೂ ಕೆಲವು ಚಿತ್ರಗಳನ್ನು ಗಮನಿಸಿದಾಗ ಪ್ರಕೃತಿಯೇ ಮುಂದೆ ಕುಳಿತಿರುವಂತೆ ಕಾಣುತ್ತಿರುತ್ತದೆ. ಒಂದುಕಡೆ ಕಾವೇರಿ ಬಳಸಿ ಹರಿದರೆ ಮತ್ತೊಂದುಕಡೆ ವಿಶಾಲವಾಗಿ ಹರಿಯುತ್ತಾಳೆ. ಒಂದು ಕಡೆ ಕಾಲುವೆಯಂತೆ ನುಸುಳಿ ಹರಿಯುತ್ತಾಳೆ. ಆ ಸೊಂಪಾದ ಗದ್ದೆಯ ಬಯಲು, ದಟ್ಟವಾದ ಮರದ ಸಾಲು, ಸುನೀಲಗಿರಿಗಳು- ಹಕ್ಕಿಪಕ್ಷಿಗಳು ಎಲ್ಲವೂ ಅವರ ಚಿತ್ರದಲ್ಲಿಳಿದು ಆನಂದವನ್ನುಂಟುಮಾಡುತ್ತವೆ.

ಗದ್ದೆ ಬಯಲಿನ ಚಿತ್ರದಲ್ಲಿ ಹಳ್ಳಿಯ ಹೆಂಗೆಳತಿಯರು ಬಾಗಿ ಸಸಿಯನ್ನು ನೆಡುವ ದೃಶ್ಯ ಸೊಗಸಾಗಿದೆ. ಗದ್ದೆಯ ಒಂದು ಪಕ್ಕದ ದಡದಲ್ಲಿ ಬಾಗಿ ತೂಗುವಂತಿರುವ ತೆಂಗಿನ ಮರಗಳ ಗುಂಪು, ಮತ್ತೊಂದು ದಡದಲ್ಲಿ ಮರಗಿಡಗಳು ಕಂಗೊಳಿಸುತ್ತವೆ. ಈ ದಡಗಳ ನಡುವಣ ಬಯಲು ವಿಶಾಲವಾಗಿದೆ. ಇಲ್ಲಿ ಬಣ್ಣಗಳ ಜೋಡಣೆ, ಹೊಂದಾಣಿಕೆ ನೈಜವಾಗಿ ಮೂಡಿಬಂದಿದೆ. ಇಂಥ ದೃಶ್ಯಗಳ ಅನೇಕ ಚಿತ್ರಗಳು ನೂರಾರು ಪ್ರಕೃತಿ ಪ್ರಿಯರನ್ನು ಆಕರ್ಷಿಸಿವೆ.

ಶ್ರೀ ಹನುಮಯ್ಯನವರ ಕೃತಿಗಳಿಗೆ ಮೈಸೂರು ದಸರಾ ಪ್ರದರ್ಶನದಲ್ಲಿ ಅನೇಕ ಬಹುಮಾನಗಳು ದೊರೆತಿವೆ. ಪ್ರಮುಖವಾದವುಗಳು: ೧೯೩೭ ರಲ್ಲಿ "A Roadside village" ಚಿತ್ರಕ್ಕೂ, ೧೯೩೮ ರಲ್ಲಿ "STREET SCENE" ಚಿತ್ರಕ್ಕೂ ೧೯೪೦ ರಲ್ಲಿ "CARVED ENTRANCE" (ಹಳೇಬೀಡು ದೇವಾಲಯದ ಹೆಬ್ಬಾಗಿಲು) ಚಿತ್ರಕ್ಕೂ, ದಸರಾ ಪ್ರದರ್ಶನ ಕಮಿಟಿಯ ಭಂಗಾರದ ಪದಕಗಳು ದೊರೆತವು. ೧೯೩೯ ರಲ್ಲಿ "Paddy Planting" ಪ್ರಕೃತಿ ಚಿತ್ರಕ್ಕೆ ದಿವಂಗತ ಶ್ರೀಮದ್ಯುವರಾಜರ ಬೆಳ್ಳಿ ಕರಂಡವು ಲಭಿಸಿತು. ೧೯೫೬ರ ಅದೇ ಕಲಾ ಪ್ರದರ್ಶನದಲ್ಲಿ ಇವರ 'ಶಿವನ ಸಮುದ್ರದ ಜಲಪಾತ'ದ ಚಿತ್ರಕ್ಕೆ ಕಮಿಟಿಯ ಭಂಗಾರದ ಪದಕವು ಕೊಡಲ್ಪಟ್ಟಿತು. ಇಷ್ಟೂ ಅಲ್ಲದೆ ಬೊಂಬಾಯಿ, ನಾಗಪುರ, ಅಮೃತಸರ, ಹೈದರಾಬಾದ್, ಡೆಹಲಿ, ಕಲ್ಕತ್ತಾ, ಕೊಡೈಕನಾಲ್, ರಾಜಮಹೇಂದ್ರಿ ಚಿತ್ರಪ್ರದರ್ಶನಗಳಲ್ಲಿ ಈವರೆಗೆ ಎಪ್ಪತ್ತೆರಡು ಪ್ರಶಸ್ತಿ ಪತ್ರಗಳೂ, ಕೆಲವು ಬ್ರಾನ್ಜ್, ಬೆಳ್ಳಿ, ಭಂಗಾರದ ಮೆಡಲುಗಳು ಬಂದಿವೆ.

'ಹಿತ್ತಲಗಿಡ ಮದ್ದಲ್ಲ' ಎಂಬತೆ ನಮ್ಮಲ್ಲಿನ ವಸ್ತುಗಳಿಗೆ ನಾವು ಬೆಲೆ ಕೊಡೆವು. ನಮ್ಮ ದೃಷ್ಟಿಯಲ್ಲಿ ಅವೆಲ್ಲಾ ಕಳಪೆ. ನೋಡಲು ಅಲಕ್ಷ್ಯ. ಆದರೆ ಇವರ ಚಿತ್ರಗಳಲ್ಲಿನ ಪ್ರಕೃತಿಸೌಂದರ್ಯವನ್ನು ಮೆಚ್ಚಿದ ಪಾಶ್ಚಿಮಾತ್ಯರು ಶ್ರೀಯುತರ ಚಿತ್ರಗಳೆಲ್ಲವನ್ನೂ ಕೊಳ್ಳುತ್ತಿದ್ದರು. ಮಧ್ಯಮ ವರ್ಗದವರೂ ಸಹ ಕೊಳ್ಳುವಂತಾಗಲೆಂಬ ಔದಾರ್ಯವಿರುವುದರಿಂದ ಇವರ ಕೃತಿಗಳು ಒಮ್ಮೆ ಪ್ರದರ್ಶನಕ್ಕೆ ಹೋದವೆಂದರೆ ತೀರಿತು, ಅನೇಕ ಸಾರಿ ಹಿಂದಿರುಗುವ ಸಂಭವವೇ ಅಪರೂಪ. ಒಮ್ಮೆ ಕಲ್ಕತ್ತಾ ಪ್ರದರ್ಶನದಲ್ಲಿ ಇವರ ಕೃತಿ

ಗಳನ್ನು ಕೊಳ್ಳಲಾಗದೆ ನಿರಾಶೆಗೊಂಡವರಲ್ಲಿ ಮಿ॥ ಡಬ್ಲ್ಯು. ಕೋಪಿಂಗ್ ರವರು ಒಬ್ಬರು.

ನವದೆಹಲಿಯಿಂದ ಮಿಲಿಟೆರಿ ಪ್ರಮುಖರಾಗಿದ್ದ ಮಿ॥ ಟಿ. ಬಿ ಥಾಂಪಸನ್‌ರವರು "I was rather struck with your paintings. They are full of colour" ಎಂದೂ; ಕಲ್ಕತ್ತದ ಪ್ರಮುಖ ಕಲಾಭಿಮಾನಿಯೊಬ್ಬರಾದ ಮಿ॥ ಹೆಚ್. ಕೆ. ವಾಕ್‌ಫೀಲ್ಡರು "I am interested in your oil paintings ...and interested in purchasing a number of them for reproduction purpose" ಎಂದೂ ಮತ್ತೊಬ್ಬ ಕಲಾ ಪ್ರೇಮಿ ಮಿ॥ ಐ. ಡಬ್ಲ್ಯು. ವಾಟ್‌ಸನ್‌ರು ಕೊಳ್ಳಲು ಅವಕಾಶವಾಗದೆ "I greatly admired your paintings; unfortunately by the time I was able to visit the Exhibition they had all been sold"....ಎಂದು ನಿರಾಶೆಯಿಂದ ಬರೆದಿರುವುದನ್ನು ನೋಡಿದರೆ ಶ್ರೀಯುತರ ಪ್ರಕೃತಿ ಕಲಾಕೌಶಲ್ಯ ಅನುಪಮವಾದುದೆಂಬಂತಿದೆ.

ಶ್ರೀ ಹನುಮಯ್ಯನವರು ಅಮೃತಸರದಲ್ಲಿ ನಡೆದ '೨೮'ನೇ ವಾರ್ಷಿಕ ಕಲಾಪ್ರದರ್ಶನದಲ್ಲಿ ತುಂಬಾ ಮೆಚ್ಚಿಗೆಯನ್ನು ಗಳಿಸಿದರು. ಅದಕ್ಕೆ ಸಾಕ್ಷಿಯಾಗಿ ಆ ಪ್ರದರ್ಶನದ ಕೈಹೊತ್ತಿಗೆಯಲ್ಲಿ ಶ್ರೀಯುತರು ಚಿತ್ರಿಸಿದ 'Gold Mohar' ಕೃತಿಯನ್ನು ಮಾತ್ರ ವರ್ಣರಂಜಿತವಾಗಿ ಪ್ರಕಟಮಾಡಿದ್ದಾರೆ. ಮೇಲಾಗಿ ಇವರು ರಚಿಸಿದ 'ಗೇರುಸೊಪ್ಪೆ ಜಲಪಾತಕ್ಕೂ' ಬಹುಮಾನ ಬಂದಿರುವುದು ಸಂತಸದ ಸಂಗತಿ.

ಈ ಕಲಾಪ್ರೌಢಿಮೆಗೆ ಏರಲು ಎಲ್ಲಾ ತೆರನಾದ ಪ್ರೋತ್ಸಾಹ, ಬೆಂಬಲ ಸಹಕಾರ ನೀಡಿದ ಕೀರ್ತಿ ಮಾಜಿ ಮಂತ್ರಿ ಶ್ರೀ ಎಂ. ಎ. ಶ್ರೀನಿವಾಸನ್ನರಿಗೆ ಸಲ್ಲಬೇಕಾಗಿದೆ. 'ಆಸರೆ ಇಲ್ಲದ ಲತೆಯಂತೆ' ಬಳಲುತ್ತಿದ್ದ ಇವರಿಗೆ ಶ್ರೀನಿವಾಸನ್ನರ ನೆರವು ಒಲವು ದೊರೆತದ್ದು ಭಾಗ್ಯವೆಂದೇ ಹೇಳಬೇಕು.

ಶ್ರೀಯುತರ ಪ್ರಕೃತಿಚಿತ್ರಗಳನ್ನು ಯುನೈಟೆಡ್ ಕಿಂಗ್‌ಡಮ್ಮಿನ ಟ್ರೇಡ್ ಕಮಿಷನರಾಗಿದ್ದ ಮಿ॥ ಕೆ. ಇ. ಮ್ಯಾಕೆಂಜೀ, ಮದರಾಸಿನ ಕಲೆಕ್ಟರ್ ಆಗಿದ್ದ ಶ್ರೀಗಳಾದ ಎಸ್. ಜೆ. ಕೃಷ್ಣಸ್ವಾಮಿ, ಐ. ಎ. ಎಸ್., ದಿವಾನ್ ಬಹದ್ದೂರ್ ಮುರಿಗಪ್ಪ ಚೆಟ್ಟಿಯಾರ್, ಶ್ರೀ ಪಟ್ಟಾಭಿ ಸೀತಾ

ರಾಮಯ್ಯ, ಶ್ರೀ ಚಿದಂಬರ ಚೆಟ್ಟಿಯಾರ್ ಮುಂತಾದವರ ಭವನಗಳಲ್ಲೂ ; ಬೆಂಗಳೂರಿನಲ್ಲಿರುವ ಶ್ರೀ ಎಂ. ಎ. ಶ್ರೀನಿವಾಸನ್, ಧರ್ಮಪ್ರಕಾಶ ಶ್ರೀ ಎಲ್. ಎಸ್. ವೆಂಕೋಜಿರಾವ್‌ರಂಥ ಶ್ರೀಮಂತರ ಭವನಗಳಲ್ಲೂ, ನಾಗ ಪುರದ ಮ್ಯೂಸಿಯಂ, ಲಲಿತ ಮಹಲ್, ಜಗನ್‌ಮೋಹನ ಬಂಗಲೆಗಳಲ್ಲೂ, ಬೆಂಗಳೂರಿನ ಅನೇಕ ಐರೋಪ್ಯರ ಮಂದಿರಗಳಲ್ಲಿಯೂ ನಾವು ಕಾಣ ಬಹುದು.

ತಮ್ಮ ಪ್ರತಿಭೆಯನ್ನು ತೋರಿಸಿಕೊಳ್ಳಬೇಕೆಂಬ ಚಪಲ ಶ್ರೀಯು ತರಿಗಿಲ್ಲ. ಅವರ ಕಲೆ ಎಲೆಮರೆಯ ಹೂವಿನಂತೆ. ಅರಣ್ಯ ಗುಡ್ಡಗಾಡುಗಳನ್ನು ಅಲೆದಲೆದು, ಅನೇಕ ಕಷ್ಟಗಳಿಂದ ಪಾರಾಗಿ, ಹೆಚ್ಚಿನ ಅಭ್ಯಾಸ ಬಲದಿಂದ ಪ್ರಕೃತಿಮಾತೆಯ ಹೃದಯಂತರಾಳವನ್ನು ಅರಿತು ಒಲಿಸಿಕೊಂಡ ಧೀರ, ಹಟವಾದಿ ಕಲಾವಿದ ಹನುಮಯ್ಯನವರು. ಹಿಡಿದ ಕೆಲಸವನ್ನು ಸಾಧಿಸುವ ಛಲಗಾರರಿವರು.

ಪಾಶ್ಚಿಮಾತ್ಯ ಪ್ರಕೃತಿ ಚಿತ್ರಕಾರರಲ್ಲಿ ಜಾನ್ ಕಾನ್‌ಸ್ಟೇಬಲನು ಅಗ್ರಗಣ್ಯನು. ಅವನ ತಂದೆಯು ತನ್ನ ಮರಣೋನ್ಮುಖ ಕಾಲದಲ್ಲಿ, ತನ್ನ ಮಗ ಕಾನ್‌ಸ್ಟೇಬಲನಿಗೆ ಒಂದು ಪವಿತ್ರ ಹಿತನುಡಿ ಹೇಳಿದ್ದಾನೆ. ಅದನ್ನು ಪದೇ ಪದೇ ಮೆಲುಕುಹಾಕಬೇಕೆನಿಸುತ್ತದೆ...." John, my boy, paint but paint only for fame, and if your subject is only a pigsty (ಹಂದಿ ಗೂಡು) dignify it." ಇದೇ ತತ್ತ್ವವನ್ನು ಶ್ರೀ ಹನುಮಯ್ಯನವರೂ ತಮ್ಮ ಕಲಾ ಜೀವನದಲ್ಲಿ ಪ್ರತಿಪಾದಿಸುವಂತಿದೆ. ಹಣದ ಆಸೆ ಒಂದೇ ಮುಖ್ಯ ಗುರಿಯಾಗಿದ್ದಿದ್ದರೆ ತನ್ನ ತಂದೆಯಂತೆ ವ್ಯಾಪಾರಿ ಆಗುತ್ತಿದ್ದರೋ ಏನೊ! ಆದರೆ ಪ್ರಕೃತಿಮಾತೆ ಅದಾವುದಕ್ಕೂ ಬಿಟ್ಟು ಕೊಡಲಿಲ್ಲ ತನ್ನ ಕುವರನನ್ನು.

ಶ್ರೀಯುತರು ಜನಾಭಿರುಚಿಯನ್ನು ಮನಗಂಡು ಚಿತ್ರಿಸಿ ಅಪಾರವಾದ ಕೀರ್ತಿಯನ್ನು ಗಳಿಸತೊಡಗಿದ್ದಾರೆ. ಭಾರತದ ಅನೇಕ ಪ್ರಕೃತಿ ಕಲಾವಿದ ರಂತೆ ನಾಲ್ಕು ಗೋಡೆಗಳ ನಡುವೆ ನೈಸರ್ಗಿಕ ಕಲ್ಪನೆಯ ಚಿತ್ರೀಕರಣದ ಕಡೆ ಶ್ರೀಯುತರು ಗಮನಕೊಡದೆ, ಈಗ ಸಾಧಿಸಿರುವ ನೈಸರ್ಗಿಕ ನೈಜತೆಯ ಶಕ್ತಿಯನ್ನು ಸತತ ಉಳಿಸಿಕೊಳ್ಳುವರೆಂಬ ಭರವಸೆ ನಮಗಿದೆ.

ಶ್ರೀ ಎಸ್. ಎನ್. ಸ್ವಾಮಿ

ಇಲ್ಲಿಗೆ ಹತ್ತು ಹನ್ನೆರಡು ವರ್ಷಗಳ ಹಿಂದಿನ ಮಾತು. ನಾವು ಕೆಲವು ಕಲಾ ವಿದ್ಯಾರ್ಥಿಗಳು ನಮ್ಮ ಹಳ್ಳಿಯ ಸಮೀಪದ ಚಿತ್ರದುರ್ಗಕ್ಕೆ ಪ್ರವಾಸ ಇಟ್ಟುಕೊಂಡಿದ್ದೆವು. ಅಲ್ಲಿನ ಕೋಟೆ ಕೊತ್ತಲುಗಳೂ, ಭೀಮಾಕಾರದ ಹೆಬ್ಬಂಡೆ ಗುಂಡುಗಳೂ, ಕಲಾಪೂರ್ಣವಾದ ಗುಡಿಗೋಪುರಗಳೂ, ರಮ್ಯ ಪುಷ್ಕರಣಿಗಳೂ, ಬತೇರಿಗಳೂ ನಿತ್ಯವೂ ಸಹಸ್ರಾರು ಪ್ರವಾಸಿಗಳನ್ನು ಆಕರ್ಷಿಸುವಂತೆ ನಮ್ಮ ಮನಸ್ಸನ್ನು ಸೆಳೆದುದರಲ್ಲಿ ಆಶ್ಚರ್ಯವೇನಿಲ್ಲ. ಬಸ್.

ನಿಲ್ದಾಣದಿಂದ ಮುಂದೆ ಉನ್ನತಾಕಾರದ ರಂಗಯ್ಯನ ಹೆಬ್ಬಾಗಿಲನ್ನು ಹಾದು ದೊಡ್ಡಪೇಟೆಯಲ್ಲಿ ಮುಂದುವರಿಯುವಾಗ ಉಚ್ಚಂಗಿ ಎಲ್ಲಮ್ಮನ ದೇವಾಲಯದ ಬಲಗಡೆಯಲ್ಲಿದ್ದ ನವೋದಯ ಪ್ರೆಸ್ಸಿನ ಕಡೆ ನಮ್ಮ ದೃಷ್ಟಿ ಹರಿಯಿತು. ಅಲ್ಲಿ ಈಗಿನ ಪ್ರಸಿದ್ಧ ಸಾಹಿತಿಗಳಾದ 'ತರಾಸು' ಅವರು ಹಲವು ಮಿತ್ರರೊಂದಿಗೆ ಯಾವುದೋ ರಸಿಕ ಸಂಭಾಷಣೆಯಲ್ಲಿದ್ದವರು ಮೈಸೂರಿನಿಂದ ಬಂದ ನಮ್ಮನ್ನು ಕಂಡು ಆದರದಿಂದ ಮಾತನಾಡಿಸಿದರು. ಮೇಜಿನಮೇಲಿದ್ದ 'ಚೇತನ' ಮಾಸಿಕದ ಪುಟಗಳನ್ನು ತಿರುವಿಹಾಕುವಾಗ ಕಲಾಪೂರ್ಣವಾದ ಆ ಪತ್ರಿಕೆಯ ಸಂಪಾದಕ ಮಂಡಲಿಯ ಪಟ್ಟಿಯನ್ನು ನೋಡಿದಾಗ ಕಲಾ ಸಂಪಾದಕರಾಗಿ ಶ್ರೀ ಎಸ್. ಎನ್. ಸ್ವಾಮಿಯವರ ಹೆಸರನ್ನು ಕಂಡೆವು. ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯ ವಿದ್ಯಾರ್ಥಿಗಳಾಗಿದ್ದ ನಮಗೆ ತಕ್ಷಣ ನಮ್ಮ ಕಲಾಗುರುಗಳಾಗಿದ್ದ ಶ್ರೀ ಎಸ್. ನಂಜುಂಡಸ್ವಾಮಿಗಳ ನೆನಪಾದುದು ಸಹಜ. ಆದರೆ ಪತ್ರಿಕೆಯ ಸಂಪಾದಕರಾಗಿದ್ದ 'ತರಾಸು.' ಅವರು ಇವರು ಶ್ರೀ ಎಸ್. ನರಸಿಂಹಸ್ವಾಮಿಯವರೆಂದೂ, ಮೈಸೂರಿನ ಉತ್ತಮ ಕಲಾವಿದರಲ್ಲಿ ಇವರೂ ಒಬ್ಬರೆಂದೂ ಅವರ ವಿಷಯವಾಗಿ ಸವಿಸ್ತಾರವಾಗಿ ಹೇಳಿದರು. ಶ್ರೀ ಎಸ್. ಎನ್. ಸ್ವಾಮಿಯವರ ಕಲಾ ವೈವಿಧ್ಯವನ್ನು ಹೆಚ್ಚು ತಿಳಿಯಬೇಕಾದರೆ ಇರ್ವಿನ್ ರಸ್ತೆಯಲ್ಲಿರುವ ಅವರ ಮನೆಯ ಮಹಡಿಯಲ್ಲಿನ ರೇಖಾಚಿತ್ರಗಳನ್ನು ನೋಡಬೇಕೆಂದು ತಿಳಿಸಿ ನಮ್ಮ ಕುತೂಹಲವನ್ನು ಕೆರಳಿಸಿದರು.

ಮೈಸೂರಿಗೆ ಮರಳಿದನಂತರ 'ಚೇತನ' ಪುಸ್ತಕಾಲಯದಲ್ಲಿ ಶ್ರೀ ಸ್ವಾಮಿಗಳು ಬರೆದ ಗಾಂಧೀಜಿ, ಮಹದೇವ ದೇಸಾಯಿ ಮುಂತಾದವರ ರೇಖಾಚಿತ್ರದ ಪ್ರತಿಗಳು ನೋಡಲು ದೊರೆತವು. ಆ ಚಿತ್ರಗಳಲ್ಲಿ ಶ್ರೀಯುತರ ರೇಖಾವೈಖರಿ ಅಚ್ಚರಿಯನ್ನುಂಟುಮಾಡಿತು. ಕೇವಲ ಕೆಲವೇ ಗೆರೆಗಳಲ್ಲಿ ಸಜೀವ ಕಳೆಯನ್ನು ಭಾವಚಿತ್ರಗಳಲ್ಲಿ ಅವರು ಮೂಡಿಸಿದ್ದರು. ಬಾಪೂಜಿಯವರ ಸಾತ್ವಿಕ ಸ್ವಭಾವ ಆ ಮುಖದಲ್ಲಿ ಹೊರಹೊಮ್ಮುವಂತೆ ಕಾಣುತ್ತಿತ್ತು. ಅವರ ಮುಗ್ಧ ನೋಟ, ಸುಕ್ಕುಗೆನ್ನೆ, ಅರೆ ಉದುರಿದ ತಲೆಗೂದಲು, ವಿಶಾಲವಾದ ಲಲಾಟ, ಎಲ್ಲಕ್ಕೂ ಅಗಲವಾಗಿ ತೋರುವ ಕರ್ಣಗಳು, ಎದ್ದು ತೋರುವ ಸುಲೋಚನ, ಮೈಮೇಲೆ ಶುಭ್ರವಾದ ಶ್ವೇತವಸ್ತ್ರದ ಹೊದಿಕೆ

ಮುಂತಾದುವು ಬಹು ಸೂಕ್ಷ್ಮವಾಗಿ ಬಿಡಿಸಲ್ಪಟ್ಟಿದ್ದವು. ಹಾಗೆಯೇ ಶ್ರೀ ಮಹದೇವ ದೇಸಾಯಿಯವರ ಧೀರ ಗಂಭೀರ ವ್ಯಕ್ತಿತ್ವ ವ್ಯಕ್ತವಾಗುವಂತೆ ಚಿತ್ರಿಸಲ್ಪಟ್ಟಿತ್ತು. ಶ್ರೀ ಸ್ವಾಮಿಯವರ ಕಲಾಕೌಶಲವನ್ನು ಅಂದು ನೋಡಿ ಮೆಚ್ಚಿಕೊಂಡ ನಾನು ಅಂದಿನಿಂದ ಇಂದಿನವರೆವಿಗೂ ಅವರ ಕಲಾ ಪ್ರಗತಿಯನ್ನು ಅವಲೋಕಿಸುತ್ತಲೇ ಬಂದಿದ್ದೇನೆ. ಅವರ ಖ್ಯಾತಿಗೆ ತಲೆದೂಗಿದ್ದೇನೆ.

'ಸ್ವರ್ಣಕಲಾ ನಿಪುಣ'ರೆಂದು ಬಿರುದನ್ನು ಪಡೆದಿರುವ ಶಿಲ್ಪ ಕಲಾ ಪಿತಾಮಹ ಶ್ರೀ ಸಿಂಗಣ್ಣಾಚಾರ್ಯರ ಪುತ್ರರಾಗಿ ಇಂದಿಗೆ ಐವತ್ತುಮೂರು ವರ್ಷಗಳ ಹಿಂದೆ ಶ್ರೀ ಸ್ವಾಮಿಯವರು ಮೈಸೂರಿನಲ್ಲಿ ಜನಿಸಿದರು ಬಾಲ್ಯದಿಂದಲೂ ಕಲೆಯ ಒಂದು ಮಧುರ ಸನ್ನಿವೇಶದಲ್ಲಿ ಬೆಳೆದುಬಂದ ಇವರಿಗೆ ಕಲೆಯಲ್ಲಿ ಒಳ್ಳೆಯ ಆಸಕ್ತಿಮೂಡಲು ಕಾರಣವಾಯಿತು. ತಂದೆಯವರು ಕಡೆಯುತ್ತಿದ್ದ ಮೂರ್ತಿಗಳನ್ನು ನೋಡಿ ನೋಡಿ ತಾವೂ ಒರ್ವ ಕಲೆಗಾರರಾಗಬೇಕೆಂಬ ಮಹದಾಸೆ ಅಂಕುರಿಸಿತು. ತಂದೆಯವರು ಶಿಲ್ಪಕಲೆಯಲ್ಲಿ ಮುಂಬುವರೆದಿದ್ದರೆ ತಾವು ರೇಖಾಚಿತ್ರಗಳನ್ನು ಅಭ್ಯಸಿಸುತ್ತಾ ಬಂದರು. ಹಿಂದೆ ಪುರಭವನದಲ್ಲಿ ನಗರದ ಪೌರಸಭೆಯವರು ವಸ್ತುಪ್ರದರ್ಶನವೊಂದನ್ನು ಪ್ರತಿವರ್ಷವೂ ನಡೆಸುತ್ತಿದ್ದರು. ತಮ್ಮ ಹದಿನೈದನೆ ವಯಸ್ಸಿನಲ್ಲಿ ಶ್ರೀ ಸ್ವಾಮಿಯವರು ತಮಗೆ ದೊರೆತ ರಜತ ಪಾರಿತೋಷಿಕದಿಂದ ಸ್ಫೂರ್ತಿಗೊಂಡು ಇನ್ನೂ ಹೆಚ್ಚು ಶ್ರದ್ಧೆಯಿಂದ ತಮ್ಮ ಕಲಾಭ್ಯಾಸವನ್ನು ಮುಂದುವರಿಸಿ, ಪಾರ್ಟ್ ಟೈಂ ವಿದ್ಯಾರ್ಥಿಯಾಗಿ ಚಾಮರಾಜ ಕಲಾಶಾಲೆಯಲ್ಲಿ ವ್ಯಾಸಂಗ ಮಾಡತೊಡಗಿದರು. ಆಗ ಶ್ರೀ ಕೇಶವಯ್ಯನವರಂಥ ಪ್ರಸಿದ್ಧ ಕಲಾವಿದರು ಕಲಾಧ್ಯಾಪಕರಾಗಿದ್ದರು.

ಶ್ರೀ ಸಿಂಗಣ್ಣಾಚಾರ್ಯರಿಗೆ ತಮ್ಮ ಮಗನನ್ನು ಒಬ್ಬ ಪದವೀಧರನನ್ನಾಗಿ ಮಾಡಬೇಕೆಂದು ಮೊದಲಿನಿಂದಲೂ ಆಸಕ್ತಿ ಇದ್ದಿತು. ಆದರೆ ಶ್ರೀ ಸ್ವಾಮಿಯವರ ಅತೀವವಾದ ಕಲಾಭಿರುಚಿ ವಿದ್ಯಾಭ್ಯಾಸಕ್ಕೆ ಅಡ್ಡಿಯನ್ನು ತಂದೊಡ್ಡಿತು. ಮೈಸೂರಿನ ಮಿಷನ್ ಹೈಸ್ಕೂಲಿನಲ್ಲಿ ಮೆಟ್ರಿಕ್ ಪರೀಕ್ಷೆಯವರೆಗೂ ಓದಿ, ವ್ಯಾಸಂಗವನ್ನು ಕೈಬಿಟ್ಟರು. ಅನಂತರ ಮದರಾಸಿನ ಕಲಾಪರೀಕ್ಷೆಗಳಿಗೆ ಖಾಸಗಿಯಾಗಿ ಕೂಡುತ್ತಾ ಬಂದರು. ಈ ಮಧ್ಯೆ ತಂದೆಯವರ ಜೊತೆಯಲ್ಲಿ ಅರಮನೆಗೆ ಹೋಗಿಬರುವ ಒಂದು ಸುಯೋಗವೂ,

ಆ ಮೂಲಕ ಆಗಿನ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ದೃಷ್ಟಿಗೆ ಬೀಳುವ ಸೌಭಾಗ್ಯವೂ ಇವರ ಪಾಲಿಗೆ ದೊರಕಿತು. ಇವರ ಕೆಲವು ರೇಖಾಚಿತ್ರಗಳು ಅರಸರ ದೃಷ್ಟಿಗೂ ಬೀಳದಿರಲಿಲ್ಲ. ಒಮ್ಮೆ ಪ್ರಭುಗಳು ಇರ್ವಿನ್ ರಸ್ತೆಯ ಮೂಲಕ ಗೆಸ್ಟ್‌ಹೌಸಿನ ಕಡೆ ತಮ್ಮ ಕಾರಿನಲ್ಲಿ ಹೋಗು ತ್ತಿದ್ದಾಗ ಶ್ರೀ ಸ್ವಾಮಿಯವರು ಕೆಲವು ಗೆಳೆಯರೊಂದಿಗೆ ಮನೆಯಮುಂದೆ ಹರಟೆ ಕೊಚ್ಚುತ್ತಾ ನಿಂತಿರುವುದು ಅದರ ದೃಷ್ಟಿಗೆ ಬಿದ್ದಿತು. ಪ್ರಭುಗಳನ್ನು ಕಾಣುತ್ತಿದ್ದಂತೆಯೇ ಸ್ವಾಮಿಯವರು ಮನೆಯೊಳಗೆ ಧಾವಿಸಿ ಅಡಗಿ ಕೊಂಡರು. ಆದರೆ ಅಷ್ಟಕ್ಕೆ ಬಿಡದೆ ಅವರನ್ನು ಅರಮನೆಗೆ ಕರೆಯಿಸಿ ಹಾಗೆಲ್ಲಾ ಕಾಲಹರಣ ಮಾಡದೆ ಕಲಾಭ್ಯಾಸದಲ್ಲಿ ತೊಡಗಬೇಕೆಂದು ಪ್ರಭು ಗಳು ಬುದ್ಧಿ ಹೇಳಿ, ಆ ಕೂಡಲೆ ಒಂದು ಚಿತ್ರವನ್ನು ರಚಿಸಿ ತರಬೇಕೆಂದು ಆಜ್ಞಾಪಿಸಿದರು. ಶ್ರೀ ಸ್ವಾಮಿಯವರು ಸೊಗಸಾದ ಚಿತ್ರವನ್ನು ಬರೆದು ಅವರಿಗೆ ತೋರಿಸಿದಾಗ ಅದನ್ನು ಬಹುವಾಗಿ ಮೆಚ್ಚಿಕೊಂಡು ಸ್ವಲ್ಪ ಜೇಬು ಹಣ (Pocketmoney) ವನ್ನೂ ಕೊಟ್ಟು ಬೆನ್ನುತಟ್ಟಿದರು. ಅಷ್ಟೇ ಅಲ್ಲದೆ ಬೊಂಬಾಯಿಯಲ್ಲಿ ಶ್ರೀಯುತರು ಕಲಾವ್ಯಾಸಂಗವನ್ನು ನಡೆಸುವಂತೆ ಹೇಳಿ ಆ ವೆಚ್ಚವನ್ನು ತಾವೇ ವಹಿಸಿಕೊಂಡರು. ಬೊಂಬಾಯಿಗೆ ಆಗಾಗ ಹೋದಾಗಲೂ ಕೂಡ ಅವರು ಶ್ರೀ ಸ್ವಾಮಿಯವರನ್ನು ಕರೆಸಿ ಪ್ರೋತ್ಸಾ ಹದ ಮಾತುಗಳನ್ನೂ, ಜೇಬುಹಣವನ್ನೂ ಕೊಟ್ಟು ಬರುತ್ತಿದ್ದರಂತೆ. ಹೀಗೆ ಶ್ರೀಮನ್ ಮಹಾರಾಜರ ಪ್ರೋತ್ಸಾಹವನ್ನು ಪಡೆಯಲು ಶ್ರೀ ಸ್ವಾಮಿಯವರ ಕಲಾಸಕ್ತಿಯೇ ಕಾರಣವೆನ್ನಬೇಕು.

೧೯೩೦ ರಲ್ಲಿ ಬೊಂಬಾಯಿಯಲ್ಲಿ ಶ್ರೀ ಸ್ವಾಮಿಯವರು ಕಲಾ ವ್ಯಾಸಂಗವನ್ನು ಪ್ರಾರಂಭಿಸಿದರು. ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಶಾಲೆಯಲ್ಲಿ ಕಲಾವಿದ ಧುರಂಧರ್ ಅವರ ಶಿಷ್ಯರಾಗಿ ಕಲಾಭ್ಯಾಸವನ್ನು ಮುಂದುವರಿಸುತ್ತಿದ್ದಾಗ, ಸುಪ್ರಸಿದ್ಧ ಕಲಾವಿದರನೇಕರ ಪರಿಚಯ ಇವರಿಗೆ ದೊರಕಿತು. ಅಲ್ಲಿನ ಆರ್ಟ್ಸ್ ಸೊಸೈಟಿಯಲ್ಲಿ ಖ್ಯಾತ ಕಲಾವಿದರಾದ ಸರ್ ದೇಶಾಯಿ, ಹಾಲ್‌ಡಸ್‌ಕರ್, ಪಿತಾವಾಲ ಮತ್ತು ಕರ್ಮರ್‌ಕರ್ ಮುಂತಾ ದವರು ಪ್ರತಿ ಭಾನುವಾರ ಸೇರುತ್ತಿದ್ದರು. ಅಲ್ಲಿಗೆ ಶ್ರೀ ಸ್ವಾಮಿಯವರೂ ಸದಸ್ಯರಾದರು. ಅಲ್ಲಿಗೆ ಬರುತ್ತಿದ್ದ ಭಾವಚಿತ್ರಗಾರರಾದ ಎ. ಎಕ್ಸ್.

ಟಿಂಡಾಡ್ ಎಂಬುವರು ಭಾವಚಿತ್ರ ಕಲೆಯ ಬಗ್ಗೆ ತುಂಬ ಉತ್ತಮ ಸಲಹೆಗಳನ್ನು ಶ್ರೀಯುತರಿಗೆ ನೀಡುತ್ತಾ ಬಂದರು. ಹೀಗೆ ಈ ಎಲ್ಲಾ ಹಿರಿಯ ಕಲಾವಿದರ ಸಹವಾಸ, ಸಂಪರ್ಕ ಶ್ರೀಯುತರಿಗೆ ದೊರೆತದ್ದು ಭಾವಚಿತ್ರ ರಚನೆಯಲ್ಲಿ ಒಳ್ಳೆಯ ದಾರಿ ತೋರಿದಂತಾಯಿತು.

ಶ್ರೀ ಎಸ್. ಎನ್. ಸ್ವಾಮಿಗಳು ಇಜ್ಜಲಿನಿಂದ ಬಿಡಿಸಿದ ಮಹಾರಾಷ್ಟ್ರ ವನಿತೆಯೊಬ್ಬಳ My model ಎಂಬ ಭಾವಚಿತ್ರಕ್ಕೆ ಸಿಮ್ಲಾ ಕಲಾಪ್ರದರ್ಶನದಲ್ಲಿ ಸುವರ್ಣ ಪದಕ ಬಂದುದನ್ನು ಕಂಡು ಅವರ ಮಿತ್ರ ಮ್ಯಾಕ್‌ಮಿಲನ್ ಎಂಬುವರು, ಆ ಚಿತ್ರದ ರೂಪದರ್ಶಿಯ ಪರಿಚಯವನ್ನು ಮಾಡಿಕೊಡಬೇಕೆಂದು ಪೀಡಿಸತೊಡಗಿದರು. ಶ್ರೀ ಸ್ವಾಮಿಗಳು ಪರಿಚಯ ಮಾಡಿಕೊಟ್ಟ ಮೇಲೆ ಹದಿನೈದು ದಿನಗಳ ಕಾಲ ಆ ಮಿತ್ರ ನಾಪತ್ತೆಯಾದನು. ಒಮ್ಮೆ ಬೀಚಿನಲ್ಲಿ, ಶ್ರೀಯುತರು ಕೆಲವು ರೇಖಾಚಿತ್ರಗಳನ್ನು ಬಿಡಿಸುತ್ತಿದ್ದಾಗ ಇದ್ದಕ್ಕಿದ್ದಹಾಗೆ ಆ ಮಹರಾಷ್ಟ್ರವನಿತೆಯೂ, ತಮ್ಮ ಮಿತ್ರನೂ ಜೊತೆಯಲ್ಲಿ ಇದ್ದುದನ್ನು ಕಂಡು ಅವನ ವರ್ತನೆಯ ಬಗ್ಗೆ ಬೇಸರಪಟ್ಟರು. ಅದೇ ವರ್ಷಾಂತ್ಯದಲ್ಲಿ ಸ್ನೇಹಿತನ ಇಪ್ಪತ್ತು ಮೂವತ್ತು ಆಕೆಯ ರೂಪದರ್ಶತ್ವದ ಪೂರ್ಣಾಕೃತಿಯ ಭಾವಚಿತ್ರಗಳಿಗೆ ಸುವರ್ಣ ಪದಕಗಳು ಲಭಿಸಿ ಆತನ ಮಿತ್ರರು 'ಟಾಜ್‌ಮಹಲ್ ಹೋಟೆಲ್'ನಲ್ಲಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ಸ್ವಾಮಿಯವರೂ ಆಹ್ವಾನಿತರಾಗಿ ಹೋಗಿದ್ದಾಗ ಆ ಮಿತ್ರ ತಮ್ಮ ಈಗಿನ ಪ್ರಗತಿಗೆ ಶ್ರೀ ಸ್ವಾಮಿಯವರೇ ಕಾರಣಕರ್ತರೆಂದು ಪ್ರಶಂಸಿಸುವುದನ್ನೂ ಮರೆಯಲಿಲ್ಲ. ಶ್ರೀ ಸ್ವಾಮಿಯವರ 'ಮೈ ಮಾಡಲ್' ಕೃತಿಗೆ ಮೈಸೂರಿನ ದಸರಾ ಕಲಾಪ್ರದರ್ಶನದಲ್ಲಿ ದಿವಂಗತ ಎಸ್. ಜಿ. ಶಾಸ್ತ್ರಿಗಳವರ ಬಹುಮಾನವೂ ದೊರಕಿತು.

ಇವರ ಕಲಾಗುರುಗಳಾದ ದಿವಂಗತ ಧುರಂಧರ್ ಅವರು ಶ್ರೀ ಸ್ವಾಮಿಗಳು ನವುರಾಗಿ ಬಿಡಿಸಿದ ಬೇಲೂರು ಹಳೇಬೀಡುಗಳ ಶಿಲಾಬಾಲಿಕೆಯರ ರೇಖಾಚಿತ್ರಗಳನ್ನು ನೋಡಿ ಮೆಚ್ಚಿಕೊಂಡು, ಶೀಘ್ರರೇಖಾ (Rapid Sketches)ಚಿತ್ರಗಳನ್ನು ಅಭ್ಯಸಿಸಲು ಬೊಂಬಾಯಿನ ಚೋರ್ ಬಜಾರಿಗೆ ನಿತ್ಯವೂ ಹೋಗಿಬರುವಂತೆ ಸಲಹೆ ಕೊಟ್ಟರು. ಶ್ರೀ ಸ್ವಾಮಿಗಳವರು ಅಲ್ಲಿ ಅನೇಕ ಪುಸ್ತಕಗಳನ್ನು ಶೀಘ್ರ ರೇಖಾಚಿತ್ರಗಳಿಂದ ತುಂಬುತ್ತಾ ಬಂದರು,

ಮದರಾಸಿನ ಕಲಾಪ್ರದರ್ಶನದಲ್ಲಿ ಇಂಥ ಇವರ ಕೃತಿಗೆ ಬಹುಮಾನ ಬಂದಿತು. ಕಲಾವಿದ ಸರ್ ದೇಸಾಯಿಯವರು ಶ್ರೀಯುತರನ್ನು ಮನೆಯಲ್ಲೇ ಇಟ್ಟುಕೊಂಡು ಪ್ರೀತಿ ವಿಶ್ವಾಸವನ್ನು ತೋರಿಸುತ್ತಾ ಭಾವಚಿತ್ರಗಳ ರಚನೆಗಳಲ್ಲಿ ಬೇಕಾದ ವರ್ಣ, ತಂತ್ರಾದಿಗಳನ್ನು ಶ್ರೀಯುತರ ಹೃದಯಕ್ಕೆ ತುಂಬುತ್ತಾ ಬಂದರು. ಮೈಸೂರಿನವರಾಗಿ ಮಹರಾಷ್ಟ್ರೀಯರ ನಡುವೆ ಅನೇಕ ಸಿಹಿಕಹಿಗಳನ್ನು ಶ್ರೀ ಸ್ವಾಮಿಯವರು ಕಂಡಿದ್ದಾರೆ.

ಬೊಂಬಾಯಿಯಲ್ಲಿ ಭಾವಚಿತ್ರರಚನಾ ಸಾಮರ್ಥ್ಯದಲ್ಲಿ ಕೀರ್ತಿಶಿಖರವನ್ನೇರಿದ್ದವರೆಂದರೆ 'ಅಗಸ್ಕರ್' ಎಂಬ ಕಲಾವಿದರು. ಆತ ಮಡಿದಾಗ ಅವರ ರೇಖಾಚಿತ್ರಗಳು ಮತ್ತೆ ದೊರೆಯುವುದಿಲ್ಲವೆಂದು ಅನೇಕ ಹಿರಿಯ ಕಲಾವಿದರು ಅವುಗಳನ್ನು ಕದ್ದುಕೊಂಡು ಹೋದರಂತೆ. ಇವರು ಶ್ರೀ ದುರಂಧರರ ಪರಮಮಿತ್ರರು. ಇಂಥ ಕಲಾವಿದರ ಸಂಪರ್ಕವೂ ಶ್ರೀ ಸ್ವಾಮಿಯವರಿಗಿದ್ದಿತು. ಅವರ ಸ್ಟುಡಿಯೋವಿಗೆ ಇವರು ಹೋಗಿಬರುತ್ತಿದ್ದಾಗ "ಸೀಸದ ಕಡ್ಡಿಯನ್ನು ಹಿಡಿಯಲು ಬಾರದಿದ್ದರೆ ಕುಂಚ ಹಿಡಿಯಲು ಎಲ್ಲಿ ಬಂದೀತು!" ಎಂದು ಅವರು ರೇಖಾಚಿತ್ರದ ಮಹತ್ವವನ್ನು ಹೇಳುತ್ತಾ ಬಂದರು. ಇಜ್ಜಲಿನಲ್ಲಿ ಆಗಾಸ್ಕರ್ ಅವರು ಭಾವಚಿತ್ರವನ್ನು ಬಿಡಿಸುತ್ತಿದ್ದಾಗ ಅಸಮರ್ಪಕವಾದರೆ ಹರಿದು ಬಿಸಾಡಿಬಿಡುತ್ತಿದ್ದರಂತೆ. ಇದರಿಂದ ಅವರು ರೇಖಾವಿನ್ಯಾಸಕ್ಕೆ ಅದೆಷ್ಟು ಬೆಲೆ ಕೊಡುತ್ತಿದ್ದರೆಂಬುದು ಶ್ರೀಯುತರ ಮನಸ್ಸಿನಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿತು.

ಬೊಂಬಾಯಿಯಲ್ಲಿ ವ್ಯಾಸಂಗವನ್ನು ಮುಗಿಸಿ ಮರಳಿದನಂತರ, ೧೯೩೪ ರಲ್ಲಿ ವಿಶ್ವಕವಿ ರವೀಂದ್ರರ ಭಾವಚಿತ್ರಗಳನ್ನು ಛಾಯಾಚಿತ್ರ ಒಂದರ ಆಧಾರದಿಂದ ರಚಿಸಿ, ಅದನ್ನು ಕವಿವರರಿಗೆ ಸಹಿಗಾಗಿ ಕಳುಹಿಸಿಕೊಟ್ಟರು. ಸಹಿಯೊಡನೆ ಚಿತ್ರ ಹಿಂದಿರುಗಿದಾಗ "ಜಗತ್ತಿನ ಹಿರಿಯ ವ್ಯಕ್ತಿಗಳ ಭಾವಚಿತ್ರಗಳನ್ನು ರಚಿಸಿ ಕೀರ್ತಿ ಪಡಿಯಿರೆಂಬ" ಸಂದೇಶವೂ ಕಾವ್ಯರ್ಷಿಗಳಿಂದ ಬಂದಿತು. ಅಲ್ಲಿಂದೀಚೆಗೆ—ಶ್ರೀ ಸ್ವಾಮಿಯವರ ಕಲಾವಾಹಿನಿ ಹೆಚ್ಚು ಉತ್ಸಾಹದಿಂದ ಹರಿಯತೊಡಗಿ ಸಾಮ್ರಾಟ-ಸಾಮ್ರಾಜ್ಞಿಯರನ್ನೂ, ರಾಜಕೀಯ ಧುರೀಣರನ್ನೂ, ತತ್ತ್ವಜ್ಞಾನಿಗಳನ್ನೂ, ಕವಿ ಕುಲತಿಲಕರನ್ನೂ, ನಾಟಕ ಲೇಖಕರನ್ನೂ, ಮಹಾವಿಜ್ಞಾನಿಗಳನ್ನೂ, ಸುಪ್ರಸಿದ್ಧ ನಟನಟಿಯ

ರನ್ನೂ ಭಾವಚಿತ್ರಗಳ ವಸ್ತುವಾಗಿ ಬಳಸಿಕೊಂಡು ಚಿತ್ರರಚನೆಯಲ್ಲಿ ಯಶಸ್ಸನ್ನು ಪಡೆದರು. ಯುದ್ಧ ಸಮಯದಲ್ಲೂ, ಅಂಚೆ ಅಡಚಣೆಗಳಿಲ್ಲದಂತೆ ಭಾವಚಿತ್ರಗಳನ್ನು ತರಿಸಿಕೊಳ್ಳುವುದೂ, ಇವರು ರಚಿಸಿದ ಭಾವಚಿತ್ರಗಳನ್ನು ಸಹಿಗಾಗಿ ಕಳಿಸಿಕೊಡುವುದೂ ಸುಸೂತ್ರವಾಗಿ ನಡೆಯುತ್ತಾ ಬಂದುದು ಶ್ರೀ ಸ್ವಾಮಿಯವರ ಜಾಣ್ಮೆಯನ್ನೂ, ಸಾಹಸವನ್ನೂ ವ್ಯಕ್ತಪಡಿಸುತ್ತದೆ. ಶ್ರೀಯುತರು ರಚಿಸಿದ ಪ್ರಸಿದ್ಧ ಭಾವಚಿತ್ರಗಳಲ್ಲಿ ಹಿಟ್ಲರ್ 'ಚೆಂಬರ್‌ಲೀ, ಮುಸಲೊನಿ, ಅಂತೋನಿ, ಈರ್ಡ, ಚರ್ಚಿಲ್, ಲೆನಿನ್, ಷಾ, ಸರ್‌ಆಲಿವರ್ ಲಾಡ್ಜ್, ಬರ್ಟ್ರಾಂಡ್ ರಸೆಲ್, ಹ್ಯಾವಲಾಕ್ ಇಲ್ಲಿಸ್, ರೋಮೆ ರೋಲಾ ಮುಂತಾದವರ ಚಿತ್ರಗಳು ಮುಖ್ಯವಾದವುಗಳು.

೧೯೪೧ರಲ್ಲಿ ಶ್ರೀ ಸ್ವಾಮಿಯವರು ವಾರ್ಧಾಕ್ಕೆ ಹೋಗಿ ಬಾಪೂಜಿಯವರ ದರ್ಶನವನ್ನು ಪಡೆದು, ಪೂಜ್ಯರ ಭಾವಚಿತ್ರವನ್ನು ವರ್ಣಗಳಲ್ಲಿ ಬಿಡಿಸಿದರು. ಅದನ್ನು ಮೆಚ್ಚಿಕೊಂಡ ಬಾಪೂಜಿಯವರು ಆ ಕಲಾಕೃತಿಯ ಮೇಲೆ ಗುಜರಾತಿನಲ್ಲಿ 'ನಿಜವಾದ ಕಲೆ ಅಮರವಾದುದು' (True art is immortal), ಎಂದು ಬರೆದಿದ್ದಾರೆ. ಒಮ್ಮೆ ಮೈಸೂರಿಗೆ ಸಂದರ್ಶನ ನೀಡಿದ ಲಾರ್ಡ್ ಮೌಂಟ್‌ಬೇಟನ್ ಅವರು ಈ ಕಲಾಕೃತಿಯನ್ನು ಬಹುವಾಗಿ ಮೆಚ್ಚಿಕೊಂಡ ಪರಿಣಾಮವಾಗಿ ಶ್ರೀ ಸ್ವಾಮಿಗಳನ್ನು ದೆಹಲಿಗೆ ಕರೆಸಿ ತಮ್ಮ ಭಾವಚಿತ್ರವನ್ನು ಬಿಡಿಸಲು ಅವಕಾಶ ಇತ್ತರು. ಗಾಂಧೀಜಿಯವರ ಈ ಕೃತಿ ಪ್ರಧಾನಿ ನೆಹರೂರವರ ದೃಷ್ಟಿಗೂ ಬಿದ್ದು ಅವರು ಅದನ್ನು ಕೊಂಡು ತಮ್ಮ ಅತಿಥಿ ಗೃಹದಲ್ಲಿ ಇರಿಸಿಕೊಂಡಿದ್ದಾರೆ. ಆ ಕೃತಿಯನ್ನು ಈಗಲೂ ಅಲ್ಲಿ ಕಾಣಬಹುದು.

ಗಾಂಧೀಜೀಯವರ ಚಿತ್ರಗಳ ಮಾದರಿಯಲ್ಲಿ ಕಸ್ತೂರಿಬಾಯಿ, ನೆಹರು, ಪ್ರಸಾದ್, ಸಿ. ರಾಜಗೋಪಾಲಾಚಾರ್, ಸರ್. ಎಂ. ವಿಶ್ವೇಶ್ವರಯ್ಯ, ಸರ್. ರಾಧಾಕೃಷ್ಣನ್, ಸರ್ ಮಿರ್ಜಾ, ದಿವಂಗತ ಶ್ರೀಮದ್ಯುವರಾಜರ ಭಾವಚಿತ್ರಗಳನ್ನೂ ಬಿಡಿಸಿದರು.

ಹಳೆಯಬೀಡು-ಬೇಲೂರುಗಳಲ್ಲಿನ ಶಿಲಾಬಾಲಿಕೆಯರ ನೃತ್ಯಭಂಗಿಗಳನ್ನು ಅಭ್ಯಸಿಸುತ್ತಿದ್ದಾಗ-ಆ ಮನೋಹರ ನೃತ್ಯವೈವಿಧ್ಯವನ್ನು ಕಂಡು ಶ್ರೀಯುತರಿಗೆ ನೃತ್ಯಕಲೆಯಲ್ಲಿ ಅಭಿರುಚಿ ಹುಟ್ಟಿ ತಾವೂ ಏಕೆ ನೃತ್ಯಗಾರ

ರಾಗಬಾರದೆಂಬ ಆಕಾಂಕ್ಷೆ ಅಂಕುರಿಸಿತು. ೧೯೪೦ ರಲ್ಲಿ ಶ್ರೀ ಬಿಡಾರಂ ಕೃಷ್ಣಪ್ಪ ನವರ ರಾಮಮಂದಿರದಲ್ಲಿ ಹಿರಿಯ ಸಂಗೀತ ವಿದ್ವಾಂಸರ ಭಾವಚಿತ್ರಗಳನ್ನು ರಚಿಸುವ ಒಂದು ಸದಾವಕಾಶ ಇವರಿಗೆ ಬಂದಿತು. ಆ ಸಂದರ್ಭದಲ್ಲಿ ನಾಟ್ಯ ಕಲಾವಿಶಾರದೆ ಜಟ್ಟಿತಾಯಮ್ಮನವರ ಹೆಸರು ಬಹಳವಾಗಿ ಕೇಳಿಬರುತ್ತಿದ್ದಿತು. ಜಟ್ಟಿತಾಯಮ್ಮನವರಿಗೆ 'ನಾಟ್ಯಸರಸ್ವತಿ' ಎಂಬ ಬಿರುದೂ ಕೂಡ ಆ ವೇಳೆಗೆ ಸಂದಿತ್ತು. ಇವರ ಶಿಷ್ಯರಾಗಿ ಶ್ರೀ ಎಸ್. ಎನ್. ಸ್ವಾಮಿಗಳು ನೃತ್ಯಾಭ್ಯಾಸಕ್ಕೆ ತೊಡಗಿದರು. ಒಮ್ಮೆ ದಿವಂಗತ ಕೈಲಾಸಂ ಅವರು ನೃತ್ಯಾಭ್ಯಾಸ ನಡೆಯುತ್ತಿದ್ದ ಸ್ಥಳಕ್ಕೆ ಬಂದು ತಾಯಮ್ಮನವರಿಗೆ ಸಾಷ್ಟಾಂಗ ನಮಸ್ಕಾರಮಾಡಿ, ಅಲ್ಲೇ ಇದ್ದ ಸ್ವಾಮಿಗಳತ್ತ ತಿರುಗಿ ನಗುತ್ತ “ಎಲೋ ಸ್ವಾಮಿ....ನೀನು ಪುಣ್ಯ ಮಾಡಿದ್ದೆ. ಇಂಥ ಅಜ್ಜಿಯಿಂದ ಪಾಠಹೇಳಿಸಿ ಕೊಳ್ಳೋದಕ್ಕೆ–ಈ ಹೆಂಗಸು ಪ್ಯಾರಿಸ್‌ನಲ್ಲೋ, ಲಂಡನ್ನಿನಲ್ಲೋ ಇದ್ದಿದ್ದರೆ ಚಿನ್ನದ ಪ್ರತಿಮೆ ಮಾಡಿಸಿ ಪಾರ್ಕಿನಲ್ಲಿ ಮೆರೆಸುತ್ತಿದ್ದರು”—ಎಂದು ಹೇಳಿದ ಒಂದು ಸಂದರ್ಭವನ್ನು ಶ್ರೀ ಸ್ವಾಮಿಯವರು ಸಂತೋಷದಿಂದ ನೆನೆಯುತ್ತಾರೆ. ಇಂಥ ಪ್ರಸಿದ್ಧ ಕಲಾವಿದೆಯ ನೇತೃತ್ವದಲ್ಲಿ ನೃತ್ಯಕಲೆಯನ್ನು ಮೈಗೂಡಿಸಿಕೊಂಡು ಈ ಕಲೆಯಲ್ಲೂ ಜೊತೆಜೊತೆಯಾಗಿ ಖ್ಯಾತಿಪಡೆದಿದ್ದಾರೆ.

ಮೈಸೂರುನಗರದ ಹೊಸ ಸ್ಟ್ಯಾಚ್ಯೂ ಸ್ಕ್ವೇರಿನ ಬಳಿ ಇರುವ ಅವರ ಪೆಟ್ರೋಲ್ ಬಂಕಿನಲ್ಲಿ ಶ್ರೀ ಸ್ವಾಮಿಗಳನ್ನು ಸಾಮಾನ್ಯವಾಗಿ ಕಾಣಬಹುದು. ನೀಳವಾದ, ತೆಳ್ಳನೆಯ ಶರೀರ. ಈ ವ್ಯಕ್ತಿ ತುಂಬಾ ಸರಳ ಸ್ವಭಾವದವರು ವಿನಯಶೀಲರು. ನಶ್ಯಬಣ್ಣದ ಜುಬ್ಬ, ಕಚ್ಚೆಯ ಪಂಚೆ, ಸಾಮಾನ್ಯ ಚಪ್ಪಲಿ ಇವುಗಳೇ ಇವರ ನಿತ್ಯದ ಉಡುಗೆ ತೊಡುಗೆಗಳು. ಕೋಲು ಮುಖದ, ಹಿಂದೆಬಾಚಿದ ಕ್ರಾಪಿನ, ವಿಶಾಲ ಹಣೆಯ, ಗಂಭೀರ ಭಾವದ ಶ್ರೀ ಸ್ವಾಮಿಗಳು, ಯುವಕರಂತೆ ತೋರುವ ಅವರ ವರ್ಚಸ್ಸು ಐವತ್ತುಮೂರು ವರ್ಷಗಳನ್ನು ದಾಟಿಬಂದ ವ್ಯಕ್ತಿಯೇ ಇವರು ಎಂದು ಆಶ್ಚರ್ಯವಾಗುತ್ತದೆ. ಹತ್ತು ಹದಿನೈದು ವರ್ಷಗಳ ಹಿಂದೆ ಶ್ರೀಯುತರನ್ನು ಯಾರಾದರೂ ನೋಡಿದ್ದರೆ, ಈಗಲೂ ಅದೇ ಮಾಟದಲ್ಲಿ ಅವರನ್ನು ಗುರುತು ಹಚ್ಚಬಹುದು. ಯಾರಬಳಿಯೂ ಹೆಚ್ಚು ಸೇರುವ ಸ್ವಭಾವ ಇವರದಲ್ಲ

ದಿದ್ದರೂ ನಾಡಿನ ಹೆಸರಾಂತ ವ್ಯಕ್ತಿಗಳು ಇವರ ಸ್ನೇಹಿತರಾಗಿದ್ದಾರೆ. "ಕಲೆ ಕೇವಲ ಜೀವನಕ್ಕೆ" ಎಂದೆಂಬ ಆಸೆಗಿಂತ "ಕಲೆ ಕೀರ್ತಿಗಾಗಿ" ಎಂಬ ಉದ್ದೇಶವೇ ಹೆಚ್ಚೆನ್ನುತ್ತಾರೆ. ಅವರ ಕಲೆಯ ಬಗ್ಗೆಯೂ ಹೇಳಿಕೊಳ್ಳುತ್ತ "ನಾನಿನ್ನೂ ಕಲಾ ವಿದ್ಯಾರ್ಥಿ....ಯಾವ ಉನ್ನತ ಮಟ್ಟವನ್ನು ಮುಟ್ಟ ಬೇಕೋ ಇನ್ನೂ ಮುಟ್ಟಲ್ಲ....ಅದಕ್ಕಾಗಿ ಸತತ ಪ್ರಯತ್ನಪಡುವವರಲ್ಲಿ ನಾನೂ ಒಬ್ಬನಾಗಿದ್ದೇನೆ" ಎನ್ನುತ್ತಾರೆ. ಕಲಾವಿದನಿಗಿಂತಲೂ ಅವನ ಕೃತಿಗೇ ಹೆಚ್ಚು ಮಾನ್ಯತೆ ಎಂಬುದನ್ನು ಮನಗಂಡಿದ್ದಾರೆ. ನವ್ಯಕಲೆಯ ಬಗ್ಗೆ (Modern Art) ಯಾವ ನಿರ್ದಿಷ್ಟವಾದ ಅಭಿಪ್ರಾಯವನ್ನೂ ಕೊಡುವ ಗೋಜಿಗೆ ಹೋಗದಷ್ಟು ಸೌಜನ್ಯ ಇವರದು. ಅದರ ಬಗ್ಗೆ ಮಾತ ನಾಡುತ್ತ "ನನಗೆ ಅರ್ಥವಾಗುತ್ತಿಲ್ಲ. ಏನೆಂದು ಹೇಳಬೇಕೋ ತಿಳಿಯದು. ಕೆಲವರು ಹೊಗಳುತ್ತಾರೆ. ನಾನು ಕೇಳುತ್ತಿರುತ್ತೇನೆ ಅಷ್ಟೆ—ನಾನು ಮಾತ್ರ ಆ ಹವ್ಯಾಸಕ್ಕೆ ಹೋಗಿಲ್ಲ—ಹೋಗುವುದೂ ಇಲ್ಲ" ಎಂದು ಸ್ಪಷ್ಟವಾಗಿ ಹೇಳಿಬಿಡುತ್ತಾರೆ. ನಾಟ್ಯಶಾಸ್ತ್ರದ ಬಗ್ಗೆಯೂ, ಚಿತ್ರಕಲೆಯ ಬಗ್ಗೆಯೂ ಉತ್ತಮ ಅನುಭವವನ್ನು ಗಳಿಸಿಕೊಂಡಿದ್ದಾರೆ. ಆಕಾಶವಾಣಿ ಮುಂತಾದ ಕಡೆ ಚಿತ್ರಕಲೆಯ ಬಗ್ಗೆ ಮಾತನಾಡಿದ್ದಾರೆ.

ಶ್ರೀಯುತರು ಚಿತ್ರಿಸಿರುವ ಭಾವಚಿತ್ರಗಳಲ್ಲೆಲ್ಲಾ ಸಾಮಾನ್ಯವಾಗಿ ಅಂತರ ರಾಷ್ಟ್ರೀಯ ಗೌರವವನ್ನು ಪಡೆದ ವ್ಯಕ್ತಿಗಳದೇ ಆಗಿವೆ. ವಿಶ್ವದ ಅನೇಕ ಕಡೆಗಳಲ್ಲಿ ಇವರ ಕೃತಿಗಳು ಶೋಭಿಸುತ್ತಿವೆ. ಸುಪ್ರಸಿದ್ಧ ಆಂಗ್ಲ ಸಾಹಿತಿ "ಷಾ" ರವರ ಭಾವಚಿತ್ರವನ್ನು ಬರೆದು ಅವರ ಬಳಿ ಸಹಿಗೆ ಕಳುಹಿಸಿ ದಾಗ ಅವರು " You have done too much Justice to an old man like me" ಎಂದು ಪ್ರಶಂಸೆಯ ಪತ್ರ ಬರೆದುದಲ್ಲದೆ—ಆಗತಾನೆ ಪ್ರಕಟವಾಗಿದ್ದ ಅವರ "ಬ್ಯಾಕ್ ಟು ಮೆಥುಸೆಲಾ" ಎಂಬ ತಮ್ಮ ಕೃತಿ ಯನ್ನೂ ಇವರಿಗೆ ವಿಶ್ವಾಸಪೂರ್ವಕವಾಗಿ ಕಳುಹಿಸಿಕೊಟ್ಟಿದ್ದಾರೆ. "ಷಾ" ರವರ ಈ ಚಿತ್ರವು ಈಗ ಲಂಡನ್ನಿನ ಇಂಡಿಯನ್ ಎಂಬಸಿ ಎಂಬಲ್ಲಿ ರಂಜಿ ಸುತ್ತಿದೆ. ಗಾಂಧೀಜಿಯು ರಾಟೆ ನೂಲುತ್ತಿರುವಂತಿರುವ ಇವರ ಮತ್ತೊಂದು ಚಿತ್ರವು ಪ್ಯಾರಿಸ್‌ನ ಯುನೆಸ್ಕೋವಿನ ಭವನದಲ್ಲಿದೆ. ಹಾಗೆಯೇ ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನ್‌ರ ಭಾವಚಿತ್ರವು ಅಮೆರಿಕದಲ್ಲಿದೆ. ರೂಸ್‌ವೆಲ್ಟ್‌ರ

ಚಿತ್ರ ಶ್ವೇತಭವನ (ವೈಟ್ ಹೌಸ್)ದಲ್ಲಿದೆ. ಭಾರತದ ಪ್ರಪ್ರಥಮ ದಂಡನಾಯಕ ಜನರಲ್ ಕಾರಿಯಪ್ಪನವರತೈಲ ಭಾವಚಿತ್ರವು ಮಡಕೇರಿಯ ಕಾಲೇಜಿನಲ್ಲಿ ಬೆಳಗುತ್ತಿದೆ. ಮೈಸೂರು ನಗರದ ನಾನಾ ಸಂಘ ಸಂಸ್ಥೆಗಳ ಭವನಗಳಲ್ಲಿ ಇವರು ಬರೆದ ಅನೇಕ ತೈಲಚಿತ್ರಗಳು ನೋಡಸಿಗುತ್ತವೆ. ಒಮ್ಮೆ ಶ್ರೀ ನೆಹರೂರವರು ಮೈಸೂರಿಗೆ ಆಗಮಿಸಿದ್ದಾಗ ಶ್ರೀ ಸ್ವಾಮಿಯ ವರು ತಾವು ಬರೆದ 'ಕಮಲಾ ನೆಹರು'ರವರ ಭಾವಚಿತ್ರವನ್ನು ಪ್ರಧಾನಿಗಳಿಗೆ ಅರ್ಪಿಸಿದರು. ಇವರ ಇತ್ತೀಚಿನ ಕೃತಿ ಎಂದರೆ ಕನ್ನಡ ಕುಲಪಿತಾಮಹ ಆಲೂರು ವೆಂಕಟರಾಯರ ರೇಖಾಚಿತ್ರ.

ಯಾವ ಕಲಾವಿದರಲ್ಲೂ ಕಾಣದ ಒಂದು ವೈಶಿಷ್ಟ್ಯವನ್ನು ನಾವು ಶ್ರೀ ಸ್ವಾಮಿಯವರಲ್ಲಿ ಕಾಣುತ್ತೇವೆ. ಅನಂತ ಸಾಗರದಂತಿರುವ ಕಲೆಯ ನಾನಾಪ್ರಾಕಾರಗಳಿಗೆ ಕೈಹಚ್ಚಿ ಯಾವುದರಲ್ಲಿಯೂ ಯಶಸ್ವಿಯಾಗದ ಕೆಲವ ರುಂಟು. ಯಶಸ್ಸುಪಡೆದವರಂತೂ ತೀರಾ ವಿರಳ. ಭಾವಚಿತ್ರ ವಿಭಾಗ ಒಂದನ್ನೇ ತಮ್ಮ ಕಲಾ ಸಾಧನೆಯ ಗುರಿಯಾಗಿಟ್ಟುಕೊಂಡು ಅದನ್ನು ಬೆಳಸಿ ಕೊಂಡು ಬಂದು ಇಂದು ತುಂಬಾ ಜನಪ್ರಿಯರಾಗಿದ್ದಾರೆ.

ಪ್ರಖ್ಯಾತ ಆಧುನಿಕ ಕಲಾವಿಮರ್ಶಕರಾದ ಮಿ|| ವಿಲ್ಸನ್ ಎಂಬುವರು ಶ್ರೀ ಸ್ವಾಮಿಯವರು ರಚಿಸಿದ ರೇಖಾ ಚಿತ್ರಗಳನ್ನು ನೋಡಿ "They are among the finest that I have ever seen. I rejoice to see that you have not allowed degenerate elements in contemporary European art to effect your style. The minute draftsmanship in my humble opinion is still more appreciable" ಎಂದು ತಮ್ಮ ಮೆಚ್ಚಿಗೆಯನ್ನು ವ್ಯಕ್ತ ಪಡಿಸಿರುವುದರಲ್ಲಿ ಅತಿಶಯವೇನಿಲ್ಲ. ಶ್ರೀಯುತರಿಗೆ ಇಂಥ ಕೀರ್ತಿ ತಂದಿರು ವುದು ಅವರ ಸಾಹಸದ ಫಲವಲ್ಲದೆ ಮತ್ತೇನು!

ಎಸ್. ಆರ್. ಐಯಂಗಾರ್

ಇಲ್ಲಿಗೆ ಕೆಲವು ವರ್ಷಗಳ ಹಿಂದಿನ ಮಾತು. ಮೈಸೂರಿನ ವಾಣಿವಿಲಾಸ ಮೊಹಲ್ಲಾದಲ್ಲಿ ಕಾರ್ಯಾರ್ಥವಾಗಿ ಹೋಗಿದ್ದ ನಾನು, ಹಾಗೆಯೇ ಶ್ರೀ ನಿರಂಜನರನ್ನೂ ನೋಡಿಬರೋಣವೆಂದು ಹೊರಟೆ. ನಾನು ಶ್ರೀಯುತರನ್ನು ಕಂಡಾಗಲೆಲ್ಲಾ ಕಲಾಸಂಬಂಧವಾದ ಚರ್ಚೆಯನ್ನು ನಡೆಸುವುದು ವಾಡಿಕೆ. ಅಂದು ಕಲಾವಿದರ ಮಾತು ಬಂದಾಗ ಅವರು ತಟ್ಟನೆ "ಓಹೋ ನಿಮಗೆ ಇವರು ಗೊತ್ತಿರಬೇಕಲ್ಲಾ....?" ಎಂದರು. ಆ "ಇವರು" ಯಾರೆಂಬುದು

ಅರ್ಥವಾಗದೆ ಎಸ್. ಆರ್. ಐಯಂಗಾರ್ಯರ ವಿಷಯವನ್ನೇ ಅವರು ಹೇಳಲು ಹೊರಟಿದ್ದು. ಶ್ರೀ ಐಯಂಗಾರ್ಯರು ಅವರ ಅಚ್ಚು ಮೆಚ್ಚಿನ ಸ್ನೇಹಿತರು. ಆದರೆ ನನಗೆ ಅವರ ಕಲಾಜೀವನದ ಪರಿಚಯ ಹತ್ತು ವರ್ಷ ಗಳಿಗಿಂತಲೂ ಹಳೆಯದು. ಎಂತಲೇ ಅಲ್ಲಿಂದ ಶ್ರೀ ಐಯಂಗಾರ್ಯರನ್ನು ನೋಡಿಬರಲು ಹೊರಟೆ. ನಯವಾಗಿ ಹಿಂದೆಬಾಚಿದ ಕಪ್ಪು ಮಿಶ್ರ ಬಿಳಿಯ ಕೂದಲಿನ ನಗೆಮೊಗದ ಐಯಂಗಾರ್ಯರು ನನ್ನ ಅನಿರೀಕ್ಷಿತ ಭೇಟಿಗೆ ಆಶ್ಚರ್ಯಪಟ್ಟರೂ, ಸಂತಸದಿಂದ ಸ್ವಾಗತವನ್ನು ಕೋರಿದರು. ಅವರು ಅಲ್ಲಿರುವುದು ನನಗೆ ಆ ಮೊದಲು ತಿಳಿದಿರಲಿಲ್ಲ. ಅವರ ಕಲಾಪೂರ್ಣ ಭಾವ ಚಿತ್ರಗಳ ಪರಿಚಯ ನನಗೆ ಬಹಳ ವರ್ಷಗಳಿಂದ ಇದ್ದಿತಾದರೂ ಅವರೊಡನೆ ಅಷ್ಟು ಹತ್ತಿರದಿಂದ ಮಾತಾಡಿರಲಿಲ್ಲ. ಅವರೊಡನೆ ಈ ಸಂದರ್ಭವನ್ನು ಉಪ ಯೋಗಿಸಿಕೊಂಡು ಅನೇಕ ವಿಷಯಗಳನ್ನು ಮಾತಾಡುವ ಸದಾವಕಾಶ ಶ್ರೀ ನಿರಂಜನರಿಂದಲೇ ಕೂಡಿಬಂದಂತಾಯಿತು.

ಶ್ರೀಯುತರು ಹುಟ್ಟಿದುದು ಹಕ್ಕಿ ಹೆಬ್ಬಾಳಿನ ಬಳಿ ಒಂದು ಹಳ್ಳಿಯಲ್ಲಿ. ಇವರ ತಂದೆಯವರಾದ ಶ್ರೀ ಕೆ. ಶ್ರೀನಿವಾಸ ಐಯಂಗಾರ್ಯರು ಮಾಧ್ಯ ಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಅವರ ಏಳುಮಂದಿ ಮಕ್ಕಳಲ್ಲಿ ಶ್ರೀ ಎಸ್. ರಂಗಸಾಮಿ ಐಯಂಗಾರ್ಯರು ನಾಲ್ಕನೆಯವರು. ಏಳನೆವಯಸ್ಸಿನಲ್ಲಿಯೇ ಚಿತ್ರಕಲೆಯ ಮೇಲೆ ಮೋಹ ಅಂಕುರಿಸಿತು. ತೆಳು ಕಾಗದದ ಮೇಲೆ ಭೂಪಟಗಳನ್ನು ಬರೆದು ಅವಕ್ಕೆ ಬಣ್ಣ ಹಾಕುವುದು ಅವರಿಗೊಂದು ಚಟವಾಗಿದ್ದಿತು. "ಆಗ ನಾನೊಬ್ಬ ಹಳ್ಳಿಯ ಮುಕ್ಕನಾಗಿದ್ದೆ" ಎನ್ನುತ್ತಾರೆ ಶ್ರೀಯುತರು. ತಮ್ಮ ಹಟದ ಸ್ವಭಾವದಿಂದ, ಆಗಾಗ ಅವರ ತಂದೆಯವರು "Spare the rod and Spoil a child" ಎಂಬಂತೆ ಚೆನ್ನಾಗಿ ಬೆತ್ತದ ಪೂಜೆಯನ್ನು ಮಾಡುತ್ತಿದ್ದ ಸವಿನೆನಪನ್ನು ಕುಳಿತೆಡೆ ಯಲ್ಲಿಯೇ ಶ್ರೀಯುತರು ಚಪ್ಪರಿಸಿದರು.

ಇವರ ಹೈಸ್ಕೂಲ್ ವಿದ್ಯಾಭ್ಯಾಸ ೧೯೧೬ ರಲ್ಲಿ ಆರಂಭವಾಯಿತು. ಅಲ್ಲಿ ಹಲವರ ಸಹವಾಸದಿಂದ ಕುಂಚಹಿಡಿದು ಆಡಿಸುವಷ್ಟು ಅಲ್ಪಸ್ವಲ್ಪ ಅನುಭವ ಉಂಟಾಯಿತು. ಆಗತಾನೆ ಮೈಸೂರಿನಲ್ಲಿ ಹೊಸದಾಗಿ ತೆರೆಯ ಲಾಗಿದ್ದ 'ಗೃಹ ಕೈಗಾರಿಕಾ ಶಾಲೆ'ಯಲ್ಲಿ 'ಪಾರ್ಟ್‌ಟೈಂ' ವಿದ್ಯಾರ್ಥಿಯಾಗಿ

ಸೇರಿಕೊಂಡರು. ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಡ್ರಾಯಿಂಗ್ ಉಪಾಧ್ಯಾಯರಾಗಿದ್ದ ಇವರ ಅಣ್ಣನವರು ಕೈಗಾರಿಕಾ ಕಲಾಶಾಲೆಗೆ ಹೋಗಿ ಹೂಗೊಂಚಲೊಂದನ್ನು ಬರೆದುಕೊಂಡು ಬಂದದ್ದು ಶ್ರೀಯುತರು ಅಲ್ಲಿಗೆ ಸೇರಲು ಮುಖ್ಯ ಆಕರ್ಷಣೆಯಾಯಿತು. ಶ್ರೀ ಬಾಪುನಾಯಿಡು ಎನ್ನುವವರು ಅಲ್ಲಿ ಕಲಾವಿಭಾಗಕ್ಕೆ ಅಧ್ಯಾಪಕರಾಗಿದ್ದರು. ಆ ಶಾಲೆಯಲ್ಲಿ ಶ್ರೀಯುತರಿಗೆ ದೊರೆತ ತಳಹದಿ ಎಂದರೆ ಕುಂಚವನ್ನು ಧೈರ್ಯವಾಗಿ ಆಡಿಸುವುದು ಮತ್ತು ವರ್ಣಮಿಶ್ರಣ. ಅಲ್ಲಿ ಸರಿಯಾದ ಶಾಸ್ತ್ರೀಯ ಶಿಕ್ಷಣ ದೊರೆಯದಿದ್ದರೂ ಅವರಲ್ಲಿ ಸುಪ್ತವಾಗಿದ್ದ ಕಲಾಭಿಮಾನಕ್ಕೆ ಪ್ರೋತ್ಸಾಹ ದೊರಕಿದಂತಾಯಿತು. ಸ್ವಲ್ಪ ಕಾಲದಲ್ಲಿಯೇ ಆ ಶಾಲೆ ಮುಚ್ಚಲ್ಪಟ್ಟಿತು ಅನಂತರ ಶ್ರೀಯುತರು ಸ್ವತಂತ್ರವಾಗಿ ಚಿತ್ರವನ್ನು ಅನುಕರಿಸಲು ಉಪಕ್ರಮಿಸಿದರು. ಕೊನೆಗೆ ಮೈಸೂರಿನ ಚಾಮರಾಜ ಕಲಾಶಾಲೆ ಇವರನ್ನು ಆಕರ್ಷಿಸಿತು. ಆದರೆ ಇನ್ನೂ ವಿದ್ಯಾರ್ಥಿದೆಸೆಯಲ್ಲಿದ್ದುದರಿಂದ ಕಲಾಶಿಕ್ಷಣ ಸಮರ್ಪಕವಾಗಲಿಲ್ಲ.

ಕಾಲೇಜು ಜೀವನವನ್ನು ಕಂಡ ಕನ್ನಡದ ಅತ್ಯಲ್ಪ ಕಲಾವಿದರಲ್ಲಿ ಶ್ರೀಯುತರು ಮೊದಲಿಗರು. ಬಿ. ಎ. ತರಗತಿಯವರೆಗೂ ವ್ಯಾಸಂಗಮಾಡಿದ್ದಾರೆ. ವ್ಯಾಸಂಗ ಸಮಯದಲ್ಲಿ ಕಾಲೇಜಿನ ಪಾಠ ಪ್ರವಚನಗಳ ಜೊತೆಯಲ್ಲಿ ಚಿತ್ರರಚನೆಯನ್ನೂ ಅವ್ಯಾಹತವಾಗಿ ನಡೆಸಿಕೊಂಡೇ ಬಂದುದರಿಂದ ೧೯೨೪ ರ ವೇಳೆಗೆ ಕಲೆಯಲ್ಲಿ ಅಭಿರುಚಿ ಕುದುರಿಕೊಂಡಿತು. ಅದೇ ವರ್ಷ ಬೊಂಬಾಯಿನ ಜೆ. ಜೆ. ಕಲಾಶಾಲೆಯಲ್ಲಿ ಕಲಾಭ್ಯಾಸ ಮಾಡಲು ಇವರಿಗೆ ವಿದ್ಯಾರ್ಥಿವೇತನ ದೊರೆತು ಶ್ರೀ ಐಯಂಗಾರ್ಯರು ಕಲಾರಂಗವಲ್ಲಿ ದಿಟ್ಟತನದ ಹೆಜ್ಜೆ ಇಡಲು ದಾರಿ ವಿಶಾಲವಾಯಿತು. ಆಗ ಆ ಶಾಲೆಯ ಪ್ರಿನ್ಸಿಪಾಲರಾಗಿದ್ದ ಡಬ್ಲಿಯು ಇ. ಗ್ಲಾಡ್‌ಸ್ಟನ್ ಸಾಲೋಮನ್ ಇವರ ಕಲಾಕೌಶಲವನ್ನು ಬಹಳವಾಗಿ ಮೆಚ್ಚಿಕೊಂಡರು. ಎರಡು ಮೂರು ವರ್ಷಗಳಲ್ಲಿಯೇ ಇವರಿನ್ನೂ ವಿದ್ಯಾರ್ಥಿಯಾಗಿದ್ದರೂ ಅದೇ ಶಾಲೆಯಲ್ಲಿ ಅಧ್ಯಾಪಕವೃತ್ತಿ ಪ್ರಾಪ್ತವಾಯಿತು. ಅದೇ ವರ್ಷ ಹಿಮಪ್ರದೇಶದ ಪುಷ್ಪಗಳನ್ನು ಚಿತ್ರಿಸಲು ಹಿಮಾಲಯ ಪರ್ವತದ ಡಾರ್ಜಿಲಿಂಗಿಗೆ ಕಳುಹಿಸಲ್ಪಟ್ಟರು. ೧೯೩೦ ರಲ್ಲಿ ಕಲಾಡಿಪ್ಲಮಾ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ನುರಿತ ಹಸ್ತದಿಂದ ಹೊರಬಂದರು. ಈಗ ಇವರ ಸ್ಥಿತಿ 'ಸಲಿಬತ್ತಿದ ಸರೋವರಕ್ಕೆ ನವಜಲವೊದಗಿ

ದಂತೆ' ಮಾರ್ಪಾಟು ಹೊಂದಿತು. ಅವರು ಹೊಸ ಮನುಷ್ಯರಾದರು. ಅವರಲ್ಲಿ ಅಡಗಿದ್ದ ಸುಪ್ತಶಕ್ತಿ ವಿಕಸನಗೊಂಡಿತು. ಆದರೆ ಆ ಸಂತೋಷದ ಜೊತೆಗೆ ಅವರು ಅದೇ ವರ್ಷ ಮಾತೃವಿಯೋಗದ ಘೋರದುಃಖವನ್ನು ಅನುಭವಿಸ ಬೇಕಾಯಿತು. ಆಗ ಇವರಾಗಲೇ ಇಪ್ಪತ್ತೆಂಟರ ಗಡಿಯನ್ನು ದಾಟಿದ್ದರು. ಮೈಸೂರಿಗೆ ಮರಳಿದಮೇಲೆ ಸ್ವತಂತ್ರವಾಗಿ ವಿಹರಿಸುತ್ತಿದ್ದ ಹಕ್ಕಿಯನ್ನು ಪಂಜರದಲ್ಲಿ ಕೂಡಿಟ್ಟಂತೆ ಇವರಿಗೆ ಸಂಸಾರದ ಬಂಧನವು ಏರ್ಪಟ್ಟಿತು.

೧೯೩೩–೩೪ ರಲ್ಲಿ ಆಳಿದ ಮಹಾಸ್ವಾಮಿಯವರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಆಶ್ರಯ ಕೆಲವು ಕನ್ನಡ ಕಲಾವಿದರಿಗೆ ದೊರೆತಂತೆ ಶ್ರೀಯುತರಿಗೂ ದೊರೆಯಿತು. ಅರಮನೆಯ ಕಲ್ಯಾಣಮಂಟಪದ ಅಲಂಕಾರಕ್ಕೆ ದಸರಾ ಮೆರವಣಿಗೆ ಚಿತ್ರಗಳನ್ನು ಚಿತ್ರಿಸುವ ಭಾಗ್ಯ ಇವರಿಗೂ ದೊರ ಕಿತು. ಇಲ್ಲಿಂದ ಮುಂದೆ ಎಂಟು ಹತ್ತು ವರ್ಷಗಳ ವರೆಗೆ ಶ್ರೀಯುತ ರಿಗೆ ರಾಜಾಶ್ರಯ ದೊರಕಿತು. ಆದರೆ ಅಲ್ಲಿಂದ ಮುಂದೆ ಕೆಲಸಗಳಿಗಾಗಿ ಅಲೆ ದಾಡುವ ಪರಿಸ್ಥಿತಿ ಬಂದು ನಿರುತ್ಸಾಹ ವಾತಾವರಣ ಮೂಡಿತು. ಬಡತನ ಬಾಳನ್ನು ಬವಣೆಗೆ ಗುರಿಮಾಡಿತು. ಮಹಾರಾಜರಿಂದ ಆಗೊಮ್ಮೆ ಈಗೊಮ್ಮೆ ಭಾವಚಿತ್ರರಚನೆಯ ಕೆಲಸಗಳು ದೊರೆತು ಹೇಗೋ ಜೀವನ ಸಾಗುತ್ತಿತ್ತು. 'Failures are stepping stornes for success' ಎಂಬ ತತ್ವದಂತೆ ಕಾಲಕ್ರಮದಲ್ಲಿ ಕೆಲವು ಗಣ್ಯವ್ಯಕ್ತಿಗಳ ನೆರವು ದೊರೆತು ಕೆಲವು ಉತ್ತಮ ಚಿತ್ರಗಳು ಬಯಲಿಗೆ ಬಂದುವು. ಆಗ ಮೈಸೂರು ಕಲಾವಿದರೆಲ್ಲರೂ ಸೇರಿ ಒಂದು ಕಲಾ ಸಮಿತಿ (Arts society). ಯನ್ನು ಏರ್ಪಡಿಸಿದ್ದರು. ಕಲಾ ವಿದರಲ್ಲಿ ಸಂಘಟನೆ ಸಹಕಾರ ಕಲಾ ಪ್ರದರ್ಶನಗಳನ್ನು ಏರ್ಪಡಿಸುವಿಕೆ ಮುಂತಾದುವನ್ನು ಸಾಗಿಸಲು ಒಂದು ಕಲಾಸಂಘ ಏರ್ಪಟ್ಟಿತು. ೧೯೩೪-೩೫ ರಲ್ಲಿ ಶ್ರೀಯುತರೂ ಸಹ ಆ ಸಮಿತಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದರು. ಈ ಸಮಿತಿಯೇನೂ ಬಹಳದಿನ ಉಳಿಯಲಿಲ್ಲ. ಜೀವನದ ಸಮಸ್ಯೆ ಬೃಹತ್ತರವಾಗಿ ಕಲಾವಿದರು ಜುಗುಪ್ಸೆಗೊಂಡು ಜೀವನಕ್ಕಾಗಿ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಬೇಕಾಯಿತು. ಶ್ರೀಯುತರ ಜೀವನ ನೌಕೆಯು ಬಡತನದ ಬಿರುಗಾಳಿಯ ಹೊಡೆತಕ್ಕೆ ಸಿಕ್ಕು ತುಯಿದಾಡಿತು. ಇಷ್ಟಾದರೂ ಕಲೆಯಲ್ಲಿ ಇವರ ಅಭಿರುಚಿ ತಗ್ಗಲಿಲ್ಲ ಅವರ ಕಲೋಪಾಸನೆ

ಕುಂಟಿತವಾಗಲಿಲ್ಲ. ಎಂಥ ಹವಗೆಟ್ಟ ಕಾಲದಲ್ಲೂ ಚಿತ್ರರಚನೆಗೆ ಅವಕಾಶ ಕಲ್ಪಿಸಿಕೊಂಡು ನಿಲ್ಲುತ್ತಿದ್ದ ಸಾಹಸಿ ಇವರು. ದಸರಾ ವಸ್ತುಪ್ರದರ್ಶನದಲ್ಲಿ ಇವರು ರಚಿಸಿದ ಅನೇಕ ರೂಪಚಿತ್ರಗಳು ಕಾಣಿಸಿಕೊಳ್ಳುತ್ತಾ ಬಂದುವು. ೧೯೩೦ ರಿಂದ ಇಲ್ಲಿಯವರೆಗೂ ಈ ಪ್ರದರ್ಶನಾಲಯಕ್ಕೆ ಚಿತ್ರಗಳನ್ನು ನೀಡುತ್ತಾ ಬಂದಿದ್ದಾರೆ. ಅನೇಕ ಪದಕಗಳನ್ನೂ ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ೧೯೫೧ರಲ್ಲಿ ಇವರ ಒಂದು ಭಾವಚಿತ್ರಕ್ಕೆ ಸುವರ್ಣ ಪದಕವೂ, ೧೯೪೦ ಮತ್ತು ೧೯೪೪ ರಲ್ಲಿ ರಜತಪದಕಗಳೂ ಅನೇಕ ಪ್ರಥಮ ದ್ವಿತೀಯ ಬಹುಮಾನಗಳೂ ದೊರೆತಿವೆ. ಶ್ರೀಯುತರು ತಮ್ಮ ಕೃತಿಗಳಿಗೆ ಬಹುಮಾನಗಳನ್ನು ಪಡೆಯದ ವರ್ಷಗಳೇ ಅಪರೂಪ ಎನ್ನಬಹುದು.

ಇವರ ಸಾಧನೆ ತಪಸ್ಸುಗಳಿಂದ ಶ್ರೀ ಐಯಂಗಾರ್ಯರು ಈದಿನ ಓರ್ವ ಜನಪ್ರಿಯ ಕಲಾವಿದರಾಗಿದ್ದಾರೆ. ಭಾವಚಿತ್ರರಚನೆಯಲ್ಲಿ ಇವರು ಉನ್ನತ ಮಟ್ಟವನ್ನು ಮುಟ್ಟಿದ್ದರೂ "ನಾನು ಕಲಿಯಬೇಕಾದುದು ಇನ್ನೂ ಇದೆ" ಎನ್ನುತ್ತಾರೆ.

ಶ್ರೀಯುತರು ಬರೆದ ಭಾವಚಿತ್ರಗಳು ಅನೇಕ ಶಾಲಾಕಾಲೇಜುಗಳಲ್ಲಿ, ವಾಚನಾಲಯಗಳಲ್ಲಿ, ಛತ್ರ ದೇವಸ್ಥಾನಗಳಲ್ಲಿ ಈಗಲೂ ಬೆಳಗುತ್ತಿವೆ. ಅರಮನೆಯ ಮುಖ್ಯಸಂಗೀತ ವಿದ್ವಾಂಸರಾಗಿದ್ದ ದಿವಂಗತ ಬೀಡಾರಂ ಕೃಷ್ಣಪ್ಪನವರ ಭಾವಚಿತ್ರವೂ, ಅವರೇ ಕಟ್ಟಿಸಿದ ಶ್ರೀರಾಮಮಂದಿರದಲ್ಲಿ ಅಗ್ರಸ್ಥಾನದಲ್ಲಿ ಇರಿಸಲ್ಪಟ್ಟಿದೆ. ಆಸ್ಥಾನ್ ಸಂಗೀತ ವಿದ್ವಾನ್ ಶ್ರೀ ವಾಸುದೇವಾಚಾರ್ಯರ ಭಾವಚಿತ್ರವನ್ನೂ, ದಾಕ್ಷಿಣಾತ್ಯ ಸಂಗೀತ ವಿದ್ವಾನ್ ಶ್ರೀ ಮಹಾರಾಜಪುರಂ ವಿಶ್ವನಾಥ ಐಯ್ಯರ್ ಅವರ ಭಾವಚಿತ್ರವನ್ನೂ ಶ್ರೀಯುತರು ತೈಲವರ್ಣಗಳಲ್ಲಿ ರಚಿಸಿದ್ದಾರೆ. ಮೈಸೂರಿನ ಪಿತಾಮಹರೆಂದು ಪ್ರಸಿದ್ಧರಾಗಿದ್ದ ದಿವಂಗತ ವೆಂಕಟಕೃಷ್ಣಯ್ಯನವರ ಭಾವಚಿತ್ರವೂ ಮೈಸೂರಿನ ಪೌರಸಭಾ ಕಛೇರಿಯಲ್ಲಿ ಇಂದಿಗೂ ಶೋಭಿಸುತ್ತಿದೆ. ಈ ಚಿತ್ರಕ್ಕೆ ಇನ್ನೂರೈವತ್ತು ರೂಪಾಯಿಗಳ ದ್ರವ್ಯರೂಪವಾದ ಬಹುಮಾನವೂ ದೊರೆತಿದೆ ಕನ್ನಡ ರಂಗಭೂಮಿಯ ಶತಮಾನೋತ್ಸವದ ಸಂದರ್ಭದಲ್ಲಿ ಅನೇಕ ಸುಪ್ರಸಿದ್ಧ ಕಲಾವಿದರ ಭಾವಚಿತ್ರಗಳನ್ನು ರಚಿಸಿದ್ದಾರೆ. ಅವನ್ನು ಜಗನ್ಮೋಹನ ಚಿತ್ರಶಾಲೆಯಲ್ಲಿ ಈಗಲೂ ನೋಡಬಹುದು.

ಮೈಸೂರಿನಿಂದ ಬೆಂಗಳೂರಿಗೆ ಹೋಗಿ ನೆಲಸಿ ಕೆಲವು ವರ್ಷಗಳ ಕಾಲ ವಿಮಾನ ಕಾರ್ಖಾನೆಯಲ್ಲಿ ಕಲಾವಿಭಾಗದಲ್ಲಿ ಕೆಲಸಮಾಡಿದರು. ಇದರ ಜೊತೆಗೆ ಖಾಸಗಿಯಾಗಿಯೂ ಭಾವಚಿತ್ರಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈಗ ವಿಶ್ರಾಂತಿಹೊಂದುತ್ತಿದ್ದಾರೆ. ಬಿಡುವು ದೊರೆತರೆ ಮನಸ್ಸು ಶಾಂತವಾಗಿದ್ದರೆ ಭಾವಚಿತ್ರದಲ್ಲಿ ತೊಡಗುತ್ತಾರೆ.

ಶ್ರೀಯುತರ ಆಕಾರ ಕುಳ್ಳಾದರೂ ಅದಕ್ಕೊಂದು ಕಳೆ ಬಂದಿದೆ. ಹಣೆಯ ಮೇಲೊಂದು ಕೆಂಪು ನಾಮ, ನಗುಮುಖ, ಇವು ಎಂಥವರನ್ನೂ ಆಕರ್ಷಿಸುತ್ತವೆ. ತುಂಬಾ ಸರಳ ಜೀವಿಗಳು. ವಿಶಾಲಹೃದಯಿಗಳು. ತಮ್ಮ ಮನಸ್ಸಿನಲ್ಲಿದ್ದುದನ್ನೆಲ್ಲಾ ಬಚ್ಚಿಡದೆ ಆತ್ಮೀಯರಲ್ಲಿ ಹೇಳಿಬಿಡುವ ಸ್ವಭಾವದವರು. ಉತ್ತಮವಾದ ಕಲಾವಿದರನ್ನು ಮನಸಾರ ಹೊಗಳುವ ನೈಜಗುಣ ಈ ಕಲಾವಿದರಲ್ಲಿದೆ.

ನವ್ಯಕಲೆಯ ಬಗ್ಗೆ ಮಾತನಾಡುತ್ತ ಶ್ರೀಯುತರು "ಅದು ನನಗೆ ಸೇರದ ತುತ್ತು" ಎನ್ನುತ್ತಾರೆ. ಆ ಕಲೆಯಲ್ಲಿ ನುರಿತವರು ಅನೇಕ ಬಾರಿ ಆ ವಿಷಯವಾಗಿ ಪ್ರಶ್ನಿಸಿದ್ದಾರೆ ಇವರನ್ನು. ಬುದ್ಧಿವಂತರಾದ ಶ್ರೀ ಐಯಂಗಾರ್ಯರು ಆ ಕೃತಿಗಳ ಬಗ್ಗೆ ಕೇಳಲು ಬಂದ ಮಿತ್ರರಿಗೆ ಅದರ ಬಗ್ಗೆ ಪ್ರಶ್ನೆ ಹಾಕುತ್ತಾರೆ. ಉತ್ತರ ಕೊಡಲು ತಡವರಿಸುವ ಅನೇಕ ಸಂದರ್ಭಗಳನ್ನು ಅವರು ಕಂಡಿದ್ದಾರೆ. "ನವೀನ ಕಲೆಯ ಮೂಲಭೂತ ಅಂಶಗಳನ್ನು ತಿಳಿಯದವರೆಷ್ಟೋ ಮಂದಿ ತಾವೂ ನೈಜಮಟ್ಟದ ನವೀನ ಚಿತ್ರಕಾರರೆಂದು ಬಡಾಯಿಕೊಚ್ಚಿಕೊಳ್ಳುತ್ತಾರೆ. ಕಲೆ ಒಲಿಯಬೇಕಾದರೆ ಅಪಾರ ಅಭ್ಯಾಸ ಬಲ, ಸುಶಿಕ್ಷಣ, ಅಂತರಂಗಪ್ರೇರಣೆ ಇವು ಮುಖ್ಯ. ನವೀನ ಕಲೆಗೆ ಕ್ರಮವಾದ ಯಾವ ಅಭ್ಯಾಸವೂ ಇದ್ದಂತಿಲ್ಲ. ಈ ಬಗೆಯ ಚಿತ್ರಗಳು ಹೆಚ್ಚು ನಗೆಯನ್ನುಂಟುಮಾಡುತ್ತವಲ್ಲದೆ ಅದರ ಮೊಲೆ ಅರ್ಥವನ್ನು ಗ್ರಹಿಸಲು ಸೋಜಾಟವಾಗಿ ಇದರಿಂದ ಕೃತಿಯ ಆಕರ್ಷಣೆ ಕಡಿಮೆಯಾಗುತ್ತದೆ. ಈ ಬಗೆಯ ಚಿತ್ರಗಳ ಅನುಕರಣ ಸುಲಭವಾಗಿ ಅವುಗಳನ್ನು ದುರುಪಯೋಗಪಡಿಸಿಕೊಳ್ಳಬಹುದು. ಈ ಮಾದರಿಯ ಕಲೆಗಳಿಗೆ ನಾಲ್ಕಾರುವರ್ಷಗಳ ಅಭ್ಯಾಸ ಬೇಕೆಂಬ ಅಂಶ ಕಾಣಬರುವುದಿಲ್ಲ ಅರೆನುರಿತವರೂ ಅಲ್ಪಾವಧಿಯಲ್ಲಿಯೇ ತಮ್ಮದೇ ಆದ ಪ್ರಾವೀಣ್ಯತೆಯನ್ನು ಪಡೆಯಬಹುದು. Art

is universal language' ಎಂಬ ಅಭಿಪ್ರಾಯ ನವ್ಯಕಲೆಯಲ್ಲಿ ಕಂಡು ಬರುತ್ತದೆ ಎನ್ನುವುದು ಸಂಶಯಾಸ್ಪದ. ಅನೇಕ ಸಂದರ್ಭಗಳಲ್ಲಿ ಆ ಕಲಾವಿದನೇ ತನ್ನ ಕೃತಿಗಳನ್ನು ವಿಮರ್ಶಿಸಲಾರ ಎಂದಮೇಲೆ ಹೇಳಬೇಕಾದದ್ದೇನಿದೆ?"–ಎನ್ನುತಾರೆ ಐಯಂಗಾರ್ಯರು.

"ನವ್ಯಕಲೆ ಅಪಭ್ರಂಶಗಳ ಮುದ್ದೆ ಇದ್ದಂತೆ ಕಾಣಿಸುತ್ತಿದೆ. 'A Picture must tell its tale' ಎಂಬುದನ್ನು ನಾವು ನವ್ಯಕಲೆಯಲ್ಲಿ ಕಾಣುವಂತಿಲ್ಲ. ಈ ಕಲಾಕೃತಿಗಳನ್ನು ನೋಡಿದ ಒಂದೆರಡು ನಿಮಿಷಗಳಲ್ಲಿಯೇ ಮನಸ್ಸಿಗೆ ಜುಗುಪ್ಸೆಯುಂಟಾಗುತ್ತದೆ. ಇವುಗಳನ್ನು ದೈವಿಕ ಕೃತಿಗಳೆನ್ನಲು ಸಾಧ್ಯವಿಲ್ಲ. ಮಾರ್ಮಿಕ ಅಭಿಪ್ರಾಯಗಳಿಂದ ತುಂಬಿ ಇತರರಿಗೆ ಮಾರ್ಮಿಕ ವಿಮರ್ಶೆಗಳಿಂದಲೇ ತೃಪ್ತಿಗೊಳಿಸಲು ಈ ಕೃತಿಗಳು ಚಿರಕಾಲ ಬಾಳಲು ಸಾಧ್ಯವಿಲ್ಲ." ಎಂಬುದು ಶ್ರೀಯುತರ ಸ್ಪಷ್ಟ ಅಭಿಪ್ರಾಯ. "ಕ್ರಾಂತಿಯ ಮಾರ್ಗಾವಲಂಬಿಗಳಿಗೆ ಇದೊಂದು ಸುಯೋಗ, ಕವಿಗಳೂ ವಿಜ್ಞಾನಿಗಳೂ ಚಿತ್ರಾಭ್ಯಾಸ ಪರಿಚಯವಿಲ್ಲದೆ ತಾವೇ ಸ್ವತಃ ಚಿತ್ರಿಸಿದಂತಿದೆ. ಅವರ ದೋಷಗಳು ದೋಷಗಳಲ್ಲ. ಅಭಿಪ್ರಾಯವೇ ಅವರ ಕಲೆ. ಆದರೆ ಕಲೆಯ ಕೊಲೆ"–ಎಂದು ಶ್ರೀ ಐಯಂಗಾರ್ಯರು ನವ್ಯಚಿತ್ರಕಲೆಯ ಬಗ್ಗೆ ಖೇದದಿಂದ ನುಡಿಯುತ್ತಾರೆ.

ಹೀಗೆ ಕಲಾ ಪ್ರೌಢಿಮೆಯಲ್ಲಿ ಜನಪ್ರಿಯತೆಯಲ್ಲಿ ನೈತಿಕ ಜೀವನದಲ್ಲಿ ಗುಣಾಢ್ಯತೆಯಲ್ಲಿ ಶ್ರೀ ಎಸ್. ರಂಗಸ್ವಾಮಿ ಐಯಂಗಾರ್ಯರು ಅದ್ವಿತೀಯರೆನಿಸಿದ್ದಾರೆ. ಇವರ ಕಲಾಕೀರ್ತಿ ಇನ್ನೂ ದೇದೀಪ್ಯಮಾನವಾಗಿ ಬೆಳಗಲಿ.



ಶ್ರೀ ಬಿ. ಎಚ್. ರಾಮಚಂದ್ರ

ಒಮ್ಮೆ ಸೂರಡಿ ರಸ್ತೆಯಿಂದ ವಾಣೀವಿಲಾಸ ಮಾರ್ಕೆಟ್ಟಿನ ಕಡೆಗೆ ತ್ಯಾಗರಾಜ ರಸ್ತೆಯಲ್ಲಿ ಹೋಗುತ್ತಿದ್ದಾಗ ದಾರಿಯಲ್ಲಿ ಕಲಾವಿದ ಹನುಮಯ್ಯನವರ ಭೇಟಿ ಆಯಿತು ಆ ಮಾತು ಈ ಮಾತುಗಳ ನಡುವೆ ಶ್ರೀ ಸಾಯಿಮಂದಿರದಲ್ಲಿ ಮೈಸೂರಿನ ಕಲಾವಿದರೊಬ್ಬರಿಂದ ರಚಿಸಲ್ಪಟ್ಟ ತೈಲವರ್ಣದ ಚಿತ್ರದ ಬಗ್ಗೆ ಅವರು ತುಂಬ ಪ್ರಶಂಸೆಯ ಮಾತನಾಡಿದರು. ಸಂಜೆ ಏಳು ಗಂಟೆಯ ಸಮಯ. ಹತ್ತಿರದಲ್ಲೇ ಇದ್ದ ಶ್ರೀ ಸಾಯಿಮಂದಿರದ ಕಡೆಯಿಂದ

ಬರುತ್ತಿದೆ. ದಿವ್ಯ ಬೆಳಕು ಹರಡಿಕೊಂಡು ಅತ್ತ ನನ್ನನ್ನು ಕರೆಯಿತು. ನೂರಾರು ಮಂದಿ ಭಕ್ತರು ಹೋಗುತ್ತಿದ್ದರು, ಬರುತ್ತಿದ್ದರು. ಶ್ರೀ ಸಾಯಿ ಬಾಬಾನ ದರ್ಶನವನ್ನು ಪಡೆದು ಬರಲು, ಹಾಗೂ ಆ ವರ್ಣಚಿತ್ರವನ್ನು ನೋಡಿ ಬರಲು ಅತ್ತ ನಡೆದೆನು.

ಶ್ರೀ ಸಾಯಿಬಾಬಾ ಮಂದಿರ ಹೊಸದಾಗಿ ನಿರ್ಮಿತವಾದ ಭವ್ಯ ವಾದ ಕಟ್ಟಡ. ಶಿಲಾಪ್ರತಿಮೆಯ ಹಿಂದೆ ಗೋಡೆಯಲ್ಲಿ ಅಲಂಕರಿಸಲ್ಪಟ್ಟಿರುವ ಅಪೂರ್ವ ತೈಲವರ್ಣ ಚಿತ್ರ ವೈಶಿಷ್ಟ್ಯದಿಂದ ದೃಷ್ಟಿಯನ್ನು ತನ್ನತ್ತ ಸೆಳೆದು ಕೊಳ್ಳುತ್ತದೆ. ಸಾಯಿಬಾಬಾ ನಮ್ಮೆದುರು ಪ್ರಸನ್ನರಾಗಿ, ಪ್ರಶಾಂತರಾಗಿ ಪ್ರಕಟಗೊಂಡಿರುವಂತೆ. ಅವರ ದಿವ್ಯ ಸಾತ್ವಿಕಮೂರ್ತಿ ನಿಜರೂಪದಲ್ಲಿ ಪ್ರತ್ಯಕ್ಷವಾದಂತೆ ಕಾಣುವ ಆ ಚಿತ್ರ ಯಾರ ಎದೆಯಲ್ಲಾದರೂ ಭಕ್ತಿ ಕುಸುಮವನ್ನು ಅರಳಿಸುವುದಂತಿರಲಿ, ಅಲ್ಲಿ ಕಲಾವಿದರು ತೋರಿರುವ ಅಚ್ಚರಿಯ ಕಲಾ ವೈಖರಿ ಮನೋಜ್ಞವಾದುದು. ಆ ಕಣ್ಣುಗಳಲ್ಲಿ ಎದ್ದು ಕಾಣುವ ಜೀವಕಳೆ ಒಂದೇ ಸಮಗ್ರ ಚಿತ್ರಕ್ಕೆ ಕಳೆಕೊಟ್ಟಿದೆ ಎನ್ನಬಹು ದಾದರೂ ಆ ಮುಖದಲ್ಲಿನ ಗಾಂಭೀರ್ಯ, ಕನಿಕರ, ಸಾತ್ವಿಕತೆ-ಮುಂತಾದು ವನ್ನೂ ಪ್ರಶಂಸದಿರಲಾರೆವು.

ವ್ಯವಸ್ಥಾಪಕರನ್ನು ಈ ಚಿತ್ರದ ಬಗ್ಗೆ ಪ್ರಶ್ನಿಸಿದಾಗ ಆತ ಚಿತ್ರವನ್ನು ಮೆಚ್ಚಿದರೂ ಚಿತ್ರಕಾರರ ಬಗ್ಗೆ ಉದಾಸೀನತೆಯನ್ನು ವ್ಯಕ್ತಪಡಿಸಿದರು. ಕಲಾವಿದ ಯಾರೆಂಬುದನ್ನು ಹೇಳುವಷ್ಟು ಸಹನೆ ಬರಲಿಲ್ಲ. ಒಮ್ಮೆ 'ಬೊಂಬಾಯಿನಿಂದ ಮಾಡಿಸಿ ತರಿಸಿದುದಾಗಿಯೂ' ಮತ್ತೊಮ್ಮೆ 'One of my friends' ಎಂಬುದಾಗಿಯೂ ಅನಾದಾರಣೆಯ ಮಾತನಾಡಿದರು. ಆದರೆ ಕಲಾವಿದರ ಬಗ್ಗೆ ಹೆಚ್ಚು ಕುತೂಹಲ ಇದ್ದುದರಿಂದ ಕೆದಕಿ ಕೆದಕಿ ಕೇಳಿದಮೇಲೆ ಆ ಕಲಾವಿದರ ಹೆಸರನ್ನು ಬಹು ಕಷ್ಟದಿಂದಲೇ ಹೇಳಿದರು. ಈ ಉದಾಸೀನ ಭಾವನೆ ಏಕೋ ಏನೋ ಅರ್ಥವಾಗದಿದ್ದರೂ ಇಂಥ ಅಮೋಘ ಕೃತಿಯನ್ನು ರಚಿಸಿದ ಕಲಾವಿದನ ಬಗ್ಗೆ ಅವರು ತೋರುವ ಪುರಸ್ಕಾರದ ಬಗ್ಗೆ ನನಗೆ ವ್ಯಥೆಯಾಯಿತು. ನಮ್ಮ ನಾಡಿನ ಅನೇಕ ಕಲಾವಿದರಿಗೆ ಈ ಬಗೆಯ ಅನ್ಯಾಯಗಳು ಆಗುತ್ತಿರುವುದು ಹೊಸದೇನೂ ಅಲ್ಲ.

ಆ ಚಿತ್ರವನ್ನು ನೋಡಿದ ನಂತರ ಶ್ರೀ ಹನುಮಯ್ಯನವರ ಪ್ರಶಂಸೆ

ಯಲ್ಲಿ ಅತಿಶಯೋಕ್ತಿ ಏನೂ ಇಲ್ಲವೆಂಬುದನ್ನು ಆ ಚಿತ್ರ ನೋಡಿದ ನಾನು ಅರಿತುಕೊಂಡೆನು.

ಇದರ ಕರ್ತೃ ಬಹಳ ಮಂದಿಗೆ ಪರಿಚಿತರಲ್ಲ. ಸುಬ್ಬರಾಯನ ಕೆರೆಯ ಪಕ್ಕದ ಕಾಲೇಜು ರಸ್ತೆಯ ಬಲಪಾರ್ಶ್ವದ ಮನೆಯ ಸಾಲುಗಳಲ್ಲಿ ಬಿ. ಹೆಚ್. ರಾಮಚಂದ್ರ ಎಂಬ ಬೋರ್ಡು ಒಂದು ಮನೆಯ ಮುಂದೆ ಕಣ್ಣಿಗೆ ಬೀಳುತ್ತದೆ. ಅಲ್ಲಿ "ಆರ್ಟಿಸ್ಟ್" ಎಂಬ ಪದ ಹಿಡಿದು ನಿಲ್ಲಿಸಿ ಒಳಗೆ ಕರೆದೊಯ್ಯುತ್ತದೆ. ತುಂಬ ಗಂಭೀರಭಾವದ ಸರಳ ವ್ಯಕ್ತಿ ಸ್ವಾಗತವನ್ನು ಬಯಸುತ್ತಾರೆ. ಎದುರುಗೋಡೆಯಲ್ಲಿ ೧೯೪೦ ರಲ್ಲಿ ಅವರೇ ಚಿತ್ರಿಸಿದ ತಾತಂದಿರ ತೈಲ ವರ್ಣದ ಭಾವಚಿತ್ರವನ್ನು ಮೊದಲು ಪರಿಚಯಮಾಡಿಕೊಡುತ್ತಾರೆ. ಮಹಡಿಯ ಮೆಟ್ಟಿಲುಗಳನ್ನೇರಿ ಅವರ ಕೊಠಡಿಯನ್ನು ಸೇರುವ ಮುನ್ನ ಇನ್ನೂ ಎರಡು ಮೂರು ಭಾವಚಿತ್ರಗಳು ಮನಸೆಳೆಯುತ್ತವೆ. "ಮರೆಯಲಾಗದ ಮುದುಕ," "ಮೀಸೆಯ ಮಲ್ಲ" "ತುಳಸೀಪೂಜೆ" ಇವುಗಳು ಒಂದೊಂದೂ ನಮ್ಮನ್ನು ಹಿಡಿದು ನಿಲ್ಲಿಸುತ್ತವೆ. ಅವರ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆಯೇ "ಅಶ್ವತ್ಥ ವೃಕ್ಷ," "ನದಿಯ ತೀರ" ಮುಂತಾದ ಆಕರ್ಷಕ ಜಲವರ್ಣದ ಪ್ರಕೃತಿ ಚಿತ್ರಗಳು ಕೆಲಕಾಲ ಮೂಕರನ್ನಾಗಿ ಮಾಡುತ್ತವೆ. ಇನ್ನೊಂದುಕಡೆ ಕಲಾವಿದರು ಬಹು ಮೆಚ್ಚಿಕೊಂಡ ಎ. ಎಕ್ಸ್. ಟೆಂಡಾಪ್ರರ್ಡ್‌ನ 'ಹೊಸ ವರ್ಷದ ಗೀತೆ' ಎಂಬ ಭಾವಚಿತ್ರ ನಮ್ಮನ್ನು ಸೆಳೆಯುತ್ತದೆ.

ಅಲ್ಲಲ್ಲಿ ಜೋಡಿಸಲ್ಪಟ್ಟ ಕಲಾಸಂಬಂಧವಾದ ಪುಸ್ತಕಗಳೂ, ಚದುರಿಬಿದ್ದ ಕುಂಚಗಳೂ, ಗೋಡೆಯ ಬದಿಯಲ್ಲಿ ಸದಾ ಸಿದ್ಧವಾಗಿರುವಂತೆ ರಟ್ಟಿನ ಮೇಲೆ ಅಂಟಿಸಿ ಜೋಡಿಸಲ್ಪಟ್ಟಿರುವ ಅನೇಕ ಕ್ಯಾನ್‌ವಾಸುಗಳೂ ವಿಶ್ರಾಂತಿ ಪಡೆಯುತ್ತಿವೆ. ಕಲಾವಿದ ಶ್ರೀ ರಾಮಚಂದ್ರರ ಪರಿಚಯ ನಿಜಕ್ಕೂ ಹೆಮ್ಮೆ ಪಡಬಹುದಾದುದು.

ಅರಮನೆಯ ಶಿರಸ್ತೇದಾರರಾಗಿ ಕೆಲಸಮಾಡುತ್ತಿದ್ದ ಶ್ರೀ ಬಿ. ಎಂ. ಹಿರಿಯಣ್ಣಯ್ಯನವರ ಪುತ್ರರಾಗಿ ಶ್ರೀಯುತರು ೧೯೧೧ ರಲ್ಲಿ ಮೈಸೂರಲ್ಲಿ ಜನಿಸಿದರು. ಚಿಕ್ಕಂದಿನಲ್ಲಿ ತಂದೆಯವರ ಜೊತೆಯಲ್ಲಿ ಅರಮನೆಗೆ ಹೋಗಿ ಬರುವುದು, ಅಲ್ಲಿನ ಕಲಾವಸ್ತು ಸಾಮಾಗ್ರಿಗಳನ್ನು ಮನದಣಿಯ

ನೋಡುತ್ತಾ ಮೈಮರೆಯುವುದು ಅವುಗಳ ಮುಂದೆ ವಿಚಿತ್ರವಾದ ಕಲ್ಪನಾ ಕನಸುಗಳನ್ನು ಕಟ್ಟುವುದು ಬಾಲಕ ರಾಮಚಂದ್ರರ ರೂಢಿಯಾಗಿತ್ತು. ಒಮ್ಮೆ ಜಗತ್ಪ್ರಸಿದ್ಧವಾದ ವರ್ಣಚಿತ್ರಗಳ ಸಂಗ್ರಹಾಲಯವೆನಿಸಿರುವ ಜಗನ್ಮೋಹನ ಅರಮನೆಗೆ ಮೊದಲಬಾರಿಗೆ ಭೇಟಿಕೊಟ್ಟರು. ಅಲ್ಲಿನ ಭವ್ಯಕಲಾಕೃತಿಗಳು ಎಳೆಯ ಮನಸ್ಸಿನಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವು. ಒಂದೊಂದು ಚಿತ್ರದ ಮುಂದೂ ಕಾಲು ಸೋಲುವಷ್ಟು ವೇಳೆ ನಿಂತು, ಸೂಕ್ಷ್ಮವಾಗಿ ಅವಲೋಕಿಸುತ್ತಾ ಭಾವತನ್ಮಯತೆಯಲ್ಲಿ ಮೈಮರೆಯುತ್ತಿದ್ದರು. ಎಷ್ಟು ಹೊತ್ತು ಆ ಚಿತ್ರ ಪಟಗಳ ಮುಂದೆ ನಿಂತರೋ ಅವರಿಗೇ ಅರಿವಿಲ್ಲ. ಅಲ್ಲಿನ ಭಾವಚಿತ್ರಗಳೂ, ಪ್ರಕೃತಿಚಿತ್ರಗಳೂ ಒಂದು ವಿಶೇಷವಾದ ಆಕರ್ಷಣೆಯನ್ನು ಬೀರಿದವು. ಕಲೆಯ ಬಗ್ಗೆ ಕುತೂಹಲವನ್ನು ಕೆರಳಿಸಿದವು. ಬಹುಶಃ ಕಲಾಸರಸ್ವತಿ ಇಲ್ಲಿಂದಲೇ ಶ್ರೀಯುತರಿಗೆ ಒಲಿದು ಬಂದಳೆಂದರೂ ಅನ್ನಬಹುದು.

ಎಲ್ಲರಂತೆ ಶ್ರೀ ಹಿರಿಯಣ್ಣಯ್ಯನವರಿಗೂ ತಮ್ಮ ಮಗನನ್ನು ಪದವೀಧರನನ್ನಾಗಿ ಮಾಡಿ ಮುಂದೆ ತರಬೇಕೆಂಬ ಹಂಬಲವಿತ್ತು. ತಾಯಿಯವರದೂ ಅದೇ ಕನಸು. ಹಾಗೂ ಹೀಗೂ ಬನುಮಯ್ಯನವರ ಪ್ರೌಢಶಾಲೆಯಲ್ಲಿ ವ್ಯಾಸಂಗ ಮುಂದುವರಿಯಿತು. ಈ ವೇಳೆಯಲ್ಲಿ ಮತ್ತೆ ಮತ್ತೆ ಜಗನ್ಮೋಹನ ಚಿತ್ರಶಾಲೆಗೆ ಹೋಗಿ ಬರುವುದು, ಶ್ರೀರಂಗಪಟ್ಟಣದ ಐತಿಹಾಸಿಕ ನೆಲೆಗಳಲ್ಲಿ ಸುತ್ತಾಡಿ ಬರುವುದು, ಚಾಮುಂಡಿ ಬೆಟ್ಟದ ಪ್ರಕೃತಿ ಸೌಂದರ್ಯದ ನಡುವೆ ಸುಳಿದಾಡುವುದು ಮುಂತಾದ ಕಾರ್ಯಕ್ರಮಗಳೂ ಜೊತೆ ಜೊತೆಯಲ್ಲೇ ಸಾಗುತ್ತಾ ಬಂದು ವಿದ್ಯಾಭ್ಯಾಸದ ಕಡೆ ಗಮನ ಕುಂಟುತ್ತಾ, ಕೂರುತ್ತಾ ಕೊನೆಗೊಮ್ಮೆ ಸಂಪೂರ್ಣವಾಗಿ ಶರಣು ಹೊಡೆಯುವ ಸ್ಥಿತಿ ಬಂತು ಈ ವೇಳೆಗಾಗಲೇ ಚಿತ್ರಕಲೆಯಲ್ಲಿ ತುಂಬ ಅಭಿರುಚಿಯನ್ನು ಬೆಳೆಸಿಕೊಂಡು ಅಭ್ಯಾಸಮಾಡುತ್ತಾ ಬಂದಿದ್ದರು. ನಾಡನ್ನು ಬಳಸಿ ಹರಿದುಬರುವ ನದಿಯನ್ನು ಸಮುದ್ರ ತನ್ನೆಡೆಗೆ ಸೆಳೆಯುವಂತೆ ಶ್ರೀ ಚಾಮರಾಜೇಂದ್ರ ಕಲಾಶಾಲೆ ಶ್ರೀಯುತರನ್ನೂ ಆಕರ್ಷಿಸಿತು. ಅಲ್ಲಿನ ಕಲಾವಿದ್ಯಾರ್ಥಿಯಾಗಿ ೧೯೩೭ರಲ್ಲಿ ಸೇರಿಕೊಂಡುದುದರ ಪರಿಣಾಮವಾಗಿ ಸುಪ್ತವಾಗಿದ್ದ ಕಲಾಕಿರಣ ಪ್ರಕಾಶಿಸಲು ಅವಕಾಶ ದೊರೆತಂತಾಯಿತು, ದುಡಿಮೆ ಇಲ್ಲದ ಈ ವೃತ್ತಿ

ಮಾತಾಪಿತೃಗಳಿಗೆ ಅಷ್ಟೇನು ಸಮಾಧಾನವಾದಂತೆ ಕಾಣಲಿಲ್ಲ. ಯಾರಾದರೂ ಆಪ್ತರು "ನಿಮ್ಮ ಮಗ ಏನುಮಾಡ್ತಾನೆ ಸ್ವಾಮಿ" ಎಂದು ಕೇಳಿದರೆ, "ಏನೋ ಮಾಡುತ್ತಾನೆ...ಏನೋ ಬರೆಯುತ್ತಾನೆ...!" ಎಂದು ಉದಾಸೀನದಿಂದ ನುಡಿಯುವಷ್ಟು ಅವರು ಇವರ ಕಲಾಭ್ಯಾಸದಲ್ಲಿ ಅನಾಸಕ್ತಿಯನ್ನು ತೋರಿದರೂ, ಮಗನ ಸಾಧನೆಯ ಬಗ್ಗೆ ಹೃದಯದಲ್ಲಿ ಮೆಚ್ಚಿಗೆಯ ಮಧುವನ್ನೇನೋ ಇಟ್ಟುಕೊಂಡೇ ಇದ್ದರು. ಶ್ರೀ ರಾಮಚಂದ್ರರ ಹಟವಾದಿತನ. ಅಚಲಶ್ರದ್ಧೆಗಳು ಅವರನ್ನು ಮುಂದೆ ಮುಂದೆ ಕರೆದೊಯ್ದವು.

ತರಗತಿಯಲ್ಲಿ ಬಹು ಉತ್ಸಾಹಶಾಲಿಯಾದ ವಿದ್ಯಾರ್ಥಿ ಎನಿಸಿದ್ದರು. ಇವರ ಸಹಪಾಠಿಗಳಾಗಿ ಶ್ರೀ ಎನ್. ಎಸ್. ಸುಬ್ಬಕೃಷ್ಣ, ಶ್ರೀ ಎಸ್. ಎಸ್. ಕುಕ್ಕೆ ಮುಂತಾದವರೂ ಇದ್ದುದು ಇವರಿಗೊಂದು ಸ್ಫೂರ್ತಿ ಬಂದಂತಾಯಿತು. ಭಾವಚಿತ್ರ ಕಲೆಯಲ್ಲಿ ನಿಸ್ಸೀಮರೆನಿಸಿದ್ದ ದಿವಂಗತ ಕೆ. ಕೇಶವಯ್ಯನವರೂ, ಪ್ರಕೃತಿ ಚಿತ್ರ ರಚನೆಯಲ್ಲಿ ಪ್ರವೀಣರೆನಿಸಿದ್ದ ಶ್ರೀ ಟಂಕಸಾಲೆಯವರ ಮಾರ್ಗದರ್ಶನದಲ್ಲಿ ಕಲಾಭ್ಯಾಸ ಅವ್ಯಾಹತವಾಗಿ ಸಾಗಿದ್ದಿತು. ಆಗ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಒಂದು ವಿಶೇಷವಾದ ಬಹುಮಾನವನ್ನು ಉತ್ತೇಜನಾರ್ಥವಾಗಿ ಕೊಡುತ್ತಿದ್ದರು. ಅದನ್ನು ಶ್ರೀಯುತರು ಪ್ರತಿವರ್ಷವೂ ಪಡೆಯುತ್ತಾ ಬಂದುದು ಅವರ ನಿಷ್ಠೆಗೆ ಸಾಕ್ಷಿಯಾಗಿದೆ. ಇವುಗಳ ಜೊತೆಯಲ್ಲಿ ಮದರಾಸಿನ ಕಲಾ ಪರೀಕ್ಷೆಗಳಲ್ಲೂ ಯಶಸ್ವಿಯಾಗಿ ಉತ್ತೀರ್ಣರಾಗುತ್ತಾ ಬಂದರು. ಚಾಮರಾಜ ಕಲಾಶಾಲೆಯ ಕೊನೆಯ ವರ್ಷದಲ್ಲಿದ್ದಾಗ ಹೆಚ್ಚಿನ ಶ್ರಮವಹಿಸಿ ಕಲೆಯಲ್ಲಿ ವಿಶೇಷ ಪರಿಶ್ರಮವನ್ನು ಗಳಿಸಿಕೊಂಡರು. ಇದುವರೆವಿಗೂ ಏನೋ ಒಂದು ಬಗೆಯಲ್ಲಿ ವೈವಿಧ್ಯವಿಲ್ಲದೆ ಸಾಗಿದ್ದ ಕಲಾಶಿಕ್ಷಣ ಇಲ್ಲಿ ಹೆಚ್ಚು ಅನುಭವ ಸಾಧನೆಗೆ ಕಾರಣವಾಯಿತು. ಇದಕ್ಕೆ ಶ್ರಿ ಪಾವಂಜೆಯವರಂಥ ಮೇಧಾವಿ ಕಲಾವಿದರು ವಿದ್ಯಾರ್ಥಿಗಳ ಕಲಾಕೃತಿಗಳಲ್ಲಿನ ತಾಂತ್ರಿಕ ಕುಂದುಕೊರತೆಗಳನ್ನು ತೋರಿಕೊಡುವುದು ತಿದ್ದಿಕೊಳ್ಳಬೇಕಾದರೆ ಉಚಿತ ಸಲಹೆಗಳನ್ನು ನೀಡುವುದೂ ಮುಂತಾದ ಉತ್ತಮ ಮಾರ್ಗದರ್ಶನ ಲಭ್ಯವಾಯಿತು. ಶ್ರೀ ಪಾವಂಜೆಯವರು ಅದೇ ತಾನೆ ಜರ್ಮನಿಯಲ್ಲಿ ವಿಶೇಷ ಶಿಕ್ಷಣವನ್ನು ಪಡೆದು ಬಂದು, ಅದೇ ಶಾಲೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿದ್ದರು.

ತುಂಬಾ ಕಲಾಪ್ರೌಢಿಮೆಯನ್ನು ಗಳಿಸಿಕೊಂಡಿದ್ದ ಅವರು ತಮ್ಮ ವಿದ್ಯಾರ್ಥಿಗಳಿಗೆ ಆಗಾಗ ಸಂದರ್ಶನಕೊಟ್ಟು ದೋಷಗಳನ್ನು ತಿದ್ದಿಕೊಳ್ಳಲು ಹೇಳುತ್ತಿದ್ದರು. ಅವರ ಅನುಭವಸಿದ್ಧವಾದ ಒಂದೊಂದು ಮಾತಿನಲ್ಲೂ ವಿದ್ಯಾರ್ಥಿಗಳು ತಮ್ಮ ಡೊಂಕುಗಳನ್ನು ಸರಿಪಡಿಸಿಕೊಳ್ಳುವ ಅವಕಾಶವೊದಗಿತು

ಚಿತ್ರಶಾಲೆಯ ಐದು ವರ್ಷಗಳ ಸತತಾಭ್ಯಾಸವನ್ನು ಮುಗಿಸಿ, ವಿಶಾಲ ಕ್ಷೇತ್ರದಲ್ಲಿ ಕಾಲಿಟ್ಟರು. ಬಹುಮುಖವಾದ ಕಲಾರಾಧನೆಯನ್ನು ಅಂದಿನಿಂದಲೇ ಆರಂಭಮಾಡಿದರು. ಪೇಟೆಗೆ ಹೋಗುವಾಗ ದಾರಿಯಲ್ಲಿ ಸಿಗುವ ವಿವಿಧ ವೇಷದ, ವಿವಿಧ ರೀತಿಯ ಅಂಗಭಂಗಿಯ ಜನರನ್ನು ನೋಡುವುದು ; ಅವರ ಗಡ್ಡ, ಮೀಸೆ, ಬಣ್ಣ, ಮೈಕಟ್ಟು. ಮುಂತಾದುವನ್ನು ನೋಡುತ್ತಾ ತಮ್ಮ ಚಿತ್ರಕ್ಕೆ ವಸ್ತುಗಳನ್ನು ಅರಸುತ್ತಾ ಸಾಗುವುದು ಇವರ ವಾಡಿಕೆಯಾಗಿತ್ತು. ಯಾರಾದರೂ ಅಪೂರ್ವ ವ್ಯಕ್ತಿ ದೊರೆತರೆ ಅವರನ್ನು ಕರೆದುಕೊಂಡು ಹೋಗಿ, ಅವರು ಕೇಳಿದಷ್ಟು ಹಣ ತೆತ್ತು ಅವರ ' ಸಿಟಿಂಗ್ ' ಅನ್ನು ಪಡೆಯುತ್ತಿದ್ದರು. ಹೀಗೆ ಚಿತ್ರಿತವಾದವುಗಳಲ್ಲಿ " ಮರೆಯಲಾಗದ ಮುದುಕ," " ಮೀಸೆಯ ಮಲ್ಲ " ಇವು ಅವರ ಅನೇಕ ಯಶಸ್ವೀ ಚಿತ್ರಗಳಲ್ಲಿ ಎರಡಾಗಿವೆ.

" ಮರೆಯಲಾಗದ ಮುದುಕ "—ಭಾವಚಿತ್ರವು ಒಂದು ಅಸಾಧಾರಣ ಕೃತಿ. ಇದರಲ್ಲಿ ಬಹು ಸೂಕ್ಷ್ಮವಾದ, ನವುರಾದ ಕಲೆಗಾರಿಕೆಯನ್ನು ನಾವು ಕಾಣುತ್ತೇವೆ. ಒಂದು ಪಾರ್ಶ್ವದಿಂದ ಬೆಳಕು ಮುಖದ ಮೇಲೆ ಚೆಲ್ಲಿದೆ. ನೆಳಲು ಬೆಳಕುಗಳ ಸಂಮಿಶ್ರಣ ರಮ್ಯವಾಗಿದೆ. ಕುಂಚದ ತೀಕ್ಷ್ಣತೆಯನ್ನೂ, ಓಟವನ್ನೂ, ಮುದುಕನ ಗಡ್ಡ ಮೀಸೆಗಳಿಗೆ ಬಳಸಿರುವ ವರ್ಣಗಳಲ್ಲಿ ಕಾಣಬಹುದು. ಹಣೆಯಮೇಲಿನ ನರಗಳೂ, ಕಣ್ಣಿನ ಬಳಿಯ ಸುಕ್ಕು ಗೆರೆಗಳೂ, ಮುಖದ ಏರು ತಗ್ಗುಗಳೂ ಬಹುಜಾಣ್ಮೆಯಿಂದ ಬಿಡಿಸಲ್ಪಟ್ಟವೆ. ಕಪ್ಪು ಹಿನ್ನೆಲೆಯಲ್ಲಿ ಚಿತ್ರಿತವಾಗಿರುವ ಇದು ಪಾಶ್ಚಿಮಾತ್ಯ ಭಾವಚಿತ್ರ ಕಲಾವಿದ ಮ್ಯಾನೆಟನ ಮತ್ತು ರೆಂಬ್ರಾಂಟನ ಚಿತ್ರಗಳನ್ನು ನೆನಪಿಗೆ ತರುತ್ತದೆ. ಮ್ಯಾನೆಟನ ' ಲಿ ಬೋನ್ ಬೇಕ್ ' ಮತ್ತು ರೆಂಬ್ರಾಂಟನ ' ಆರ್ಟಿಸ್ಟ್ಸ್ ಸನ್ ' ಚಿತ್ರಗಳ ಮಟ್ಟದಲ್ಲಿ ಈ ಕಲಾಕೃತಿಯನ್ನು ತೂಗಿ ನೋಡಬಹುದಾಗಿದೆ.

ಶ್ರೀಯುತರು ಚಿತ್ರಕಲೆಯ ಎಲ್ಲಾ ವಿಭಾಗಗಳಲ್ಲಿಯೂ ಕುಂಚವನ್ನು ಆಡಿಸಿದ್ದಾರೆ. ಅಂತೆಯೇ ಬಹುಮಾನಗಳನ್ನು ಗಳಿಸಿದ್ದಾರೆ. ೧೯೩೭ರ ದಸರಾ ಕಲಾಪ್ರದರ್ಶನದಲ್ಲಿ ಇವರ ಕಲಾಕೃತಿಗಳಿಗೆ ಪ್ರಥಮ ಬಹುಮಾನಗಳ ಸುರಿ ಮಳೆಯೇ ಆಯಿತು. ಜೊತೆಗೆ ಯುವರಾಜರ ರಜತ ಕರಂಡವೂ ಇವರ ಪಾಲಿಗೇ ಮೀಸಲಾಯಿತು. ಅಲ್ಲದೆ ಕಮಿಟಿಯ ಸುವರ್ಣಪದಕವೂ ಅನೇಕ ರಜತ ಪಾರಿತೋಷಕಗಳೂ ಇವರಿಗೆ ಬಂದಿವೆ. ೧೯೩೯ ರಲ್ಲಿ ಬೊಂಬಾಯಿನಲ್ಲಿ ನಡೆದ ಆರ್ಟ್ಸ್ ಸೊಸೈಟಿಯ ಸುವರ್ಣ ಮಹೋತ್ಸವದಲ್ಲಿ ತಮ್ಮ ಚಿತ್ರ ಗಳನ್ನು ಪ್ರದರ್ಶಿಸುವ ಸದವಕಾಶ ಮೈಸೂರಿನವರಾದ ಇವರಿಗೆ ದೊರೆತುದು ಕನ್ನಡಿಗರು ಹೆಮ್ಮೆ ಪಡಬೇಕಾದ ವಿಷಯ. ೧೯೪೫ ರಲ್ಲಿ ಇವರ 'ಸೇಕ್ರೆಡ್ ಪೈಪಲ್ ಟ್ರೀ' ಚಿತ್ರಕ್ಕೆ ಬಹುಮಾನ ದೊರೆಯಿತು. ಕಲ್ಕತ್ತ ಕಲಾ ಪ್ರದರ್ಶನಗಳಿಗೆ ಹೋದ ಇವರ ಚಿತ್ರಗಳಾವುವೂ ಮರಾಟವಾಗದೆ ಉಳಿದಿಲ್ಲ. ಸ್ವೀಡನ್, ಜಿನೀವಾ, ಲಂಡನ್ ಮುಂತಾದ ಕಡೆಗಳಲ್ಲಿ ಇವರ ಕೃತಿಗಳು ಈಗಲೂ ಶೋಭಿಸುತ್ತಿವೆ. ಇವರ "ಟೆಂಪಲ್ ಇನ್‌ಟೀರಿಯರ್" ಎಂಬ ಚಿತ್ರವನ್ನು ಲೇಡಿ ವಿಲಿಂಗ್‌ಡನ್‌ರು ಮೆಚ್ಚಿಕೊಂಡು, ಕೊಂಡು ಹೋಗಿದ್ದಾರೆ. ಆಲ್ಲದೆ ಇಷ್ಟಾದರೂ ಶ್ರೀಯುತರು ತಮ್ಮ ಚಿತ್ರಕಲೆ "ವ್ಯಾಪಾರ ದೃಷ್ಟಿ ಯಿಂದಲ್ಲ ಸಾಧನೆಗಾಗಿ" ಎಂದು ಹೇಳುತ್ತಾರೆ. ಅವರ ಕಲಾಕೃತಿಗಳನ್ನು ನೋಡಿದರೆ ಈ ಮಾತು ಸಹಜವೆನಿಸುತ್ತದೆ. ಪ್ರಕೃತಿ ದೃಶ್ಯಗಳ ಎದುರಿ ನಲ್ಲಿಯೇ ಕುಳಿತು, ಕೊಂಚ ಶ್ರಮವಾದರೂ ಸಹಿಸಿಕೊಂಡು ಚಿತ್ರಿಸುವ ಕೆಲವೇ ಕಲಾವಿದರಲ್ಲಿ ಇವರೂ ಒಬ್ಬರಾಗಿದ್ದಾರೆ. ಏನಿದ್ದರೂ ಸಹಜ ಚಿತ್ರ ಣಕ್ಕೆ ಇವರ ದೃಷ್ಟಿಯೂ, ಬೆಲೆಯೂ ಹೆಚ್ಚು. ಹಾಗೆಯೇ ಇವರ ಕೃತಿಗಳು ವಿಶಿಷ್ಟವೆನಿಸಿವೆ.

ಡಿ. ಎಫ್. ಸ್ಪಿಂಕ್ ಎಂಬ ಕಲಾಭಿಮಾನಿಗಳೊಬ್ಬರು ಕಲ್ಕತ್ತ ಕಲಾ ಪ್ರದರ್ಶನದಲ್ಲಿ ಒಮ್ಮೆ ಇವರ ಪಶ್ಚಿಮವಾಹಿನಿಯ ಜಲವರ್ಣ ಚಿತ್ರವನ್ನು ನೋಡಿ "your picture 'Ablution at Paschimavahini' appealed to me especially as a most attractive rendering of a very typical Indian scene and I was sorry to see that it was sold Please send me some similar paintings." ಈ ರೀತಿಯ ಪ್ರಶಂಸೆಯ ಪತ್ರವನ್ನು ಬರೆದಿದ್ದಾರೆ.

ಶ್ರೀಯುತರು ಅನೇಕ ಸ್ನಾನಘಟ್ಟಗಳನ್ನೂ, ದೇಗುಲಗಳನ್ನೂ ಭಾರತೀಯರ ವಿಶಿಷ್ಟ ದೃಶ್ಯಗಳನ್ನೂ; ಮೇದರು, ಕುಂಬಾರರು ಮುಂತಾದವರಿಗೆ ಸಂಬಂಧಪಟ್ಟ ಅನೇಕ ಗೃಹಕೈಗಾರಿಕಾ ಚಿತ್ರಗಳ್ನೂ ಬರೆದು ಪ್ರಸಿದ್ಧಿಗೆ ಬಂದಿದ್ದಾರೆ. ಇತ್ತೀಚೆಗೆ ಇವರ ಹೊಸಚಿತ್ರಗಳ ಹೆಸರು ಕೇಳಬರದಿದ್ದರೂ, ಇನ್ನೂ ಉತ್ತಮ ಕಲಾಕೃತಿಗಳನ್ನು ನೀಡಬಲ್ಲೆನೆಂಬ ಭರವಸೆಯನ್ನು ಕೊಡುತ್ತಿದ್ದಾರೆ. ಆ ಕೆಚ್ಚು, ಆ ಪ್ರತಿಭೆಯೂ ಅವರಲ್ಲಿದೆ. ಅವರ ಗುಪ್ತವಾಹಿನಿ ಎಂದು ವ್ಯಕ್ತವಾಹಿನಿಯಾಗಿ ಗೋಚರಿಸುವುದೋ ಹೇಳಲಾಗುವುದಿಲ್ಲ. ಕಾದು ನೋಡಬೇಕಾಗಿದೆ. ಆದರೂ ಅವರ ಇದುವರಿಗಿನ ಕೃತಿಗಳೇ ಸಾಕಷ್ಟು ಕೀರ್ತಿಯನ್ನೂ ಯಶಸ್ಸನ್ನೂ ತಂದಿವೆ ಎಂದರೆ ಅತಿಶಯೋಕ್ತಿ ಆಗಲಾರದು.

ಇವರ ಸ್ಫೂರ್ತಿ ಕೇಂದ್ರವಾದ ಜಗನ್ಮೋಹನ ಚಿತ್ರಶಾಲೆಯಲ್ಲಿ ಹೊಕ್ಕಾಗ ಇವರ ಕೆಲವು ಪ್ರಕೃತಿ ಚಿತ್ರಗಳು ಅಲ್ಲಿ ಸ್ಥಾನವನ್ನು ಪಡೆದಿವೆ.

ಶ್ರೀಯುತರು ತುಂಬಾ ಮೌನದ ವ್ಯಕ್ತಿತ್ವ. ಯಾರ ಜೊತೆಯೂ ಹೆಚ್ಚಾಗಿ ಬೆರೆಯುವವರಲ್ಲ. ಯಾವ ಕೀರ್ತಿಯನ್ನೂ ಇವರು ಬಯಸುವವರಲ್ಲ. ನಿಜವಾದ ಕಲಾಪ್ರೌಢಿಮೆಯುಳ್ಳವರನ್ನು ಮನಸಾರೆ ಮೆಚ್ಚಿಕೊಳ್ಳುತ್ತಾರೆ. ಅಂತೆಯೇ ಪ್ರಶಂಸಿಸುತ್ತಾರೆ. ಸಾಮಾನ್ಯವಾಗಿ ಮನಸ್ಸಿಗೆ ಬೇಸರವಾದಾಗ ತಮ್ಮ ಮುದ್ದು ಮಗುವನ್ನು ಎತ್ತಿಕೊಂಡು ಸುಬ್ಬರಾಯನ ಕೆರೆಯ ಸುತ್ತಲೂ ಅಡ್ಡಾಡಿಕೊಂಡು ಬರುತ್ತಾರೆ. ಈ ವ್ಯಕ್ತಿ ಐವತ್ತೇಳುವರ್ಷಗಳನ್ನು ದಾಟಿ ಬಂದಿದ್ದರೂ ಇನ್ನೂ ಯುವಕರಂತೆಯೇ ತೋರುತ್ತಾರೆ. "ತಮ್ಮ ಜೀವನ ಪಥದಲ್ಲಿ ಏನೋ ಒಂದು ಬಗೆಯ ಕಾರ್ಮೋಡಗಳು ಕವಿದಂತಾಗಿವೆ. ಅವುಗಳನ್ನು ಚದುರಿಸಿ ದಾರಿಮಾಡಿಕೊಡುವ ಬಿರುಗಾಳಿ ಇಂದಲ್ಲ ನಾಳೆ ಬಂದೇ ಬರುತ್ತದೆ" ಎಂದು ಅರ್ಥಗರ್ಭಿತವಾಗಿ ನುಡಿಯುತ್ತಾರೆ. ಆ ಮಾತಿನ ಹಿನ್ನೆಲೆ ಕಲಾವಿದನ ಜೀವನದ ನೂರು ಕಹಿಗಳನ್ನು ಹೊತ್ತು ನಿಂತಂತೆ ತೋರಿದರೂ ಆತಂಕಗಳಿಗೂ ಎದೆಗುಂದದೆ ಕೆಚ್ಚಿನಿಂದ ತಮ್ಮ ಕಲಾರಾಧನೆಯನ್ನು ಮುಂದುವರಿಸಿಕೊಂಡು ಹೋಗುವರೆಂಬ ನಂಬಿಕೆ ನನಗಿದೆ.

ಎಂ. ಎಸ್. ಚಂದ್ರಶೇಖರ್

೧೯೫೩ ರಲ್ಲಿ ಮೈಸೂರಿನ ಎಲೈಟ್ ಮುದ್ರಣಾಲಯದ ಮುಹಡಿಯ ಮೇಲೆ ನಾವು ಕೆಲವು ಸ್ನೇಹಿತರು ಸಂಭಾಷಿಸುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಸ್ನೇಹಿತರೊಬ್ಬರು ಗೋಡೆಯಲ್ಲಿ ತೂಗುಹಾಕಿದ್ದ ಕ್ಯಾಲೆಂಡರ್ ಕಡೆ ಕಣ್ಣು ಹರಿಸಿ ಏನೋ ಕಂಡವರಂತೆ ಮಾತನ್ನು ನಿಲ್ಲಿಸಿಬಿಟ್ಟರು. ಕ್ಯಾಲೆಂಡರಿನ ಮೇಲೆ ಅಚ್ಚಾಗಿದ್ದ ವರ್ಣರಂಜಿತ ಕಲಾಕೃತಿ ಅವರ ಮನಸ್ಸನ್ನು ಸೆಳೆಯಿತು. ಕಲ್ಕತ್ತದ ಗ್ಯಾಂಜೆಸ್ ಬಣ್ಣದ ಕಂಪನಿಯವರು ಅದನ್ನು ಪ್ರಕಟಿಸಿದ್ದರು.

ಅದರ ಹತ್ತಿರ ಹೋಗಿ ಆ ಸುಂದರ ಚಿತ್ರವನ್ನು ಬರೆದುಕೊಟ್ಟ ಕಲಾವಿದ ಯಾರೆಂಬುದನ್ನು ನೋಡಿದಾಗಲಂತೂ, ಅವರು ಮತ್ತೂ ಆಶ್ಚರ್ಯಪಟ್ಟರು. ಮೈಸೂರಿನ ಕಲಾವಿದರೊಬ್ಬರ ಕೃತಿಯನ್ನು ಕಲ್ಕತ್ತೆಯವರು ಆರಿಸಿ ಪ್ರಕಟಿಸಿದುದು ಒಂದು ಹೆಮ್ಮೆ ಪಡಬಹುದಾದ ವಿಷಯವೇ ಆಗಿದ್ದಿತು.

ಮೈಸೂರಿನ ತರುಣ ಪ್ರಕೃತಿ ಕಲಾವಿದ ಎಂ. ಎಸ್. ಚಂದ್ರಶೇಖರ್ ಅವರಿಂದ ರಚಿತವಾದ ಕಲಾಕೃತಿ ಅದು. ಆ ವರ್ಷ ಕಲ್ಕತ್ತದ ಕಲಾಪ್ರದರ್ಶನದಲ್ಲಿ ಬಹುಮಾನಿತವಾಗಿದ್ದಿತು. ಅದನ್ನು ಗ್ಯಾಂಜೆಸ್ ಕಂಪನಿಯವರು ಕೊಂಡು ಅಚ್ಚುಹಾಕಿಸಿದ್ದರು. ನದಿಯ ತೀರದ ಒಂದು ಅನುಪಮ ದೃಶ್ಯವನ್ನೊಳಗೊಂಡ ಚಿತ್ರವದು. ನದಿಯ ಪವಿತ್ರ ಜಲದಲ್ಲಿ ಅನೇಕ ಮಂದಿ ಸ್ತ್ರೀಯರು ಉಟ್ಟ ವಸ್ತ್ರಸಮೇತ ವಿವಿಧ ಭಂಗಿಗಳಲ್ಲಿ ಸ್ನಾನಾದಿಗಳನ್ನು ಮಾಡುತ್ತಿರುವುದು, ಅಲ್ಲಲ್ಲಿ ಬಟ್ಟೆಗಳನ್ನು ಮಡಿ ಮಾಡುತ್ತಿರುವುದು, ಅವರ ಬಣ್ಣ ಬಣ್ಣದ ವಸ್ತ್ರಗಳ ಪ್ರತಿಬಿಂಬ ನೀರಿನಲ್ಲಿ ತಲೆಕೆಳಗಾಗಿ ಮೂಡಿರುವುದು–ಈ ದೃಶ್ಯಾವಳಿಯನ್ನು ಅಳವಡಿಸಿಕೊಂಡು ಶ್ರೀಯುತರು ಮನೋಹರವಾಗಿ ಬಿಡಿಸಿದ್ದರು. ನದಿಯ ತೀರದ ಹೆಮ್ಮರಗಳು ಧೀರವಾಗಿ ಕೊಂಬೆಗಳನ್ನು ಚಾಚಿ ನದಿಯಲ್ಲಿ ಹಸಿರು ರಂಗನ್ನು ಚೆಲ್ಲಿದಂತೆ ಪ್ರತಿಬಿಂಬವನ್ನು ಹರಡಿದ್ದವು. ದೂರ ದೂರದಲ್ಲಿ ಅಸ್ಪಷ್ಟವಾಗಿ ದಿಗಂತ ಕ್ರಮ ಕ್ರಮೇಣ ಕರಗಿ ಹೋಗಿದ್ದಿತು. ಆ ಕೃತಿ ಯಾರ ಮನಸ್ಸನ್ನಾದರೂ ಸೆಳೆಯುವಂತಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಶ್ರೀಯುತ ಚಂದ್ರಶೇಖರರ ಪ್ರಕೃತಿ ಚಿತ್ರಗಳು ಇಲ್ಲಿಗೆ ಹತ್ತು ಹನ್ನೆರಡು ವರ್ಷಗಳಿಂದಲೂ ಪ್ರಸಿದ್ಧಿಯನ್ನು ಪಡೆಯುತ್ತಾ ಬಂದಿವೆ. ಭಾರತದ ಎಲ್ಲಾ ಕಲಾ ಪ್ರದರ್ಶನಗಳಲ್ಲೂ ಇವರ ಚಿತ್ರಗಳು ಪ್ರದರ್ಶಿಸಲ್ಪಟ್ಟವೆ. ಅನೇಕ ಉತ್ತಮ ಬಹುಮಾನಗಳನ್ನೂ ಗಳಿಸಿ ಮೈಸೂರಿಗೆ ಕೀರ್ತಿಯನ್ನು ತಂದಿವೆ. ಯಾವೆಡೆಯಲ್ಲಿಯೂ ಇವರ ನೈಸರ್ಗಿಕ ಚಿತ್ರಗಳಿಗೆ ಪ್ರಾಶಸ್ತ್ಯ ಹೆಚ್ಚು. ಮಾರಾಟವಾಗುವ ಕೃತಿಗಳು ಇವರವೇ. ಕಲಾ ಪ್ರದರ್ಶನಕ್ಕೆ ಹೋದ ಕೃತಿಗಳು ಯಾವುವೂ ಹಿಂದಿರುಗಿ ಬರುವಂತಿಲ್ಲ. ಅಷ್ಟು ಮೋಹಕವಾದ, ಮನೋಹರವಾದ ರೀತಿಯಲ್ಲಿ ಶ್ರೀಯುತರು ಕುಂಚ ಕೌಶಲವನ್ನು ಮೆರೆಸುತ್ತಾರೆ. ಮೊದಲಿನಿಂದಲೂ ಪ್ರಕೃತಿ ಚಿತ್ರಗಳಿಗೇ ತಮ್ಮ ಸಾಧನೆಯನ್ನು ಮೀಸಲುಗೊಳಿಸಿ ಉತ್ತಮ ಯಶಸ್ಸನ್ನೂ ಗಳಿಸಿ

ದ್ದಾರೆ. ಕನ್ನಡದ ಪ್ರಸಿದ್ಧ ಪ್ರಕೃತಿ ಕಲಾವಿದರ ಅಗ್ರ ಪಂಕ್ತಿಗೆ ಸೇರುವ ಯೋಗ್ಯತೆಯನ್ನು ಇನ್ನೂ ನಲವತ್ತನಾಲ್ಕರ ತಾರುಣ್ಯದಲ್ಲಿಯೇ ಗಳಿಸಿಕೊಂಡಿದ್ದಾರೆ. ಇದೊಂದು ಹೆಮ್ಮೆ ಪಡಬಹುದಾದ ವಿಷಯ.

ಶ್ರೀಯುತರು ೧೯೨೩ ರಲ್ಲಿ ಮೈಸೂರಿನಲ್ಲಿ ಜನ್ಮ ತಾಳಿದರು. ಮೈಸೂರಿನಲ್ಲಿಯೇ ಬಾಲ್ಯವನ್ನು ಕಳೆದು ಹೈಸ್ಕೂಲಿನವರೆಗೆ ವ್ಯಾಸಂಗವನ್ನೂ ಮುಗಿಸಿಕೊಂಡರು. ಚಿಕ್ಕಂದಿನಿಂದಲೂ ಚಿತ್ರ ಕಲೆಯಲ್ಲಿ ಅಭಿರುಚಿ ಹುಟ್ಟಿ ವಿದ್ಯಾರ್ಥಿ ದೆಸೆಯಲ್ಲಿ ಇದ್ದಾಗಲೂ ಮನಬಂದಂತೆ ಚಿತ್ರಗಳನ್ನು ಬರೆಯುವುದು, ಉತ್ತಮ ಚಿತ್ರಪಟಗಳು ಕಂಡರೆ ಅವನ್ನು ಪ್ರೀತಿಯಿಂದ ಸಂಗ್ರಹಿಸುವುದು, ಅವುಗಳನ್ನು ಮತ್ತೆ ಮತ್ತೆ ನೋಡಿ ಆನಂದಿಸುವುದು ಇವರ ಅಭ್ಯಾಸವಾಗಿತ್ತು. ಉತ್ತಮ ಪ್ರಕೃತಿಚಿತ್ರಗಳನ್ನು ಕಂಡರಂತೂ ಅತ್ಯಂತ ಮಮತೆಯನ್ನು ತೋರುತ್ತ ಬಂದರು. ಪ್ರಕೃತಿಯ ಬಹುಮುಖ ಸೌಂದರ್ಯದಲ್ಲಿ ಶ್ರೀಯುತರಿಗೆ ಏನೋ ಒಂದು ಬಗೆಯ ಆಕರ್ಷಣೆ ಆಗಲೇ ತಲೆದೋರಿತು. ತಮ್ಮ ಮನೆಯವರ ಜೊತೆಯಲ್ಲಿ ಹೊರಗೆ ಪ್ರವಾಸ ಹೊರಟಾಗ ಮೈಸೂರಿನ ನವ ನಾಗರಿಕ ವಾತಾವರಣದ ನಡುವೆ ಬೆಳೆದ ಶ್ರೀಯುತರಿಗೆ ಹೊರಗಿನ ಪ್ರಕೃತಿ ಆಶ್ಚರ್ಯಕರವಾಗಿ ತೋರುತ್ತಿತ್ತು. ವಿಶಾಲವಾದ ಗದ್ದೆಯ ಬಯಲುಗಳೂ, ಅವುಗಳ ಮೇಲೆ ಗಾಳಿ ಬೀಸಿದಾಗ ಉಂಟಾಗುವ ಗಾಳಿ ಅಲೆಗಳುಎದ್ದಾಗ ನಡು ನಡುವೆ ಹಾರಿಹೋಗುವ ಬೆಳ್ಳಕ್ಕಿಗಳೂ, ಗದ್ದೆಯಲ್ಲಿ ಕೆಲಸಮಾಡುವ ಹಳ್ಳಿಯ ಮುಗ್ಧವನಿತೆಯರೂ ಶ್ರೀಯುತರಿಗೆ ಯಾವುದೋ ರಸಲೋಕದಂತೆ ತೋರುತಿತ್ತು. ರೈಲಿನಲ್ಲಿ ಪ್ರಯಾಣಮಾಡುವಾಗ ಪ್ರಕೃತಿಪ್ರಿಯರಾದ ಇವರು ಒಳಗಿನ ಯಾವ ಗೊಂದಲಗಳಿಗೂ ಕಿವಿಗೊಡದೆ, ಯಾವ ಕಾಡು ಹರಟೆಯಲ್ಲೂ ಭಾಗವಹಿಸದೆ, ಕಿಟಕಿಯ ಬಳಿ ಸರಿದು ಅಪೂರ್ವ ನೈಸರ್ಗಿಕ ಸೌಂದರ್ಯವನ್ನು ನೋಡಿ ತಲ್ಲೀನರಾಗುವುದೇ ವಾಡಿಕೆಯಾಗಿತ್ತು. ಅವರು ಪ್ರಕೃತಿಯಲ್ಲಿ ಕಂಡ ಸಹಜ ವರ್ಣಗಳು ಮನಸ್ಸಿನ ಭಿತ್ತಿಯಮೇಲೆ ಸ್ಪಷ್ಟವಾಗಿ ನಿಂತವು. ಆಗಾಗ ಹಾಳೆಗಳ ಮೇಲೆ ಗಿಡ ಮರಗಳನ್ನೂ, ಗಿರಿ ನದಿಗಳನ್ನೂ, ಹಳ್ಳಕೊಳ್ಳಗಳನ್ನೂ ಚಿತ್ರಿಸುತ್ತಾ ಬಂದರು. ಅಭ್ಯಾಸ ಹೀಗೆಯೇ ಬೆಳೆದು ಮನೆಯವರ ಕಣ್ಣಿಗೂ ಇವರ ಚಿತ್ರಗಳು ಬಿದ್ದವು. ತಮ್ಮ ಬಾಲಕನಲ್ಲಿ ಕಂಡುಬಂದ ಕಲಾಸಕ್ತಿಯನ್ನು ಕಂಡ ಅವರು ಕಲಾಭ್ಯಾಸಕ್ಕೆ ಯಾವ

ಅಡ್ಡಿ ಆತಂಕವನ್ನೂ ತರಲಿಲ್ಲ. ಪ್ರೋತ್ಸಾಹಿಸುತ್ತಲೇ ಬಂದರು. ಕ್ರಮೇಣ ಶ್ರೀಯುತರಲ್ಲಿ ವಿದ್ಯಾಭ್ಯಾಸದ ಕಡೆ ಗಮನ ಕಡಿಮೆಯಾಗುತ್ತಾ ಬಂದು, ಕೊನೆಗೆ ಚಾಮರಾಜೇಂದ್ರ ಕಲಾಶಾಲೆಯ ಕಡೆ ಮನಸ್ಸನ್ನು ಹರಿಸಿದರು. ಹೈಸ್ಕೂಲು ಹಂತಕ್ಕೇ ವಿದ್ಯಾಭ್ಯಾಸವನ್ನು ಕೈಬಿಟ್ಟು ಕಲಾದೇವಿಯ ಆರಾಧನೆಗೆ ನಾಂದಿಯೆಂಬಂತೆ ಕಲಾವಿದ್ಯಾರ್ಥಿಯಾಗಿ ತಮ್ಮ ಬಹುದಿನದ ಕನಸನ್ನು ನನಸಾಗಿಸಿಕೊಂಡರು. ಕಲಾಶಾಲೆಯಲ್ಲಿದ್ದ ಪ್ರಸಿದ್ಧ ಕಲಾವಿದರ ನೇತೃತ್ವದಲ್ಲಿ ಉತ್ತಮ ಶಿಕ್ಷಣ ದೊರೆತು, ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದರು. ಅವರ ಹಿಂದಿನ ಆತ್ಮೀಯ ಸ್ನೇಹಿತರಾದ ಕಲಾವಿದ ಸೋಮಸುಂದರ್ ಅವರು ಆಗಿನಿಂದಲೂ ಇವರ ಅಚ್ಚುಮೆಚ್ಚಿನ ಗೆಳೆಯರಾಗೇ ಬಂದರು. ಕಲಾಭ್ಯಾಸಕ್ಕೆ ಈ ಈರ್ವರ ಜೊತೆ ಒಂದು ಸ್ಫೂರ್ತಿಯಾಯಿತು. ಜೊತೆ ಜೊತೆಯಲ್ಲಿ ಸ್ಪರ್ಧೆಯಿಂದ ಅಭ್ಯಾಸ ನಡೆಸಲು ಸಹಕಾರಿಯಾಯಿತು.

ಶ್ರೀಯುತರು, ಕಲಾಶಾಲೆಯ ಶಿಕ್ಷಣ ಮುಗಿದ ಮೇಲೆ ಯಾವ ಉದ್ಯೋಗಕ್ಕೂ ಮನಕೊಡದೆ ತಮ್ಮ ಸೋದರರ ಪ್ರೋತ್ಸಾಹದ ಮೇಲೆ ನೇರವಾಗಿ ಕಲಾರಂಗಕ್ಕೇ ಧುಮುಕಿದರು. ಪ್ರತಿ ವರ್ಷವೂ ಒಂದಲ್ಲ ಒಂದು ಕಡೆಗೆ ಪ್ರವಾಸವನ್ನಿಟ್ಟುಕೊಂಡು ತಮ್ಮ ಸ್ನೇಹಿತರೊಡನೆ ಆಕರ್ಷದ ನೆಲೆಗಳನ್ನು ಚಿತ್ರಿಸಿಕೊಂಡು ಬರತೊಡಗಿದರು. ಪ್ರಕೃತಿ ಸೌಂದರ್ಯದ ನೆಲೆಬೀಡಾದ ಕೊಡಗು, ಮಲೆನಾಡು, ನೀಲಗಿರಿ ಮುಂತಾದ ಕಡೆಗಳಿಗೆ ಹೋಗಿ ಅಲ್ಲಿಯೇ ಕೆಲವು ದಿನಗಳಿದ್ದು ಕಲಾಕೃತಿಗಳನ್ನು ಜಲವರ್ಣಗಳಲ್ಲಿ ಸೃಜಿಸಿಕೊಂಡು ಬಂದಿದ್ದಾರೆ. ದಸರಾ ಪ್ರದರ್ಶನವಲ್ಲಿ "ಶೃಂಗೇರಿಯ ಸ್ನಾನಘಟ್ಟ" ಬಹುಜನರ ಮೆಚ್ಚಿಕೆಗೆ ಪಾತ್ರವಾಯಿತು. ಆ ವರ್ಷ ಆ ಕಲಾಕೃತಿಗೆ ಉತ್ತಮ ಬಹುಮಾನವೂ ದೊರೆಯಿತು.

ನೀಲಗಿರಿಯ ಪ್ರಕೃತಿ ಸೌಂದರ್ಯವನ್ನೊಳಗೊಂಡ ಇವರ ಕೃತಿಗಳೂ ಶ್ರೀಯುತರಿಗೆ ಯಶಸ್ಸನ್ನು ತಂದಿವೆ. ಜೋಗದ ಜಲಪಾತ, ಶಿವನ ಸಮುದ್ರ ಮುಂತಾದ ಕಡೆಗಳಲ್ಲಿನ ಸುಂದರ ದೃಶ್ಯಗಳು ಇವರ ಕುಂಚದಿಂದ ವಂಚಿತವಾಗಿಲ್ಲ.

ಶ್ರೀಯುತರ "Evening Glow" ಎಂಬ ಪ್ರಕೃತಿ ಚಿತ್ರವು ೧೯೪೮ರಲ್ಲಿ ಕಲ್ಕತ್ತ ಅಕೆಡೆಮಿಯ ಕಲಾಪ್ರದರ್ಶನದಲ್ಲಿ ಪ್ರಥಮ ಬಹುಮಾನವನ್ನೂ

ಗಳಿಸಿತು. ಅದೇ ಚಿತ್ರಕ್ಕೆ ೧೯೫೩ ರಲ್ಲಿ ಮೈಸೂರಿನ ಕಲಾಪ್ರದರ್ಶನದಲ್ಲಿ ಸಮಿತಿಯ ಸುವರ್ಣ ಪದಕವೂ ದೊರತಿದೆ. ಈ ಚಿತ್ರದಲ್ಲಿ ಸೂರ್ಯಾಸ್ತದ ಒಂದು ಭವ್ಯ ದೃಶ್ಯವಿದೆ. ದಿನದ ಯಾತ್ರೆಯನ್ನು ಮುಗಿಸಿ, ರವಿಯು ಪಶ್ಚಿಮ ಶರಧಿಯಲ್ಲಿ ಮರೆಯಾಗುವಾಗ ಮುಗಿಲಿನಲ್ಲಿ ಓಕಳಿವರ್ಣ ಚಲ್ಲಿಕೊಂಡಿದೆ. ಸೂರ್ಯನ ಕಿರಣಗಳು ಮೋಡದ ಮರೆಯಲ್ಲಿ ತೂರಿ ಹರಡಿಕೊಂಡಿವೆ. ಈ ದೃಶ್ಯ ಸರೋವರ ಒಂದರಲ್ಲಿ ಪ್ರತಿಬಿಂಬಿತವಾಗಿದೆ. ಪಕ್ಕದಲ್ಲಿ ಹುಲ್ಲು ಬಯಲೂ, ಗಿಡಮರಗಳೂ ಬಹು ರಮ್ಯವಾಗಿ ಬಿಡಿಸಲ್ಪಟ್ಟಿವೆ. ಇದು ತೈಲವರ್ಣದ ಪ್ರಕೃತಿಚಿತ್ರ. ಜಲವರ್ಣದಲ್ಲಿ ಎಷ್ಟು ಸಿದ್ಧಿಯನ್ನು ಪಡೆದಿದ್ದಾರೋ, ತೈಲವರ್ಣದಲ್ಲೂ ಅಷ್ಟೇ ಪರಿಶ್ರಮವಿದೆ ಎಂಬುದಕ್ಕೆ ಈ ಕೃತಿಯೊಂದು ಉತ್ತಮ ನಿದರ್ಶನ.

೧೯೫೦ರಲ್ಲಿ ಕಲ್ಕತ್ತದ ಕಲಾಸಂಸ್ಥೆಯವರು ಅಮೆರಿಕದಲ್ಲಿ ನಡೆಸಿದ ‘ಆಧುನಿಕ ಭಾರತದ ಕಲಾಪ್ರಗತಿ’ ಎಂಬ ಕಲಾಪ್ರದರ್ಶನದಲ್ಲಿ ಶ್ರೀಯುತರ ಕೆಲವು ಚಿತ್ರಗಳಿಗೂ ಅವಕಾಶ ದೊರೆತು ಮೆಚ್ಚಿಗೆಗೆ ಪಾತ್ರವಾದುವು. ಅವುಗಳಲ್ಲಿ ಕೆಲವು ಅಲ್ಲಿಯೇ ಮಾರಾಟವೂ ಆದುವು.

ಶ್ರೀಯುತರು ರೇಖಾಚಿತ್ರಗಳಲ್ಲೂ ಕೈಯನ್ನು ಪಳಗಿಸಿಕೊಂಡಿರುವರೆಂಬುದಕ್ಕೆ ನಿದರ್ಶನ ಪ್ರಾಯವಾಗಿ ಒಮ್ಮೆ ಮೈಸೂರಿನ ದಸರಾ ಕಲಾಪ್ರದರ್ಶನದಲ್ಲಿ ಇವರ ರೇಖಾಚಿತ್ರಗಳಿಗೇ ರಜತ ಪಾತ್ರೆಯು ದೊರಕಿತು. ಆ ಸಾರಿ ನೀಲಗಿರಿಯ ಪ್ರಕೃತಿ ತೈಲಚಿತ್ರ ಬಹುಮಾನವನ್ನು ಗಳಿಸಿತು. ಹಿಂದೆ ಒಮ್ಮೆ ಕೇಂದ್ರ ಸರ್ಕಾರದವರು ಏರ್ಪಡಿಸಿದ್ದ ಸ್ಪರ್ಧೆಯೊಂದರಲ್ಲಿ ಶ್ರೀಯುತರು ರಚಿಸಿದ “ಸಮುದ್ರಗುಪ್ತನ ಆಸ್ಥಾನ” ಎಂಬ ಐತಿಹಾಸಿಕ ವರ್ಣಚಿತ್ರದಿಂದ ಅವರ ಕೀರ್ತಿ ಮತ್ತೂ ಹೆಚ್ಚಲು ಅವಕಾಶವಾಯಿತು.

ಶ್ರೀಯುತರು ಈ ಪ್ರಶಸ್ತಿಯಿಂದ, ಅಜಂತ ಮತ್ತು ಎಲ್ಲೋರ ಗುಹಾಲಯಗಳಲ್ಲಿ ಕಲಾವಿದರಾಗಿ ಕೇಂದ್ರಸರ್ಕಾರದಿಂದ ಆರಿಸಲ್ಪಟ್ಟರು. ಶ್ರೀಯುತರು ಅಲ್ಲಿನ ಕೆಲವು ಪ್ರಕೃತಿ ಚಿತ್ರಗಳನ್ನೂ, ಕೆಲವು ಗುಹೆಗಳಲ್ಲಿನ ಭಿತ್ತಿ ಚಿತ್ರಗಳನ್ನೂ ನಕಲುಮಾಡಿ ಒಮ್ಮೆ ದಸರಾ ಪ್ರದರ್ಶನಕ್ಕೆ ಕಳಿಸಿಕೊಟ್ಟಿದ್ದರು. ಅವುಗಳೂ ವಿಶೇಷ ಪ್ರಶಂಸೆಗೆ ಪಾತ್ರವಾದವು. ಇವರು ಇದುವರೆವಿಗೂ ರಚಿಸಿರುವ ಪ್ರಸಿದ್ಧ ಚಿತ್ರಗಳಲ್ಲಿ ಕೆಲವಾರನ್ನು ನೆನೆಯಬಹುದು, “ಮಲೆನಾಡಿನಲ್ಲಿ ಒಂದು ಬೆಳಗು”, “ಉದಕಮಂಡಲದ

ಒಂದು ಸೇತುವೆ", "ಶಾಂತಿಯ ಹೆದ್ದಾರಿ", "ಬೇಸಗೆಯ ಒಂದು ಸಂಜೆ", "ಪ್ರತಿಬಿಂಬಗಳು", "ಹಸಿರು ಕಣಿವೆ", "ತೋಡರ ಗುಡಿಸಲು ಗಳು", ಪಶ್ಚಿಮ ವಾಹಿನಿಯ ಸ್ನಾನಘಟ್ಟ", "ಒಂದು ತೇಲುವ ಮೋಡ", "ಕಣ್ವಾದ ಬಳಿ", "ವಿದ್ಯಾವಂತರ ದೇವಾಲಯ", "ಪರಸ್ಪರ ರಹಸ್ಯ", ಮುಂತಾದುವು ಹಲವು ಕಡೆ ಪ್ರದರ್ಶಿತವಾಗಿ ಜನ ಪ್ರಿಯವಾಗಿವೆ. 'ತ. ರಾ. ಸು." ಅವರ "ಚಂದನದ ಗೊಂಬೆ"ಯ ಕಾದಂಬರಿಯ ಪುಸ್ತಕದ ಮೇಲೆ ಇವರ ಅಪೂರ್ವ ಚಿತ್ರ ಒಂದಿದೆ. "ಆನಂದ"ರ "ಆನಂದಲಹರಿ" ಪುಸ್ತಕದಮೇಲೆ ಮುಖಚಿತ್ರವಾಗಿ ಶ್ರೀಯುತರು ಆನಂದರ ವ್ಯಂಗ್ಯ ಚಿತ್ರವನ್ನೇ ಸುಂದರವಾಗಿ ಬಿಡಿಸಿದ್ದಾರೆ.

ಶ್ರೀಯುತರ "ಪವಿತ್ರ ಅಶ್ವತ್ಥ ವೃಕ್ಷ" ಮತ್ತು "ಪಶ್ಚಿಮವಾಹಿನಿ"ಯ ದೃಶ್ಯಗಳನ್ನು ರಾಜಕೋಟೆಯ ಮಹಾರಾಜರು ದೆಹಲಿಯ ಅಖಿಲಭಾರತ ಕಲಾಪ್ರದರ್ಶನದಲ್ಲಿ ನೋಡಿ, ಆಕರ್ಷಿತರಾಗಿ ಕೊಂಡುಹೋಗಿದ್ದಾರೆ. ಇವರ ಪ್ರಕೃತಿ ಚಿತ್ರಗಳನ್ನು ಮನಸಾರ ಮೆಚ್ಚಿಕೊಂಡ ಬೆಂಗಳೂರಿನ ವ್ಯವಸಾಯ ಕಾಲೇಜಿನ ಮಾಜಿ ಪ್ರಿನ್ಸಿಪಾಲರೊಬ್ಬರು ಹದಿನೈದು ವರ್ಣಚಿತ್ರಗಳನ್ನು ಕೊಂಡು ತಮ್ಮ ಸಂಗ್ರಹಾಲಯದಲ್ಲಿ ಇಟ್ಟುಕೊಂಡಿದ್ದಾರೆ. ಹೀಗೆಯೇ ಮಾಜಿ ಮಂತ್ರಿಗಳಾದ ಶ್ರೀ ಎಂ. ಎ ಶ್ರೀನಿವಾಸನ್ ಅವರು ಶ್ರೀಯುತ ರನ್ನು ಮೊದಲಿನಿಂದಲೂ ಪ್ರೋತ್ಸಾಹಿಸುತ್ತಾ ಬಂದು ಇವರ ಅನೇಕ ಚಿತ್ರ ಗಳು ಪಾಶ್ಚಿಮಾತ್ಯರಿಗೆ ಮಾರಾಟವಾಗುವಂತೆ ನೆರವಾಗಿದ್ದಾರೆ. ಮೈಸೂರಿನ ಹೋಟೆಲ್ ಮೆಟ್ರೊಪೋಲ್‌ನಲ್ಲೂ, ಬೊಂಬಾಯಿ, ಮದರಾಸು, ದೆಹಲಿ, ನಾಗಪುರ, ಕಲ್ಕತ್ತ, ಬೆಂಗಳೂರು, ಇನ್ನೂ ಇತರ ಕಡೆಗಳಲ್ಲೂ ಶ್ರೀಯುತರ ಚಿತ್ರಗಳು ಶೋಭಿಸುತ್ತಿವೆ. ಮೈಸೂರಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರ ಪ್ರೋತ್ಸಾಹದಿಂದ ವಿಧಾನ ಸೌಧಕ್ಕೆ ಇವ ರಿಂದಲೂ ಕೆಲವು ಉನ್ನತಾಕಾರದ ಪ್ರಕೃತಿ ಚಿತ್ರಗಳು ರಚಿತವಾಗಿವೆ. ಹೀಗೆಯೇ ಕಲೆಯ ಪ್ರೋತ್ಸಾಹದ ದೃಷ್ಟಿಯಿಂದ ಹಿಂದಿನ ಸರ್ಕಾರ ಮೈಸೂರಿನ ಅನೇಕ ಕಲಾವಿದರಿಂದ ಕಲಾಕೃತಿಗಳನ್ನು ಬರೆಸಿದ್ದಾರೆ. ಆದರೆ ಈಗಿನ ಸರ್ಕಾರ ಬರೆಸುವುದಂತಿರಲಿ ಅವುಗಳನ್ನು ಯೋಗ್ಯವಾದ ಸ್ಥಳದಲ್ಲಿ ಪ್ರದರ್ಶಿಸದಿರುವುದೂ ಒಂದು ಶೋಚನೀಯ ಸಂಗತಿ.

ಶ್ರೀಯುತರ "ರಹಸ್ಯ ಸಂಭಾಷಣೆ" ಒಂದು ಜಲವರ್ಣ ಚಿತ್ರ. ಮಂಗಳೂರಿನ ಸಮುದ್ರ ತೀರದಲ್ಲಿ ಚಿತ್ರಿಸಿದಂತಿದೆ. ಹಣ್ಣು ಹಣ್ಣು ಮುದುಕರ ಎರಡು ಅಪೂರ್ವ ಪಾತ್ರಗಳನ್ನು ಆರಿಸಿಕೊಂಡು ಈ ಕೃತಿಯನ್ನು ರಚಿಸಿದ್ದಾರೆ. ಒಬ್ಬ ಹಿಂದೂವೃದ್ಧ, ಮತ್ತೊಬ್ಬ ಮಹಮದೀಯ ದಾಡೀವಾಲ. ಹಿಂದೂ ಮುದುಕ ತಲೆಯಮೇಲೆ ಪೇಟವನ್ನು ಸುತ್ತಿ, ಮೈಮೇಲೆ ಅಡ್ಡ ವಸ್ತ್ರವನ್ನು ಹಾಕಿಕೊಂಡು ಬಾಳಿನ ಅಂತ್ಯ ಅನುಭವವನ್ನು ತನ್ನಂತೆಯೇ ಜೀವನದ ಅಂತಿಮ ಘಟ್ಟದಲ್ಲಿರುವ ಬಡಕಲು ಸಾಹೇಬರಿಗೆ ಹೇಳಿಕೊಳ್ಳು ವಂತಿದೆ. ಹೆಗಲಮೇಲೆ ದೊಣ್ಣೆ, ಅದಕ್ಕೆ ನೇತುಹಾಕಿರುವ ಬುತ್ತಿಯಗಂಟು, ಮೊಳಕೈಯಲ್ಲೊಂದು ಬಟ್ಟಲು, ಮುರುಕು ಗುಡಿಸಲೊಂದರ ನೆರಳಿನಲ್ಲಿ ಕುಳಿತು ರಹಸ್ಯಸಂಭಾಷಣೆಯಲ್ಲಿ ತೊಡಗಿದ್ದಾರೆ. ಅಲ್ಲಿ ವ್ಯರ್ಥವಾಗಿ ಬಿದ್ದಿರುವ ಸೌದೆಯ ತುಂಡುಗಳೇ ಅವರ ಪೀಠಗಳು. ಮುಸ್ಲಿಮ 'ಬುಡ್ಢಾ'ನು ತನ್ನ ಹರಕುಕೋಟು, ತುಂಡು ಚಡ್ಡಿ, ಉದ್ದನೆಯ ಕುಲಾವಿಯನ್ನು ತೊಟ್ಟು, ತನ್ನ ಮುದಿಗಣ್ಣುಗಳನ್ನು ಅರಳಿಸಿ, ನೀಳವಾದ ಬಿಳಿಯ ಗಡ್ಡವನ್ನು ಮುಂದೆ ಚಾಚಿ ತುಂಬ ಕುತೂಹಲದಿಂದ ಮಾತುಗಳನ್ನು ಆಲಿಸುತ್ತಿದ್ದಾನೆ. ಇಂಥ ಒಂದು ಸುಂದರ ಸನ್ನಿವೇಶವನ್ನು ಆರಿಸಿಕೊಂಡು ಶ್ರೀಯುತರು ಜಲವರ್ಣ ದಲ್ಲಿ ಈ ಚಿತ್ರವನ್ನು ಬಿಡಿಸಿದ್ದಾರೆ. ಇದೊಂದು ವಿಶಿಷ್ಟ ಬಗೆಯ ಕಲಾಕೃತಿ.

ಪ್ರಕೃತಿ ಚಿತ್ರಗಳಲ್ಲಿ "ಹೊಲದಕಡೆಗೆ" ಎಂಬ ತೈಲವರ್ಣದ ಚಿತ್ರವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಹಳ್ಳಿಯಿಂದ ಕುರುಬಿತಿ ತನ್ನ ಕುರಿಗಳೊಡನೆ ಹೊಲಗಳ ಅಭಿಮುಖವಾಗಿ ಹೊರಟಿದ್ದಾಳೆ. ಭುಜಗಳ ಮೇಲೆ ಅಡ್ಡಗೋಲನ್ನಿಟ್ಟು ಓಣಿಯಿಂದ ದಿಣ್ಣೆಗಳ ಮೇಲೆ ದಟ್ಟವಾಗಿ ಬೆಳೆದಿರುವ ವೃಕ್ಷಗಳ ನೆರಳು, ಅಲ್ಲಲ್ಲಿ ಹರಡಿಕೊಂಡಿವೆ. ದಾರಿಯುದ್ದಕ್ಕೂ ಹಾಗೆಯೇ ಮರಗಳ ಸಾಲು ಮುಂದುವರಿದಿದೆ. ದೂರದಲ್ಲಿ ಹೊಲಗಳ ಹಸಿರು ಬಯಲೂ, ದಿಗಂತದಲ್ಲಿ ಮುಗಿಲಿಗೆ ಚಾಚಿನಿಂತ ಬೆಟ್ಟಗುಡ್ಡಗಳೂ ಕಾಣಿಸುತ್ತಿವೆ. ಮುಗಿಲಲ್ಲಿ ವಿವಿಧಾಕಾರದ ಮೋಡಗಳು ಮೊಸರು ಚೆಲ್ಲಿದಂತೆ ಹರಡಿಕೊಂಡಿವೆ. ಈ ಭವ್ಯ ದೃಶ್ಯವನ್ನು ತೈಲವರ್ಣಗಳಲ್ಲಿ ಬಹು ನವುರಾಗಿ ಬಿಡಿಸಿದ್ದಾರೆ. ಮರದ ಒಂದು ಸಣ್ಣ ಸಣ್ಣ ರೆಂಬೆಯೂ ಕಾಣುವಂತೆಯೂ, ರೆಂಬೆಗಳ

ಬೆಳಕು ಕಾಂಡಗಳ ಮೇಲೆ ಮಸಿಬಳಿದಂತೆ ಚಲ್ಲಿಕೊಂಡಿರುವುದನ್ನೂ ಸೂಕ್ಷ್ಮ ವಾಗಿ ತೋರಿದ್ದಾರೆ.

ಹೀಗೆಯೇ ಇವರ ಕಲಾಕೃತಿಗಳು ವಸ್ತುವಿನ ಆಯ್ಕೆಯಲ್ಲಿಯೂ ವರ್ಣಗಳ ವೈಖರಿಯಲ್ಲಿಯೂ ವೈವಿಧ್ಯತೆಯನ್ನು ಹೊಂದಿವೆ.

ಶ್ರೀಯುತರು ಭಾರತದ ಪ್ರಾಚೀನ ಕಲೆಯ ಕೇಂದ್ರಗಳೆನಿಸಿರುವ ಅಜಂತ ಮತ್ತು ಎಲ್ಲೋರ ಗುಹಾಂತರ ದೇವಾಲಯಗಳಲ್ಲಿ ಈಗ ಕೆಲಸ ಮಾಡುತ್ತಿದ್ದಾರೆ. ಅಲ್ಲಿಯೂ ಬಿಡುವುಮಾಡಿಕೊಂಡು ಸುತ್ತಮುತ್ತಲಿನ ಪ್ರಕೃತಿ ದೃಶ್ಯಗಳನ್ನು ಚಿತ್ರಿಸುವುದರಲ್ಲಿ ತಮ್ಮ ಆಸಕ್ತಿಯನ್ನೂ, ಉತ್ಸಾಹ ವನ್ನೂ ತೋರುತ್ತಿದ್ದಾರೆ. ತಮ್ಮ ಜೀವನವನ್ನೇ ಕಲಾರಾಧನೆಗಾಗಿ ಮುಡು ಪಿಟ್ಟ ಇವರು ಉತ್ತಮಸಾಧನೆಯನ್ನು ನಡೆಸಿ ಉತ್ತಮ ಪ್ರಕೃತಿ ಚಿತ್ರಕಾರ ರಾಗಿ ಇಂದು ಬೆಳಕಿಗೆ ಬಂದಿದ್ದಾರೆ. ಇನ್ನೂ ನೈಜ ಕೃತಿಗಳನ್ನು ನೀಡಿ ಶಾಶ್ವತ ಕೀರ್ತಿಗೆ ಭಾಗಿಗಳಾಗಲೆಂದು ಆಶಿಸೋಣ.



ಎಸ್. ವಿ. ಸೋಮಸುಂದರ್

ಮೈಸೂರು ರೈಲ್ವೆ ನಿಲ್ದಾಣದಿಂದ ಒಂದೆರಡು ಫರ್‌ಲಾಂಗ್ ದೂರದಲ್ಲಿ ಲಕ್ಷ್ಮೀಬಾಯಿ ರಸ್ತೆಯಲ್ಲಿ ಮುಂದೆ ಹೋದರೆ, ರಸ್ತೆಯ ಬಲಬದಿಯಲ್ಲಿ ಹೋಟೆಲ್ ಮೆಟ್ರೊಪೋಲ್ ದೊರೆಯುತ್ತದೆ. ಇಲ್ಲಿ ವಿದೇಶದ ಅತಿಥಿಗಳು, ಉನ್ನತ ಅಧಿಕಾರಿಗಳೂ, ಶ್ರೀಮಂತರೂ ಬಿಡಾರಮಾಡುತ್ತಾರೆ. ಈ ಹೋಟೆಲಿನ 'ಡೈನಿಂಗ್‌ಹಾಲ್' ಮತ್ತು 'ಟಿಫಿನ್ ರೂಮು'ಗಳ ವೈಶಿಷ್ಟ್ಯವೆಂದರೆ ಉತ್ತಮ ಜಲ ಮತ್ತು ತೈಲವರ್ಣದ ಚಿತ್ರಗಳಿಂದ ಅಲಂಕರಿಸಲ್ಪಟ್ಟಿರುವುದು.

ಮೈಸೂರಿನ ಪ್ರಸಿದ್ಧ ಪ್ರಕೃತಿ ಚಿತ್ರಕಾರರಾದ ಶ್ರೀ ಸೋಮಸುಂದರ್ ಮತ್ತು ಶ್ರೀ ಚಂದ್ರಶೇಖರ್ ಅವರು ನಿಸರ್ಗದ ಚಿತ್ರಗಳನ್ನು ಮೊದಲಿನಿಂದಲೂ ಮಾರಾಟಕ್ಕಾಗಿ ಇಲ್ಲಿ ಪ್ರದರ್ಶಿಸುತ್ತಾ ಬಂದಿದ್ದಾರೆ. ಅನೇಕ ನೈಜ ಮಟ್ಟದ ಚಿತ್ರಗಳು ಮಾರಾಟವಾಗಿ ಮೈಸೂರಿನ ಕಲಾಕೀರ್ತಿ ನಾನಾ ಕಡೆಗಳಲ್ಲಿ ಹರಡುವಂತಾಗಿದೆ. ಅನೇಕ ಕಲಾಭಿಮಾನಿಗಳು ಆ ಚಿತ್ರಕೃತಿಗಳನ್ನು ಕೊಂಡಾಡಿ ಕಲಾವಿದರಿಗೂ, ಹೋಟಲಿನ ಮಾಲೀಕರಿಗೂ ಪತ್ರಗಳನ್ನು ಬರೆದಿದ್ದಾರೆ. ಶ್ರೀ ಸೋಮಸುಂದರ್ ಅವರಿಗೆ ಮದರಾಸಿನಿಂದ ಎಚ್. ಪಿಫಾರ್ಡ್ ಅವರೂ, ನವದೆಹಲಿಯಿಂದ ಎಲ್. ಜೆ. ವೈಟ್‌ರವರೂ, ಬೊಂಬಾಯಿನಿಂದ ಪಿ. ಜಿ. ರೋಜ್‌ರವರೂ ಅನೇಕ ಪ್ರಶಂಸಾ ಪತ್ರಗಳನ್ನು ಬರೆದು ಅವರ ಕೃತಿಗಳನ್ನು ಕೊಂಡಾಡಿದ್ದಾರೆ. ಅವರು ಪ್ರಕೃತಿಯನ್ನು ಚಿತ್ರಿಸುವುದರಲ್ಲಿ ತೋರುವ ವರ್ಣವೈಖರಿ, ರೇಖಾವಿನ್ಯಾಸ, ವಸ್ತುವಿನ ಆಯ್ಕೆಯಲ್ಲಿನ ವಿಶಿಷ್ಟತೆಗಳನ್ನು ಮೆಚ್ಚಿಕೊಳ್ಳದವರಾರು? ಇನ್ನೂ ನಲವತ್ತೇಳು ವರ್ಷಗಳನ್ನು ಮೀರದಿರುವ ಶ್ರೀಯುತರು ಅವಿಶ್ರಾಂತವಾಗಿ ಕಲಾರಾಧನೆಯನ್ನು ದಿಟ್ಟತನದಿಂದ ನಡೆಸುತ್ತಾ ಬಂದಿದ್ದಾರೆ. ಅವರ ಈ ಅಚಲ ಶ್ರದ್ಧೆಗೆ ಕಲಾದೇವಿಯೂ ಒಲಿದಿದ್ದಾಳೆ. ಪ್ರಕೃತಿರಮಣೀಯವಾದ ಶ್ರೀರಂಗಪಟ್ಟಣ ಶ್ರೀಯುತರ ಹುಟ್ಟೂರು. ಎರಡು ಕಡೆಗಳಲ್ಲೂ, ವೈಯಾರದಿಂದ ಹರಿಯುವ ನದಿ, ಅನಂತವಾಗಿ ಹರಡಿಕೊಂಡಿರುವ ಗದ್ದೆಯ ಬಯಲು, ಅಲ್ಲಲ್ಲಿ ದೂರದಲ್ಲಿ ತೋರುವ ಬೆಟ್ಟಗುಡ್ಡಗಳೂ, ಕೋಟೆ ಕೊತ್ತಲಗಳ ಅವಶೇಷಗಳೂ, ದರಿಯಾದೌಲತ್, ಮುಂತಾದ ಕಡೆಗಳಲ್ಲಿನ ದೃಶ್ಯಗಳೂ ಯಾವ ಕಲಾವಿದರಿಗೆತಾನೆ ಸ್ಫೂರ್ತಿಯನ್ನು ಕೊಡುವುದಿಲ್ಲ! ಇಂಥ ಭವ್ಯ ನೆಲೆಯ ವರಪ್ರಸಾದವಾದ ಶ್ರೀ ಸೋಮಸುಂದರ್ ಒಬ್ಬ ಉತ್ತಮ ಪ್ರಕೃತಿ ಕಲಾವಿದರಾಗಿ ಬೆಳಕಿಗೆ ಬಂದಿರುವುದರಲ್ಲಿ ಆಶ್ಚರ್ಯವೇನಿಲ್ಲ. ಶ್ರೀರಂಗಪಟ್ಟಣದ ಶ್ರೀ ವೆಂಕಟದಾಸರ ಪುತ್ರರಾಗಿ ಜನಿಸಿದವರು ಮೊದಲಿನಿಂದಲೂ ಬಡತನದ ಕಟು ಪರೀಕ್ಷೆಯನ್ನು ಕಂಡವರಾಗಿದ್ದಾರೆ. ಕಲಾಜೀವಿಗಳನ್ನು ಕಾಡಿಸುವುದು ಈ ಬಡತನದ ಒಂದು ಮುಖ್ಯ ಉದ್ದೇಶವೋ ಏನೋ! ಸಾಮಾನ್ಯವಾಗಿ ಎಲ್ಲಾ ಕಲಾವಿದರಂತೆ ಶ್ರೀ ಸೋಮಸುಂದರ್ ಅವರೂ ಬಡತನದಲ್ಲಿ ತೊಳಲಿ ಬಳಲಿದರೂ, ಕಲೆಯನ್ನು ಕೈಬಿಡದೆ, ಧೈರ್ಯವಾಗಿ ತಮ್ಮ ಕುಂಚದ ಹಿಡಿತವನ್ನು ಭದ್ರಪಡಿಸುತ್ತಲೇ

ಬಂದಿದ್ದಾರೆ. ೧೯೩೫ ನೆ ಇಸವಿಯಲ್ಲಿ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯನ್ನು ಸೇರಿದರು. ತಮ್ಮ ಕಷ್ಟಕಾರ್ಪಣ್ಯಗಳಿಂದಲೋ ಏನೋ, ಹೈಸ್ಕೂಲ್ ವ್ಯಾಸಂಗವನ್ನು ಈ ವಯಸ್ಸಿಗೇ ಕೊನೆಗಾಣಿಸಬೇಕಾಯಿತು. ಆದರೆ ಇವರ ಬಡತನ ಈ ವ್ಯಾಸಂಗವನ್ನು ಮುಂದುವರಿಸಲು ಅವಕಾಶ ಕೊಡಲಿಲ್ಲ. ಕಲಾಶಾಲೆಯ ಮೊದಲನೆ ವರ್ಷವನ್ನು ಮುಗಿಸುವುದರಲ್ಲಿಯೇ, ತಮ್ಮ ಅಣ್ಣನವರ ಜೊತೆಯಲ್ಲಿ ಟೈಲರಿಂಗ್ ಕೆಲಸವನ್ನು ಮಾಡಬೇಕಾಯಿತು. ಆದರೆ ಹೃದಯದಲ್ಲಿ ತುಡಿಯುತ್ತಿದ್ದ ಕಲಾಭಿರುಚಿ ಮತ್ತೆ ಇವರನ್ನು ಅದೇ ಕಲಾಶಾಲೆಗೆ ಎಳೆತಂದಿತು. ಅಲ್ಲಿಂದ ಐದು ವರ್ಷಗಳ ಕಾಲ ಕಲಾಭ್ಯಾಸಕ್ಕೆ ಅಡ್ಡಿಬಂದ ಕಷ್ಟಪರಂಪರೆಗಳನ್ನು ಎದುರಿಸಿ, ನಿರಂತರವಾಗಿ ತಮ್ಮ ಅಭ್ಯಾಸವನ್ನು ಮುಂದುವರಿಸಿ ಕಲಾಶಿಕ್ಷಣವನ್ನು ಮುಗಿಸಿಕೊಂಡರು. ಇವರ ಈ ಸಾಹಸಕ್ಕೆ ಮುಖ್ಯ ಕಾರಣರಾದವರು ಆಗಿನ ಕಲಾಶಿಕ್ಷಕರಾಗಿದ್ದ ಸುಪ್ರಸಿದ್ಧ ಪ್ರಕೃತಿ ಕಲಾವಿದ ಶ್ರೀ ಟಂಕಸಾಲೆಯವರು. ಅವರ ಆದರ, ಪ್ರೇಮ, ಅಭಿಮಾನಗಳೇ ಶ್ರೀ ಸೋಮಸುಂದರಂ ಅವರ ಕಲಾನೈಪುಣ್ಯ ಬೆಳಕಿಗೆ ಬರಲು ನೆರವಾಯಿತೆನ್ನಬಹುದು. ಶ್ರೀ ಪಾವಂಜೆ, ಶ್ರೀ ಟಂಕಸಾಲೆ ಇಂತಹವರ ನೈಜಮಾರ್ಗದರ್ಶಿತ್ವದಲ್ಲಿ, ಪಳಗಿಬಂದ ಇವರು ಇಂದು ನೈಜಕಲಾಕೃತಿಗಳನ್ನು ನೀಡಿ ತಮ್ಮ ಗುರುಕಾಣಿಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ.

ತಮ್ಮ ಐದುವರ್ಷದ ಶಿಕ್ಷಣವನ್ನು ಮುಗಿಸಿಕೊಂಡು ಮುಂದೆ ಚನ್ನಪಟ್ಟಣದ ಕೈಗಾರಿಕಾ ಕಲಾಶಾಲೆಯಲ್ಲಿ ಕೆಲವು ವರ್ಷಗಳಕಾಲ ಕಲಾವಿದರಾಗಿ ಕೆಲಸ ಮಾಡಿದರು.

ಶ್ರೀಯುತರ ಕಲಾಭಿಮಾನ ಅತೀವವಾಗುತ್ತಾ ಬಂದು ಚನ್ನಪಟ್ಟಣದ ಕೈಗಾರಿಕಾಶಾಲೆ ಇದಕ್ಕೊಂದು ಅಡಚಣೆಯೇ ಎನಿಸತೊಡಗಿತು. ಅದನ್ನು ಬಿಟ್ಟು ಸ್ವತಂತ್ರವಾಗಿ ಕಲಾಗಗನದಲ್ಲಿ ಪಕ್ಷಿಯಂತೆ ವಿಹರಿಸುವ ಆಕಾಂಕ್ಷೆ, ಒತ್ತಡ ಹೃದಯದಲ್ಲಿ ಹೆಚ್ಚಾಯಿತು. ಇದು ದಿನದಿನಕ್ಕೆ ಪ್ರಬಲಿಸುತ್ತಾ ಬಂದು ಕೊನೆಗೆ ೧೯೫೮ ರಲ್ಲಿ ಆ ಕೈಗಾರಿಕಾಲಯಕ್ಕೆ ಕೊನೆಯ ನಮಸ್ಕಾರ ಹೊಡೆದರು. ಇಲ್ಲಿಂದ ಮುಂದೆ ಯಾವ ವೃತ್ತಿಗೂ ಕೈಹಾಕದೆ ಬಡತನದ ಬೆನ್ನಿನಲ್ಲಿಯೇ ಕಲಾಲಕ್ಷ್ಮಿಯನ್ನು ಅರ್ಚಿಸುತ್ತಾ ಬಂದಿದ್ದಾರೆ. ಅವರ ಶ್ರಮಕ್ಕೆ ತಕ್ಕ ಕೀರ್ತಿಯನ್ನು, ಪ್ರತಿಫಲವನ್ನೂ ಪಡೆಯುತ್ತಲೂ ಬಂದಿದ್ದಾರೆ.

ಅಂತೆಯೇ ಕಲೆಯ ತವರುಮನೆಯಾದ ಮೈಸೂರಿನಲ್ಲೇ ತಮ್ಮ ಜೀವನ ವನ್ನು ಮುಂದುವರಿಸಿದರು.

ಅನೇಕ ಕಲಾಪ್ರದರ್ಶನಗಳಲ್ಲಿ ತಮ್ಮ ಕೃತಿಗಳನ್ನು ಪ್ರದರ್ಶಿ ಸುತ್ತಾ ಬಂದಿದ್ದಾರೆ ಅನೇಕ ಬಹುಮಾನಗಳನ್ನೂ ಪಡೆದಿದ್ದಾರೆ. ಮೈಸೂರು, ಕಲ್ಕತ್ತ, ಅಮೃತಸರ, ದೆಹಲಿ, ಬೊಂಬಾಯಿ, ಹೈದರಾಬಾದ್ ಮುಂತಾದ ಕಲಾಪ್ರದರ್ಶನಗಳಲ್ಲಿ ಇವರ ಕೃತಿಗಳು ಬೆಳಕು ಕಂಡಿವೆ, ಅನೇಕ ಪಾರಿ ತೋಷಕಗಳೂ, ಸುವರ್ಣ ಪದಕಗಳೂ ದೊರತಿವೆ. ೧೯೪೮ ರಲ್ಲಿ ಇವರ "ಒಂದು ಸಂಜೆ" ಎಂಬ ಪ್ರಕೃತಿ ಚಿತ್ರಕ್ಕೆ, ೧೯೪೯ ರಲ್ಲಿ "ಬಯಲು ಮತ್ತು ದಿಗಂತ" ಎಂಬ ಚಿತ್ರಕ್ಕೆ, ೧೯೫೦ ರಲ್ಲಿ "ನಿವಾಸದಿಂದ ಒಂದು ನೋಟ" ಎಂಬುದಕ್ಕೂ, ೧೯೫೧ ರಲ್ಲಿ " ಕೆಮ್ಮಣ್ಣು ಗುಂಡಿಯ ದಾರಿ"ಗೂ, ಮುಂತಾ ದವಕ್ಕೆ ಮೈಸೂರು ದಸರಾ ಕಲಾಪ್ರದರ್ಶನದಲ್ಲಿ ಬಹುಮಾನ ದೊರೆತಿವೆ. ೧೯೫೪ ರಲ್ಲಿ ಇವರು ರಚಿಸಿದ ಒಂದು ಭಾವಚಿತ್ರ, ದಿವಂಗತ ಕೆ. ಕೇಶವಯ್ಯ ನವರ ರಜತ ಪಾತ್ರೆಯನ್ನು ಪಡೆದಿದೆ. ಅನಂತರವೂ ಇವರ ಒಂದು ಪ್ರಕೃತಿ ಚಿತ್ರಕ್ಕೆ ಬಹುಮಾನ ಬಂದಿದೆ. ಇವುಗಳ ಜೊತೆಗೆ ಸಂಯೋಗ ಚಿತ್ರಗಳಲ್ಲೂ ಅಭ್ಯಾಸವನ್ನು ನಡೆಸುತ್ತಾ ಬಂದ ಇವರು ಅವುಗಳಿಗೂ ಬಹು ಮಾನಗಳನ್ನು ಪಡೆದಿದ್ದಾರೆ. ೧೯೫೬ ರಲ್ಲಿ ಅಮೃತಸರ ಕಲಾಪ್ರದರ್ಶನದಲ್ಲಿ ಇವರಿಂದ ರಚಿತವಾದ "ಸಮುದ್ರಗುಪ್ತನ ಆಸ್ಥಾನ" ಎಂಬ ಚಾರಿತ್ರಿಕ ಚಿತ್ರಕ್ಕೆ, ಅಮೃತಸರದ ರಾಜ ಪ್ರಮುಖರ ಬಹುಮಾನ ದೊರೆತಿದೆ. ಅವರು ಚಿತ್ರಿಸಿರುವ ಈ ಬಗೆಯ ಕಲಾಕೃತಿಗಳಲ್ಲೆಲ್ಲಾ ಇದು ಭವ್ಯವಾದುದು, ಮನೋಹರವಾದುದು.

ಮೇಲಿನ ಚಿತ್ರದಂತೆಯೇ ಸೋಮಸುಂದರ್‌ರವರ ಮತ್ತೊಂದು ಪ್ರಸಿದ್ಧ ಚಿತ್ರ "ಅಕ್ಬರ್ ಮತ್ತು ಜೈನ ಸನ್ಯಾಸಿಗಳ ಸಮಾಗಮ" ಎಂಬುದು.

ಶ್ರೀಯುತರ ಪ್ರಕೃತಿ ಚಿತ್ರಗಳು ಅಸಂಖ್ಯಾತವಾಗಿವೆಯಾದರೂ ಅವೆಲ್ಲವೂ ನಮಗೆ ನೋಡಲು ದೊರೆಯುವುದಿಲ್ಲ. ಕೆಲವನ್ನು ಮಾತ್ರ ಹೆಸರಿಸಬಹುದು. "ಬಾಬಬುಡನ್ ಗಿರಿ"ಯ ಬಳಿ ಚಿತ್ರಿಸಿದ ಒಂದು ಪ್ರಕೃತಿ ಚಿತ್ರದಲ್ಲಿ ಶ್ರೀಯುತರ ಕಲಾನೈಪುಣ್ಯತೆಯನ್ನು ಅರಿಯಬಹುದಾಗಿದೆ. ಇಲ್ಲಿನ ವರ್ಣವನ್ನು ಬಳಸಿರುವಿಕೆ, ನೆಳಲು ಬೆಳಕುಗಳ ತಂತ್ರ, ದೃಶ್ಯದ

ಆಯ್ಕೆ, ಸೊಗಸಾಗಿದೆ. ಇದರಲ್ಲಿ ಹೆಮ್ಮರಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿರುವುದರಿಂದ ಚಿತ್ರದ ಸೊಬಗು ಹೆಚ್ಚಿದೆ.

ಶ್ರೀಯುತರ ಇನ್ನೊಂದು ಚಿತ್ರ "ಹಳ್ಳಿಯ ದೃಶ್ಯ" ಎಂಬುದು. ಇದರಲ್ಲಿ ಹಳ್ಳಿಯ ಒಂದು ಪಾರ್ಶ್ವದಿಂದ ಕಾಣುವ ಸುಗ್ಗಿಯ ಕಾಲದ ಈ ದೃಶ್ಯವನ್ನು ಬಹು ಸೊಗಸಾಗಿ ವರ್ಣಗಳಲ್ಲಿ ಬಿಡಿಸಿದ್ದಾರೆ. ಹೀಗೆ ಇನ್ನೂ ಒಂದು ಚಿತ್ರವನ್ನು ಉದಹರಿಸುವುದಾದರೆ "ವಿಶ್ರಾಂತಿ" ಎಂಬ ಇನ್ನೊಂದು ಪ್ರಕೃತಿ ಚಿತ್ರ.

ಶ್ರೀ ಸೋಮಸುಂದರ್‌ರವರು ಪ್ರಕೃತಿ ಚಿತ್ರಗಳ ಆಯ್ಕೆಯಲ್ಲಿ ಒಳ್ಳೆಯ ವೈವಿಧ್ಯವನ್ನು ತರಬಲ್ಲರೆಂಬುದಕ್ಕೆ ಮೇಲಿನ ಕಲಾ ಕೃತಿಗಳು ನಿದರ್ಶನವಾಗಿವೆ. ವಸ್ತುವಿನ ಆಯ್ಕೆ ಅಷ್ಟೇ ಅಲ್ಲ, ಅದರಲ್ಲಿ ಒಳ್ಳೆಯ ಸಹಜ ಸೌಂದರ್ಯವನ್ನೂ, ಪ್ರಕೃತಿಯ ನೈಜತೆಯನ್ನೂ ಮನಮೆಚ್ಚುವಂತೆ ಅವರು ಚಿತ್ರಿಸಬಲ್ಲರು.

ಕೇವಲ ಪ್ರಕೃತಿ ಚಿತ್ರಗಳಿಗೆ ಅವರ ಕೌಶಲ ಮೀಸಲಾಗದೆ ನಮ್ಮ ನಾಡಿನ ಪುರಾತನ ಗುಡಿಗೋಪುರಗಳನ್ನೂ, ಐತಿಹಾಸಿಕ ಕಟ್ಟಡಗಳನ್ನೂ, ಪುರಾತನ ಶಿಲ್ಪಕೃತಿಗಳನ್ನೂ, ಇವರು ಬಹು ರಮ್ಯವಾಗಿ ಚಿತ್ರಿಸಬಲ್ಲರು. ಶ್ರೀರಂಗಪಟ್ಟಣದ ದರಿಯಾದೌಲತ್, ಅರಮನೆಯ ಒಂದು ಮನೋಹರವಾದ ಚಿತ್ರವನ್ನು ಮೊನ್ನೆ ಮೊನ್ನೆ ರಚಿಸಿಕೊಂಡು ಬಂದಿದ್ದಾರೆ. ಹೀಗೆಯೇ ಹಂಪೆಯ "ಶಿಲಾರಥ"ವೂ ಇವರ ಉತ್ತಮ ಚಿತ್ರಗಳಲ್ಲೊಂದು. ಈ ಚಿತ್ರದಲ್ಲಿ ರಥದ ಪ್ರತಿ ಒಂದು ಭಾಗವನ್ನೂ ಸೂಕ್ಷ್ಮವಾಗಿ ಅವಲೋಕಿಸಿ, ಸಹಜತೆಗೆ ಎಲ್ಲಿಯೂ ಕುಂದುಬಾರದಂತೆ ಚಿತ್ರಿಸಿದ್ದಾರೆ. ಕುಂಚದ ತೀವ್ರತೆಯೂ, ಬಣ್ಣಗಳ ಸಂಯೋಗವೂ, ನೆಳಲು ಬೆಳಕುಗಳ ಸಹಜತೆಯೂ ಈ ಚಿತ್ರದಲ್ಲಿ ನಮಗೆ ಮನದಟ್ಟಾಗುತ್ತದೆ. ಅಲ್ಲಿನ ವಾತಾವರಣವನ್ನೂ, ಜನರ ಚಲನವಲನವನ್ನೂ ಸೊಗಸಾಗಿ ಚಿತ್ರಿಸಿದ್ದಾರೆ.

ಹೀಗೆ ಶ್ರೀ ಸೋಮಸುಂದರ್ ಅವರ ಕಲಾವಾಹಿನಿ ಬಹುಮುಖವಾಗಿ ಹರಿದಿದೆ. ಅವರ ನೂರಾರು ಕಲಾಕೃತಿಗಳನ್ನು ಕಲೆಹಾಕಿ "ಏಕ ವ್ಯಕ್ತಿ ಕೃತಿಗಳ ಪ್ರದರ್ಶನ"ವನ್ನು ಮೈಸೂರಿನಲ್ಲಿ ಒಮ್ಮೆ ಚಿತ್ರಶಿಲ್ಪ ಅಕಾಡಮಿ ಮೂಲಕ ನಡೆಸಲಾಯಿತು.

ಮೈಸೂರಿನ ರಾಮಾನುಜ ರಸ್ತೆಯ ಮಾದರಿ ಮನೆಗಳ ಗುಂಪಿನಲ್ಲಿ ಶ್ರೀಯುತರ ಪುಟ್ಟಮನೆಯನ್ನೂ, ಪುಟ್ಟಸಂಸಾರವನ್ನೂ ಪುಟ್ಟ ಪುಟ್ಟ ಮಕ್ಕಳನ್ನೂ ನೋಡಿದರೆ ಒಂದುಬಗೆಯ ಸಂತೋಷ ಉಂಟಾಗುತ್ತದೆ. ಅವರ ನಡುಮನೆಗೆ ಕಾಲುಇಡುತ್ತಿದ್ದಂತೆಯೇ ಅವರು ಸಿದ್ಧಗೊಳಿಸಿಟ್ಟಿರುವ ಅನೇಕ ಕಲಾಕೃತಿಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಮನೆಯ ವ್ಯವಹಾರ ಗಳ ನಡುವೆಯೂ, ಕಲಾಸೇವೆಯನ್ನು ನಡೆಸುತ್ತಾ ಬಂದಿರುವ ಈ ವ್ಯಕ್ತಿ ತುಂಬ ಸರಳಜೀವಿ. ಇವರ ಕಲೆಯ ಮಟ್ಟದಂತೆಯೇ, ಇವರ ಹೃದಯವೂ ಸುಸಂಸ್ಕೃತವಾದುದು. ಯಾರು ಹೋದರೂ ತುಂಬ ಪ್ರೋತ್ಸಾಹದ ಮಾತ ನಾಡುತ್ತಾರೆ. ಪ್ರಕೃತಿ ಚಿತ್ರಗಳ ಬಗ್ಗೆ ತುಂಬಾ ಅನುಭವವನ್ನು ಗಳಿಸಿ ಕೊಂಡಿದ್ದಾರೆ. ಯಾವ ವಿಷಯವನ್ನು ಕೇಳಿದರೂ ಹೃದಯ ಬಿಚ್ಚಿ ನುಡಿ ಯುತ್ತಾರೆ. ಯಾವ ಕಲಾಪ್ರದರ್ಶನದಲ್ಲಿ ಬಹುಮಾನ ಬರಲಿ, ಬಿಡಲಿ ಅದಕ್ಕೆ ನೊಂದುಕೊಳ್ಳುವ ಸ್ವಭಾವ ಇವರದಲ್ಲ. ತುಂಬ ಸಹನೆಯಿಂದ ತಮ್ಮ ಸರದಿಗಾಗಿ ಕಾಯುತ್ತಾರೆ. ಬಹುಮಾನಗಳಿಗಾಗಿ ಕಲಾಕೃತಿಗಳನ್ನು ರಚಿಸದೆ, ಅದು ತಮ್ಮ ಕರ್ತವ್ಯವೆಂಬಂತೆ. ತಮ್ಮ ಬಾಳಿಗೆ ಅಂಟಿಬಂದ ಒಂದು ಸೇವೆ ಎಂಬಂತೆ ತಮ್ಮ ಕಲಾರಾಧನೆಯನ್ನು ಸತತವಾಗಿ ನಡೆಸಿ ಕೊಂಡು ಹೋಗುತ್ತಿದ್ದಾರೆ. ಯಾವ ಅಡ್ಡಿ ಆತಂಕಗಳಿಗೂ ಎದೆ ಗುಂದದೆ ನಿರಾಶರಾಗದೆ ಉತ್ಸಾಹದಿಂದಲೇ ಕೆಲಸ ಮಾಡಿಕೊಂಡು ಮುನ್ನಡೆಯುತ್ತಿ ದ್ದಾರೆ. ಇವರಿಂದ ಇನ್ನೂ ಉತ್ತಮ ಮಟ್ಟದ ವೈವಿಧ್ಯಪೂರ್ಣವಾದ ಕಲಾ ಕೃತಿಗಳನ್ನು ನಾವು ನಿರೀಕ್ಷಿಸಬಹುದಾಗಿದೆ. ಶ್ರೀಯುತರು ಇದೇ ಉತ್ಸಾಹ ದಿಂದ, ತಮ್ಮ ಕಾರ್ಯರಂಗವನ್ನು ಮುಂದುವರಿಸಿಕೊಂಡು ಯಶಸ್ಸುಗಳಿಸ ಲೆಂಬುದೇ ನಮ್ಮೆಲ್ಲರ ಬಯಕೆ.



ಮ. ಈ. ಗುರು

೧೯೪೬ ರಲ್ಲೇ ಇರಬೇಕು, ಆ ವ್ಯಕ್ತಿಯನ್ನು ನೋಡಿದ ಚಿತ್ರ ಇನ್ನೂ ಸ್ಪಷ್ಟವಾಗಿ ನಿಂತಂತಿದೆ. ಕುಳ್ಳನೆಯ ದಿಟ್ಟ ಶರೀರ, ಹಿಂದೆ ಬಾಚಿದ ಕ್ರಾಪು, ಎಣ್ಣೆಗೆಂಪಿನ ಮುಖದಮೇಲೆ ಮಿಂಚುತ್ತಿದ್ದ ಕುಡಿಮೀಸೆ. ತುಂಬಿದ ಮೈಗೆ ಒಪ್ಪುವಂಥ ಬಿಳಿಯ ಜುಬ್ಬ, ಬಳ್ಳಾರಿಯ ಕಚ್ಚೆ, ಒಮ್ಮೆ ಕೇಳಿದರೆ ಮರೆಯಲಾಗದಂಥ ದೊಡ್ಡ ಧ್ವನಿ ಯಾರಿರಬಹುದು ಈ ವ್ಯಕ್ತಿ? ಒಬ್ಬ ನುರಿತ ಕಲಾವಿದರೊಡನೆ ಅದೂ ಕಲಾಶಿಕ್ಷಕರಾಗಿದ್ದ ಶ್ರೀ ಎಸ್. ನಂಜುಂಡಸ್ವಾಮಿ

ಯವರ ಜೊತೆಯಲ್ಲಿ ಅಷ್ಟು ಧೈರ್ಯದಿಂದ ವಾದಮಾಡುತ್ತಿದ್ದರು. ಕಲೆಯ ಸಂಬಂಧದಲ್ಲಿಯೇ ಚರ್ಚೆ ನಡೆದಂತಿತ್ತು. ಅನಂತರ ಶ್ರೀ ಸ್ವಾಮಿಗಳನ್ನು ಈ ಬಗ್ಗೆ ಪ್ರಶ್ನೆಮಾಡಿದೆನು. ಆ ವ್ಯಕ್ತಿ ಇವರ ಶಿಷ್ಯ ಪ್ರಮುಖರಲ್ಲಿ ಒಬ್ಬರೆಂದೂ, ಕಲೆಗೆ ಸಂಬಂಧಪಟ್ಟಂತೆ ಹೊಸ ಹೊಸ ವಿಷಯಗಳಮೇಲೆ ಕೆದಕಿ ಕೆದಕಿ ಕೇಳುವ ಚಟದವರೆಂದೂ ತಿಳಿಸಿದರು. ಆ ವ್ಯಕ್ತಿಯ ವಾದಸರಣಿ ಏನೆಂಬುದು ತಿಳಿಯದಿದ್ದರೂ, ಅವರನ್ನು ಆಗಾಗ ಮೈಸೂರಿನ ದೇವರಾಜ ಮಾರ್ಕೆಟ್ಟಿನ ಒಂದು ಮೂಲೆಯಲ್ಲಿ ನೋಡುತ್ತಿದ್ದೆನು.

ಅಂದು ಮಾರ್ಕೆಟ್ಟನಲ್ಲಿ ಜನಜಂಗುಳಿ ಹೆಚ್ಚಾಗಿದ್ದಿತು. ಹಣ್ಣು ಹಂಪಲು ಅಂಗಡಿಗಳ ಸಾಲಿನಲ್ಲಿ ನಿಂತು ಶೀಘ್ರ ರೇಖಾಚಿತ್ರಗಳನ್ನು ಬರೆದು ಕೊಂಡು ಸಾಗುತ್ತಿದ್ದ ಗುರು ಅವರನ್ನು ಸಂಧಿಸಿ, ಅವರ ಕಾರ್ಯಕ್ಕೆ ಭಂಗ ತಂದೆನಾದರೂ ಅವರು ಕೋಪಿಸಿಕೊಳ್ಳಲಿಲ್ಲ. ಅಂದು ಶಾಲೆಯಲ್ಲಿ ಶ್ರೀ ಸ್ವಾಮಿಯವರ ಜೊತೆಯಲ್ಲಿ ಇವರು ಯಾವ ವಿಷಯದಮೇಲೆ ಚರ್ಚೆ ನಡೆ ಸಿದರೆಂಬುದೇ ಕುತೂಹಲವಾಗಿತ್ತು. ದೀಪ ಕತ್ತಲನ್ನು ಹೊರದೂಡಿ ಪ್ರಶಾಂತ ಕಿರಣಗಳನ್ನು ಚೆಲ್ಲುತ್ತದೆ. ಕಲಾವಿದನಾದವನು ಇಂಥದೇ ಒಂದು ಸೊಡರನ್ನು ಮುಂದಿಟ್ಟುಕೊಂಡು ತನ್ನ ಕೌಶಲದಿಂದ ಅದರ ಸಹಜ ಪ್ರಕಾಶವನ್ನು ಬಿಡಿ ಸಬಹುದು. ನೋಟಕರಿಗೆ ಅದು ಒಂದು ಕುಡಿ ಹಣತೆಯಾಗಿಯೇ, ಅದರ ತುದಿಯಲ್ಲಿ ಉರಿಯುತ್ತಿರುವುದು ಬೆಳಕಿನ ಜಿಹ್ವೆಯಾಗಿಯೇ ತೋರುತ್ತದೆ. ಈ ಚಿತ್ರಿತ ದೀಪವನ್ನು ಕತ್ತಲ ಗರ್ಭದಲ್ಲಿ ಇಟ್ಟರೆ ಅದೂ ಏಕೆ ಕತ್ತಲ ತೆರೆ ಯನ್ನು ಹೋಗಲಾಡಿಸಬಾರದು ? ಹಾಗೆ ಮಾಡುವಂತೆ ಕಲಾವಿದ ಚಿತ್ರಿಸಲು ಸಾಧ್ಯವಿಲ್ಲವೆ ? ಕಲಾಕೃತಿಯಲ್ಲಿ ಆ ಅಪೂರ್ವ ಶಕ್ತಿಯನ್ನು ಅಳವಡಿಸಲು ಆಗಲಾರದೆ ?....ಮುಂತಾದ ಗುರುರವರ ವಿಚಿತ್ರ ಪ್ರಶ್ನೆಗಳು ಅಂದಿನ ವಾದದ ಸಾರ. ಇಂಥ ನೂತನ ವಿಷಯಗಳಮೇಲೆ ಗುರು ಅವರ ಆಲೋಚನೆ ಹರಿ ಯುತ್ತಿದ್ದುದು ಎಲ್ಲರೂ ಮೆಚ್ಚಬೇಕಾದುದೇ ಸರಿ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಮುದ್ದಾಪುರದಿಂದ ಬಂದ ವರು ಶ್ರೀ ಗುರುಪಾದಯ್ಯ. ಆ ಊರಿನ ಮಠದ ಶ್ರೀ ಈಶ್ವರಯ್ಯನವರ ನಾಲ್ಕ ನೆಯ ಪುತ್ರರಾಗಿ ೧೯೩೩ ರಲ್ಲಿ ಜನ್ಮತಾಳಿದರು. ಹಳ್ಳಿಯ ವಾತಾವರಣದ ಲ್ಲಿಯೇ ಬಾಲ್ಯ ಕಳೆಯಿತು. ಮಾಧ್ಯಮಿಕ ಪರೀಕ್ಷೆ ಆದಮೇಲೆ ಬಳ್ಳಾರಿಯ

ಸೈಂಟ್ ಜೋಸೆಫ್ ಹೈಸ್ಕೂಲಿಗೂ ಕಾಲಿಟ್ಟರು. ಈ ವೇಳೆಗಾಗಲೇ ಅವರಲ್ಲಿ ಹೇಗೋ ಕಲಾಭಿರುಚಿ ಅಂಕುರಗೊಂಡಿತ್ತು. ಮನೆಯ ಗೋಡೆಗಳ ಮೇಲೆ, ಮಾವಿನ ಓಟೆಗಳಲ್ಲಿ ಚಿತ್ರಗಳನ್ನು ಬರೆದು ಹಿರಿಯರಿಂದ ಬೈಗುಳನ್ನು ಕೇಳಿದ ಸಂದರ್ಭವೂ ಉಂಟು. ತರಗತಿಯ ಪುಸ್ತಕಗಳ ಮೇಲಂತೂ ಪಾಠಪ್ರವಚನಕ್ಕಿಂತ ನಾನಾ ಬಗೆಯ ಪಕ್ಷಿಗಳ ಮನುಷ್ಯಾಕೃತಿಗಳ, ಗಿಡಮರಗಳ, ಹೂಬಳ್ಳಿಗಳ ವಕ್ರಚಿತ್ರಗಳೇ ಇಣಿಕಿ ಹಾಕುತ್ತಿದ್ದವು. ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಉಪಾಧ್ಯಾಯ ವೃತ್ತಿಯನ್ನು ಅವಲಂಬಿಸಬೇಕೆಂಬ ಬಯಕೆ ಹದಿನಾರುವರ್ಷದ ಗುರು ಅವರಿಗೆ ತಲೆದೋರಿತು. ಇತರ ಕೆಲವು ಸ್ನೇಹಿತರಂತೆ ಅವರೂ ಸಹ ಇನ್‌ಸ್ಪೆಕ್ಟರ್ ಆಫೀಸಿಗೆ ಅರ್ಜಿಯನ್ನು ಸಲ್ಲಿಸಿ ನೌಕರಿಯ ಆರ್ಡರನ್ನು ನಿತ್ಯವೂ ನಿರೀಕ್ಷಿಸ ಹತ್ತಿದರು. ಇನ್ನೇನು ಕೆಲಸ ಸಿಕ್ಕಿಬಿಟ್ಟಿತು ಎಂಬಂತೆ ವಿದ್ಯಾಭ್ಯಾಸಕ್ಕೆ ಕೊನೆಯ ನಮಸ್ಕಾರ ಹಾಕಿ ಹಳ್ಳಿಗೆ ಬಂದರು ಆದರೆ ಎಷ್ಟು ದಿನವಾದರೂ ಇವರ ನಿರೀಕ್ಷೆ ಸಫಲಗೊಳ್ಳದೆ ಮನೆಯಲ್ಲಿಯೇ ಉತ್ತಮ ವೃತ್ತಿಯೊಂದನ್ನು ಹಿರಿಯರು ಒದಗಿಸಿಕೊಟ್ಟರು. ಮನೆಯ ದನಕರುಗಳನ್ನು ಮೇಯಿಸಿಕೊಂಡುಬರುವ ಸೌಲಭ್ಯ ಇವರಪಾಲಿಗೆ ಕಾದಿತ್ತು. ಹಳ್ಳಿಯ ಇತರ ಗೆಳೆಯರೊಡನೆ ದನಕರುಗಳನ್ನು ಹೊಡೆದುಕೊಂಡು ಹೋಗುತ್ತಿದ್ದ ಇವರು ಜೊತೆಯಲ್ಲಿಯೇ ಗಳಗನಾಥರ ಒಂದೊಂದು ಕಾದಂಬರಿಯನ್ನೂ ಕೊಂಡುಹೋಗುತ್ತಿದ್ದರು ಅವರ ಮನಸ್ಸಿನಮೇಲೆ ವಿಶೇಷ ಪರಿಣಾಮಮಾಡಿದ ಪುಸ್ತಕವೆಂದರೆ ವಿಜಯನಗರ ಗತವೈಭವವನ್ನು ವರ್ಣಿಸುವ 'ಮರೆತುಹೋದ ಸಾಮ್ರಾಜ್ಯ' ಎಂಬ ಪುಸ್ತಕ ಓದುವಾಗ ಒಂದೊಂದು ಅಧ್ಯಾಯವೂ ಕಣ್ಣಿನಲ್ಲಿ ಕಂಬನಿಯನ್ನು ಮಿಡಿಸುವಂತೆ ಮನಸ್ಸನ್ನು ಸೂರೆಗೊಂಡವು. ಸಮೀಪದಲ್ಲೇ ಇದ್ದ ಇಂಥ ವೈಭವಪೂರ್ಣ ಹಂಪೆಯನ್ನು ಪದೇಪದೇ ನೋಡಬೇಕೆಂಬ ಆಸೆ ವೃದ್ಧಿಸಿತು. ಒಂದು ಅಧ್ಯಾಯವನ್ನು ಮುಗಿಸಿ, ಸ್ನೇಹಿತರಿಂದ ತಪ್ಪಿಸಿಕೊಂಡು ಹಂಪೆಗೆ ಹೋಗಿ ಅಲ್ಲಿನ ಚಾರಿತ್ರಿಕ ಅವಶೇಷಗಳನ್ನೂ ಶಿಲ್ಪ ಕಲಾಕೃತಿಗಳನ್ನೂ ನೋಡಿಬರುತ್ತಿದ್ದರು. ಒಮ್ಮೆ ಹಿಮಾಲಯದ ಕಡೆಯಿಂದ ಬೈರಾಗಿಗಳ ತಂಡ ಒಂದು ಹಂಪೆಗೆ ಬಂದಿತು. ಅಲ್ಲಿಯೇ ಆಡ್ಡಾಡುತ್ತಿದ್ದ ಗುರು ಅವರ ಬೆನ್ಹತ್ತಿದರು ಆ ಬೈರಾಗಿಗಳು ಹಂಪೆಯ ಒಂದೊಂದು ಕಲಾಪೂರ್ಣವಾದ ನೆಲೆಗ

ಳನ್ನು ನೋಡಿದಂತೆಲ್ಲಾ ಪ್ರಶಂಸೆಯ ಮಾತುಗಳನ್ನು ಆಡುತ್ತಿದ್ದುದೂ, ಭಾರತದಲ್ಲಿ ಚಿತ್ರಕಲೆಗೂ, ವಾಸ್ತು ಶಿಲ್ಪಕ್ಕೂ ಪ್ರಸಿದ್ಧವಾದ ಸ್ಥಳಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದುದೂ ಗುರುರವರ ಕಲಾಭಿರುಚಿಯನ್ನು ಮತ್ತೂ ವಿಕಾಸ ಗೊಳಿಸಿದುವು. ಹಂಪೆಗೆ ಹೋದ ಒಂದೊಂದು ಬಾರಿಯೂ ಒಂದೊಂದು ಬಗೆಯ ಭಾವನೆ ಇವರ ಮನಸ್ಸಿನಲ್ಲಿ ಮೂಡುತ್ತಿತ್ತು. ವಿಜಯ ವಿಠಲರಾಯ ದೇವಾಲಯದ ಮುಂದೆ ನಿಂತು ಅಲ್ಲಿನ ಅಪೂರ್ವ ಶಿಲ್ಪ ಕಲೆಗೆ ತಲೆದೂಗಿ "ಕಲೆ ಎಷ್ಟು ಅಮರವಾದುದು" ಎಂದು ನಿಟ್ಟುಸಿರು ಬಿಡುತ್ತಿದ್ದರು. ಮೊದಲೇ ಕಲೆಯ ಗೀಳು ಹತ್ತಿದ್ದ ಇವರು ಉತ್ತಮ ಕಲಾವಿದನಾಗಲು ಶ್ರಮಿಸಬೇಕೆಂದು ಅಲ್ಲಿ ನಿರ್ಧಾರವನ್ನು ಕೈಗೊಂಡರು. ಹೀಗೆ ಹಂಪೆಗೆ ತಪ್ಪಿಸಿ ಕೊಂಡುಹೋಗಿ ಸಂಜೆ ಹಿಂತಿರುಗುತ್ತಿದ್ದ ಇವರು ಮನೆಯವರ ಆಕ್ರೋಶಕ್ಕೆ ಅನೇಕ ಬಾರಿ ಗುರಿಯಾದುದೂ ಉಂಟು. ಹುಡುಗನಲ್ಲಿ ಏನೋ ಒಂದು ಬಗೆಯ ಚಪಲ ಮನೆಮಾಡಿಕೊಂಡಿದೆ ಎಂದು ಅವರೂ ಸುಮ್ಮನಾಗು ತ್ತಿದ್ದರು.

ಒಮ್ಮೆ ಹಳ್ಳಿಯ ಬಾಲಕ ಗುರು ಹೊಸಪೇಟೆಯ ಸಂತೆಗೆ ಹೋಗಿ ದ್ದರು. ಅಲ್ಲಿದ್ದ ಆಂಜನೇಯಲು ಫೋಟೋ ಸ್ಟೂಡಿಯೋವಿನ ಮುಂದೆ ಹಾಯುವಾಗ, ಅದರ ಮುಂಭಾಗದಲ್ಲಿದ್ದ ವರ್ಣಚಿತ್ರವೊಂದು ಇವರನ್ನು ಹಿಡಿದು ನಿಲ್ಲಿಸಿತು. ಅದರ ಆಕರ್ಷಣೆಗೆ ಒಳಗಾದ ಇವರು ಫೋಟೋವಿನ ಹತ್ತಿರ ಹೋಗಿ ಬಹು ಸಂಕೋಚದಿಂದ ಅದನ್ನು ಸ್ಪರ್ಶಿಸಿದರು. ಇದನ್ನು ಕಂಡ ಮಾಲೀಕರು ರೇಗಾಡಿ, ಕೂಗಾಡಿದರು. "ನಾನೂ ಸಹ ಇಂಥ ಚಿತ್ರ ಗಳನ್ನು ಬರೆಯಲಾರೆನೇ" ಎಂಬ ಕೆಚ್ಚು ಅವರ ಮನಸ್ಸಿನಮೇಲೆ ಮೂಡಿತು. ತಲೆ ಕೆರೆದುಕೊಂಡು ಅಲ್ಲಿಂದ ಹೊರಟುಹೋದರು. ಆದರೆ ಆ ಘಟನೆ ಮಾತ್ರ ಅಚ್ಚಳಿಯದೆ ಮನಸ್ಸಿನ ಮೇಲೆ ನಿಂತು ಎಚ್ಚರಿಸುತ್ತಿತ್ತು.

ಚಿತ್ರದ ಗೀಳು ದಿನದಿನಕ್ಕೆ ಹೆಚ್ಚುತ್ತಾ ಬಂತು. ಎರಡು ಬಾರಿ ಅರ್ಜಿ ಯನ್ನು ಹಾಕಿದರೂ ಉಪಾಧ್ಯಾಯ ವೃತ್ತಿ ಸಿಗಲಿಲ್ಲ. ಕೊನೆಗೆ ಹೈಸ್ಕೂಲಿನಲ್ಲಿ ಡ್ರಾಯಿಂಗ್ ತರಗತಿಗಾದರೂ ಸೇರಿಕೊಳ್ಳಬೇಕೆಂಬ ಅಭಿಲಾಷೆಯಿಂದ ಮನೆಯವರಿಗೆ ತಿಳಿಸದೆಯೇ ಚಿತ್ರದುರ್ಗಕ್ಕೆ ಬಂದುಬಿಟ್ಟರು. ಆದರೆ ಅಲ್ಲಿ ಯಾವ ಅನುಕೂಲವೂ ಒದಗದೆ ನೇರವಾಗಿ ಬೆಂಗಳೂರಿನ ದಾರಿ ಹಿಡಿದರು.

ಅಲ್ಲಿನ ಶ್ರೀ ಮಹಾಂತ ಮಠದಲ್ಲಿ ಆಶ್ರಯ ಪಡೆದು ಬಸವನಗುಡಿಯ ಕಲಾ ಮಂದಿರಕ್ಕೆ ಸೇರಿಕೊಂಡರು. ಒಂದು ವರ್ಷ ಹಾಗೂ ಹೀಗೂ ಬೆಂಗಳೂರು ಜೀವನ ಕಳೆದು ಮೈಸೂರಿನ ಕಡೆ ಹೋಗುವುದು ಉತ್ತಮವೆನಿಸಿತು ಶ್ರೀ ಗುರು ಅವರಿಗೆ. ಈ ವೇಳೆಗಾಗಲೇ ತಕ್ಕಮಟ್ಟಿಗೆ ಚಿತ್ರಗಳನ್ನು ಬರೆಯಬಲ್ಲ ಯೋಗ್ಯತೆಯನ್ನು ಗಳಿಸಿಕೊಂಡಿದ್ದರು. ಇದರಿಂದ ಇವರ ಮೈಸೂರಿನ ಜೀವನ ಸ್ವಲ್ಪ ಸುಗಮವಾಯಿತು.

೧೯೩೯–೪೦ ರ ಕಾಲ. ಮೈಸೂರಿನ ಬೆಟ್ಟದಪುರದ ಹಾಸ್ಟಲಿನಲ್ಲಿ ಶ್ರೀ ಗುರು ಅವರಿಗೆ ಆಶ್ರಯ ದೊರೆಯಿತು. ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಮೂರನೆ ವರ್ಷದ ತರಗತಿಗೆ ಸೇರುವಷ್ಟು ಯೋಗ್ಯತೆಯನ್ನು ಮೊದಲೇ ಗಳಿಸಿಕೊಂಡು ಬಂದಿದ್ದರು. ಈ ಕಲಾಶಾಲೆಯ ಮೂರು ವರ್ಷದ ಶಿಕ್ಷಣದ ಜೊತೆಗೆ ಸ್ವತಃ ಅಭ್ಯಾಸವೂ ಸಾಗಿತ್ತು. ಪ್ರತಿನಿತ್ಯವೂ ವಿರಾಮ ದೊರೆತಾಗಲೆಲ್ಲಾ ದೊಡ್ಡ ಕೆರೆ ಮುಂತಾದ ಕಡೆಗಳಲ್ಲಿ ಹೋಗಿ ಹಸು ಎಮ್ಮೆಗಳನ್ನು ರೇಖೆಗಳಲ್ಲಿ ಬಿಡಿಸುವುದೂ, ಶನಿವಾರ, ಭಾನುವಾರಗಳಲ್ಲಿ ಮೈಸೂರಿನ ನೈಸರ್ಗಿಕ ದೃಶ್ಯಗಳನ್ನು ಆರಿಸಿಕೊಂಡು ಜಲವರ್ಣ ಚಿತ್ರಗಳನ್ನು ಬರೆದು ತರುವುದು—ಹೀಗೆ ಬರೆದು ತಂದವುಗಳನ್ನು ಕಲಾಶಿಕ್ಷಕರಿಗೆ ತೋರಿಸಿ ಸಲಹೆಗಳನ್ನು ಪಡೆಯುವುದೂ ಅವ್ಯಾಹತವಾಗಿ ನಡೆದು ಬಂತು. ಇದರ ಜೊತೆಗೆ ಶ್ರೀ ಡಿ. ಎಂ. ಶಂಭು ಮುಂತಾದ ಉತ್ತಮ ಸ್ಪರ್ಧಿಗಳು ಇದ್ದುದು ಕಲಾ ಸಾಧನೆಗೆ ಅನುಕೂಲವೇ ಆಯಿತು.

೧೯೪೪ ರಲ್ಲಿ ಚಿತ್ರಕಲಾ ಶಿಕ್ಷಣವನ್ನೂ ೧೯೪೫ ರಲ್ಲ ಮಾಡೆಲಿಂಗ್ ಶಿಕ್ಷಣವನ್ನೂ ಮುಗಿಸಿಕೊಂಡರು.

ಈ ಸಂದರ್ಭದಲ್ಲಿ ಇವರ ಪಾಲಿಗೆ ಕಷ್ಟಪರಂಪರೆಗಳು ಕಾದಿದ್ದವು. ಜೀವನದ ಹೋರಾಟ ಕಟುತರವಾಯಿತು. ಎಂಥ ವಿಷಮ ಸನ್ನಿವೇಶ ಒದಗಿ ಬಂದರೂ ಎದೆಗುಂದದೆ ಕಲಾಸೇವೆಯನ್ನು ಮುಂದುವರಿಸಿಕೊಂಡೇ ಬಂದರು.

ಶ್ರೀ ನ. ಭದ್ರಯ್ಯನವರ ಪರಿಚಯ ಒಮ್ಮೆ ಶ್ರೀ ಗುರು ಅವರಿಗೆ ಆಯಿತು. ಅಲ್ಲಿಂದೀಚೆಗೆ ಜೀವನದ ವಾಹಿನಿ ಹೊಸ ಪಾತ್ರಗಳ ನಡುವೆ ಹರಿಯತೊಡಗಿತು. ಶ್ರೀ 'ನ. ಭ.' ಅವರ ಕೃತಿಗಳಿಗೂ, ಇತರ ಲೇಖಕರ ಪುಸ್ತಕಗಳಿಗೂ ರೇಖಾಚಿತ್ರಗಳನ್ನು ಒದಗಿಸುವ ಸೌಲಭ್ಯ ಉಂಟಾಯಿತು.

ಇದರಿಂದಾಗಿ ಗುರುರವರ ಹೆಸರು ಅಲ್ಲಲ್ಲಿ ಕೇಳಿಬಂದಿತು. ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣಾಶಾಖೆಯ ಕಲಾವಿದರ ಸ್ಥಾನ ಇವರಿಗೆ ಮೀಸಲಾಯಿತು. ಅಲ್ಲಿಂದೀಚೆಗೆ ಶ್ರೀಯುತರು ಸಮಿತಿಯ ಪ್ರಕಟಣೆಗಳನ್ನೆಲ್ಲಾ ತಮ್ಮ ಕಲಾಕೃತಿಗಳಿಂದ ಅಲಂಕರಿಸುತ್ತಾ ಬಂದಿದ್ದಾರೆ. 'ಕುವೆಂಪು' ಅವರ 'ಜನಪ್ರಿಯ ರಾಮಾಯಣ' ಮತ್ತು 'ಮೋಡಣ್ಣನ ತಮ್ಮ' ಈ ಕೃತಿಗಳಲ್ಲಿ ಶ್ರೀ ಗುರು ಅವರ ವಿಶಿಷ್ಟ ಬಗೆಯ ಚಿತ್ರಗಳನ್ನು ನಾವು ಕಾಣುತ್ತೇವೆ. ಇಷ್ಟೇ ಅಲ್ಲದೆ ಸಾಮಾನ್ಯವಾಗಿ ಪ್ರಾಥಮಿಕ ಶಾಲೆಯಿಂದ ಹಿಡಿದು ಹೈಸ್ಕೂಲ್ ತರಗತಿಗಳವರೆಗಿನ ಕನ್ನಡ, ಇಂಗ್ಲಿಷ್, ಹಾಗೂ ಹಿಂದಿ ಮುಂತಾದ ಭಾಷೆಗಳಲ್ಲಿನ ಎಲ್ಲಾ ಪಠ್ಯಪುಸ್ತಕಗಳಲ್ಲಿಯೂ ಇವರ ವೈವಿಧ್ಯಪೂರ್ಣವಾದ ರೇಖಾಚಿತ್ರಗಳಿಂದಾಗಿ ಗುರು ಅವರ ಹೆಸರು ರಾಜ್ಯದಲ್ಲಿ ಮನೆಮಾತಾಗಿದೆ.

ಶ್ರೀ ಗುರು ಅವರು ರೇಖಾಚಿತ್ರಗಳನ್ನು ಹೆಚ್ಚಾಗಿ ಬರೆದಿದ್ದರೂ ಅನೇಕ ವರ್ಣಚಿತ್ರಗಳನ್ನೂ ಬರೆದಿದ್ದಾರೆ. ಕಾಲ್ಪನಿಕ ಚಿತ್ರದಲ್ಲೂ ನಿಪುಣರು. ಶ್ರೀ 'ಕುವೆಂಪು' ಅವರ 'ಜನಪ್ರಿಯ ರಾಮಾಯಣ'ದ ನಾಲ್ಕನೆಯ ಆವೃತ್ತಿಗೆ, ಶ್ರೀ ಸಿದ್ಧಯ್ಯ ಪುರಾಣಿಕರ ಒಂದು ಪುಸ್ತಕಕ್ಕೆ ಇವರು ಅನೇಕ ಸನ್ನಿವೇಶಗಳನ್ನು ಆರಿಸಿಕೊಂಡು ಕೆಲವು ಮನೋಜ್ಞ ಚಿತ್ರಗಳನ್ನು ಬರೆದಿದ್ದಾರೆ. ಈ ಚಿತ್ರಗಳಲ್ಲಿ ಶ್ರೀಯುತರ ಕಲ್ಪನಾಶಕ್ತಿಯೂ, ರೇಖಾ ವೈಖರಿಯೂ, ಮನಮೆಚ್ಚುವಂತಿವೆ. ಪ್ರಕೃತಿಸನ್ನಿವೇಶಗಳನ್ನಂತೂ ಮನೋಹರವಾಗಿ ಬಿಡಿಸುತ್ತಾರೆ. ರೇಖಾಚಿತ್ರಗಳಲ್ಲಿ ಶೀಘ್ರರೇಖಾಚಿತ್ರಗಳ ಅನೇಕ ಸಂಪುಟಗಳೇ ಇವರಲ್ಲಿವೆ. ಅವುಗಳ ಹಾಳೆಗಳನ್ನು ತಿರುವಿಹಾಕಿದರೆ ಅನೇಕ ಬಗೆಯ ಸಮಾಜ ಜೀವನಗಳನ್ನೂ. ಭಾವ ಭಂಗಿಗಳನ್ನೂ, ವೃತ್ತಿವಿನ್ಯಾಸಗಳನ್ನೂ ನೋಡಬಹುದು. ಈ ಬಗೆಯ ಚಿತ್ರಗಳಲ್ಲಿ ನಾವು ಕಾಣುವ ಒಂದು ವಿಶೇಷವೆಂದರೆ ಶೀಘ್ರತೆ. ಬಹು ಸೂಕ್ಷ್ಮವಾದ ಗೆರೆಗಳಲ್ಲಿ ಅಂಗಾಂಗ ವಿನ್ಯಾಸಗಳನ್ನು ಅರೆಕೊರೆ ಇಲ್ಲದೆ ಸುಲಭವಾಗಿ ರಚಿಸುವ ಕೌಶಲ ಗುರು ಅವರಿಗೆ ಕೈವಶವಾಗಿದೆ.

ಕಲಾಸ್ಪರ್ಧೆಗಳಲ್ಲಿ ಭಾಗವಹಿಸಬೇಕೆಂಬುದಾಗಲಿ, ಬಹುಮಾನಗಳನ್ನು ಗಳಿಸಬೇಕೆಂಬುದಾಗಲಿ ಇವರಿಗೆ ಇಚ್ಛೆ ಇದ್ದಂತೆ ತೋರುವುದಿಲ್ಲ. ಯಾವ ಕಲಾಸ್ಪರ್ಧೆಯಲ್ಲಿಯೂ, ಕಲಾಪ್ರದರ್ಶನಗಳಲ್ಲಿಯೂ ಇವರ ಕೃತಿ

ಗಳನ್ನು ನಾವು ಕಾಣದಿದ್ದರೂ ಪ್ರಕಟವಾದಅನೇಕ ಕೃತಿಗಳಲ್ಲಿ ಇವರ ಕಲಾಶಕ್ತಿಯನ್ನೂ, ರೇಖಾವಿನ್ಯಾಸವನ್ನೂ ಮನಗಾಣಬಹುದಾಗಿದೆ. ಶ್ರೀಯುತರು ಈಗಿನ್ನೂ ನಲವತ್ತೆಂಟರಗಡಿಯನ್ನು ದಾಟುತ್ತಿದ್ದಾರೆ. ತಾವಿನ್ನೂ ವಿದ್ಯಾರ್ಥಿ ಎಂದೂ, ತಾವು ಸಾಧಿಸಬೇಕಾದುದು ಬಹಳ ಇದೆಯೆಂದೂ—ಇದಕ್ಕಾಗಿ ಹಂಪೆಯ ನೆಲೆಯೇ ಅತ್ಯುತ್ತಮವೆಂದೂ ಶ್ರೀ ಗುರುರವರು ಆಗಾಗ ಹೇಳುತ್ತಲೇ ಇರುತ್ತಾರೆ. ಇದು ಅವರ ಸೌಜನ್ಯವನ್ನೂ, ಕಲೆಯ ಬಗ್ಗೆ ಇವರಿಗಿರುವ ಶ್ರದ್ಧೆಯನ್ನೂ ವ್ಯಕ್ತಪಡಿಸುತ್ತದೆ. ಇನ್ನೂ ಸಾಧಕನಂತೆ ಇವರು ಸತತವಾಗಿ ಕಲಾರಾಧನೆಯಲ್ಲೇ ತೊಡಗಿದ್ದಾರೆ. ಜೊತೆಜೊತೆಯಲ್ಲಿಯೇ ಪುರಾಣ ಪುಣ್ಯ ಕಥೆಗಳನ್ನು ವ್ಯಾಸಂಗಮಾಡುವ ಸದಭಿರುಚಿಯನ್ನು ಬೆಳಸಿಕೊಂಡು ಬಂದಿದ್ದಾರೆ. ತುಂಬ ಉತ್ಸಾಹಿಗಳೂ, ಬಿಚ್ಚು ಹೃದಯಿಗಳೂ ಆದ ಇವರು ಸದಾ ಹಸನ್ಮುಖಿಗಳಾಗೇ ಇರುತ್ತಾರೆ. ಸಂಜೆಯ ಸಮಯದಲ್ಲಿ ತೂಗುಚೀಲ ಒಂದನ್ನು ಹೆಗಲಿಗೆ ಹಾಕಿಕೊಂಡು ಕಂಕುಳಲ್ಲಿ ಸ್ಕೆಚ್ ಪುಸ್ತಕವನ್ನು ಸಿಕ್ಕಿಸಿಕೊಂಡು ಕೈಬೀಸಿಕೊಂಡು ಸಿಪಾಯಿಯಂತೆ ಹೊರಡುತ್ತಾರೆ. ಒಂದು ನಿಮಿಷವನ್ನೂ ವ್ಯರ್ಥವಾಗಿ ವ್ಯಯಮಾಡುವವರಲ್ಲ. ನಾಲ್ಕು ಜನ್ಮಗಳಾದರೂ ಕಲಾಸಾಧನೆಗೆ ಸಾಲದೆಂಬಷ್ಟು ಇವರ ಉತ್ಸಾಹ. ಇವರ ಈ ಉತ್ಸಾಹ ಶ್ರದ್ಧಾಸಕ್ತಿಗಳು ಇನ್ನೂ ಉತ್ತಮ ಕಲಾಕೃತಿಗಳನ್ನು ನೀಡುವಂತೆ ಮಾಡಲಿ ಈಗ ಮೈಸೂರಿನ ಲಲಿತಮಹಲ್ ಬಳಿ ಇರುವ ಓರಿಎಂಟೇಷನ್ ಸೆಂಟರಿನಲ್ಲಿ ಕೆಲಸ ಮಾಡುತ್ತಿದ್ದಾರೆ.



ಆರ್. ಸೀತಾರಾಮ್

ಮೈಸೂರಿನಲ್ಲಿ ಶ್ರೀ ವರಲಕ್ಷ್ಮೀ ಕುಶಲಕಲಾಸಂಸ್ಥೆಯನ್ನು ಸ್ಥಾಪಿಸಿ, ಪ್ರೋಷಿಸುತ್ತ ಬಂದಿರುವ ಮೈಸೂರು ಸಹೋದರರ ಹೆಸರನ್ನು ಕೇಳದಿರುವ ಮಂದಿ ಬಹಳ ವಿರಳವೆಂದೇ ಹೇಳಬೇಕು. ಮೈಸೂರು ಸಹೋದರರಲ್ಲಿ ಎರಡನೆಯವರೇ ಶ್ರೀ ಸೀತಾರಾಂ ಅವರು. ಶ್ರೀಯುತರು ಈ ಸಂಸ್ಥೆಯಲ್ಲಿ ಚಿತ್ರಕಲಾವಿಭಾಗದ ವ್ಯವಸ್ಥಾಪಕರಾಗಿದ್ದಾರೆ.

ಶ್ರೀಯುತರು ಆಂಧ್ರ ವೆಲನಾಡು ಪಂಗಡಕ್ಕೆ ಸೇರಿದ ಬ್ರಾಹ್ಮಣರು. ಇವರಿಗಿಂತ ನಾಲ್ಕೈದು ತಲೆಮಾರಿನ ಹಿಂದೆ ಈ ವಂಶವು ಆಂಧ್ರ ದೇಶಗಳಿಂದ ಬಂದು ತಮಗೆ ಲಭಿಸಿದ ಮೈಸೂರು ಸಂಸ್ಥಾನದ ಹೆಬ್ಬಳಲು ಎಂಬ ಜೋಡಿ ಗ್ರಾಮವೊಂದರಲ್ಲಿ ನೆಲಸಿದರು. ಕಲೋಪಾಸನೆ ಈ ವಂಶೀಕರಿಗೆ ಪರಂಪರೆಯಾಗಿ ಲಭಿಸಿದ ಆಸ್ತಿ. ಇವರ ಮುತ್ತಾತಂದಿರಾದ ದಿವಂಗತ ನರಸಪ್ಪನವರು ಕಟ್ಟಿಸಿದ ಈಶ್ವರ ದೇವಸ್ಥಾನ, ನರಸಾಪುರವೆಂಬ ಗ್ರಾಮಗಳು ಇಂದಿಗೂ ಈ ಮನೆತನದವರ ಮನೋವೃತ್ತಿಗೆ ಸಾಕ್ಷಿಗಳಾಗಿವೆ. ಶ್ರೀ ರಾಮಲಿಂಗಯ್ಯನವರು ಸಂಗೀತ—ಸಾಹಿತ್ಯಗಳಲ್ಲಿ ಹೆಸರಾದ ವಿದ್ವಾಂಸರಾಗಿದ್ದರು. ತಂದೆಯವರಾದ ದಿವಂಗತ ಶ್ರೀ ರಾಮಯ್ಯನವರು ಸಂಗೀತ, ಶಿಲ್ಪಕಲೆಗಳನ್ನು ಕೇವಲ ಪಾರಮಾರ್ಥಿಕ ಸೌಖ್ಯಕ್ಕಾಗಿ ಅಭ್ಯಸಿಸುತ್ತಿದ್ದರೆಂದೂ ಈ ಮನೆತನದ ಹಿನ್ನೆಲೆಗಳಿಂದ ತಿಳಿಯಬಹುದಾಗಿದೆ. ಅಷ್ಟೇ ಅಲ್ಲದೆ ಸೀತಾರಾಂರವರ ಪೂಜ್ಯ ಮಾತೃಶ್ರೀಯವರೂ ದಿವಂಗತ ಸುಂದರಶಾಸ್ತ್ರಿಗಳ ಮುಖ್ಯ ಶಿಷ್ಯೆಯರಲ್ಲೊಬ್ಬರಾಗಿದ್ದರು.

ಶ್ರೀಯುತರ ಕಲಾರಾಧನೆಗೆ ಸ್ಫೂರ್ತಿ ಇತ್ತವರೆಂದರೆ ಅವರ ಮಾತಾ-ಪಿತೃಗಳು. ಶ್ರೀಯುತರು ೭, ೮ ನೆ ವಯಸ್ಸಿನಿಂದಲೂ ಚಿತ್ರ ಬರೆಯುವುದರಲ್ಲಿ ಆಸಕ್ತಿ ತೋರಿಸಿ, ವೇಳೆ ಸಿಕ್ಕಿದಾಗಲೆಲ್ಲಾ ದಶಾವತಾರ, ಮುಂತಾದ ದೇವತಾ ವಿಗ್ರಹಗಳನ್ನು, ಪ್ರಕೃತಿ ದೃಶ್ಯಗಳನ್ನು ಸುಂದರವಾಗಿ ಚಿತ್ರಿಸುತ್ತಿದ್ದರು. ಆಗಲೇ ಅನೇಕರ ಮನಸ್ಸಿನಲ್ಲಿ ಬಾಲಕನ ಕಲಾಭವಿಷ್ಯದ ಬಗ್ಗೆ ವಿಶ್ವಾಸವನ್ನು ಉಂಟುಮಾಡಿದ್ದಿರಬೇಕು. ಕಲೆ ಎಂದರೆ ಅದೊಂದು ಅಯೋಗ್ಯ ವೃತ್ತಿ, ಅದರಿಂದ ಹಾಳಾಗುವವರೇ ಹೆಚ್ಚು ಎಂದು ತಿಳಿದ ಜನರ ಗುಂಪಿಗೆ ಶ್ರೀಯುತರ ತಂದೆ ತಾಯಿಗಳು ಸೇರದೆ, ಈ ಬಾಲಕನನ್ನು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿಸಿದರು. ಅಲ್ಲಿ ಶಾಸ್ತ್ರೀಯ ಕಲಾಭ್ಯಾಸ ಸಿಕ್ಕಿದುದರ ಪರಿಣಾಮವಾಗಿ ಶ್ರೀಯುತರು ತಮ್ಮ ಗುರುಗಳಾದ ಶ್ರೀ ಕೆ. ಕೇಶವಯ್ಯ, ವೆಂಕಸ್ವಾಮಿ, ಪಾವಂಜಿ, ಮುಂತಾದವರುಗಳ ಮೆಚ್ಚಿಗೆಗೆ ಪಾತ್ರರಾದರು. ಅದೇ ವೇಳೆಯಲ್ಲಿ ಶ್ರೀಯುತರು ತಮ್ಮ ಪ್ರತಿಭೆಯಿಂದ ವಿಶೇಷ ವಿದ್ಯಾರ್ಥಿವೇತನವನ್ನು ಗಳಿಸಿ ಜರ್ಮನಿಯಿಂದ ಆಹ್ವಾನಿತರಾಗಿದ್ದು, ಮೈಸೂರು ಸಂಸ್ಥಾನದ ಮುಖ್ಯ ಶಿಲ್ಪಿಗಳಾಗಿದ್ದ ಮಿ|| ಡೋರೆಂಗ್‌ರವರ

ಪಟ್ಟಶಿಷ್ಯರಾಗಿ Modeling ಅನ್ನು ಅಭ್ಯಾಸ ಮಾಡಿದರು. ಇವರನ್ನು ತಮ್ಮೊಂದಿಗೆ ಜರ್ಮನಿಗೆ ಕರೆದುಕೊಂಡು ಹೋಗಿ ವಿಶೇಷ ತರಪೇತಿಯನ್ನು ಕೊಡಬೇಕೆಂದಿದ್ದ ಡೋರಿಂಗರವರ ಆಕಾಂಕ್ಷೆ ಮಹಾಯುದ್ಧದ ಕಾರಣದಿಂದ ಕೈಗೂಡಲಿಲ್ಲ.

ಶಾಲೆಯಿಂದ ಹೊರ ಬಂದವರು ತಮ್ಮ ಅಭ್ಯಾಸ ಇನ್ನೂ ಮುಗಿದಿಲ್ಲವೆಂದು ಮನಗಂಡು ದಿ॥ ಕೆ. ಕೇಶವಯ್ಯನವರಲ್ಲಿ ಹಗಲಿರುಳು ಅಭ್ಯಾಸಕ್ಕೆ ತೊಡಗಿದರು. ೨೦ ವರ್ಷಗಳ ನಿರಂತರ ಕಲೋಪಾಸನೆಯಿಂದ ಜೀವನದಲ್ಲಿನ ದೃಷ್ಟಿಕೋನ ಬೆಳಗಲು ಪ್ರಭಾವಗೊಂಡಿವೆ. ಕಲೆಯಿಂದ ಕೇವಲ ಮಾನಸಿಕ ಸೌಖ್ಯ ಮಾತ್ರವಲ್ಲದೆ ನೈತಿಕ ದರ್ಶನವೂ ಸಿದ್ಧಿಸುತ್ತದೆಂದೂ ಮಾನವನ ಪೂರ್ಣ ವ್ಯಕ್ತಿತ್ವವು ಅರಳುತ್ತದೆಂದೂ, ಅವರು ದೃಢವಾಗಿ ನಂಬಿದ್ದಾರೆ. ಈ ಕಾಲದಲ್ಲಿ ಅವರು ಅನೇಕ ಪ್ರಯೋಗಗಳನ್ನು ನಡೆಸಲು ಅವಕಾಶವಾಯಿತು: ಕೇವಲ ದೇಹದ ಭಂಗಿಯಿಂದ ಇಂಗಿತಗಳನ್ನೂ, ರಸಗಳನ್ನೂ ಚಿತ್ರಿಸಲು ಸಾಧ್ಯವೇ ಎಂಬ ಸಮಸ್ಯೆ Impressionism ಪಂಥದಲ್ಲಿ ಭಾವ ಮತ್ತು ರಸಗಳ ಚಿತ್ರಣದ ಸ್ಪಷ್ಟತೆಯಲ್ಲಿ (ಒಂದೆರಡು ವರ್ಣಗಳಲ್ಲೇ ರಚಿಸಿದ ಚಿತ್ರಗಳು) ಯಶಸ್ವಿಯಾಗಲು ಪ್ರಯೋಗ ನಡೆಸಿಕೊಂಡುಬಂದಿದ್ದಾರೆ. ತೈಲವರ್ಣ, ಜಲವರ್ಣ, ಪೆನ್ ಅಂಡ್ ಇಂಕ್, ಬ್ಲಾಕ್ ಅಂಡ್ ವೈಟ್, ವಾಹಕಗಳಲ್ಲಿ ಅನೇಕ ಉತ್ತಮ ಚಿತ್ರಗಳನ್ನು ತಯಾರಿಸಿದ್ದಾರೆ.

ಶ್ರೀಯುತರಿಗೆ ದಸರ ವಸ್ತುಪ್ರದರ್ಶನದಲ್ಲಿ ವರ್ಷಂಪ್ರತಿ ಒಂದಲ್ಲ ಒಂದು ಬಹುಮಾನ ಬರುವುದು ಅವರ ಶ್ರಮದ ಫಲವೆಂದೇ ಹೇಳಬೇಕು.

ಶ್ರೀಯುತರ ಕಲಾವೈಶಿಷ್ಟ್ಯಗಳಲ್ಲಿ ಕೆಲವನ್ನು ತಿಳಿಯುವುದು ಅಗತ್ಯ. ತಮ್ಮ ಜಲವರ್ಣದ ಶೈಲಿಯಲ್ಲಿನ ವೈಶಿಷ್ಟ್ಯದಿಂದ ಕಲಾವೃತ್ತದಲ್ಲಿ ಅವರು ಪರಿಚಿತರಾಗಿದ್ದಾರೆ. ಯಾವ ವಾಹಕವೇ ಆಗಲಿ, ಭಾವದಲ್ಲಿ ಗಾಢತೆಯನ್ನೂ, ವರ್ಣದಲ್ಲಿ ಸಾಂದ್ರತೆಯನ್ನೂ ಸಾಧಿಸುವುದು ಈ ಕಲಾಕಾರರ ಕೃತಿಗಳಲ್ಲಿನ ಒಂದು ವಿಶೇಷಗುಣ. ವ್ಯಕ್ತಿಚಿತ್ರಗಳಲ್ಲಿ ಶ್ರೀಯುತರು ಜೀವಕಳೆ ತುಂಬಿ ತೋರಬಲ್ಲರು. ಮತ್ತು ಇವರಲ್ಲಿ ಭಾವ ಪ್ರಧಾನವಾಗಿರುತ್ತದೆ. ಇದಕ್ಕೆ ಶ್ರೀಯುತರು ರಚಿಸಿರುವ ತಮ್ಮ ಮಾತೃಶ್ರೀಯವರ ಭಾವಚಿತ್ರವೇ ಕಾರಣವಾಗಿದೆ. ಇಲ್ಲಿ ಮಾತೆಯು ತಮ್ಮ ಬಾಳಗೆಳೆಯರನ್ನು

ಕಳೆದುಕೊಂಡು ಮರುಗುವ ಭಾವ ಸಿಜವಾಗಿಯೂ ಶ್ರೀಯುತರ ಸಾಧನೆ ಎಂದೇ ಹೇಳಬೇಕು. ಜಲವರ್ಣ ಮತ್ತು ತೈಲವರ್ಣದ ಚಿತ್ರಗಳಲ್ಲಿ ನಾನಾ ಬಣ್ಣಗಳು ಸುಸ್ಪಷ್ಟವಾಗಿದ್ದರೂ ಒಟ್ಟಿನಲ್ಲಿ ಸಂಪೂರ್ಣವಾದ ಸಮರಸತೆಯಿರುತ್ತದೆ. ಇಲ್ಲವೆ ಪ್ರತಿ ಚಿತ್ರದಲ್ಲೂ, ಒಂದೊಂದು ಭಾಗಗಳು ಒಂದಕ್ಕೊಂದು ಸಮತೂಕದಲ್ಲಿದ್ದು ಅನುರೂಪವಾಗಿ ಇರುತ್ತವೆ. ಇವರಲ್ಲಿ ಆಕೃತಿ ರಚನೆಯಲ್ಲಿ ವಿಶೇಷವಾದ ಆಸಕ್ತಿಯೂ, ಅಭಿರುಚಿಯೂ ಇರುವುದಲ್ಲದೆ. ತ್ರಿಕೋಣ, ಚತುರ್ಭುಜ ಮುಂತಾದ ಆಕಾರಗಳಲ್ಲಿ ಅನೇಕ ಕೃತಿಗಳನ್ನು ಚಿತ್ರಿಸಿದ್ದಾರೆ. ಪ್ರತಿಯೊಂದು ಚಿತ್ರಗಳಲ್ಲಂತೂ ಆದರ್ಶಪದ್ಧತಿ ಮತ್ತು ವಾಸ್ತವಿಕಪದ್ಧತಿಗಳ ಮಧ್ಯವರ್ತಿಯಾದ ಛಾಯೆಯನ್ನೇ ಹೆಚ್ಚು ಕಾಣಬಹುದಾಗಿದೆ.

ಶ್ರೀಯುತರ ಪ್ರಮುಖ ಚಿತ್ರಗಳಲ್ಲಿ, ಸಂಗೀತಕ್ಕೆ ಸಂಬಂಧಿಸಿದವು "ವೀಣೆಯ ಜೆಡಗಿದು ಮೈಸೂರು, ನಾದಲೀನತೆ, ಶೃತಿ ಸಾಮರಸ್ಯ, ಸಂಗೀತ ೧. ೨, ೩, ೪, ೫, ೬," ಎಂಬ ಚಿತ್ರಗಳು. ಭಾರತೀಯ ಸುಸಂಸ್ಕೃತ ಗೃಹಿಣಿಯ ಅಲಂಕಾರದಲ್ಲಿ ವಿವಿಧ ಹಂತಗಳು, ಅವರ ಪೂಜ್ಯ ತಂದೆಯವರ ಜಲವರ್ಣದ ಮತ್ತು ಮಾತೆಯ ತೈಲವರ್ಣದ ವ್ಯಕ್ತಿ ಚಿತ್ರಗಳು. ಕೃತಿರಚನೆಯ ಪ್ರಯೋಗ, ತಂತ್ರಗಳ ಪ್ರಯೋಗವನ್ನು ಇವರು ನಡೆಸುತ್ತಿರುವುದಲ್ಲದೆ ತಾವು ಬಳಸುತ್ತಿರುವ ವಾಹಕದ ಸಂಪೂರ್ಣ ಅವಕಾಶವನ್ನು ತೆಗೆದುಕೊಂಡು ಆಯಾ ವಾಹಕದ ಪರಿಚಯ ಮಾಡಿಸುತ್ತಾರೆ. ಚಿತ್ರಣಕ್ಕೆ ಸಾಮಗ್ರಿಯ ಆಯ್ಕೆಯಲ್ಲಿ ಸಾಹಸ ತೋರುವುದು ಕಲಾ ವೈಶಿಷ್ಟ್ಯತೆಯಲ್ಲೊಂದು.

ಶ್ರೀಯುತರು ಹಾಡುಗಾರಿಕೆಯಲ್ಲೇ ಅಲ್ಲದೆ, ವೀಣೆ, ಗೋಟುವಾದ್ಯ, ಕಂಜರಿಗಳಲ್ಲಿಯೂ ವಿಶೇಷ ಪರಿಶ್ರಮ ಪಡೆದಿದ್ದಾರೆ. ಇದಲ್ಲದೆ ಭಾರತೀಯ ನೃತ್ಯದಲ್ಲಿಯೂ ಸಾಕಷ್ಟು ಅನುಭವವನ್ನು ಅವರು ಹೊಂದಿದ್ದಾರೆ. ಸಾಮಾಜಿಕ ನಾಟಕಾಭಿನಯದಲ್ಲಿಯೂ ಪಾತ್ರವಹಿಸಿ ಯಶಸ್ವಿಯಾಗಿದಾರೆ.

"ಎಲ್ಲಾ ಕಲೆಗಳನ್ನೂ ಆದಷ್ಟು ಹತ್ತಿರ ತರಬೇಕೆಂಬುದೇ ನನ್ನ ಜೀವನದಲ್ಲಿ ಹಿರಿದಾದ ಆಸೆ. ಎಲ್ಲ ಕಲೆಗಳ ಧ್ಯೇಯವೂ ಒಂದೇ. ಸಾಧನೆಯಲ್ಲಿ ಮಾತ್ರ ತಾರತಮ್ಯ; ಒಳಜೀವನದಲ್ಲಿ ಅಡಗಿರುವ ಆತ್ಮಶಕ್ತಿಯನ್ನು

ಸುಂದರ ಸತ್ಯಾನ್ವೇಷಣೆಯಲ್ಲಿ ಉಪಯೋಗಿಸುವುದೇ ಕಲೆಯ ಅಂತಿಮ ಗುರಿಯೆಂದು ನಮ್ರವಾಗಿ ನಂಬಿರುವವರಲ್ಲಿ ನಾನೂ ಒಬ್ಬ" ಎನ್ನುತ್ತಾರೆ ಸೀತಾರಾಂ.

ಶ್ರೀಯುತರ ಕಲಾ ನೈಪುಣ್ಯತೆಯಿಂದಾಗಿ ಅಹಮುದಾಬಾದಿನ ಲೀಲಾ ಬೆನ್ ಕಲಾ ಕಾಲೇಜಿಗೆ ಅಧ್ಯಾಪಕ ಕೆಲಸಕ್ಕೆ ಬಂದಿದ್ದ ಕರೆಯನ್ನೂ ಅನಿವಾರ್ಯದಿಂದ ಕೈ ಬಿಟ್ಟು ತಮ್ಮ ಸಂಸ್ಥೆಯ ಏಳಿಗೆಗೆ ಶ್ರಮಿಸಿದರು.

ಚಿತ್ರ ಕಲೆಯನ್ನು ಸಂಗೀತಕ್ಕೆ ಅಳವಡಿಸಬೇಕೆಂಬ ಧ್ಯೇಯವನ್ನಿಟ್ಟುಕೊಂಡು ಸಂಗೀತದಲ್ಲಿ ಶಿಕ್ಷಣ ಕ್ರಮಕ್ಕೆ ತಮ್ಮ ಚಿತ್ರ ಕುಶಲತೆಯನ್ನು ಉಪಯೋಗಿಸುತ್ತಿದ್ದಾರೆ. ವೈಜ್ಞಾನಿಕ ದೃಷ್ಟಿಯಿಂದ ಮನಶ್ಶಾಸ್ತ್ರದ ತತ್ತ್ವಗಳನ್ನನುಸರಿಸಿ ಚಿತ್ರಗಳನ್ನು ಬರೆಯುವುದರಲ್ಲಿ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಸಂಗೀತ ಕೀರ್ತನೆಗಳ ಭಾವಗಳನ್ನು ಚಿತ್ರಗಳಮೂಲಕ ವ್ಯಕ್ತಗೊಳಿಸುವುದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ.

ಕಲಾವಿದರಿಗೆ ಸಹಜವಾದ ಸೌಜನ್ಯವೂ, ವಿನಯವೂ ಇವರಲ್ಲಿದೆ. ಬಂದವರೊಡನೆ ಹಸನ್ಮುಖಿಗಳಾಗಿ ಮನಬಿಚ್ಚಿ ಮಾತನಾಡುತ್ತಾರೆ. ಅಪೇಕ್ಷಿಸುವ ಕಲಾಭಿಮಾನಿಗಳಲ್ಲಿ ತಮ್ಮ ಈ ಎಲ್ಲಾ ಚಿತ್ರಗಳನ್ನೂ ತೋರಿಸಿ ಅವುಗಳ ವೈಶಿಷ್ಟ್ಯವನ್ನು ವಿವರಿಸುತ್ತಾರೆ. ಚಿತ್ರಕಲೆಯ ಬಗ್ಗೆ ವಿಚಾರಪೂರಿತವಾಗಿ ಉಪನ್ಯಾಸಮಾಡುವ ಕಲೆಯೂ ಇವರಿಗಿದೆ. ಶ್ರೀ ಯುತರ ಮಾತೋಶ್ರೀಯವರು ನಿದನರಾದಮೇಲೆ ಹೃದಯ ತಲ್ಲಣಗೊಂಡಿದೆ. ದುಖಃವನ್ನು ಮರೆಯಲು ಕಲೆಯ ಮರೆಹೋಗಿದ್ದಾರೆ ಶ್ರೀ ಸೀತಾರಾಂ.

ಆದರ್ಶ ಕಲಾಜೀವಿ ಶ್ರೀ ಸೀತಾರಾಂರವರ ಕಲಾರಾಧನೆ ಸತತ ಬೆಳಗಲಿ, ಕನ್ನಡ ನಾಡಿಗೆ ಆದರ್ಶವಾಗಲಿ.



ಎಸ್. ಜಿ. ಟಂಕಸಾಲೆ

ಚಿತ್ರ ಕಲಾವಿದರಾಗಿ ಅಪಾರ ಸೇವೆ ಸಲ್ಲಿಸಿ ಕನ್ನಡ ನಾಡಿಗೆ ಕೀರ್ತಿ ತಂದ ಶ್ರೀ ಟಂಕಸಾಲಿಯವರನ್ನು ಮೈಸೂರು ಪ್ರದೇಶ ಚಿತ್ರಕಲಾಪರಿಷತ್ತಿನವರಾದ ನಾವು ಇತ್ತೀಚೆಗೆ ಸನ್ಮಾನಿಸಲು ನಿರ್ಧರಿಸಿದ್ದೆವು. ನಿಸರ್ಗ ಕಲಾವಿದರೆಂದು ಖ್ಯಾತಿಪಡೆದವರಲ್ಲಿ ಶ್ರೀ ಎಸ್. ಜಿ. ಟಂಕಸಾಲೆಯವರೂ ಒಬ್ಬರಾಗಿದ್ದಾರೆ. ಅವರ ಹೆಸರು ಅನೇಕ ವರ್ಷಗಳಿಂದಲೂ ಕಲಾಲೋಕದಲ್ಲಿ

ಆಗಾಗ ಕೇಳುತ್ತಲೇ ಬಂದಿದೆ. ಅವರನ್ನು ನಾನು ನೋಡಿಬರುವ ಅವಕಾಶವೂ ಒಮ್ಮೆ ಕೂಡಿಬಂದಿತು.

ಸನ್ಮಾನಕ್ಕೆ ಒಂದು ದಿನ ಮುಂಚಿನ ಸಮಯ. ಶ್ರೀಯುತರ ಮೆಚ್ಚಿನ ಶಿಷ್ಯ ಕಲಾವಿದ ಶ್ರೀ ರಾಮಸ್ವಾಮಿ (ಸರ್ಕಾರಿ ಮುದ್ರಣಾಲಯದಲ್ಲಿರುವ) ಯವರೊಡಗೂಡಿ ಹೋಗಿಬರುವ ಸದವಕಾಶ ನನಗೆ ದೊರಕಿತು. ರಾಜಾಜಿ ನಗರದಲ್ಲಿರುವ ಅವರ ಮನೆಗೂ ಹೋಗಿ ತಲುಪಿದೆವು. ಶ್ರೀ ಟಂಕಸಾಲೆ ಯವರ ಪುತ್ರರು ಬಂದು ನಮ್ಮನ್ನು ಸ್ವಾಗತಿಸಿ ಒಳಗೆ ಕರೆದು ಕುಳ್ಳರಿಸಿದರು. ಪ್ರಕೃತಿ ಪ್ರಿಯನಾದ ನನಗೆ ಶ್ರೀಯುತರ ಚಿತ್ರಗಳನ್ನು ಈಕ್ಷಿಸುವ ಕುತೂಹಲ ಹೆಚ್ಚಿತು. ಆದರೆ ಅಲ್ಲಿ ಅವರ ಯಾವ ಕೃತಿಯೂ ಕಾಣಬರದೆ ನಿರಾಶೆ ಯಾಯಿತು.

ವಿಶ್ರಾಂತಿಯಲ್ಲಿದ್ದ ಎಪ್ಪತ್ತೆಂಟು ವಯಸ್ಸಿನ ಶ್ರೀ ಟಂಕಸಾಲೆಯವರು ಸದ್ದುಮಾಡದೆ ಬಂದು ಕೈಜೋಡಿಸಿ ನಮಗೆ ವಂದಿಸುತ್ತಿದ್ದಂತೆಯೇ ನಾವು ದಿಗ್ಗನೆ ಎದ್ದುನಿಂತೆವು., ನಮ್ಮ ಕೈಗಳೂ ಶಿರವೂ ನಾಚಿಕೆಯಿಂದಬಾಗಿದವು. ನನ್ನ ಕಡೆ ಒಮ್ಮೆ ಅವರು ನೋಡಿದರು.

"ಕೂತುಕೊಳ್ಳಿ. ನಿಮ್ಮ ಹೆಸರು ಕೇಳಿರುವೆ. ಪತ್ರಿಕೆಗಳಲ್ಲಿ ನಿಮ್ಮ ಚಿತ್ರಗಳನ್ನು ನೋಡಿರುವೆ. ಲೇಖನಗಳನ್ನು ಓದಿರುವೆ" ಎಂದರು. ಮುಂದೇನು ಮಾತು ಬರುವುದೋ ಎಂದು ನಮಗೆ ದಿಗಿಲಾಯಿತು.

"ನೋಡಿ ನಮ್ಮ ಕಾಲದಲ್ಲಿ ನಿಸರ್ಗ ಚಿತ್ರ ರಚನೆಗೆ ಕಾಡುಮೇಡೆನ್ನದೆ ಸುತ್ತಿ ಬರುತ್ತಿದ್ದೆವು. ಚಿತ್ರಗಳೂ ಸೊಗಸಾಗಿ ಸ್ವಾಭಾವಿಕವಾಗಿ ಮೂಡಿ ಬರುತ್ತಿದ್ದವು. ಈಗ ಎಷ್ಟುಮಂದಿ ನಿಸರ್ಗದ ನಡುವೆ ಓಡಾಡಿ ಚಿತ್ರಿಸು ತ್ತಾರೆ? ಎಂದು ಅವರು ಹಾಕಿದ ಪ್ರಶ್ನೆ ಸಹಜ ಎನ್ನಿಸಿತು. ಅವರ ಕಾಲದ ಕಲಾಭ್ಯಾಸ, ಚಾಮರಾಜ ಕಲಾಶಾಲೆ, ಅವರ ಶಿಷ್ಯರ ಕಲಾಸಾಧನೆ ಎಲ್ಲ ವನ್ನೂ ಸ್ಮರಿಸಿಕೊಂಡರು. ಮಾತಿನ ನಡುವೆ ನಮ್ಮ ಆಸೆಯ ಬುತ್ತಿಯ ಗಂಟನ್ನು ಬಿಚ್ಚಿದೆವು.

"ನಿಮ್ಮ ಪ್ರಕೃತಿ ಚಿತ್ರಗಳನ್ನು ನೋಡುವ ಬಯಕೆ ಬಹುದಿನದಿಂದ ನಮಗಿದೆ. ಇದ್ದರೆ ತೋರಿಸುವಿರಾ ?" ಎಂದು ಕೇಳಿಯೇಬಿಟ್ಟೆ. ಏನನ್ನೋ ನೆನಪುಮಾಡಿಕೊಂಡವರಂತೆ ಅವರ ವಿಶ್ರಾಂತಿಕೋಣೆಗೆ ಹೋದರು.

ತಾವೇ ರಚಿಸಿದ ಜಲವರ್ಣದ ಪ್ರಕೃತಿ ಚಿತ್ರಗಳನ್ನು ತಂದು ನಮ್ಮ ಮುಂದೆ ಇರಿಸಿದರು. ಮೂವತ್ತು ನಲವತ್ತು ವರ್ಷಗಳ ಹಿಂದೆ ರಚಿಸಲಾದ ಚಿತ್ರಗಳವು. ಅವು ಶಿವಗಂಗೆಯ ದೃಶ್ಯಗಳು. ಅವುಗಳಲ್ಲಿ ಶ್ರೀಯುತರು ಬಳಸಿರುವ ವರ್ಣ ಸಹಜತೆ ಕುಂಚ ವೈವಿಧ್ಯತೆಗೆ ನಾವು ಅಚ್ಚರಿಪಟ್ಟೆವು.

ಶ್ರೀ ಟಂಕಸಾಲೆಯವರು ಕನ್ನಡ ನಾಡಿನ ನಿಸರ್ಗ ಚಿತ್ರಕಾರರಲ್ಲಿ ಅಪ್ರತಿಮ ಸಾಧನೆಯನ್ನೂ ಸೇವೆಯನ್ನೂ ಸಲ್ಲಿಸಿದ ಹಿರಿಯ ಕಲಾವಿದರು. ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಶ್ರೀ ಶ್ರೀನಿವಾಸರಾವ್ ಗುರುರಾವ್ ಟಂಕಸಾಲೆಯವರ ಜನ್ಮಸ್ಥಳ. ಶ್ರೀಯುತರ ತಂದೆ ಶ್ರೀ ಗುರುರಾವ್ ಅವರಿಗೆ ಚಿತ್ರರಚನಾ ವಿಧಾನದಲ್ಲಿ ಅಭಿರುಚಿ ಇದ್ದುದರಿಂದ ಈ ಪಿತ್ರಾರ್ಜಿತ ಕಲೋಪಾಸನೆ ಸಂಸ್ಕಾರ ಇವರ ಮೂಲಕ ಹೆಚ್ಚು ಪ್ರಕಾಶವಾಗಲು ಕಾರಣವಾಯಿತು. ಇವರ ಮುತ್ತಾತಂದಿರು ಅರಮನೆಯಲ್ಲಿ ಟಂಕಸಾಲೆಯ ಮುತ್ಸದ್ದಿಗಳಾಗಿದ್ದುದರಿಂದ 'ಟಂಕಸಾಲೆ' ಹೆಸರು ಇವರಿಗೆ ಲಭ್ಯವಾಯಿತು. ಲಕ್ಷ್ಮೀದೇವಿಯ ಅನುಗ್ರಹಕ್ಕೆ ಪಾತ್ರವಾಗಿದ್ದ 'ಟಂಕಸಾಲೆ' ಹೆಸರಿಗೆ ಇವರ ಚಿತ್ರ ಕಲಾತೇಜಸ್ಸನ್ನೂ ಕೀರ್ತಿಯನ್ನೂ ದೊರಕಿಸಿದರೆಂದು ಹೇಳಬಹುದಾಗಿದೆ.

ಇವರು ೧೮೮೭ ನೇ ಡಿಸೆಂಬರ್ ತಿಂಗಳಲ್ಲಿ ಜನಿಸಿದರು. ಬಾಲ್ಯವನ್ನು ವ್ಯರ್ಥಗೊಳಿಸದೆ ಕಲಾಭ್ಯಾಸದಲ್ಲಿ ಸಾರ್ಥಕಗೊಳಿಸಿದರು. ೧೯೦೮ ರಲ್ಲಿ ಬೊಂಬಾಯಿ ಮಹಾನಗರಕ್ಕೆ ತೆರಳಿ ಅಲ್ಲಿ ಜೆ. ಜೆ. ಕಲಾಶಾಲೆಯಲ್ಲಿ ಕಲಾಧ್ಯಯನ ಮಾಡಿದರು. ೧೯೧೫ ರಲ್ಲಿ ಮೈಸೂರು ಮಹಾರಾಜಾ ಹೈಸ್ಕೂಲಿನಲ್ಲಿ ಡ್ರಾಯಿಂಗ್ ಶಿಕ್ಷಕರಾದರು. ೧೯೧೯ ರಿಂದ ೧೯೪೦ರ ವರೆಗೂ ಮೈಸೂರು ಚಾಮರಾಜೇಂದ್ರ ಕಲಾಶಾಲೆಯಲ್ಲಿ ಪ್ರಭಾವಿತ ಕಲಾ ಶಿಕ್ಷಕರಾಗಿ ಪ್ರತಿಭಾವಂತ ಕಲಾಸಾಧಕರ ಪೀಳಿಗೆ ಬೆಳೆಯಲು ಆಚಾರ್ಯರಾದರು. ಇಂದು ಹೆಸರಾಂತ ನಮ್ಮ ಪ್ರಕೃತಿ ಚಿತ್ರಕಾರರಲ್ಲಿ ಖ್ಯಾತಿಪಡೆದ ಶ್ರೀ ಟಂಕಸಾಲೆಯ ಶಿಷ್ಯರಲ್ಲಿ ಶ್ರೀ ಹನುಮಯ್ಯ, ಸುಬ್ಬಕೃಷ್ಣ, ಚಂದ್ರಶೇಖರ, ರುಮಾಲೆ, ಸೋಮಸುಂದರ, ರಾಮಚಂದ್ರ ಮುಂತಾದವರು ಪ್ರಮುಖರು.

ಶುದ್ಧ ಜಲವರ್ಣ ನಿಸರ್ಗ ಚಿತ್ರರಚನೆಯಲ್ಲಿ ಭಾರತದ ಕೆಲವೇ ಮಂದಿ ಹೆಸರಾಂತ ಚಿತ್ರಕಾರರಲ್ಲಿ ಶ್ರೀ ಟಂಕಸಾಲೆಯವರು ಪ್ರಮುಖರಾಗಿರುವರು. ಇವರ ಒಂದೊಂದು ಚಿತ್ರವೂ ನಮ್ಮ ನಾಡಿನ ದೊಡ್ಡ ಆಸ್ತಿಯಾಗಿ


ಉಳಿದಿವೆ. ಅನೇಕ ವಿದೇಶೀ ಚಿತ್ರ ಸಂಗ್ರಾಹಕರಲ್ಲಿ ಇವರ ಚಿತ್ರಗಳು ಸದಾ ಕಾಲಕ್ಕೂ ಉಳಿದಿವೆ. ನಮ್ಮ ಕಲಾವಿದರಿಗೆ ಶ್ರೀಯುತರ ಸರಳತೆ ಸೊಬಗು ವೈಭವದ ವರ್ಣವಿನ್ಯಾಸ ಕೈದೀವಿಗೆಯಾಗಿ ಶೋಭಿಸುವುವು.

ಇವರ ವ್ಯಕ್ತಿತ್ವ ಬೂದಿಮುಚ್ಚಿದ ಕೆಂಡದಂತೆ. ಹೆಚ್ಚಿನ ಮೌನವೇ ಇವರ ಸಂಪತ್ತು. ಚಿತ್ರಕಲಾವಿಚಾರದಲ್ಲಿ ಆಳವಾದ ಅನುಭವವನ್ನು ಪಡೆದು ಕೊಂಡು ಬಂದಿದ್ದಾರೆ. ಅಪರೂಪವಾಗಿ ನೀಡುವ ಅವರ ಅಭಿಪ್ರಾಯದ ನುಡಿಗಳು ಕಲಾಲೋಕದಲ್ಲಿ ಸದಾ ಸ್ಮರಿಸುವಂತಹವು. ಅವರನ್ನು ಕಾಣ ಬಂದವರನ್ನು ಸತ್ಕರಿಸುವ ರೀತಿ ಅವರ ಹೃದಯ ವೈಶಾಲ್ಯವನ್ನೂ ಸುಸಂಸ್ಕೃತಿಯನ್ನೂ ವ್ಯಕ್ತಪಡಿಸುತ್ತದೆ.

ಶ್ರೀ ಟಂಕಸಾಲೆಯವರು ತಮ್ಮ ಕಲಾಸಾಧನೆಯ ಹಾದಿಯಲ್ಲಿ ಅವಿಚ್ಛಿನ್ನವಾದ ಕೀರ್ತಿಗೆ ಭಾಜನರಾಗಿರುವುದು ಕನ್ನಡಿಗರೆಲ್ಲರಿಗೂ ಒಂದು ಹೆಮ್ಮೆಯ ಸಂಗತಿ.

ವಿಧಾನ ಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ಜರುಗಿದ ಸನ್ಮಾನ ಸಮಾ ರಂಭದ ಅಧ್ಯಕ್ಷತೆಯನ್ನು ವಿಧಾನ ಸಭೆಯ ಅಧ್ಯಕ್ಷ ಶ್ರೀ ವೈಕುಂಠಬಾಳಿ ಗರು ವಹಿಸಿದ್ದರು. ಅಲ್ಲಿ ಶ್ರೀ ಟಂಕಸಾಲೆಯವರನ್ನೂ ಅತ್ಯಂತ ಪ್ರೀತಿ ಗೌರವದಿಂದ ಸರಳವಾಗಿ ಸನ್ಮಾನಿಸಲಾಯಿತು. ಶ್ರೀಯುತರ ಬಗ್ಗೆ ಅವರ ಕಲೆಯ ಬಗ್ಗೆ ಹಲವರು ಹೃದಯ ತುಂಬಿ ಗುಣಗಾನಮಾಡಿದರು.

ಸಭೆಯು ಮುಗಿಯಿತು. ಶ್ರೀ ಟಂಕಸಾಲೆಯವರು ಪ್ರದರ್ಶಿತ ಕೃತಿಗಳನ್ನೆಲ್ಲಾ ಒಮ್ಮೆನೋಡಿ ಬಂದು "ಶ್ರಮದಿಂದ ಚಿತ್ರಿಸುವ ಸ್ವಾಭಾ ವಿಕ ಕಲಾಭ್ಯಾಸ ಇತ್ತೀಚಿಗೆ ಕಡಿಮೆಯಾಗುತ್ತಿದೆ"—ಎಂದು ಮನನೊಂದು ನುಡಿದ ಮಾತು ನಮ್ಮ ಅಪಕ್ವ ಕಲಾಭ್ಯಾಸಿಗಳನ್ನೆಲ್ಲಾ ಎಚ್ಚರಿಸುವಂತಿದೆ.



ವೈ. ಜಿ. ಯಶವಂತಾಚಾರ್ಯ

ಕಾರವಾರ ಜಿಲ್ಲೆಯ ಪ್ರಕೃತಿಸೊಬಗಿಗೆ ನಾನು ಮನಸೋತಿರುವೆ. ಅಲ್ಲೆಲ್ಲಾ ಸುತ್ತಾಡಿ ಚಾರಿತ್ರಿಕ ನೆಲೆಗಳನ್ನು ಚಿತ್ರಿಸಿಕೊಳ್ಳುವ ಸದವಕಾಶ ಒಮ್ಮೆ ನನಗೆ ದೊರಿತಿತ್ತು. ಈ ನನ್ನ ಕಾರ್ಯಕ್ಕೆ "ಸಿರಸಿ" ಕೇಂದ್ರವಾಯಿತು. ಅಲ್ಲಿಯ ಮಿತ್ರ ಮಾಡಿಗೇರಿಯವರು ಅಲ್ಲಿನ ಪುಸ್ತಕ ಭಂಡಾರದ ಭವ್ಯ ಮಂದಿರಕ್ಕೆ ನನ್ನನ್ನು ಏಕೋ ಕರೆದು ತಂದು ನಿಲ್ಲಿಸಿದರು. ಅಲ್ಲಿಯ ಭಿತ್ತಿಯ ಮೇಲೆ ತೂಗುಹಾಕಲಾದ ನೆಹರೂವರ ಭವ್ಯ ಭಾವಚಿತ್ರವು

ನನ್ನನ್ನು ಬಹುವಾಗಿ ಆಕರ್ಷಿಸಿತು. ಅದರ ವರ್ಣಸಂಯೋಜನೆ ಸುಸ್ಪಷ್ಟವಾಗಿದ್ದಿತು. ಆ ಚಿತ್ರದಲ್ಲಿ ಬರೆದ ಹೆಸರು ವೈ. ಜೆ. ಆಚಾರ್ಯ ಎಂದು ಅಸ್ಪಷ್ಟವಾಗಿ ಕಂಡಿತು. ಇದನ್ನು ಗಮನಿಸಿದ ಮಿತ್ರರು ಕಲಾವಿದರ ಬಗ್ಗೆ ಮಾತನಾಡುತ್ತ "ಅವರು ಸಿರಸಿಯವರು. ಈಗ ಬೊಂಬಾಯಲ್ಲಿದ್ದಾರೆ. ಒಳ್ಳೆಯ ಕಲಾವಿದರಲ್ಲವೆ?" ಎಂದು ವಿಚಾರಿಸಿದರು. "ಚಿತ್ರವೇ ಅದನ್ನು ನುಡಿಯುತ್ತಿದೆ—ಪಳಗಿದ ಕೈ ಒಳ್ಳೆಯ ಭವಿಷ್ಯ ಅವರಿಗಿದೆ"–ಎಂದೆ.

ಇದೇ ಮಾರ್ಚಿಯಲ್ಲಿ ಬೊಂಬಾಯಿಗೆ ನಾನು ಹೋಗಿದ್ದೆ. ಕಲಾ ಪ್ರದರ್ಶನವೊಂದರಲ್ಲಿ ಭಾಗವಹಿಸಲು, ಅಲ್ಲಿ ಶ್ರೀ ಯಶವಂತಾಚಾರ್ಯರನ್ನೂ ಅವರ ಕೆಲವು ಕಲಾಕೃತಿಗಳನ್ನೂ ಸಂದರ್ಶಿಸಿದಾಗ ಅವರ ಕಲಾ ಸಾಧನೆಯ ಬಗ್ಗೆ ಅಭಿಮಾನ ಮೂಡುವಂತಾಯಿತು. ಶ್ರೀಯುತರು ಸರಿಯಾದ ಮಾರ್ಗದಲ್ಲಿ ಕಲಾಭ್ಯಾಸ ನಡೆಸಿದ್ದಾರೆ. ಅವರ ಕಲಾಪರಿಶ್ರಮ ಒಳ್ಳೆಯ ತಳಹದಿಯ ಮೇಲೆ ಸಾಗಿದೆ. ಸಂಯೋಜನ ಚಿತ್ರರಚನೆಯಲ್ಲಿ ಪಳಗಿದ್ದರೂ ಅವರ ಕುಂಚ ರೂಪಚಿತ್ರರಚನೆಯಲ್ಲಿ ಹೆಚ್ಚಾಗಿ ಸಿಸ್ಸಿಮತೆ ಪಡೆದಿದೆ. "ಇದು ನನ್ನ ಬೊಂಬಾಯಿ ಜೀವನಕ್ಕೆ ತುಂಬ ನೆರವಾಗಿದೆ" ಎನ್ನುತ್ತಾರೆ ಅವರು.

ಆಚಾರ್ಯರ ಮನ ಈಚೆಗೆ ನವ್ಯತೆಯ ಹಾದಿ ಹಿಡಿದಿವೆ. ಕೇವಲ ಕೆಲವೇ ರೇಖೆಗಳಲ್ಲಿ ವ್ಯಕ್ತಿ ಇಲ್ಲವೆ ವಸ್ತುವನ್ನು ಚಲನೆಯೊಂದಿಗೆ ಸಂಕೇತವಾಗಿ ತೋರುವ ನವ್ಯತೆಗೆ ಶ್ರೀಯುತರು ಮಾರು ಹೋಗಿದ್ದಾರೆ. ಅವರ ಚಿತ್ರಗಳಲ್ಲಿ ಬಳಸುವ ಬಣ್ಣಗಳಿಗಿಂತ ಅಲ್ಲಿಯ ಭಾವನೆಗಳು ಪ್ರಧಾನ. ನವ್ಯ ಕಲಾತಂತ್ರದ ಈ ಕಲಾವಿದ ವರ್ಣಗಳನ್ನು ತನ್ನ ಹೃದಯದಲ್ಲಿ ತೇಲಿ ಬರುವ ಭಾವನೆಯನ್ನು ಹೊರಗೆಡಹಲು ತನಗೆ ಅನಿಸಿದಂತೆ ಬಳಸುತ್ತಾನೆ. ಈ ಪ್ರತಿಭಾನ್ವಿತ ಕಲಾವಿದ ಯಾವ ಸಂಕೇತದ ತಂತ್ರದ ಕಟ್ಟಿಗೂ ಜೋತು ಬೀಳುವವರಲ್ಲ.

ಆಚಾರ್ಯರು ಈ ತನಕ ಬರೆದುಕೊಟ್ಟ ಚಿತ್ರಗಳೆಷ್ಟೊ! ಯಾವುದೂ ಅವರಿಗೆ ಪೂರ್ತಿ ತೃಪ್ತಿ ತಂದಂತಿಲ್ಲ. ಒಂದೊಂದು ಚಿತ್ರಕ್ಕೂ ಎಷ್ಟೋ ಸಾಧನೆ ಎಷ್ಟೆಷ್ಟೋ ವ್ಯತ್ಯಾಸವನ್ನು ನಾವು ಗಮನಿಸಬಹುದಾಗಿದೆ. ಅವರ "ನಾಟ್ಯಗಾತಿ" ತುಂಬ ಪರಿಣಾಮಕಾರಿ ಚಿತ್ರ. ಕೆಲವೇ ರೇಖೆಗಳಲ್ಲಿ ಸಮಗ್ರ

ಭಾವನೆಯನ್ನೂ ಚಲನೆಯನ್ನೂ ತರುವಲ್ಲಿ ಅವರ ಕುಂಚ ಸಾರ್ಥಕವಾಗಿದೆ. ವ್ಯಾಪಾರವಾಗದೆ ಬೇಸತ್ತ "ಹೂವಾಡಿಗಿತ್ತಿಯರು" ಚಿತ್ರ ವಸ್ತು ಹಾಗೂ ವರ್ಣ ವೈವಿಧ್ಯತೆಗೆ ಹೆಸರಿಸಬಹುದಾದ ಕೃತಿ. ಈ ಎರಡು ಕೃತಿಗಳಲ್ಲೂ ಸ್ಪಷ್ಟ ವ್ಯತ್ಯಾಸವನ್ನು ನೋಡಬಹುದಾಗಿದೆ.

ಆಚಾರ್ಯರು ಜನಿಸಿದುದು ದಕ್ಷಿಣ ಕನ್ನಡದ ಕಾರ್ಕಳ ತಾಲ್ಲೂಕಿನ ಬೆಳ್ವಾಯಿಯಲ್ಲಿ. ಮನೆತನದಿಂದ ದಕ್ಷಿಣ ಕನ್ನಡದವರಾದರೂ ಕಲಾರಾಧನೆ ಯಿಂದಾಗಿ ಅವರ ತಂದೆಯವರು ಸಿರಸಿಯಲ್ಲಿ ನೆಲೆಸಿದ್ದರು. ಅಲ್ಲೇ ಈ ಬಾಲಕನ ಬಾಲ್ಯ ಸಾಗಿತು. ಎಳೆತನದಿಂದಲೂ ಈ ಮಗುವಿಗೆ ಬಣ್ಣ, ರೂಪ ಸೌಂದರ್ಯವೆಂದರೆ ಆಸೆ. ಶಾಲೆಯಲ್ಲಿ ಮಣ್ಣಿನ ಕೃತಿಗಳನ್ನು ಮಾಡಲು ಕೊಟ್ಟಾಗ ತರಕಾರಿ, ಹಣ್ಣು, ಗೊಂಬೆಗಳ ಮಾದರಿ ಮಾಡುವಲ್ಲಿ ಆ ಎಳೆಯ ಮುಗ್ಧ ಮನಸ್ಸು ಸೌಂದರ್ಯವನ್ನು ಕಂಡು ಅದರಲ್ಲೇ ಲೀನ ವಾಗುತ್ತಿತ್ತು.

ಕಲಾದೃಷ್ಟಿ ಬೆಳೆದಂತೆ ಆ ಬಾಲಕ ತನ್ನ ಕಣ್ಣಿಗೆ ಬಿದ್ದ ಚಿತ್ರಗಳಲ್ಲಿನ ಬಣ್ಣಗಳ ಸಮ್ಮಿಲನವನ್ನು ಗಮನಿಸಿ ಹಾಗೇ ಅನುಕರಿಸತೊಡಗಿದ. ಇದನ್ನರಿತ ತಂದೆ ಮಗನಿಗೆ ನೀರು ಬಣ್ಣದ ಪೆಟ್ಟಿಗೆಯನ್ನು ತಂದುಕೊಟ್ಟರು. ಕುಂಚ ಸವೆದರೂ ಕರಗದ ಆ ಬಣ್ಣಗಳನ್ನೇ ಆ ಹುಡುಗ ಮೊದಲು ಬಳಸಿ ಹೆಚ್ಚು ಹುರುಪಿನಿಂದ ಚಿತ್ರ ಬಿಡಿಸಲು ಆರಂಭಿಸಿದ. ಪ್ರೌಢ ಶಾಲಾ ಭ್ಯಾಸದ ಜೊತೆಗೆ ಮುಂಬಯಿ ಸರ್ಕಾರದ ಮೊದಲ ಗ್ರೇಡ್ ಕಲಾ ಪರೀಕ್ಷೆಯಲ್ಲಿ ತೇರ್ಗಡೆಯಾದ. ಶಾಲೆಯಲ್ಲಿ ಆ ಬಾಲಕನಿಗೆ ಪ್ರಬಂಧ ಬರೆಯಲು "ನೀನು ಮುಂದೆ ಏನುಮಾಡುವಿ? ಏನುಮಾಡಬೇಕೆಂದಿರುವಿ?" ಎಂದು ವಿಷಯ ಕೊಟ್ಟಾಗ ಮತ್ತಾವ ಆಸೆಯನ್ನೂ ತೋರದೆ "ಕೇವಲ ಕಲಾಕಾರನಾಗಬೇಕು, ಜೀವನ ಪರ್ಯಂತ" ಎಂದು ಬರೆದಿದ್ದ. ಇದೇ ಅಂದಿ ನಿಂದ ಅವರ ಆಸೆ ಗುರಿಗಳಾಗಿವೆ.

ಅವರ ಮನವನ್ನು ಆಕರ್ಷಿಸಿದ ಮತ್ತೊಂದು ಪ್ರೇರಕಶಕ್ತಿ ಎಂದರೆ ನಾಟಕ ಕಂಪನಿಗಳ ಪರದೆಗಳು. ಅಲ್ಲಿಯ ಪೇಯಿಂಟರ್‌ಗಳು ಅವರ ಕೆಲಸ ದಲ್ಲಿ ಒಂದು ಮಹಾಗುಟ್ಟು ಅಡಗಿದೆ ಎಂದು ಆ ಹುಡುಗನ ಮೇಲೆ ಅತಿ ಯಾದ ಪ್ರಭಾವ ಬೀರುತ್ತಿದ್ದರು. ಬಹು ಜಾಣತನದಿಂದ ಅವರ ಕೆಲಸವನ್ನು

ಆತ ಗಮನಿಸುತ್ತಿದ್ದ. ಅಭಿಮಾನಿ ಪೇಯಿಂಟರನೊಬ್ಬ ಅವರ ಉತ್ಸಾಹ ಕಂಡು "ಒಳ್ಳೆಯವರ ಬಳಿ ಕಲಾಭ್ಯಾಸ ಮಾಡು" ಎಂದು ಹರಸಿದ. 'ಬಾಲ್ಯದ ಅಪಾರ ಉತ್ಸಾಹ ಶಾಲೆಯ ಕಲಾ ಪ್ರದರ್ಶನಗಳಲ್ಲಿ ಅನೇಕ ಪ್ರಥಮ ಬಹುಮಾನ ಪ್ರಶಸ್ತಿಗಳನ್ನು ಗಳಿಸುವಂತಾಯಿತು. ಆದರೂ ತನ್ನ ಕಲೆಯ ಕೊರತೆ ಕಂಡುಕೊಂಡರು. ಸಿಕ್ಕ ಸಿಕ್ಕವರ ಹಿಂದೆ ಗುರುಗಳೆಂದು ತಿಳಿದು ಅಲೆದಾಡ ಹತ್ತಿದ. ಆದರೆ ತೃಪ್ತಿ ಆಗಲಿಲ್ಲ, ಸಮಾಧಾನವಾಗಲಿಲ್ಲ. ಇದನ್ನು ಕಂಡ ತಂದೆ ಮಗನನ್ನು ಪ್ರೋತ್ಸಾಹಿಸಿದರು. ಆಚಾರ್ಯರು ಮುಂಬಯಿಗೆ ಬಂದರು. ಅಲ್ಲಿ ಕೆಲವು ಕಲಾವಿದರ ಚಿತ್ರಗಳನ್ನು ನೋಡಿದಾಗ ತಾನು ಈತನಕ ಮಾಡಿದ ಅಭ್ಯಾಸ ನಿಜಕ್ಕೂ ಸರಿಯಾದುದಲ್ಲ, ಕಲಿಯು ವುದು ಅಪಾರವಿದೆ ಎಂಬ ಅರಿವಾಯಿತು. ಮುಂಬಯಿಯ ನೂತನ ಕಲಾ ಮಂದಿರಕ್ಕೆ ಸೇರಿಕೊಂಡರು. ಅಲ್ಲಿ ನಾಲ್ಕು ವರ್ಷಗಳ ಕಲಾಭ್ಯಾಸ ಮಾಡಿ ಡಿಪ್ಲೊಮಾ ಪಡೆದರು. ಅಲ್ಲಿಯ ಪ್ರಿನ್ಸಿಪಾಲ್ ಶ್ರೀ ದಂಡವತಿಮಠ ಅವರ ಸಲಹೆ ಅವರ ಅಭ್ಯಾಸದಲ್ಲಿ ಹೊಸ ಹುರುಪನ್ನು ತಂದುಕೊಟ್ಟಿತು. ಶಿಕ್ಷಣ ಮುಗಿದನಂತರ ಮುಂಬಯಿಯಲ್ಲಿ ನೆಲೆಗೊಳ್ಳಲು ಮನಸ್ಸುಮಾಡಿ ಶ್ರೀ ಕೆ. ಕೆ. ಹೆಬ್ಬಾರರನ್ನು ಕಂಡು ಎಲ್ಲಾದರೂ ನೌಕರಿ ಸಂಪಾದಿಸಿ ಕೊಡಲು ಕೇಳಿದರು.


"ಕಲಾವಿದರಿಗೆ ನೌಕರಿ! ಏನು ನೌಕರಿ?" ಎಂದು ಹೆಬ್ಬಾರರು ನಕ್ಕರು.

ಆಗ ಆಚಾರ್ಯರ ಬಾಯಿಯಿಂದ ಮಾತು ಹೊರಡದಾಯಿತು. "ನಾನು ಇಲ್ಲಿ ಹೇಗೆ ನೆಲೆಸಬೇಕು?" ಎಂದಾಕ್ಷಣ "ಕಲೆಯಲ್ಲಿ ಮಾರ್ಗ ದರ್ಶನ ಹೊರತಾಗಿ ಹೇಗೆ ಕಲಾಜೀವನ ಪ್ರಾರಂಭಿಸಬೇಕೆಂದು" ಶ್ರೀ ಹೆಬ್ಬಾರರು ಹೇಳಿದರು.

"ಶ್ರೀ ಹೆಬ್ಬಾರರು ನನ್ನ ಕಲೆಯಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಅವರ ಸಲಹೆ ನನ್ನ ಚಿತ್ರದಲ್ಲಿ ತುಂಬಾ ಬದಲಾವಣೆಯನ್ನುಂಟುಮಾಡಿದೆ. ಅವರ ಹಿತವಚನವೇ ನನಗೆ ರಕ್ಷೆಯಾಗಿ ಈ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಶ್ರಮಿಸಲು ಸಾಧ್ಯವಾಯಿತು" ಎನ್ನುತ್ತಾರೆ ಶ್ರೀ ಯಶವಂತಾಚಾರ್ಯರು. ಹೆಬ್ಬಾರರ ಮಾರ್ಗದರ್ಶನವನ್ನು ಆಚಾರ್ಯರ ರೇಖಾ ಚಿತ್ರಗಳಲ್ಲಿ ಗುರುತಿಸ ಬಹುದಾಗಿದೆ.

ಆಚಾರ್ಯರು ಹೊರನೋಟಕ್ಕೆ ಒರಟು ಎನಿಸಿದರೂ ತುಂಬ ಮೃದು ಸ್ವಭಾವದವರು. ಅಷ್ಟೇನೂ ಎತ್ತರವಲ್ಲದ ದಪ್ಪ ಆಕೃತಿಯ ದುಂಡು ತೋಳಿನ ಸ್ನೇಹಪರ ಶಾಂತಮನಸ್ಸಿನ ವ್ಯಕ್ತಿ. ತಾವು ತೊಡುವ ಉಡುಪಿನಿಂದಾಗಿ ಸಾಹೇಬರಾಗಿದ್ದಾರೆ. ಇವರಿಗೆ ಚಿತ್ರಕಲೆಯ ಜೊತೆಗೆ ತಬಲ ನುಡಿಸುವ ಕಲೆಯೂ ಅಂಟಿಕೊಂಡು ಬಂದಿವೆ. ಭಾರತದ ಪ್ರಸಿದ್ಧ ತಬಲಾ ಪಟು ಉಸ್ತಾದ್ ಶಮ್ಸುದ್ದೀನ್ ಖಾನರ ಶಿಷ್ಯರು ಆಚಾರ್ಯರು. ಅಂತೇ ಖಾನ್‌ಸಾಹೇಬರ ನಡೆನುಡಿ ಎಲ್ಲವೂ ಇವರ ಮೇಲೆ ಪರಿಣಾಮ ಮಾಡಿದೆ. ಇವರ ಚಿತ್ರಕಲೆಗೆ ಖಾನ್ ಸಾಹೇಬರು ತುಂಬ ನೆರವು ನೀಡಿದ್ದಾರೆ. ದಿನೇ ದಿನೇ ಅವರು ಚಿತ್ರದಲ್ಲಿ ಸೌಂದರ್ಯವನ್ನು ಕಂಡಂತೆ ಸಂಗೀತ ತಬಲದಲ್ಲಿ ಸವಿಯನ್ನೂ ಅನುಭವಿಸುತ್ತಿದ್ದಾರೆ.

ಯಶವಂತಾಚಾರ್ಯರ ಕಲಾಕೃತಿಗಳೂ ತನ್ನದೇ ಆದ ಅಖಂಡತೆಯಿಂದ ಮನಸ್ಸನ್ನು ಸೆಳೆಯುವ ಶಕ್ತಿಯನ್ನು ಪಡೆದಿವೆ. ಈಗ ಕನ್ನಡ ನಾಡಿನಲ್ಲಿ ಇವರಂಥ ಪ್ರಗತಿಶೀಲ ತರುಣ ಕಲಾವಿದರು ಬೆರಳೆಣಿಕೆಯಷ್ಟು ಮಂದಿ ಮಾತ್ರ ಎಂದರೆ ತಪ್ಪಾಗದು.



ನಗುವನಹಳ್ಳಿ ನರಸಿಂಹಯ್ಯ

ವಿಶಿಷ್ಟ ರೀತಿಯಲ್ಲಿ ಬೆಳೆದು ಬಂದಿರುವ ಮೈಸೂರಿನ ದೇಶೀಯ ಸಂಪ್ರದಾಯದ ಕೆಲವು ಚಿತ್ರಕಾರರ ಕೃತಿಗಳನ್ನು ಮೈಸೂರು ನಗರದಲ್ಲಿ ಇಂದಿಗೂ ನೋಡಬಹುದು.

ದೇಶೀಯ ಶೈಲಿಯ ಈ ಚಿತ್ರಗಳು ನಮ್ಮ ನಾಡಿನ ಮನೆ ಮನೆಗಳಲ್ಲೂ ಇವೆ. ಆಳಿದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೊರೆತ ಪ್ರೋತ್ಸಾಹದಿಂದ ವಿಶೇಷವಾಗಿ ಬೆಳೆದುಬಂದ ಈ ಕಲಾಸಂಪ್ರದಾಯವನ್ನು

ಇನ್ನೂ ಉಳಿಸಿಕೊಂಡುಬಂದಿರುವ ಕಲಾವಿದರು ಅಲ್ಲೊಬ್ಬರು ಇಲ್ಲೊಬ್ಬರು ದೊರೆಯುತ್ತಾರೆ. ಕಾಗದದಮೇಲೆ, ಬಟ್ಟೆಯಮೇಲೆ, ಇಲ್ಲವೆ ಗಾಜಿನಮೇಲೆ ಜಲವರ್ಣ ಅಥವ ತೈಲವರ್ಣಗಳಲ್ಲಿ ರಾಜ ಮಹಾರಾಜರ ರೂಪಚಿತ್ರಗಳನ್ನೂ, ದೇವ ದೇವತೆಗಳ ಹಾಗೂ ಅನೇಕ ಪೌರಾಣಿಕ ಸನ್ನಿವೇಶಗಳ ಸಂಯೋಜನಾ ಚಿತ್ರಗಳನ್ನೂ ವಿಶೇಷವಾಗಿ ಈ ಸಂಪ್ರದಾಯದಲ್ಲಿ ನಾವು ಕಾಣಬಹುದು. ಪಾಶ್ಚಿಮಾತ್ಯ ಕಲಾಪ್ರಭಾವದಿಂದ ವಿವಿಧ ಮುಖವಾಗಿ ಹೊಸ ಪ್ರಕಾರಗಳನ್ನು ಕಂಡುಕೊಂಡ ಆಧುನಿಕ ಕಲಾದೃಷ್ಟಿಗೆ ಈ ಚಿತ್ರಗಳು ಸ್ವಲ್ಪ ಹಳೆಯವೆಂದು ತೋರಿದರೂ ಸುಂದರವೂ, ಕಷ್ಟಸಾಧ್ಯವೂ, ಸುಕುಮಾರವೂ ಆದ ತಮ್ಮ ಸ್ವಭಾವದಿಂದ ಕಲಾವೈಶಿಷ್ಟ್ಯವನ್ನು ಉಳಿಸಿಕೊಂಡಿವೆ. ಇಲ್ಲಿನ ರೇಖಾವೈಖರಿ, ವರ್ಣವಿನ್ಯಾಸ, ಸುವರ್ಣಲೇಪನದ ಕುಸುರಿಕೆಲಸ ಮುಂತಾದುವು ಯಾರನ್ನಾದರೂ ಆಕರ್ಷಿಸುವಂತಿರುತ್ತವೆ. ಇಂಥ ಚಿತ್ರಗಳ ರಚನೆಯಲ್ಲಿ ಕಂಡುಬರುವ ಶ್ರದ್ಧೆ, ತಾಳ್ಮೆ, ಭಕ್ತಿ, ಪ್ರತಿಭೆ, ಸಾಧನೆ, ಕಲ್ಪನೆ ಮುಂತಾದುವು ಮೆಚ್ಚುವಂತಹವು.

ಪ್ರಕೃತ ಈ ಕಲಾಸಂಪ್ರದಾಯದಲ್ಲಿ ಶ್ರಿ ನರಸಿಂಹಯ್ಯ ಹಾಗೂ ಅವರ ತಂದೆಯವರಾದ ದಿ|| ನಗುವನಹಳ್ಳಿ ನಾರಣಪ್ಪನವರ ಚಿತ್ರಗಳು ಹೆಸರಿಸುವಂತಹವು. ಇಬ್ಬರೂ ಹಿಂದೆ ಈ ಸಂಪ್ರದಾಯದಲ್ಲಿ ಪ್ರಖ್ಯಾತರಾದ ಚಿತ್ರದುರ್ಗದ ಸೋದರರಾದ ದಿ|| ದಾಸಪ್ಪ ಹಾಗೂ ದಿ|| ಕೃಷ್ಣಪ್ಪ (ಕಲಾವಿದ ಶ್ರೀ ಕೆ. ವೆಂಕಟಪ್ಪನವರ ತಂದೆಯವರು), ದುರ್ಗದ ವೆಂಕಟಪ್ಪ ಮುಂತಾದವರಿಂದ ಕಲಾಸ್ಫೂರ್ತಿಯನ್ನು ಪಡೆದವರು.

ಇವರ ಕೃತಿಗಳಲ್ಲಿ ದಿ|| ನಾರಣಪ್ಪನವರ "ಬಿಳಿಗಿರಿ ರಂಗಸ್ವಾಮಿ, ಉಮಾಮಹೇಶ್ವರ ಮುಂತಾದ ದೊಡ್ಡ ಪ್ರಮಾಣದ ಚಿತ್ರಗಳೂ ಶ್ರೀ ನರಸಿಂಹಯ್ಯನವರ ಶ್ರೀ ರಾಜರಾಜೇಶ್ವರಿ, ರಾಮಪಟ್ಟಾಭಿಷೇಕ, ಶ್ರೀ ಚಾಮುಂಡೇಶ್ವರಿ, ಶ್ರೀ ವೆಂಕಟರಮಣಸ್ವಾಮಿ, ಯಶೋದೆ ಕೃಷ್ಣ, ಕೊಂದಡ ರಾಮ, ಗೋವರ್ಧನ ಗಿರಿಧಾರಿ, ಗಿರಿಜಾಕಲ್ಯಾಣ ಮುಂತಾದುವು ಗಮನಾರ್ಹ ಕೃತಿಗಳು. ಈ ಕಲಾವಿದರು ತಮ್ಮ ಚಾರಿತ್ರಿಕ ಕಲ್ಪನಾಶಕ್ತಿಯಿಂದ ಪ್ರೇರಿತರಾಗಿ ಈ ಎಲ್ಲ ದೇವ ದೇವಿಯರ ರೂಪಗಳನ್ನೂ ಸಹಜ ಸುಂದರ ರೇಖೆಗಳಲ್ಲಿ, ಧಾರ್ಮಿಕ ಸಂಪ್ರದಾಯವನ್ನನುಸರಿಸಿ ಬಹುಕಲಾವಂತಿಕೆಯಿಂದ

ರಚಿಸಿದ್ದಾರೆ. ಈ ಚಿತ್ರಗಳಲ್ಲಿ ಅಜಂತ ಚಿತ್ರಗಳ ಪರಂಪರೆಯ ಶೈಲಿಯ ಛಾಯೆಯುಂಟು. ಅಂಗಾಂಗಗಳ ಪ್ರಮಾಣ, ಅಲಂಕಾರಗಳ ವೈಭವಗಳ ದೃಷ್ಟಿಯಿಂದ ಈ ಕೃತಿಗಳು ಅಜಂತ ಸಂಪ್ರದಾಯಕ್ಕೆ ಭಿನ್ನವಾಗಿ ನಿಲ್ಲುತ್ತವೆ: ಭಾವಭಂಗಿಗಳೂ, ಹಸ್ತವಿನ್ಯಾಸ, ಆ ಕೃತಿಯ ಸುಂದರ ಅಲಂಕಾರಾದಿಗಳು ಸಜೀವವೂ, ಪ್ರೇಕ್ಷಣೀಯವೂ ಆಗಿವೆ. ಇಲ್ಲಿ ತೋರುವ ಪ್ರಾಣಿಗಳೂ, ಪ್ರಕೃತಿಯೂ ಸಹಜರನ್ಯುವಾಗಿ ಮೂಡಿಬಂದಿವೆ. ಆಕಾಶದ ಸಂಕೇತವನ್ನು ತೋರುವ ಮೊಂಡದ ತುಂಡುಗಳಲ್ಲಿ ಅಪೂರ್ವವಾದ ಸೌಂದರ್ಯವಿದೆ. ಸ್ತ್ರೀ ಚಿತ್ರಗಳು ಭಾರತೀಯ ಸ್ತ್ರೀಯವರ ಸಹಜವಾದ ಶರೀರಭಂಗಿ, ಪ್ರಮಾಣ. ಅಲಂಕಾರ, ಮಾರ್ದವ, ಲಾವಣ್ಯಗಳನ್ನು ಪ್ರತಿಬಿಂಬಿಸುತ್ತವೆ. ಮುಖ ಭಾವದಲ್ಲಿ ದೈವಿಕತೆ ವ್ಯಕ್ತವಾಗಿ ಉತ್ತಮ ಕಲಾಕೌಶಲವನ್ನು ವ್ಯಕ್ತ ಪಡಿಸುತ್ತದೆ.

ಇಲ್ಲಿ ಬಳಸಿರುವ ರೇಖೆಗಳು ದೀರ್ಘ ಹಾಗೂ ಸೂಕ್ಷ್ಮವಾದವುಗಳಾಗಿ ನಿಮ್ನೋನ್ನತ ಛಾಯೆಗಳನ್ನು ಸಹಜವಾಗಿ ತೋರಿಸುವಂತೆ ಕುಂಚದ ಎಳೆತ ಸುಸ್ಪಷ್ಟವಾಗಿದೆ. ಒಂದೊಂದು ಕಲಾಕೃತಿಯಲ್ಲಿಯೂ ಲಾಲಿತ್ಯ ಸೌಂದರ್ಯ ಭಾವಗಳು ವ್ಯಕ್ತವಾಗಿ ಸಮಗ್ರ ಚಿತ್ರದಲ್ಲಿ ರಸಭಾವಗಳೂ ನೈಜವಾಗಿ ಪ್ರಕಟವಾಗುವುವು.

ಈ ಚಿತ್ರಗಳ ರಚನೆಯಲ್ಲಿ ನಾವು ಕಾಣುವ ಇನ್ನೊಂದು ವಿಶೇಷ ವೆಂದರೆ ದೇಶೀಯ ಮೂಲ ವರ್ಣಗಳು. ಬಿಳುಪು, ಕೆಂಪು, ಧೂಮ್ರ, ಹಸುರು, ನೀಲ ಮುಂತಾದ ಮುಖ್ಯ ವರ್ಣಗಳ ಜೊತೆಗೆ ವಿಶೇಷವಾದ ವರ್ಣಲೇಪನ ವನ್ನು ಕಾಣಬಹುದು. ಮೊದಲು ಸೀಸದ ಕಡ್ಡಿಯಲ್ಲಿ ಆಕೃತಿಯನ್ನು ರೂಪಿಸಿ ಕೊಂಡು, ಅನಂತರ ವರ್ಣಗಳನ್ನು ಹಾಕಿ, ಅಲಂಕಾರ ವೈಖರಿ ತರುವೆಡೆ ಗಳಲ್ಲೆಲ್ಲಾ ಬಿಳಿಯ ಸೀಸದಲ್ಲಿ ರೇಖೆಗಳನ್ನು ಎಳೆದು, ಅದರ ಮೇಲೆ ವಜ್ರದ ಅಂಟನ್ನು ಸವರುತ್ತಾರೆ. ಅನಂತರ ಅದರ ಮೇಲೆ ಚಿನ್ನದ ರೇಖನ್ನು ಲೇಪಿಸುವರು. ಚಿನ್ನದ ರೇಖುವಿನ ಮೇಲೆ ವರ್ಣಗಳು ಜಾರದೆ ಭದ್ರವಾಗಿ ಕೂರುವಂತೆ ಒಂದು ಬಗೆಯ ಅಂಟನ್ನು ಬಳಸುತ್ತಾರೆ. ಬೂಟ ಕುಸುರಿನ ಕೆಲಸ ಮಾಡುವಾಗ ವಿವಿಧ ವರ್ಣಗಳನ್ನು ಬಳಸಿ ಆಯಾಭಾಗಗಳಿಗೆ ಸ್ವರ್ಣ ರೇಖುವಿನ ಲೇಪನ ಮಾಡುವರು. ಹೀಗೆ ರಚಿತವಾದ ಕೃತಿ ಅನೇಕ ವರ್ಷಗಳ

ಕಾಲ ತನ್ನ ಪ್ರಕಾಶವನ್ನು ಕಳೆದುಕೊಳ್ಳದೆ 'ಚಿರನೂತನ' ಎಂಬಂತೆ ಕಾಣುತ್ತಿರುತ್ತದೆ. ಹೆಚ್ಚಾಗಿ ಪೂಜಾ ಚಿತ್ರಗಳಾದುದರಿಂದ ಚಿತ್ರಕಾರರ ಹೆಸರು ಈ ಕೃತಿಗಳಲ್ಲಿ ಕಂಡು ಬರುವುದಿಲ್ಲ.

ಮೈಸೂರು ದಸರಾ ಕಲಾಪ್ರದರ್ಶನಗಳಲ್ಲಿ ಪ್ರತಿವರ್ಷವೂ ಇಂಥ ದೇಶೀಯ ಶೈಲಿಯ ಕೃತಿಗಳಿಗೆ ಅನೇಕ ಬಹುಮಾನಗಳು ಬಂದಿವೆ. ಅನೇಕ ಕೃತಿಗಳನ್ನು ಕಲಾಭಿಮಾನಿಗಳು ಕೊಂಡು ಹೋಗಿದ್ದಾರೆ.

ಕ್ಯಾಮರಾಗಳ ಈ ನವನಾಗರೀಕತೆಯ ಬೆಡಗುಬಿನ್ನಾಣದ ಈ ನವೀನ ಕಾಲದಲ್ಲೂ ಶ್ರೀ ನರಸಿಂಹಯ್ಯನವರು ಮೈಸೂರಿನ ಸಂಪ್ರದಾಯದ ಈ ಬಗೆಯ ಕಲೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿರುವುದು ಒಂದು ಹೆಮ್ಮೆಪಡಬೇಕಾದ ವಿಷಯ.

ಇವರದು ಸರಳ ಸ್ವಭಾವದ ವ್ಯಕ್ತಿತ್ವ. ಕಷ್ಟಕೋಟಲೆಯಲ್ಲಿ ಬೆಳೆದುಬಂದ ಸಂಸಾರ ಇವರದು. ಹಿಂದೆ ರಾಜರ ಕಾಲದಲ್ಲಿ ದೊರಕಿದ ಪ್ರೋತ್ಸಾಹ ಇಂದು ಇವರ ಕಲೆಗೆ ದೊರಕದಿರುವುದೇ ಇದಕ್ಕೆ ಮುಖ್ಯ ಕಾರಣ ಇರಬೇಕು. ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯ ಸಮೀಪದ ಪ್ರಶಾಂತ ನೆಲೆಯಲ್ಲಿದೆ ಇವರ ಮನೆ. ಮನಬಂದಾಗ ಶ್ರೀಯುತರು ತದೇಕಚಿತ್ತರಾಗಿ ಕಲ್ಪನಾಶಕ್ತಿಯಿಂದ ಪ್ರೇರಿತರಾಗಿ ದೇವಮಾನವರ ಚಿತ್ರಗಳನ್ನು ರೂಪಿಸುತ್ತಾ ಕುಳಿತಿರುತ್ತಾರೆ; ಇಲ್ಲವೆ ಅರಮನೆಯ ಯಾವುದಾದರೂ ಒಂದುಕಡೆ ಭಿತ್ತಿಯ ಇಲ್ಲವೆ ಕಂಬಗಳಿಗೆ ವರ್ಣಗಳಿಂದ ಅಲಂಕರಿಸುತ್ತಿರುತ್ತಾರೆ.

ಇವರಿಗೆ ಶಿಲ್ಪಕಲೆಯೂ ತಿಳಿದಿದೆ. ಜೇಡಿಮಣ್ಣಿನಲ್ಲಿ ಗಣಪತಿ ಮುಂತಾದ ವಿಗ್ರಹಗಳನ್ನು ರೂಪಿಸಿ ಅವುಗಳಿಗೆ ವಿವಿಧ ವರ್ಣಗಳನ್ನು ಸೊಗಸಾಗಿ ಲೇಪಿಸುತ್ತಾರೆ. ಈ ಕಲೆ ಇವರಿಗೆ ವಂಶಪಾರಂಪರ್ಯದಿಂದಲೂ ಅಂಟಿಬಂದಿದೆ. ಗಣಪತಿ ಹಬ್ಬ ಬಂದಿತೆಂದರೆ ಇವರು ರಚಿಸಿಕೊಡುವ ಈ ಬಗೆಯ ಕೃತಿಗಳಿಗೆ ನಮ್ಮ ಕಲಾರಸಿಕರು ಸಾಲುಗಟ್ಟಿಕೊಂಡು ಬಂದು ಕೊಂಡು ಹೋಗುತ್ತಾರೆ. ಇವರ ಕಲೆ ಅಂಥಹುದೇ ವಿಶಿಷ್ಟತೆಯನ್ನು ಪಡೆದಿದೆ ಶ್ರೀಯುತರಿಂದ ಇನ್ನೂ ಹೆಚ್ಚಿನ ಕಲಾಸೇವೆಯನ್ನು ನಮ್ಮ ಕನ್ನಡ ಜನತೆ ಅಪೇಕ್ಷಿಸುವಂತೆ ಅವರಿಗೆ ಪ್ರೋತ್ಸಾಹ ದೊರಕಬೇಕಾದುದು ಸಹಜವೂ ಸೂಕ್ತವೂ ಆಗಿದೆ.

ಎಸ್. ಆರ್. ಸ್ವಾಮಿ

ಭಾರತೀಯ ಕಲಾಸಂಪ್ರದಾಯದ ಸಾಧನೆಯ ಕಲಾವಿದರೊಬ್ಬರ ಅಪೂರ್ವ ಕೃತಿಗಳನ್ನು ಕನ್ನಡ ಕಲಾರಸಿಕರಿಗೆ ಮೈಸೂರಿನ "ಚಿತ್ರ-ಶಿಲ್ಪ ಅಕಾಡಮಿ" ಹಿಂದೆ ಪರಿಚಯಮಾಡಿಕೊಟ್ಟಿದ್ದಿತು. ಬೆಂಗಳೂರಿನ ಕಲಾವಿದ ಶ್ರೀ ಎಸ್. ಆರ್. ಸ್ವಾಮಿಯವರ ಹೆಸರು ಕನ್ನಡಿಗರಿಗೆ ಹೊಸದೇನೂ ಅಲ್ಲ. ಭಾರತೀಯ ಚಿತ್ರಕಲಾ ಸಂಪ್ರದಾಯದಲ್ಲಿ ತಮ್ಮದೇ ಆದ ಶೈಲಿಯನ್ನು ಶ್ರೀ ಸ್ವಾಮಿಯವರು ಪಡೆದಿದ್ದಾರೆ. ಎಲ್ಲ ಚಿತ್ರಗಳಲ್ಲಿಯೂ ಭಾವನಾ

ವಿಲಾಸಕ್ಕೇ ಹೆಚ್ಚಿನ ಪ್ರಾಶಸ್ತ್ಯ. ಭಾರತೀಯ ಚಿತ್ರಕಲಾ ಸಂಪ್ರದಾಯ ವಿಶ್ವದಲ್ಲಿ ಅಪೂರ್ವ ಮನ್ನಣೆಗೆ ಪಾತ್ರವಾಗಿದೆ. ರೂಪಭೇದ, ಪ್ರಮಾಣ, ಭಾವ, ಲಾವಣ್ಯಯೋಜನ, ಸಾದೃಶ್ಯ, ವರ್ಣಿಕಾಭಂಗಗಳಲ್ಲಿ ಭಾರತೀಯ ಚಿತ್ರಗಳು ವೈಶಿಷ್ಟ್ಯವನ್ನು ಕಾಪಾಡಿಕೊಂಡಿವೆ. ಈ ರಚನೆಯಲ್ಲಿ ಮೊದಲು ರೇಖಾಪಾತ, ಅನಂತರ ವರ್ತನ ಆಮೇಲೆ ಅಲಂಕಾರ ಕೊನೆಯಲ್ಲಿ ವರ್ಣ ಸಂಯೋಜನೆಗಳನ್ನು ಕಾಣಬಹುದು. ದೀರ್ಘ ಹಾಗೂ ದೃಢವಾದ ವೃತ್ತ ರೇಖೆಗಳಲ್ಲಿ ನಿಮ್ನೋನ್ನತ ಭಾಗಗಳನ್ನು ತೋರಿಸುವಂತೆ, ಕುಂಚದ ಒಂದೇ ಎಳೆತ ವ್ಯಕ್ತವಾಗುತ್ತದೆ. ವಸ್ತ್ರ, ಆಭರಣಗಳಿಂದಲೇ ಈ ನಿಮ್ನೋನ್ನತ ಭಾಗಗಳು ಸೂಚಿತವಾಗಿರಲೂ ಬಹುದು. ಚಿತ್ರಕಾರರು ಸಾಂಪ್ರದಾಯಿಕ ರೀತಿಗಳನ್ನು ಅನುಸರಿಸುತ್ತಿದ್ದರೂ ತಮ್ಮ ಸ್ವಪ್ರತಿಭೆಯನ್ನು ಮೆರೆದಿದ್ದಾರೆ. ಈ ನೈಜ ಸಂಪ್ರದಾಯದ ಎಲ್ಲ ರೀತಿಯ ಸಾರವನ್ನೂ ಹೀರಿ ಬೆಳೆದಿರುವ ಶ್ರೀ ಎಸ್. ಆರ್. ಸ್ವಾಮಿಯವರ ಕಲಾಪ್ರತಿಭೆ ಅಸದೃಶವಾದುದು. ಎಲ್ಲ ಕಲಾವಿದರೂ ಪಾಶ್ಚಾತ್ಯ ರೀತಿ ನೀತಿಗಳಿಗೆ ಮಾರುಹೋಗಿರುವಾಗ ಇವರಂಥ ಎಲ್ಲೋ ಕೆಲವರುಮಾತ್ರ, ಈ ಸಂಪ್ರದಾಯವನ್ನು ಉಳಿಸಿಕೊಂಡು, ಬೆಳಸಿಕೊಂಡು ಬಂದಿರುವುದು ಬಹು ಹೆಮ್ಮೆಯ ವಿಷಯ. ಅದರಲ್ಲೂ ಶ್ರೀಯುತರು ತುಂಬ ಕಷ್ಟಸಾಧ್ಯವಾದ ಜಲವರ್ಣದ ಮಾಧ್ಯಮದಲ್ಲೇ ತಮ್ಮ ಸಾಧನೆಯನ್ನು ಪಡೆದಿರುವುದು ಗಮನಾರ್ಹ ವಿಷಯ.

ಶ್ರೀ ಎಸ್. ಆರ್. ಸ್ವಾಮಿಯವರ ಕೃತಿಗಳಲ್ಲಿ ಮೂರು ಮುಖ್ಯವಿಭಾಗಗಳನ್ನು ಕಾಣಬಹುದು. ಸಾಮಾನ್ಯರ ಬದುಕಿನಿಂದ ಆರಿಸಿಕೊಂಡ ಪ್ರೇಮ ಚಿತ್ರಗಳು ಐತಿಹಾಸಿಕ ಹಿನ್ನೆಲೆಯಲ್ಲಿ ಮೂಡಿದ ಚಿತ್ರಗಳು ಹಾಗೂ ಕೆಲವು ಪಾಶ್ಚಾತ್ಯ ರೀತಿಯ ಪ್ರಕೃತಿಚಿತ್ರಗಳು. ಇವುಗಳ ಜೊತೆಗೆ ರೇಖಾಚಿತ್ರಗಳನ್ನೂ ಸೇರಿಸಿಕೊಳ್ಳಬಹುದು. ಆದರೆ ಶ್ರೀಯುತರ ಕೃತಿಗಳಲ್ಲೆಲ್ಲಾ ಪ್ರಧಾನವಾಗಿ ಸಿಲ್ಲುವುವು ಸಂಯೋಜನ ಚಿತ್ರಗಳು, ಹಾಗು ಅವುಗಳ ಭಾರತೀಯ ಸಂಪ್ರದಾಯ ನಿಷ್ಠೆ.

"ಅಮರ ಪ್ರೇಮ" ಎನ್ನುವ ಕೃತಿಯಲ್ಲಿ ಯಾವುದೋ ಐತಿಹಾಸಿಕ ಪ್ರಪಂಚದ ಇಬ್ಬರು ಪ್ರೇಮಿಗಳು ಮಧುಪಾತ್ರೆಯನ್ನು ಹಿಡಿದು ಪ್ರೇಮೋನ್ಮತ್ತರಾಗಿರುವುದನ್ನು ಕಾಣುತ್ತೇವೆ. ಇಲ್ಲಿನ ರೇಖಾವಿನ್ಯಾಸ ಸಮಸ್ತ ಹಾವ

ಭಾವಗಳನ್ನೂ ತರುವುದರಲ್ಲಿ ಸಮರ್ಥವಾಗಿರುವಂತೆಯೇ ಕೂದಲು ಎಳೆಗಳನ್ನು ಬಿಡಿಸುವಷ್ಟು ನವುರಾಗಿವೆ. ನೀಳವಾದ ನಾಸಿಕ, ವಿಶಾಲವಾದ ನಯನಗಳು, ಮುದ್ದಾದ ತುಟಿಗಳು, ಆಕರ್ಷಕ ಆಭರಣಗಳು, ಸುಂದರವಾಗಿ ಬಾಚಿದ ಮುಡಿ, ಲಲಾಟದ ಮೇಲೆ ನರ್ತಿಸುವ ಮುಂಗುರುಳು, ಹೀಗೆ ಕಲಾಕೃತಿಯ ಆಕರ್ಷಣೆ ಮಿಗಿಲಾಗಿದೆ. ತಿಳಿಯಾದ ವರ್ಣಲೇಪ ಎರಡು ವ್ಯಕ್ತಿಗಳಲ್ಲೂ ಭಿನ್ನವಾದಂತೆ ಇದ್ದರೂ ಪ್ರೇಮಿಗಳ ಹೃದಯಸಾಮರಸ್ಯವನ್ನು ಕಲಾಕೃತಿ ಎತ್ತಿತೋರುತ್ತಿದೆ.

"ಮುಗ್ಧ ಪ್ರೇಮ" ವೂ ಇಂಥದೇ ಇನ್ನೊಂದು ಕೃತಿ. ಇದು ಗ್ರಾಮ ಜೀವನದಿಂದ ಆರಿಸಿಕೊಂಡ ವಸ್ತು. ಹಳ್ಳಿಯ ಮುಗ್ಧ ಪ್ರೇಮಿಗಳು ಗಾಢವಾದ ಆಲೋಚನೆಯಲ್ಲಿ ಪರಸ್ಪರ ಹೃದಯಗಳನ್ನು ತೋಡಿಕೊಳ್ಳುವ ಭಾವವ್ಯಕ್ತವಾಗುವಂತಿದೆ. ಇಲ್ಲಿ ಯಾವ ಆಭರಣಗಳ ಆಕರ್ಷಣೆ ಇಲ್ಲದಿದ್ದರೂ ಅವರ ಸರಳವೂ, ಸುಭಗವೂ ಆದ ರೀತಿಯೇ ಚೆಲುವಾಗಿದೆ. ಇಂಥ ನಿರಾಡಂಬರ ಚಿತ್ರದಲ್ಲಿ ಕಲಾವಿದ ಅವರ ಅಂತರಂಗವನ್ನು ಕಡೆದು ನಮ್ಮ ಮುಂದೆ ಇಟ್ಟಿದ್ದಾರೆ. ಎಷ್ಟೇ ಕಷ್ಟ ಕಾರ್ಪಣ್ಯಗಳು ಬಂದರೂ ಅವನ್ನು ಸಹಿಸಿಕೊಂಡು ಹೋಗತಕ್ಕ ಸಹನೆ ಪ್ರೇಮಜೀವನದ ಅಡಿಗಲ್ಲು ಎಂಬ ಆದರ್ಶವನ್ನು ಸಾರುವಂತೆ ಈ ಕೃತಿ ಮನೋಹರವಾಗಿದೆ.

ಚಾರಿತ್ರಿಕ ಚಿತ್ರಗಳಲ್ಲಿ "ಸಮುದ್ರ ಗುಪ್ತನ ಆಸ್ಥಾನ ದೃಶ್ಯ" ಬೃಹತ್ಪ್ರಮಾಣದಲ್ಲಿ ರಚಿಸಿದ ಕಲಾಕೃತಿ. ಅಂದಿನ ಕಾಲದ ರಾಜಾಸ್ಥಾನದ ವೈಭವ, ಆಸ್ಥಾನಿಕರ ವೇಷ ಭೂಷಣಗಳೂ, ಚಲನವಲನಗಳೂ ಅರಮನೆಗಳ ಅಲಂಕಾರಗಳೂ, ಪೀಠಗಳ ವೈಖರಿಗಳೂ ಮುಂತಾದವುಗಳ ನೈಜರೂಪ ಈ ಕೃತಿಯಲ್ಲಿ ಸೊಗಸಾಗಿ ಬಂದಿದೆ. ಬೌದ್ಧ ಭಿಕ್ಷುಗಳು ಚಕ್ರವರ್ತಿಯ ಆಸ್ಥಾನಕ್ಕೆ ಬಂದಿರುವುದೂ, ಅವರನ್ನು ಸಕಲ ಮರ್ಯಾದೆಗಳೊಡನೆ ಸಭಾಮಂದಿರಕ್ಕೆ ಸ್ವಾಗತಿಸಿ ಕರೆತಂದಿರುವುದೂ, ಅವರ ಬಗ್ಗೆ ಸಭಾಸದಸ್ಯರು ಪರಸ್ಪರ ಮಾತಾಡಿಕೊಳ್ಳುತ್ತಿರುವುದೂ ಮುಂತಾದ ಸಹಜತೆಯನ್ನು ತುಂಬ ಸೊಗಸಾಗಿ ಮೂಡಿಸಿದ್ದಾರೆ.

ಇವರಲ್ಲಿರುವ ಅನೇಕ ಅಪೂರ್ವ ಚಿತ್ರಗಳಲ್ಲಿ "ನಲವಿನ ಪುನರಾಗಮನ", ಕಾಮಿನಿ, ಬಿರುಗಾಳಿಯ ಎದುರು, ಗೀತ ಗೋವಿಂದ ನಿರೀಕ್ಷೆಯಲ್ಲಿ,

ಪ್ರೇಮ ಹಾಗೂ ನಂಬುಗೆ, ದುಷ್ಯಂತ ಶಾಕುಂತಲ, ವೀರ.ಗುಪ್ತಗಾಮಿನಿ, ನಿಸರ್ಗ ಮೋಹಿನಿ, ದೇವನರ್ತಕಿ, ಅನಾಥೋ ದೈವರಕ್ಷಿತಃ, ಬೌದ್ಧ ಧರ್ಮೋಪದೇಶ, ಗಜಲಕ್ಷ್ಮಿ. ಶ್ರೀರಾಮ, ಮುಂತಾದವು ಹೆಸರಿಸಬಹುದಾದ ಕೃತಿಗಳು. ಇನ್ನೂ ಕೆಲವು ಇವರ ರೇಖಾ ಚಿತ್ರಗಳು ಶ್ರೀಯುತರ ವಿಶಿಷ್ಟ ಮಟ್ಟದ ರೇಖಾ ಚಿತ್ರ ಪಾಶ್ಚಾತ್ಯ ರೀತಿಯಲ್ಲಿದ್ದು ವೈಖರಿಯನ್ನು ಸೂಚಿಸುವಂತಿವೆ. ಹಂಪೆಯ ಶಿಥಿಲ ದೇಗುಲವೊಂದರ ಪ್ರಕೃತಿ ಚಿತ್ರ ಪಾಶ್ಚಾತ್ಯ ರೀತಿಯಲ್ಲಿದ್ದು ಆ ರಂಗದಲ್ಲಿಯೂ ಇವರ ಪರಿಶ್ರಮವನ್ನು ವ್ಯಕ್ತಪಡಿಸುತ್ತದೆ.

ಶ್ರೀ ಎಸ್. ಆರ್. ಸ್ವಾಮಿಗಳು ಒಮ್ಮೆ ಮಾತನಾಡುತ್ತ ತಮ್ಮ ಮನಸ್ಸಿನಮೇಲೆ ಭಾರತೀಯ ಕಲೆ ಅಚ್ಚಳಿಯದೆನಿಲ್ಲಲು ರ್‍ಯಾಂಕನ್‌ರ ಮಾರ್ಗದರ್ಶಿತ್ವ, ಪೆರ್ಸಿಬ್ರೌನ್ರಿಯವರ ಕಲಾ ಪುಸ್ತಕಗಳು ಕಾರಣವಾದವೆಂದು ; ತಮ್ಮ ಬಾಲ್ಯದಲ್ಲಿ ದಕ್ಷಿಣ ಭಾರತದ ಸಂದರ್ಶನದಿಂದ ದೇವಾಲಯಗಳ ಶಿಲ್ಪ ಕಲೆ, ಬಹುವಾಗಿ ಸ್ಫೂರ್ತಿ ಕೊಟ್ಟಿತೆಂದಿರುವುದು ಸಹಜವಾದುದು



ಕೋಡೂರು ರಾಮಮೂರ್ತಿ

ಪ್ರಾಚೀನ ದೇಶೀಯ ಸಸ್ಯವರ್ಣದ ಸಮಕಾಲೀನ ಚಿತ್ರಗಳನ್ನು ನೋಡಲು ನಮಗೆ ಯಾವಾಗಲೂ ಅವಕಾಶ ದೊರೆಯುವುದಿಲ್ಲ. ಆದರೆ ಅಂಥ ಒಂದು ಸದವಕಾಶವು* ಜನವರಿ ಎರಡನೆ ವಾರ "ಕೋರಾ" ಅವರಿಂದ ದೆಹಲಿಯ ಶ್ರೀಧರಾಣಿ ಗ್ಯಾಲರಿಯವರಲ್ಲಿ ದೊರೆಯಿತು.

'ಕೋರಾ' ಎಂಬ ಕಾವ್ಯನಾಮದಿಂದ ಮದರಾಸಿನ ಕೋಡೂರು ರಾಮಮೂರ್ತಿಯವರು ಕಲಂಕಾರಿ ಕಲಾಶೈಲಿಯಲ್ಲಿ ಭಾರತದಲ್ಲೇ ಹೆಸ

---

*೧೯೬೫ ರ

ರಾಗಿದ್ದಾರೆ. ‘ ಕಲಂಕಾರಿ ’ ಎಂಬುದು ಪ್ರಾಚೀನವಾದ ಕಲೆ. ಚಿತ್ರಗಳನ್ನು ಲೇಖನಿ (ಕಲಂ) ಸಹಾಯದಿಂದ ಬರೆಯುವುದ (ಕಾರಿ) ನ್ನು ‘ ಕಲಂಕಾರಿ ಪದ್ಧತಿ,’ ಎಂದು ಕರೆಯಲಾಗಿದೆ. ಈ ಪದ್ಧತಿಯ ಒಳನೋಟ ಬಹು ಕುತೂಹಲಕಾರಿಯಾದುದು.

ರಚಿಸಲೇಬೇಕಾದ ಚಿತ್ರಕ್ಕೆ ಬಟ್ಟೆ, ಬಣ್ಣಗಳ ಸಿದ್ಧತೆಯನ್ನು ತಾವೇ ಮಾಡಿಕೊಳ್ಳುವುದೊಂದು ಈ ಕಲೆಯ ಮುಖ್ಯ ರಹಸ್ಯ. ಚಿತ್ರ ಬರೆಯಲು ಉಪಯೋಗಿಸುವ ಬಟ್ಟೆಯನ್ನು ‘ ಮೈರಾಬಲಂ ’ ಎಂಬ ದ್ರವದಲ್ಲಿ ಮತ್ತೆ ಮತ್ತೆ ನೆನೆಹಾಕುವುದು, ಹಿಂಡುವುದು, ಬಿಸಿಲಿನ ತಾಪದಲ್ಲಿ ಮರಳಮೇಲಿಡುವುದು– ಹೀಗೆ ಮಾಡಿದ ಬಟ್ಟೆಯಮೇಲೆ ವರ್ಣಗಳನ್ನು ಬಳಸುತ್ತಾರೆ. ನೀರಿನಲ್ಲಿ ನೆನೆದ ಅಳಲೆಕಾಯಿ ಚೂರ್ಣವನ್ನು ಎಮ್ಮೆಯ ಹಾಲಿನೊಂದಿಗೆ ಬೆರೆಸಿದ ದ್ರವರೂಪವೇ ‘ ಮೈರಾಬಲಂ ’.

ಕಲಂಕಾರಿ ಕಲೆಯ ಮುಖ್ಯ ಮೂಲವರ್ಣಗಳು ಕಪ್ಪು, ಕೆಂಪು, ಹಳದಿ ಮತ್ತು ನೀಲಿ. ಆಯಾ ವರ್ಣಗಳು ಬಟ್ಟೆಯ ಮೇಲೆ ಸ್ಥಿರವಾಗಿ ನಿಲ್ಲಲು ಸಹಾಯವಾಗುವಂತೆ ಪಟಿಕದ ರಸವನ್ನು ಉಪಯೋಗಿಸಲಾಗುತ್ತದೆ. ತಾಟಿ ಬೆಲ್ಲ, ಕಬ್ಬಿಣದ ಚೂರುಗಳು ಮತ್ತು ನೀರು ಇವುಗಳ ಮಿಶ್ರಣದಿಂದ ಕಪ್ಪು ವರ್ಣವನ್ನು ದೊರಕಿಸಿಕೊಂಡು ಮೊದಲು ಚಿತ್ರದ ರೇಖೆಗಳನ್ನು ಬಿಡಿಸಿಕೊಳ್ಳುತ್ತಾರೆ ಮಂಜಿಷ್ಟ (ಬೇರು), ಸುರುಳುಪಟ್ಟೆ (ಮರದ ತೊಗಟೆ), ತಾಮ್ರತೀಗ, ಏಟಿಜಲಗ ಮತ್ತು ನೀರು ಇವುಗಳ ಸಮ್ಮಿಶ್ರಣದಿಂದ ರಕ್ತ (ಕೆಂಪು) ವರ್ಣವನ್ನು ಪಡೆಯುತ್ತಾರೆ. ಕರಕಹೂ (ಅಳಲೆಕಾಯಿ) ಗಳಿಂದ ಹಳದಿ ವರ್ಣವೂ ಮತ್ತು ದೇಶಿಯ ನೀಲಿಯನ್ನು ಪಡೆಯುತ್ತಾರೆ. ಈ ಸಾಮಾನ್ಯ ಸಸ್ಯಮೂಲಿಕೆಗಳಿಂದಾದ ನಮ್ಮ ವರ್ಣಗಳು ಪ್ರಾಚೀನ ಕಲಾ ಸಂಪ್ರದಾಯವನ್ನು ಮೆರೆಯುತ್ತಿವೆ.

‘ ಕೋರಾ ’ ಅವರ ಕೃತಿಗಳಲ್ಲಿ ನಾವು ಕಾಣುವುದು ಪ್ರಾದೇಶಿಕತೆಯ ಸಂಪ್ರದಾಯನಿಷ್ಠೆ. ಆಂಧ್ರದ ಕಾಡುಜನರಿಂದ ಶ್ರೀ ರಾಮಮೂರ್ತಿ ಯವರು ಈ ಅಪೂರ್ವ ಕಲಾತಂತ್ರವನ್ನು ಕರಗತಮಾಡಿಕೊಂಡಿದ್ದಾರೆ. ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಹಾಗೂ ಚಾರಿತ್ರಿಕ ಸನ್ನಿವೇಶಗಳನ್ನು ಚಿತ್ರಿಸಲು ತಮ್ಮ ಒಂದು ಕಲಾಶಾಲೆಯನ್ನು ಮದರಾಸಿ

ನಲ್ಲಿ ತೆರದು "ಕೋರಾ ಕಲಂಕಾರಿ" ಎಂದು ಹೆಸರಿಟ್ಟಿದ್ದಾರೆ.

ಪ್ರಾಚೀನ ಕಲಾ ಸಂಸ್ಕಾರದಿಂದ ಅವರು ತಮ್ಮಲ್ಲಡಗಿರುವ ಸುಪ್ತ ಪ್ರತಿಭೆಯನ್ನು ನೂತನ ಶೈಲಿಯಲ್ಲಿ ಹೊರಹೊಮ್ಮಿಸಿದ ೨೬ ಕಲಾಕೃತಿಗಳನ್ನು ದೆಹಲಿಯಲ್ಲಿ ಪ್ರದರ್ಶಿಸಲಾಗಿದ್ದಿತು. ನವರಸಭಾವಕ್ಕೆ ಸೇರಿದ ಕೃತಿಗಳಲ್ಲಿ 'ವಿರಹಿಣಿ' 'ನೆಹರೂ ಅಸ್ತಮಯ'. 'ಮಯೂರ ತಾಂಡವ,' 'ಸ್ತ್ರೀಮಂತಿನಿ', 'ಚಾಮುಂಡಿ ಸುಪ್ರಭಾತ' ಬಹು ಜನಪ್ರಿಯಗಳಿಸಿದ ಚಿತ್ರಗಳು.

ನೆಹರೂರವರ ದಹನಕ್ರಿಯೆಯ ಸುದ್ದಿಯನ್ನು ಕಲಾವಿದರು ರೇಡಿಯೋವಿನಿಂದ ಕೇಳಿ ಆಗ ತಮ್ಮಲ್ಲಿ ಉಂಟಾದ ದುಃಖ ಭಾವೋದ್ರೇಕವನ್ನು ಚಿತ್ರದ ಮೂಲಕ ಹೊರಹೊಮ್ಮಿಸಿದ್ದಾರೆ. ಚಿತ್ರ 'ನೆಹರೂ ಅಸ್ತಮಯ' ಎಂಬುದು. ಅದು ಶೋಕರಸಕ್ಕೆ ಸೇರಿದ ಕೃತಿ. ಅಲ್ಲಿ ಕಲಾವಿದರ ಹೃದಯದ ಮೇಲೆ ಆದ ಪ್ರತಿಕ್ರಿಯೆಯನ್ನು ಬಹಳ ಸೂಕ್ಷ್ಮವಾಗಿ ಬಹು ದಿಟ್ಟತನದಿಂದ ರಚಿಸಿದ್ದಾರೆ. ಅಲ್ಲಿ ಕುಂಚದ ಸೆಳೆತ ಮೆಚ್ಚುವಂತಿದೆ. ಚಿತ್ರದಲ್ಲಿ ದಹನಕ್ರಿಯೆಯನ್ನು ಈಕ್ಷಿಸುತ್ತಿರುವ ಲಕ್ಷೋಪಲಕ್ಷ ಜನರು, ಅವರ ಆಚೆ ಪ್ರಜ್ವಲಿಸಿ ಧಗಧಗಿಸುತ್ತಿರುವ ಚಿತೆ, ಚಿತೆಯ ಆ ಮಹಾಜ್ವಾಲೆ ಮುಗಿಲು ಮುಟ್ಟಿರುವುದು – ಎಲ್ಲವೂ ಸ್ವಾಭಾವಿಕವಾಗಿವೆ. ಹಳದಿ ಮಿಶ್ರಿತ ಕೆಂಬಣ್ಣದ ಪ್ರಚಂಡಜ್ವಾಲೆ ಆ ಜನರ ಹೃದಯ ವೇದನೆಯನ್ನು ಸಾಂಕೇತಿಕವಾಗಿ ಪರಿಣಮಿಸಿದೆ. 'ಕೋರಾ' ಅವರು ತಮ್ಮಲ್ಲಿ ಉಂಟಾದ ಭಾವನೆಯನ್ನು ಸಮಗ್ರ ಚಿತ್ರದಲ್ಲಿ ಅಮರಗೊಳಿಸಿದ್ದಾರೆ. ಈ ಕಲಾಕೃತಿಯ ಪ್ರತಿಯನ್ನು ಶ್ರೀಮತಿ ಇಂದಿರಾ ಗಾಂಧಿಯವರಿಗೆ ನೆನಪಿನ ಕಾಣಿಕೆಯಾಗಿ ಕಲಾವಿದರು ಸಮರ್ಪಿಸಿದ್ದಾರೆ.

ರಾಷ್ಟ್ರೀಯಪಕ್ಷಿಯಾದ 'ಮಯೂರದ ನೃತ್ಯವನ್ನೂ ಚಿತ್ರಿಸಿದ್ದಾರೆ. ಇಲ್ಲಿ ಮಯೂರ ನೃತ್ಯದಲ್ಲಿ ವೀರರಸಭಾವವನ್ನು ಹೊರಹೊಮ್ಮಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ರಾಧಾಕೃಷ್ಣರ ರೂಪಚಿತ್ರ ಕೇವಲ ಮೂರು ವರ್ಣಗಳಲ್ಲಿ ಸುಂದರವಾಗಿ ಬಂದಿದೆ. ಈ ಕೃತಿಯ ಹೆಸರು 'ವೇದಾಂತಿ' ಎಂದಿದ್ದರೂ–ನೋಟಕರ ಬಾಯಿಂದ 'ರಾಧಾಕೃಷ್ಣ' ಎಂದು ಸಹಜವಾಗಿ ಹೊರಬರುತ್ತದೆ.

ವಿರಹಿಣಿ, ಶೃಂಗಾರಿಣಿ, ಮುಂಗಾರು ಮುಗಿಲು, ಚಾಮುಂಡಿ ಸುಪ್ರಭಾತ ಮುಂತಾದ ಸುಂದರ ಕೃತಿಗಳನ್ನು ಹೆಸರಿಸಬಹುದಾಗಿದೆ.

ದೆಹಲಿಯ ಮಹಾನಗರದಲ್ಲಿ ಕಲೆಗೆ, ಕಲಾವಿದರಿಗೆ ಕೊರತೆ ಇಲ್ಲ. ವಿಶ್ವದ ಪ್ರಮುಖ ರಸಿಕಜನ ಇಲ್ಲಿ ನೆಲಸಿದ್ದಾರೆ. ಕಲಾ ಪ್ರದರ್ಶನಗಳು ಮೇಲಿಂದ ಮೇಲೆ ಜರುಗುತ್ತಲೇ ಇರುತ್ತವೆ. ಕಲಾ ಪ್ರೇಮಿಗಳ ವಿಚಾರ ಧಾರೆಗೆ ಸದವಕಾಶವೂ ಆಗಿಂದಾಗ್ಯೆ ದೊರಕುತ್ತದೆ. ನವ್ಯಕಲಾಸಂಪ್ರದಾಯದ ಇಂದಿನ ಕಾಲದಲ್ಲಿ ಕೋಡೂರು ರಾಮಮೂರ್ತಿಗಳು ಮದರಾಸಿನಿಂದ ದೆಹಲಿಗೆ ಬಂದು ಅಲ್ಲಿ ತಮ್ಮ ಕೃತಿಗಳನ್ನು ಪ್ರದರ್ಶಿಸಿ ಜಯಗಳಿಸಿದುದು ಒಂದು ವಿಶೇಷವೆನ್ನಬೇಕು. ಅವರ ಕೃತಿಗಳಲ್ಲಿ ಪ್ರಾಚೀನ ಕಲಾ ವಸ್ತುನಿಷ್ಠೆಯ ತಳಹದಿಯಮೇಲೆ ನವ್ಯ ಕಲಾತಂತ್ರ ಮೆರೆದಿರುವುದು ಸಮಕಾಲೀನ ಕಲಾರಂಗದಲ್ಲಿ ಶ್ರೀ ಕೋಡೂರು ರಾಮಮೂರ್ತಿಗಳು ಸ್ಥಿರವಾದ ಸ್ಥಾನವನ್ನು ಗಳಿಸಲು ಅವಕಾಶವಾಯಿತು.

೧೯೬೬ರ ಮಾರ್ಚಿಯಲ್ಲಿ "ಕೋರಾ" ಅವರಿಂದ ಬೊಂಬಾಯಿಯ ಜಹಂಗೀರ್ ಆರ್ಟ್ಸ್ ಗ್ಯಾಲರಿಯಲ್ಲಿ ಮತ್ತೊಂದು ಪ್ರದರ್ಶನ ನಡೆಯಿತು.

ಜಹಂಗೀರ್ ಆರ್ಟ್‌ಗ್ಯಾಲರಿ ಬೊಂಬಾಯಿಯ ಪ್ರಮುಖ ಪ್ರದೇಶದಲ್ಲಿದೆ. ಅದು ಆಧುನಿಕ ಗ್ಯಾಲರಿ ಎಂದು ಹೆಸರಾಗಿದೆ. ದಿನನಿತ್ಯ ಒಂದಲ್ಲ ಒಂದು ಕಲಾಪ್ರದರ್ಶನ ಅಲ್ಲಿ ಜರಗುತ್ತಲೇ ಇರುತ್ತದೆ. ಪ್ರಸಿದ್ಧ ತಾಜ್ ಹೋಟಲ್ ಸಮೀಪದಲ್ಲಿರುವ ಆ ಗ್ಯಾಲರಿಗೆ ಅಲ್ಲಿ ಬಂದಿಳಿದಿರುವ ವಿದೇಶಿಯರೂ ಅಲ್ಲಿಯ ಪ್ರದರ್ಶನಗಳಿಗೆ ಬಂದು ಹೋಗುತ್ತಾರೆ. ಅಲ್ಲಿಯ ಎಡ ಭಾಗದ ವಿಶಾಲವಾದ ಗ್ಯಾಲರಿಯ ಸಭಾಂಗಣದಲ್ಲಿ ಶ್ರೀ ಕೋರಾ ಅವರ ೩೨ ಚಿತ್ರಗಳನ್ನು ಪ್ರದರ್ಶಿಸಲಾಗಿದ್ದಿತ್ತು. ಕಲಾ ಪ್ರದರ್ಶನದ ಆರಂಭೋತ್ಸವನನ್ನು ಪ್ರಿನ್ಸ್ ಆಫ್ ವೇಲ್ಸ್ ಮ್ಯೂಜಿಯಂ ಡೈರೆಕ್ಟರ್ ಡಾ|| ಮೋತಿಚಂದ್ರ ಅವರು ನೆರವೇರಿಸಿ-ಭಾಷಣಮಾಡುತ್ತ "ಕಲಂಕಾರಿ ಚಿತ್ರಕಲೆ ನಮ್ಮ ಪ್ರಾಚೀನತೆಯನ್ನು ವ್ಯಕ್ತಪಡಿಸುತ್ತಿದೆ ಎಂದೂ ಅದನ್ನು ಉಳಿಸಿಕೊಂಡು ಬೆಳಸಿಕೊಂಡು ಬರುವಲ್ಲಿ ಶ್ರೀ ರಾಮಮೂರ್ತಿಯವರು ಭಾರತದಲ್ಲೇ ಹೆಸರಾದ ವ್ಯಕ್ತಿಗಳೆಂದೂ ಅವರು ಪ್ರದರ್ಶಿಸಿದ ನವ್ಯತಂತ್ರದ ಕೃತಿ

ಗಳು ಇಂದಿನಯುಗ ಧರ್ಮಕ್ಕೆ ಹೊಂದಿಕೊಂಡು ಅವರಿಗೆ ಕೀರ್ತಿತಂದಿವೆ" ಎಂದೂ ನುಡಿದರು.

"ಕೋರಾ" ಅವರ ಪ್ರದರ್ಶಿತ ಕೃತಿಗಳಲ್ಲಿ ನಾವು ಕಾಣುವುದು ಪ್ರಾದೇಶಿಕತೆಯ ವೈಖರಿ. ಆಂಧ್ರದ ಇವರ ನೂತನ ಶೈಲಿಯಲ್ಲಿ ಹೊರಹೊಮ್ಮಿಸಿದ ೩೨ ಕಲಾ ಕೃತಿಗಳನ್ನು ಈ ಬಾರಿ ಪ್ರದರ್ಶಿಸಲಾಗಿದ್ದಿತು. ಬಾಪೂ ಅಸ್ತಮಯ, ಗೌರಮ್ಮ (ಮೈಸೂರು ವನಿತೆ), ಮಯೂರತಾಂಡವ, ವಿರಹಿಣಿ, ಸ್ರೀಮಂತಿನಿ, ತಿರುಪತಿ ಬೆಟ್ಟ, ನೈಟ್ ಕ್ಲಬ್ ಮುಂತಾದವು ಜನಪ್ರಿಯತೆಗಳಿಸಿದ ಚಿತ್ರಗಳು.

ಗೌರಮ್ಮ ಎಂಬುದು ಮೈಸೂರು ವನಿತೆಯ ಸಂಪ್ರದಾಯ ಶೀಲತೆಯನ್ನು ತೋರುವ ಆಕರ್ಷಕ ಚಿತ್ರವಾಗಿದೆ. ಇಲ್ಲಿಯ ವನಿತೆಯಮುಖ ಕೈಗಳಲ್ಲಿ ಬಳಸಿರುವ ಹಳದಿ ಮಂಗಳ ಗೌರಿಯ ಬೆಡಗುಬಿನ್ನಾಣಗಳನ್ನು ಸೂಚಿಸುತ್ತಿದೆ. ಈ ಕೃತಿಯನ್ನು 'ಗೌರಮ್ಮ' ಎಂದಿದ್ದರೂ ನೋಟಕರ ಬಾಯಿಂದ ಸಹಜವಾಗಿ ಆ ಹೆಸರು ಹೊರಬರುತ್ತದೆ.

ಮಿಥುನ, ವಿರಹಿಣಿ, ನೈಟ್ ಕ್ಲಬ್ ಈ ಕೃತಿಗಳಲ್ಲಿ ಕಂಡು ಬರುವ ದೇಹ ಸೌಂದರ್ಯ ಸಹಜ ವರ್ಣಗಳಿಂದ ಕೂಡಿದ್ದು ಆಧುನಿಕ ರಸಿಕರನ್ನು ಸೆಳೆಯುವಲ್ಲಿ ಹೆಸರು ಗಳಿಸಿ, ಬೊಂಬಾಯಿಯ ಯುವಕರ ಹೃದಯವನ್ನು ಸೂರೆಮಾಡಿದ ಕೃತಿಗಳೆನ್ನಬಹುದು.

ಇವರ ಕೃತಿಗಳಲ್ಲಿ ಜಲವರ್ಣ ಬಳಸಲಾಗಿದ್ದರೂ ಎಲ್ಲವೂ ತೈಲವರ್ಣದಂತೆ ತೋರುತ್ತಿದ್ದವು ನವ್ಯಕಲಾ ಸಂಪ್ರದಾಯದ ಇಂದಿನ ಕಾಲದಲ್ಲಿ ಕೋಡೂರು ರಾಮಮೂರ್ತಿಗಳು ಮದರಾಸಿನಿಂದ ಬೊಂಬಾಯಿಗೆ ಬಂದು ಅಲ್ಲಿ ತಮ್ಮ ಕೃತಿಗಳನ್ನು ಪ್ರದರ್ಶಿಸಿ ಜಯಗಳಿಸಿದುದು ವಿಶೇಷವೆನ್ನಬೇಕು.

ಪ್ರದರ್ಶನಾಲಯದಲ್ಲಿ ತಾವು ಚಿತ್ರಗಳಿಗೆ ಬಳಸಲಾದ ಸಸ್ಯ ವಸ್ತುಗಳನ್ನು ಇರಿಸಿದ್ದರು. ಪ್ರೇಕ್ಷಕರು ಅವುಗಳಿಂದಾದ ವರ್ಣಕೃತಿಗಳೇ ಇವು ಎಂದು ತಮ್ಮ ಆಶ್ಚರ್ಯವನ್ನು ಸೂಚಿಸುತ್ತಿದ್ದರು. ಕೆಲವರು ವರ್ಣಗಳ ತಂತ್ರವೈವಿಧ್ಯತೆಯನ್ನು ಅರಿತುಕೊಂಡು ಹೋದರು. ಈ ಕಲಾ ಪ್ರದರ್ಶನದ ಕಲಾಕೃತಿಗಳ ಕಲಾ ಕೌಶಲದ ಬಗ್ಗೆ ಅಭಿಮಾನ ಮೂಡುವಂತೆ ಮಾಡಿದ ಶ್ರೀ ಕೋರಾ ಅವರ ಬಗ್ಗೆ ಕೊಂಚ ಅರಿಯುವುದುಚಿತ.

ಶ್ರೀ ರಾಮಮೂರ್ತಿಯವರು ಕಲಾವಿದರು ಮಾತ್ರಅಲ್ಲ ಕಲಾ ವಸ್ತು ಗಳ ಸಂಗ್ರಹಕರೂ ಆಗಿದ್ದಾರೆ. ಬಾಗಿಲುವಾಡ ಹಾಗೂ ಮರದ ರಥ ಗೊಂಬೆಗಳ ಕುಸುರಿನ ಕಲೆಗೆ ಮನಸೋತಿದ್ದಾರೆ. ಚರ್ಮದ ಬೊಂಬೆಗಳಿಗೆ ಮಾರುಹೋಗಿದ್ದಾರೆ. ತಾಳೆಪತ್ರಗಳ ಸಚಿತ್ರ ಕೃತಿಗಳಿಗೆ ಆಶ್ಚರ್ಯ ಪಟ್ಟಿ ದ್ದಾರೆ. ದೇವಾಲಯದ ಪುರಾತನವಾದ ಬಟ್ಟೆಯ ಚಿತ್ರಗಳಿಗೆ ಬೆರಗಾಗಿ ದ್ದಾರೆ. ಅಂಥ ಅಪೂರ್ವ ವಸ್ತುಗಳನ್ನು ಸಂಗ್ರಹಿಸಿದ್ದಾರೆ. "ಕೋರಾ" ಅವರು ಬರೀ ಸಂಗ್ರಹಕರು ಮಾತ್ರವಲ್ಲ. ನಮ್ಮ ಪ್ರಾಚೀನ ಚಿತ್ರಲಾ ಪದ್ಧತಿ ಯನ್ನು ಉಳಿಸಲು ಒಂದು ಶಾಲೆಯನ್ನು ತೆರೆದು ಅಲ್ಲಿ ಕೇಂದ್ರ ಸರ್ಕಾರದ ಕೈಗಾರಿಕಾ ಸಂಸ್ಥೆಯ ಶಿಕ್ಷಣವೇತನ ಪಡೆದ ಕೆಲವು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುತ್ತಿದ್ದಾರೆ. ಅವರು ಸಂಗ್ರಹಿಸಿದ ಇಲ್ಲವೇ ಬರೆದ ಕಲಾವಸ್ತುಗಳ ಬಗ್ಗೆ ಯಾರಾದರೂ ವಿವರ ಬಯಸಿದಲ್ಲಿ ಈ ಬಗ್ಗೆ ·ಅದರ ಹಿನ್ನೆಲೆ, ಮೂಲ, ಚರಿತ್ರೆಯನ್ನೆಲ್ಲಾ ನಮ್ಮ ಮನ ಮುಟ್ಟುವಂತೆ ವಿವರಿಸುವ ರೀತಿಯಿಂದಾಗಿ ರಾಮಮೂರ್ತಿಯವರು ಕವಿಗಳಾಗಿ ಕಾಣುತ್ತಾರೆ.

ಪ್ರಕೃತ ಬೊಂಬಾಯಿಯ ಕಲಾ ಪ್ರದರ್ಶನ ಅಲ್ಲಿಯ ಕಲಾವಿದರ ವಿಚಾರ ಧಾರೆಯನ್ನು ಕೆಣಕುವಂತೆ ಮಾಡಿತು, ಅನುಕರಿಸುವಂತೆ ಮಾಡಿತು, ಅಭಿಮಾನ ತಾಳುವಂತೆ ಮಾಡಿತು ಎನ್ನಬಹುದು.



ಎನ್. ಜಿ. ಪಾವಂಜೆ

ಕಲಾವಿದ ಶ್ರೀ ಪಾವಂಜೆಯವರ ವ್ಯಕ್ತಿತ್ವವು ಕನ್ನಡನಾಡಿನ ಎಲ್ಲ ಕಲಾವಿದರ ಕಲಾಭಿಮಾನಿಗಳ ಹೃದಯದಲ್ಲಿ ಮನೆಮಾಡಿರುವುದರಲ್ಲಿ ಅಚ್ಚರಿ ಏನೂ ಇಲ್ಲ. ಶ್ರೀ ಪಾವಂಜೆಯವರು ಕನ್ನಡ ನಾಡಿನ ವರಪುತ್ರರು. ಕಲಾಗುರುವಾಗಿ ಅನೇಕ ಕಲಾವಿದರಿಗೆ ಚೈತನ್ಯವನ್ನು ತುಂಬಿದ ಪುಣ್ಯಶಾಲಿಗಳವರು. ಕಲೆಯ ಆಳವಾದ ಪಾಂಡಿತ್ಯವಿಲ್ಲದೆ ಕೇವಲ ಸೋಗಿನಲ್ಲಿ ರಾಜಕೀಯ ನಡೆಸಿ ಬೆಳಕಿಗೆ ಬಂದು ಸರ್ಕಾರದ ಮಾನ್ಯತೆಯನ್ನು ಪಡೆಯುವ

ದೌರ್ಭಾಗ್ಯ ಇವರ ಪಾಲಿಗೆ ಬರದಿದ್ದುದು ನಮ್ಮ ಪುಣ್ಯ. ಕೀರ್ತಿದಾಹ ಇವರಲ್ಲಿ ಲವಲೇಶವೂ ಇರಲಿಲ್ಲ.

ಉಡುಪಿ ಮಹಾಕ್ಷೇತ್ರದ ಬಳಿಯ ಪಾವಂಜೆ ಗ್ರಾಮದವರಾದ ಶ್ರೀ ನರಹರಿರಾವ್ ಗೋಪಾಲಕೃಷ್ಣ ಪಾವಂಜೆಯವರು ಮೊದಲು ಬೊಂಬಾಯಿ ಜೆ. ಜೆ. ಕಲಾಶಾಲೆಯಲ್ಲಿ ಕಲಾಭ್ಯಾಸ ನಡೆಸಿದರು. ಚಿತ್ರಕಲೆಯಲ್ಲಿ ಪರಿಶ್ರಮ ಪಡೆದುಬರಲು ಜರ್ಮನಿಗೆ ತೆರಳಿದರು. ಅಲ್ಲಿ 'ಕಲರ್ ಲಿಥೋಗ್ರ'ಪಿಯ ವಿಶೇಷ ಶಿಕ್ಷಣ ಪಡೆದುಕೊಂಡರು. ಆಗ ಅಲ್ಲಿ ಇವರ ಜೊತೆಯಲ್ಲಿದ್ದ ಆಪ್ತಮಿತ್ರರಲ್ಲಿ ಕೇಂದ್ರದ ಉಪರಾಷ್ಟ್ರಾಧ್ಯಕ್ಷ ಜನಾಬ್ ಜಕೀರ್ ಹುಸೇನರೂ ಒಬ್ಬರು. ಜನಾಬರು ಬೆಂಗಳೂರಿಗೆ ಭೇಟಿ ಕೊಟ್ಟಾಗಲೆಲ್ಲಾ ಶ್ರೀ ಪಾವಂಜೆಯವರ ಗೃಹಕ್ಕೆ ಭೇಟಿ ಕೊಡುವುದನ್ನು ಮಾತ್ರ ಎಂದೂ ಮರೆತವರಲ್ಲ. ಅವರ ಸ್ನೇಹಪರತೆ ಅಷ್ಟು ಅಪ್ಪಟವಾದುದು.

ಜರ್ಮನಿಯಲ್ಲಿದ್ದ ಇವರ ಏಳುವರ್ಷಗಳಲ್ಲಿ ತೈಲ ಹಾಗೂ ಜಲವರ್ಣಗಳ ಚಿತ್ರ ರಚನೆಯಲ್ಲಿ ಹೆಚ್ಚಿನ ಪರಿಶ್ರಮವನ್ನು ಗಳಿಸಿಕೊಂಡರು. ಪಾಶ್ಚಿಮಾತ್ಯ ಕಲಾಸಂಪ್ರದಾಯವನ್ನು ಜೀರ್ಣಿಸಿಕೊಂಡು ಕಲಾಪ್ರೌಢಿಮೆಯನ್ನು ಸಾಧಿಸಿಕೊಂಡರು. ವಿಖ್ಯಾತ ಚಿತ್ರಕಾರರಾದ ರೇಂಬ್ರಾಂಟ್, ಟಿಟಿಯನ್ ಮುಂತಾದವರ ಕೃತಿಗಳನ್ನು, ಸ್ವಾಭಾವಿಕ ವರ್ಣಗಳಲ್ಲಿ ನಕಲುಮಾಡಿದರು. ಹೀಗೆ ನಕಲುಮಾಡುವಾಗ ಮೂಲ ಕೃತಿರಚನಾಕಲಾವಿದರ ಸಿದ್ಧಿಯನ್ನೇ ಪಡೆದಿರಬೇಕಾಗುತ್ತದೆ. ಶ್ರೀ ಪಾವಂಜೆಯವರಿಗೆ ದೊರೆತಿರುವ ಸಿದ್ಧಿ ಮತ್ತಾರ ಪಾಲಿಗೂ ದೊರೆಯಲಾರದು. ಪ್ರಕೃತಿಯ ಯಾವುದೇ ವರ್ಣಗಳನ್ನು ಜೀವಂತವಾಗಿ ಮೂಡಿಸುವ ಕುಂಚಕೌಶಲ ಶ್ರೀ ಪಾವಂಜೆಯವರದು. ಇದು ಅವರ ದೈವದತ್ತವಾದ ಶಕ್ತಿ. ಹಾಗೆ ನಕಲುಮಾಡಿದಂಥ ಇವರ 'ಹೆಲ್ಮೆಟ್' ತೈಲಕೃತಿಯನ್ನು ನಾನು ೧೯೪೫ ರಲ್ಲಿ ನೋಡಿದ್ದೆ. ಅದನ್ನು ಶ್ರೀರಂಗಪಟ್ಟಣದ ಸ್ಕಾಟ್ ಬಂಗಲೋ ಚಿತ್ರಸಂಗ್ರಹಾಲಯದಲ್ಲಿ ಇರಿಸಲಾಗಿದ್ದಿತು. ಇದು ಈಗ ಜಗನ್ಮೋಹನ ಚಿತ್ರಶಾಲೆಯಲ್ಲಿದೆ. ಇವರ ಕಲೆಯ ಮಟ್ಟವನ್ನು ಅಳೆಯಲು ಇದೊಂದು ಕೃತಿ ಸಾಕೆನಿಸುತ್ತದೆ.

ಜರ್ಮನಿಯಿಂದ ಬಂದವರು ಮೊದಲು ಬೆಂಗಳೂರಿನಲ್ಲಿ ೧೯೩೨ ರಲ್ಲಿ ನೆಲಸಿದರು. ಅಮೇಚ್ಯೂರ್ ನಾಟ್ಯರಂಗ ಇವರನ್ನು ಆಕರ್ಷಿಸಿತು. ಇಲ್ಲಿ

ತಮ್ಮ ಕಲಾರಾಧನೆಯನ್ನು ವ್ಯಾಪಕಗೊಳಿಸಲು ಆರಂಭಿಸಿದರು. ಅಪೂರ್ವ ಕಲಾಪ್ರೇಮಿಗಳೆನಿಸಿದ್ದ ಶ್ರೀ ಎಸ್. ಜಿ. ಶಾಸ್ತ್ರಿಗಳವರು ಶ್ರೀ ಪಾವಂಜೆ ಯವರ ಕಲಾಪ್ರೌಢಿಮೆಯನ್ನು ಮೆಚ್ಚಿ ಇವರ ಹಿರಿಮೆಯನ್ನು ಕನ್ನಡ ರಾಜ್ಯಕ್ಕೆ ಪರಿಚಯಮಾಡಿಕೊಟ್ಟರು.

ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಉಪ ಮುಖ್ಯಾಧಿಕಾರಿ ಗಳಾಗಿ ಕ್ರಮೇಣ ಮುಖ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ಕೆಲವು ವರ್ಷ ಗಳ ಕಾಲ ದಸರಾ ವಸ್ತುಪ್ರದರ್ಶನದ ಕಾರ್ಯದರ್ಶಿಗಳಾಗಿದ್ದು ಈ ಪ್ರದರ್ಶನದ ಖ್ಯಾತಿಗೆ ಕಾರಣರಾದರು. ಚಾಮರಾಜೇಂದ್ರ ಕಲಾಶಾಲೆಯಲ್ಲಿ ಇದ್ದಷ್ಟು ಕಾಲ ಈ ಶಾಲೆಯ ಗೌರವ ಘನತೆ ಹೊರಪ್ರಾಂತ್ಯಗಳಿಗೂ ಪ್ರಸರಿಸಲು ಕಾರಣವಾಯಿತು. ಮೈಸೂರಿಗೆ ಒಮ್ಮೆ ವೈಸ್‌ರಾಯ್ ಲಾರ್ಡ್ ಇರ್ವಿನ್ನರು ಬಂದಿದ್ದರು. ಆಗ ಶ್ರೀ ಪಾವಂಜೆಯವರ ಎರಡು ನಿಸರ್ಗ ಚಿತ್ರ ಗಳನ್ನು ಅಂದಿನ ಸರ್ಕಾರ ಅವರಿಗೆ ಕಾಣಿಕೆಯಾಗಿ ಅರ್ಪಿಸಿತು.

೧೯೪೫ ರ ಸಮಯ. ನಾನು ಚಾಮರಾಜ ಕಲಾಶಾಲೆಯ ವಿದ್ಯಾರ್ಥಿ ಯಾಗಿದ್ದೆ. ಅಲ್ಲೇ ಶ್ರೀ ಪಾವಂಜೆಯವರನ್ನು ನಾನು ಮೊದಲಬಾರಿಗೆ ಕಂಡದ್ದು. ಅವರ ಬಳಿ ಸುಳಿಯುವುದೇ ಒಂದು ಬಗೆಯ ಅಂಜಿಕೆ, ದಿಗಿಲು. ಆದರೆ ಅವರ ಎತ್ತರವಾದ ದೇಹಾಕೃತಿ ನೇರವಾದ ಸೂಕ್ಷ್ಮವಾದ ದೃಷ್ಟಿ ಎಂತಹವರನ್ನೂ ಆಕರ್ಷಿಸುತ್ತಿತ್ತು. ಗಂಭೀರ ಮುಖಮುದ್ರೆ ಅವರದು. ಅವರು ವಿವೇಕದ ಕಟ್ಟುನಿಟ್ಟಿನ ಜೀವನಕ್ಕೆ ನಿದರ್ಶನಪ್ರಾಯರಾಗಿದ್ದರು. ಸುಳ್ಳು ಎಂಬುದು ಅವರ ಬಳಿ ಸುಳಿಯಲು ಅವಕಾಶ ಇತ್ತವರಲ್ಲ. ಕಾಯ ಕವೇ ಕೈಲಾಸವೆಂಬುದನ್ನು ಅನುಷ್ಠಾನಕ್ಕೆ ತಂದು ತಮ್ಮ ಬದುಕಿನಲ್ಲೂ ತೋರಿದರು.

ಕಲಾವಿದರ ಬಗ್ಗೆ ಇವರ ಆತ್ಮೀಯತೆ ಮಮತೆ ಅಪರೂಪವಾದುದು. ಒಮ್ಮೆ ಶ್ರೀ ಪಾವಂಜೆಯವರು "ಮೈಸೂರಿನ ರಾಮು ಸ್ಟುಡಿಯೋ"ವಿನಲ್ಲಿ ಕಲಾ ವಿಷಯವಾಗಿ ಮಾತನಾಡುತ್ತ "ಓ ಆ ಸ್ವಾಮಿ" ಏನುಮಾಡು ತ್ತಿದ್ದಾರೆ?" ಎಂದು ನನ್ನನ್ನು ವಿಚಾರಿಸಿದರು. "ಕನ್ನಡನಾಡಿನಲ್ಲೇ ಏಕೆ, ಇಡೀ ಭಾರತದಲ್ಲೇ ಆ ಮಟ್ಟದ ಕಲಾವಿದರು ತುಂಬಾ ವಿರಳ; ಈ ಮಾತನ್ನು ಕಲಾವಿದನಾದ ನಾನು ಅಭಿಮಾನದಿಂದ ಹೃದಯ ಪೂರ್ವಕವಾಗಿ

ನುಡಿಯುತ್ತಿದ್ದೇನೆ" ಎಂದು ಶ್ರೀ ಎಸ್. ನಂಜುಂಡಸ್ವಾಮಿಗಳ ಕಲಾ ಪ್ರೌಢಿಮೆಯನ್ನು ಮನಸಾರ ಕೊಂಡಾಡಿದ್ದರು. ಶ್ರೀ ಸ್ವಾಮಿಗಳೂ ಅಷ್ಟೇ ಇವರನ್ನು ಗೌರವದಿಂದ ಕಾಣುತ್ತಿದ್ದರು. "ನನ್ನ ನಿಸರ್ಗ ಕೃತಿಗಳಿಗೆ ಶ್ರೀ ಪಾವಂಜೆಯವರ ಸ್ಫೂರ್ತಿಯನ್ನು ಎಂದೂ ಮರೆಯಲಾರೆ" ಎಂದು ಶ್ರೀ ನಂಜುಂಡಸ್ವಾಮಿಗಳು ಹೇಳುತ್ತಿರುವುದು ಸಹಜವೇ ಆಗಿದೆ.

ಒಂದು ಮಾರ್ಗ ದೊರೆತರೆ ಎಲ್ಲೋ ಮರೆಯಲ್ಲಿ ಇದ್ದುಕೊಂಡು ಕಲಾಸೇವೆಯನ್ನು ನಡೆಸಬೇಕೆನ್ನುವ ಹಂಬಲ ಇವರದಾಗಿತ್ತು. ಈ ನಿವೃತ್ತ ಪ್ರತಿಭಾವಂತ ಕಲಾಶಿಕ್ಷಕರ ಕಡೆ ನಾಡು ಕಣ್ಣು ತೆರೆಯಲಿಲ್ಲ. ಬೆಂಗಳೂರಿಗೆ ಬಂದಮೇಲೆ "ಗಣೇಶಬೀಡಿ" ಏಜೆಂಟರಾಗಿ ಜೀವನ ಹೊರೆಯುವ ಸ್ಥಿತಿ ಈ ಕಲಾಯೋಗಿಗೆ ಬರಬಾರದಿತ್ತು! ಇಂತಹ ಹೆಮ್ಮೆಯ ಕಲಾವಿದರ ಕಲಾ ಪ್ರತಿಭೆ ತೆರೆಮರೆಯಲ್ಲಿಯೇ ಬತ್ತಿಹೋಗುವ ಸ್ಥಿತಿಯನ್ನು ಕಂಡ ನಮ್ಮ ಅಭಿಮಾನ್ಯಶೂನ್ಯತೆಗೆ ನಾಚಿ ತಲೆತಗ್ಗಿಸಬೇಕಾಗಿದೆ.

ಮೈಸೂರು ಚಿತ್ರಕಲಾ ಪರಿಷತ್ತಿನವರು ಶ್ರೀಯುತರನ್ನು ಗೌರವಿಸಿದ್ದು ಒಂದು ಸಮಾಧಾನದ ಸಂಗತಿ. ಅನಾರೋಗ್ಯ ನಿಮಿತ್ತ ಶ್ರೀ ಪಾವಂಜೆಯವರು ಬರಲಾಗಲಿಲ್ಲ ಸಮಾರಂಭಕ್ಕೆ. ಅವರ ಪರ ಅವರ ಪುತ್ರಿಯವರೇ ಬಂದು ತಮ್ಮ ತಂದೆಯವರ ವ್ಯಕ್ತಿತ್ವವನ್ನು ಬಣ್ಣಿಸಿದ ಸನ್ನಿವೇಶವಂತೂ ಹೃದಯ ಸ್ಪರ್ಶಿಯಾಗಿದ್ದಿತು. ಶ್ರೀ ಪಾವಂಜೆಯವರು ನಮ್ಮನ್ನಗಲುವ ಒಂದು ದಿನದ ಮುಂಚೆ ೧೯೬೫ರ ಸೆಪ್ಟಂಬರ್ ೩ ರಂದು ಕೊನೆಯ ಬಾರಿಗೆ ಶ್ರೀಯುತರ ಧರ್ಶನಲಾಭ ನಮಗೆ ದೊರೆತಿದ್ದಿತು.

ನಿತ್ರಾಣದಿಂದ ನರಳುತ್ತಿದ್ದರೂ ಅವರು ನಮ್ಮನ್ನು ಕಣ್ಣುತುಂಬಿ ನೋಡಿದರು. ಅವರ ತುಟಿಗಳು ಏನನ್ನೋ ನುಡಿದು ಹರಸಿದಂತಿತ್ತು. ಅದನ್ನು ಕಂಡ ನಮ್ಮ ಕಣ್ಣುಗಳು ಮಂಜಾದುವು. ಮತ್ತೆ ಇಂಥ ಕಲಾಯೋಗಿಯನ್ನು ಪಡೆಯಲಾದೀತೇ!

ಹೆಚ್. ವೈ. ಹುಬ್ಳೀಕರ್

೧೯೬೪ರ ಮೈಸೂರು ದಸರಾ ಕಲಾಪ್ರದರ್ಶನಾಲಯದಲ್ಲಿ ನಿತ್ಯ ಸಂಜೆಯ ಸಮಯದಲ್ಲಿ ಚಾಮರಾಜ ಕಲಾಶಾಲೆಯ ವಿದ್ಯಾರ್ಥಿಗಳ ತಂಡವನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿತ್ತು. ಅಲ್ಲಿಯ ಪ್ರತಿ ಚಿತ್ರದ ಬಗ್ಗೆಯೂ ಅವರ ನಡುವೆ ಇದ್ದ ಸುಂದರವಾದ ದುಂಡುದೇಹದ ನಗುಮೊಗದ ಹಿರಿಯ ಯುವಕರೊಬ್ಬರು ತಮ್ಮದೇ ಆದ ವಿಮರ್ಶೆಯನ್ನು ಕೊಡುತ್ತಿದ್ದರು. ಅವರ ಶಾಲೆಗೆ ಹೊಸದಾಗಿ ಬಂದಿರುವ ಕಲಾಧ್ಯಾಪಕರು ಆ ವ್ಯಕ್ತಿಯೇ ಇರಬೇಕೆನಿಸಿತು.

"ಹುಬ್ಳೀಕರ್ ಅಲ್ಲವೆ ನೀವು ?" ಎಂದೆ ನಾನು.

"ನೀವು ತಿಪ್ಪೇಸ್ವಾಮಿಗಳೆಂದು ನನಗೂ ಗೊತ್ತಿತ್ತು. ನೀಮ್ಮ ಬಗ್ಗೆ ಶ್ರೀ ಮಿಣಜಿಗಿಯವರು ಒಮ್ಮೆ ಹೇಳಿದ್ದರು; 'ಅವ ತುಂಬ ಓದಿಕೊಂಡಿದಾನೆ; ಗಲಾಟೆಯ ಗಡಬಡಿ ಮಂದಿ ನೋಡು' ಎಂದು" ಎಂದರು.

ಕಲೆಯ ನೆಪದಲ್ಲಿ ಯಾವೊಂದು ಅನ್ಯಾಯ ಕಂಡರೂ ಕೆಣಕುವ ನನ್ನ ಹವ್ಯಾಸ ಕಂಡ ಶ್ರೀ ಮಿಣಜಿಗಿಯುವರಿಗೆ ಹಾಗೆ ಅನ್ನಿಸಿದ್ದು ಸಹಜವಾದುದೇ.

ಹುಬ್ಳೀಕರರ ಮೊದಲ ಸಂದರ್ಶನವಾದುದು ಹೀಗೆ.

ಶ್ರೀ ಹುಬ್ಳೀಕರ್ ಅವರು ಇಂದು ತುಂಬ ಜನಪ್ರಿಯ ಕಲಾವಿದರಾಗಿದ್ದಾರೆ. ಕನ್ನಡನಾಡಿನ ಮನೆಮನೆಗೆ ಬರುವ 'ಸುಧಾ' ಸಚಿತ್ರ ಸಂಚಿಕೆಯಲ್ಲಿನ ಇವರ ರೇಖಾಚಿತ್ರಗಳಿಗೆ ಜನ ಮೋಹಿತರಾಗಿದ್ದಾರೆ. ರೇಖಾ ಚಿತ್ರಕಲೆಯಲ್ಲಿ ಇವರ ಕುಂಚ ಸಿದ್ಧಿಪಡೆದಿದೆ. ಇವರು ರಚಿಸುವ ಯಾವ ಚಿತ್ರವೇ ಆಗಲಿ ಸತ್ವಪೂರ್ಣವಾಗಿದ್ದು ನೈಜ ಕಲೆಯ ಸಮಸ್ತ ಗುಣಗಳೂ ಅದರಲ್ಲಿ ಅಡಕವಾಗಿರುತ್ತವೆ. ಅನೇಕರ ಚಿತ್ರಗಳ ರಾಶಿಯಲ್ಲಿ ಇದು ಶ್ರೀ ಹುಬ್ಳೀಕರರದೇ ಎಂದು ಎತ್ತಿ ತೋರಿಸುವಷ್ಟು ಇವರ ಕೃತಿಗಳು ಭಿನ್ನವಾಗಿ ವಿಶಿಷ್ಟವಾಗಿ ತಮ್ಮ ಹಿರಿಮೆಯನ್ನು ಪಡೆದುಕೊಂಡಿವೆ. ಅದರಲ್ಲೂ ಚಾರಿತ್ರಿಕ, ಜಾನಪದ ವಸ್ತುಗಳ ಚಿತ್ರಣದಲ್ಲಿ ಇವರು ಸಿದ್ಧ ಹಸ್ತರು. ಇವರು ರಚಿಸುವ ಪ್ರತಿಯೊಂದು ಚಿತ್ರದಲ್ಲಿನ ರೇಖೆಯೂ ಪೂರ್ಣ ಚೈತನ್ಯದಿಂದ ಕೂಡಿ ಮೆರೆಯುತ್ತವೆ. ಸಮಾಜದ ವ್ಯಕ್ತಿಗಳನ್ನು ಸನ್ನಿವೇಶವನ್ನು ಬಹು ಸೂಕ್ಷ್ಮವಾಗಿ ಕಂಡಿದ್ದಾರೆ. ಇವರಿಗೆ ಸಂಪ್ರದಾಯದ ಹಿನ್ನೆಲೆ ಇದೆ. ಶಾಸ್ತ್ರೀಯ ಪರಿಚಯವಿದೆ. ಇವರ ಚಿತ್ರಗಳಲ್ಲಿ ಅಲಂಕಾರ, ಭಂಗಿ, ಮುದ್ರೆ, ವಿನ್ಯಾಸ ಮುಂತಾದುವನ್ನು ರೇಖೆಗಳಲ್ಲಿ ಮೂಡಿಸುತ್ತಾರೆ. ಅವು ತಮ್ಮದೇ ಆದ ಸೌಂದರ್ಯವನ್ನು ಹೊಂದಿರುತ್ತವೆ. ಅವರ ಕಲೆಯಲ್ಲಿ ಅವರಿಗೆ ಅಪಾರ ವಿಶ್ವಾಸವೂ ಇದೆ. ಇವರಲ್ಲಿ ಕೀರ್ತಿದಾಹ ಲವಲೇಶವೂ ಇಲ್ಲ. ಹಾಗಿದ್ದರೆ ಇವರು ಉತ್ತಮ ದರ್ಜೆಯ ಕಲಾವಿದರಾಗುತ್ತಿರಲಿಲ್ಲ. ಇವರ ಲೇಖಣಿಗೆ, ಕುಂಚಕ್ಕೆ ವಿಶ್ರಾಂತಿ ದೊರೆತಾಗ ಪುರಾಣ ಪುಣ್ಯ ಕಾವ್ಯಾಧ್ಯಯನದಲ್ಲಿ ಮುಳುಗಿಹೋಗುತ್ತಾರೆ. ಶೃಂಗಾರ ಕಾವ್ಯ ಸೌಂದರ್ಯದ ಸೊಗಸನ್ನು ಆಗಾಗ ರಸಿಕತೆಯಿಂದ ಬಣ್ಣಿಸುತ್ತಾರೆ.

ಇವರು ಚಿತ್ರಿಸುವ ಮೋಹಕ ಹೆಣ್ಣಿನ ಚಿತ್ರಗಳನ್ನು ಕಂಡು ಕುತೂಹಲದ ಮಾತುಗಳನ್ನಾಡುವ ಬಹುಜನಕ್ಕೆ ಹುಬ್ಳೀಕರರು ಅವಿವಾಹಿತ ರೆಂಬುದು ತಿಳಿಯದು.

ಹುಬ್ಳೀಕರರದು ಸೋಜಿಗದ ಜೀವನ. ಯಾವುದೋ ಒಂದು ಅವ್ಯಕ್ತ ಶಕ್ತಿ ಗೂಳಿಯಂತೆ ; ಬೆಳೆದ ಇವರನ್ನು ಜೀವನದುದ್ದಕ್ಕೂ ಅಲೆಮಾರಿ ಯನ್ನಾಗಿ ಮಾಡಿತು.

೧೯೪೦ ರಲ್ಲಿ ಹುಬ್ಳೀಕರರು ಹುಟ್ಟಿದ್ದು ಹುಬ್ಬಳ್ಳಿಯಲ್ಲಿ. ಇವರ ತಂದೆಯವರಾದ ಶ್ರೀ ಯಲ್ಲಪ್ಪನವರದು ವ್ಯವಸಾಯಗಾರ ಶ್ರೀಮಂತ ಮನೆತನ. ಅವರ ಮೂರು ಗಂಡುಮಕ್ಕಳಲ್ಲಿ ಹುಬ್ಳೀಕರರೇ ಕೊನೆಯವರು. ಹುಬ್ಳೀಕರರ ಬಾಲ್ಯ ಧಾರ್ಮಿಕ ವಾತಾವರಣದಲ್ಲಿ ಸವೆಯಿತು. ಸೂಕ್ಷ್ಮ ಹೃದಯಿಯಾದ ಈ ಹುಡುಗ ಎಳೆತನದಲ್ಲಿಯೇ ಮನೆಯವರ ಕಟ್ಟು ಕಟ್ಟಳೆಗೆ ಸಿಗಲಿಲ್ಲ. ಸ್ವೇಚ್ಛಾಜೀವನದಲ್ಲಿ ತುಂಬಾ ಆಸೆ ಈ ಬಾಲಕನಿಗೆ. ಕಷ್ಟ ಬವಣೆಗಳನ್ನು ಅನುಭವಿಸಿದ ಹುಬ್ಳೀಕರ್ ಅವರಿಗೆ ಸಾಮಾನ್ಯ ಜೀವನದ ಬಗ್ಗೆ ಆಳವಾದ ಆದರ ಅನುಕಂಪುಗಳು ತಾವಾಗಿಯೇ ಮೂಡಿದವು. ಎಳೆತನದ ಕಹಿ ಪ್ರಸಂಗದಿಂದ ಇಂದು ಹುಬ್ಳೀಕರ್ ಅವರು ಕಲೆಯಲ್ಲಿ ಅಪ್ರತಿಮರಾಗಿ ದ್ದಾರೆ, ಬಹು ಪ್ರತಿಭಾವಂತರೆನಿಸಿಕೊಂಡಿದ್ದಾರೆ.

ಹುಬ್ಬಳಿಯ ವಿದ್ಯಾಭ್ಯಾಸದಲ್ಲಿದ್ದಾಗ ಈ ಬಾಲಕ ಚಿತ್ರಕಲೆಯಲ್ಲಿ ಅಷ್ಟಾಗಿ ಅಭಿರುಚಿ ತೋರಲಿಲ್ಲ. ಅತಿ ದಡ್ಡ ಎಂದೇ ಖ್ಯಾತನಾಗಿದ್ದ. ಇವರ ಅಕ್ಕನ ಪತಿ ಶ್ರೀ ದೇವಪ್ಪನವರ ಜೊತೆ ಈ ಹುಡುಗ ಹೋಗದಿದ್ದಿದ್ದರೆ ಇಂದು ಶುದ್ಧ ದಡ್ಡಶಿಖಾಮಣಿಯಾಗಿಯೇ ಉಳಿಯಬೇಕಾಗಿತ್ತೋ ಏನೋ! ಈ ಬಾಲನ ಪ್ರತಿಭೆ ತಿಳಿದ ಇವರ ಭಾವ ಹುಡುಗನನ್ನು ಸಿಕಂದರಾಬಾದಿಗೆ ಕರೆತಂದು ಪ್ರೌಢಶಾಲೆಗೆ ಸೇರಿಸಿದರು. ಅಲ್ಲಿಯ ಜಹಂಗೀರ್ ಕಲಾವಸ್ತು ಸಂಗ್ರಹಾಲಯಕ್ಕೆ ಆಗಾಗ ಕದ್ದು ಹೋಗಿಬರುವುದು ಈ ತುಂಟನ ಹವ್ಯಾಸ ವಾಗಿದ್ದಿತು. ಈತನಲ್ಲಿದ್ದ ಪ್ರತಿಭೆಮಾತ್ರ ಬಹುದಿನಗಳವರೆಗೆ ಗುಪ್ತಗಾಮಿನಿ ಯಾಗಿಯೇ ಬೆಳೆದು ಬಂದಿತು.

ವಿದ್ಯಾಭ್ಯಾಸ ಅಷ್ಟಕ್ಕೆ ಮುಗಿಸಿ. ಮತ್ತೆ ಅಲ್ಲಿಂದ ಹುಬ್ಬಳ್ಳಿಗೆ ಬಂದು ಬಿಟ್ಟ ಈ ಹುಡುಗ. ಅಲ್ಲಿ ಶ್ರೀ ಬಸುರಾಜು ಸ್ಟುಡಿಯೋ ಈತನನ್ನು ಆಕರ್ಷಿ

ಸಿತು. ಈ ಹುಡುಗನ ಕಲಾಶಕ್ತಿಯನ್ನು ಗುರುತಿಸಿದ ಶ್ರೀ ಬಸುರಾಜು ಅವರು ಈತನನ್ನು ಶ್ರೀ ಮಿಣಜಿಗಿಯವರ ಕಲಾಶಾಲೆಗೆ ತಂದು ಸೇರಿಸಿಬಿಟ್ಟರು. ಶಾಲೆಯ ಫೀಜು ಕಟ್ಟಲು ಈ ಯುವಕ ಪಟ್ಟ ಪಾಡು ಯಾರಿಗೂ ತಿಳಿಯಲಿಲ್ಲ. ಮನೆಯವರು ಎಂದೋ ಕೈಬಿಟ್ಟಿದ್ದರು “ ಏನಾದರೂ ಆಗಲಿ ಹಾಳಾದವ ” ಎಂದು. ಸ್ವತಂತ್ರ ಕಲಾಪ್ರವೃತ್ತಿ ಈತನನ್ನು ಸುಮ್ಮನೆ ಕೂರಿಸಲಿಲ್ಲ. ಮೈಸೂರು ರಾಜ್ಯದ ವಿದ್ಯುತ್ ಬೋರ್ಡ್‌ನಲ್ಲಿ ವೈರ್‌ಮನ್ ಕೆಲಸಮಾಡತೊಡಗಿ ದಿನಗೂಲಿಯಮೇಲೆ ಸೇರಿಕೊಂಡ. ಹಳ್ಳಿಯಿಂದ ಹಳ್ಳಿಗೆ ವಿದ್ಯುತ್ ಕಂಬಗಳನ್ನು ಹೊತ್ತುತಂದು ನಿಲ್ಲಿಸುವ ಕಷ್ಟದ ಕೆಲಸ ಈತನಿಗಾಗಿ ಕಾದಿದ್ದಿತು. ಕೆಲವುಸಾರಿ ಹುಬ್ಬಳ್ಳಿ ಗಿರಣಿ ಮಿಲ್ಲುಗಳಲ್ಲಿ ಮೂಟೆಹೊರುವ ಅಮಾಲಿ ಕೆಲಸವನ್ನೂ ನಿರ್ವಹಿಸಿದ. ಈ ಕಷ್ಟದ ದುಡುಮೆಯಿಂದ ಬಂದ ಹಣ ಶಾಲೆಯ ಫೀ ಮತ್ತಿತರ ನಿತ್ಯ ಖರ್ಚಿಗೆ ವಿನಿಯೋಗಿಸಬೇಕಿತ್ತು.

ಏಕೋ ಕಲಾಮಂದಿರದಿಂದ ಹೊರಬಂದರು. ನೇರ ಬೊಂಬಾಯಿಗೆ ಹೋದರು. ಅಲ್ಲಿ ಎಷ್ಟು ಸುತ್ತಿದರೂ ಯಾವ ಚಾಕರಿಯೂ ಸಿಗಲಿಲ್ಲ. ಎಷ್ಟೋದಿನ ಉಪವಾಸ ಬೀಳಲೇಬೇಕಾಯಿತು. ಮನೆಯಿಂದ ಯಾವ ಪತ್ರವೂ ಬರಲಿಲ್ಲ. ಪ್ರೋತ್ಸಾಹವಂತೂ ಇರಲೇಇಲ್ಲ. “ ಕಲೆಯಂತೆ ಕಲೆ ” ಎಂದು ಇವರ ತಂದೆ ಕೋಪಗೊಂಡಿದ್ದರು. ಅಲ್ಲಿ ಜೀವನ ಕಷ್ಟವಾಗಿ ಮತ್ತೆ ಹುಬ್ಬಳಿಗೆ ಓಡಿಬಂದರು. ಮತ್ತೆ ಕಲಾಮಂದಿರಕ್ಕೆ ಸೇರಿಕೊಂಡೇ ಬೊಂಬಾಯಿ ಸರ್ಕಾರಿ ಪ್ರಥಮ ಕಲಾಪರೀಕ್ಷೆಯಲ್ಲಿ ತೇರ್ಗಡೆಯಾದೊಡನೆಯೇ ಪುನಃ ಬೊಂಬಾಯಿಗೆ ಬಂದು ನೆಲೆಗೊಳ್ಳಲು ಅಪೇಕ್ಷಿಸಿದರು. ಆಗ ಅಲ್ಲಿ ‘ ಫಿಲಂ ’ ಕೈಗಾರಿಕೆಯಲ್ಲಿ ಹೆಸರಾಗಿದ್ದ ಶ್ರೀ ಮಹೇಶ್‌ಕೌಲರ ಬಳಿ ಇವರಿಗೆ ಒಂದು ಕೆಲಸ ದೊರೆಯಿತು. ಬೊಂಬಾಯಿ ಕಲಾಪರೀಕ್ಷೆಗಳ ಪರೀಕ್ಷಕರಾಗಿ ಶ್ರೀ ಮಿಣಜಿಗಿಯವರು ಆಗ ಅಲ್ಲಿಗೆ ಹುಬ್ಬಳ್ಳಿಯಿಂದ ಬಂದಿದ್ದರು. ತನ್ನ ನೆಚ್ಚಿನ ಆಲಿಸಾರಿ ಶಿಷ್ಯನನ್ನೂ ಪತ್ತೆಹಚ್ಚಿ ಮತ್ತೆ ಆತನನ್ನು ಹುಬ್ಬಳ್ಳಿಗೆ ಕರೆತಂದರು. ಕಡೆಗೆ ೧೯೬೦ರಲ್ಲಿ ಸರ್ಕಾರಿ ಕಲಾ ಡಿಪ್ಲೊಮೋ ಗಳಿಸುವಂತಾಯಿತು. ಆ ವೇಳೆಯಲ್ಲಿ ಪ್ರಪಂಚ, ಸಂಗಮ, ವಿಶ್ವವಾಣಿ ಪತ್ರಿಕೆಗಳ ಮೂಲಕ ಇವರ ರೇಖಾಚಿತ್ರಗಳು ಆಗಾಗ ಕಾಣಿಸಿಕೊಂಡುವು. ೧೯೬೨ರಂದು ನಡೆದ ಮೈಸೂರು ರಾಜ್ಯ ಲಲಿತಕಲಾ ಅಕಾಡಮಿಯ ಪ್ರದರ್ಶನದಲ್ಲಿ

ಇವರ 'ಮ್ಯೂಜಿಕ್' ಚಿತ್ರಕ್ಕೆ ಬಹುಮಾನ ದೊರೆತು ಇವರ ಕಲಾಪ್ರತಿಭೆ ಖ್ಯಾತಿಹೊಂದಿತು.

ಬಿಜಾಪುರದಲ್ಲಿ ಒಂದು ಕಲಾಶಾಲೆಯನ್ನು ಪ್ರಾರಂಭಿಸಬು ಅಲ್ಲಿಯ ಕಲಾಸಂಸ್ಥೆಯವರು ಶ್ರೀ ಮಿಣಜಿಗಿಯವರನ್ನೂ ಒಮ್ಮೆ ಕಂಡಿದ್ದರು. ಪ್ರತಿಭಾನ್ವಿತ ಕಾಲಾಶಿಕ್ಷರಿಗಾಗಿ ಹುಡುಕುತ್ತಿದ್ದರು. ಅವರು ಹುಬ್ಳೀಕರರ ಹೆಸರನ್ನು ಸೂಚಿಸಿದರು. ಅಂದಿನಿಂದ (೧೯೬೩ರಲ್ಲಿ) ಈ ಯುವಕ ಬಿಜಾಪುರದ ಕಲಾಶಾಲೆಯಲ್ಲಿಯೂ ಪ್ರಿನ್ಸಿಪಾಲರಾಗಿ ವೃತ್ತಿ ಕೈಕೊಂಡರು. ಒಂದು ವರ್ಷದ ಅವಧಿಯಲ್ಲಿ ಮೂರು ಬಾರಿ ಕಲಾಪ್ರದರ್ಶನಗಳನ್ನು ನಡೆಸಿ ಜನರ ಕಲಾಭಿರುಚಿಯನ್ನು ಹೆಚ್ಚಿಸಿ ಆಕರ್ಷಿಸಿದರು. ಇವರ ಖ್ಯಾತಿಯನ್ನು ಗುರುತಿಸಿದ ರಾಜ್ಯಸರ್ಕಾರ ಇವರನ್ನು ಕಲಾಕೃತಿಗಳನ್ನು "ಆಯ್ಕೆಮಾಡುವ ಮತ್ತು ಕೊಂಡುಕೊಳ್ಳುವ" ಸಂಸ್ಥೆಯ ಓರ್ವ ಸದಸ್ಯರನ್ನಾಗಿ ನಿಯಮಿಸಿತು. ಚಿಕ್ಕ ಹುಡುಗನಿಗೆ ದೊಡ್ಡವರ ಜೊತೆ ಏನು ಕೆಲಸವೆಂದು ಯಾವ ಸಭೆಗೂ ಹೋಗಲೇ ಇಲ್ಲ.

ಬಿಜಾಪುರದ ವಾತಾವರಣ ಏಕೋ ಸರಿಬೀಳದೆ ಶಿಕ್ಷಣವೃತ್ತಿಗೆ ಶರಣು ಹೊಡೆದರು. ಮತ್ತೆ ಬೊಂಬಾಯಿಗೇ ಬಂದು ಸೇರಿದರು. ಒಂದು ವರ್ಷ ಕಾಮತ್ ಹಾಗೂ ಶಾಂಗ್ರಿಲಾ ಸ್ಟುಡಿಯೋಗಳಲ್ಲಿ ಸೇರಿಕೊಂಡು ಸಿನೇ ಸ್ಟಿಲ್ ಫೋಟೋಗ್ರಾಫಿ ಕೊನೆಗೆ ಫಿಲ್ಮಾಲಯ ಸ್ಟುಡಿಯೋ ಕಲಾವಿದರಾಗಿ ಕೆಲಸ ಮಾಡಿದರು. ಬೊಂಬಾಯಿಯ 'ನೂತನ ಕಲಾಮಂದಿರ'ಕ್ಕೆ ಆಗಾಗ ಹೋಗಿಬರುತ್ತಿದ್ದರು. ಅಲ್ಲಿಯ ಪ್ರಿನ್ಸಿಪಾಲರಾದ ಹಿರಿಯಕಲಾವಿದ ಕನ್ನಡಿಗ ಶ್ರೀ ದಂಡಾವತಿ ಮಠ ಅವರು ಹುಬ್ಳೀಕರರ ಕಲಾಮಾರ್ಗದಲ್ಲಿ ಒಳ್ಳೆಯ ಉಪದೇಶವನ್ನಿತ್ತರು. ನೈಜ ಕಲೆಯುಬೆಲೆಯಲ್ಲಿ ಅರಿವನ್ನುಂಟು ಮಾಡಿದರು. ಛಾಯಾಚಿತ್ರಕಲೆ ಇವರ ಜೀವನ ಮಾರ್ಗಕ್ಕೆ ಕಲಿತರೆ ಚಿತ್ರಕಲೆ ಇವರಿಗೆ ಅಭಿರುಚಿಯಾಗಿ ಮೂಡಿಬಂದಿದೆ. ಭಾರತದ ಪ್ರಸಿದ್ಧ ಚಿತ್ರಕಾರ ಅಲಮೇಲ್ಕರ್ ಅವರೂ ಇವರಿಗೆ ಆಪ್ತರಾಗಿದ್ದು ಅವರ ಕಲಾಪ್ರಭಾವನ್ನು ಇವರ ಕೆಲವು ಕುಂಚವೈಖರಿಯಲ್ಲಿ ಗುರುತಿಸಬಹುದಾಗಿದೆ. ಈ ವೇಳೆಗೆ ಅನೇಕ ಸಿನಿಮಾ ಡೈರೆಕ್ಟರ ಪರಿಚಯವಾಗಿ ಇವರ ಅನೇಕ ಚಿತ್ರಗಳನ್ನು ಸಿನಿಮಾ ಸೆಟ್‌ಗಳಲ್ಲಿ ಕಾಣಿಸಿಕೊಳ್ಳುವಂತಾಯಿತು.

ಈ ನಡುವೆ ಇವರ ಮಾತೃಶ್ರೀಯವರ ಅನಾರೋಗ್ಯನಿಮಿತ್ತ ಇವರು ಹುಬ್ಬಳ್ಳಿಗೆ ಬರಬೇಕಾಯಿತು. ತಾಯಿಯವರು ತೀರಿಕೊಂಡ ಮರುದಿನವೇ ಮೈಸೂರಿನ ಚಾಮರಾಜ ಕಲಾಶಾಲೆಗೆ ಕಲಾಶಿಕ್ಷಕರಾಗಿ ಸರ್ಕಾರದಿಂದ ಕರೆ ಬಂದಿತು. ೧೯. ೯. ೬೪ ರಂದು ಮೈಸೂರಿಗೆ ಬಂದು ಶಿಕ್ಷಕವೃತ್ತಿಗೆ ಸೇರಿಕೊಂಡ ಮೂರು ತಿಂಗಳಲ್ಲೇ ಕಲಾಭಿಮಾನಿಗಳಾದ ಪ್ರಜಾವಾಣಿಯ ಶ್ರೀ ಸೇತುರಾಂ ಮತ್ತು ಶ್ರೀ ಎಂ. ಬಿ. ಸಿಂಗ್ ಅವರು ಇವರ ಪ್ರತಿಭೆಯನ್ನು ಗುರುತಿಸಿದರು. ಅದೇ ತಾನೆ ಹೊರಡಿಸಲಿದ್ದ 'ಸುಧಾ' ವಾರಪತ್ರಿಕೆಗೆ ಇಂಥ ಕಲಾವಿದರ ಅಗತ್ಯತೆ ಇದ್ದಿತು. ಅವರ ಪ್ರೇಮದ ಒತ್ತಾಯಕ್ಕೆ ಮಣಿದು ಸರ್ಕಾರಿ ವೃತ್ತಿಯಿಂದ ಪತ್ರಿಕಾವೃತ್ತಿಗೆ ಸೇರಿಬಿಟ್ಟರು. ಕಲಾಶಿಕ್ಷಕರಾಗಿದ್ದ ಅಲ್ಪವೇಳೆಯಲ್ಲೇ ಅನೇಕ ತರುಣರಿಗೆ ಚೈತನ್ಯವನ್ನು ತುಂಬಿಬಿಟ್ಟರು.

ಬೆಂಗಳೂರಿಗೆ ಹೊರಡುವ ದಿವಸ ನಾನು ಅವರನ್ನು ಬೀಳ್ಕೊಡಲು ಅವರ ಕೊಠಡಿಗೆ ಹೋಗಿದ್ದೆ. ಅವರ ಎಲ್ಲ ಸಾಮಾನುಗಳನ್ನು ಕಟ್ಟಿದರು. ಆದರೆ ಕೋಣೆಯ ಮೂಲೆಯಲ್ಲಿ ಕಾಗದಗಳ ರಾಶಿಯನ್ನು ಅಲ್ಲೇ ಬಿಟ್ಟರು. ನೋಡಲಾಗಿ ಅವು ಕರಡುಚಿತ್ರಗಳೆಂದು ತೋರಿದರೂ ಇವರ ರೇಖಾ ವೈಖರಿ ಲೀಲಾಜಾಲವಾಗಿ ಅಲ್ಲಿ ಹರಿದ್ದಿತು. ಅವುಗಳನ್ನೆಲ್ಲಾ ಸುರುಳಿಮಾಡಿ ಸುತ್ತಿಕೊಂಡು ಅವರ ನೆನಪಿಗಾಗಿ ತಂದಿಟ್ಟುಕೊಂಡೆ.

ನಮ್ಮ ರಾಜ್ಯ ಸರ್ಕಾರದ ಲಲಿತಕಲಾ ಅಕಾಡಮಿಯ ೧೯೬೬ರ ಕಲಾಪ್ರದರ್ಶನದಲ್ಲಿ ಇವರ ಸಂಯೋಗ ಚಿತ್ರಕ್ಕೆ ಪ್ರಥಮ ಬಹುಮಾನ ದೊರೆತಿದೆ. ಇದು ಅಭಿಮಾನ ಪಡುವ ವಿಷಯ.

ಹೀಗೆ ಹುಬ್ಳೀಕರರು ತಮ್ಮ ಕಲೆಯಲ್ಲಿ ತುಂಬ ವಿಶ್ವಾಸವಿಟ್ಟು ಪ್ರಗತಿಪರರಾಗಿ ಸಾಗುತ್ತಿದ್ದಾರೆ. ಚಿತ್ರಕಲೆಯ ಎಲ್ಲ ಶೈಲಿಯಲ್ಲೂ ಪಳಗಿದ್ದಾರೆ. ನವ್ಯ ಕೃತಿರಚನೆಯಲ್ಲಿ ತಮ್ಮದೇ ಆದ ಸಿದ್ಧಿಯನ್ನು ಗಳಿಸಿದ್ದಾರೆ. ಇಂಥ ಹೆಮ್ಮೆಯ ಕಲಾವಿದರ ಕಲಾಪ್ರತಿಭೆ ತೆರೆಮರೆಯಲ್ಲಿಯೇ ಬತ್ತಿಹೋಗದಂತೆ ನಾಡಿನ ಒಳಿತಕ್ಕಾಗಿ ಬಳಸಿಕೊಳ್ಳುವ ಕಾಲ 'ಸುಧಾ' ಮೂಲಕ ಬಂದುದು ಕನ್ನಡಿಗರ ಪುಣ್ಯವೇಸರಿ.

ರುಮಾಲೆ ಚನ್ನಬಸವಯ್ಯ

೧೯೪೬ರ ಸಮಯ. ಬೆಂಗಳೂರಿನ ಸುಭಾಷ್ ನಗರದಲ್ಲಿ ಆರನೇ ಮೈಸೂರು ಕಾಂಗ್ರೆಸ್ ಮಹಾ ಅಧಿವೇಶನ ಜರುಗಿದ್ದಿತು. ನಾನು ಆಗ ಮೈಸೂರಿನ ಚಾಮರಾಜ ಕಲಾಶಾಲೆಯ ವಿದ್ಯಾರ್ಥಿ. ಈ ಅಧಿವೇಶನಕ್ಕೆ ನಾನು ಮೈಸೂರಿನಿಂದ ಸ್ವಯಂಸೇವಕನಾಗಿ ಭಾಗವಹಿಸಿದ್ದೆ. ಈ ಅಧಿವೇಶನದ ಅಂಗವಾಗಿ ಅಲ್ಲಿ ಒಂದು ಲಲಿತ ಕಲಾಪ್ರದರ್ಶನ ಜರುಗಿದ್ದಿತು. ಕನ್ನಡನಾಡಿನ ಹೆಸರಾಂತ ಕಲಾವಿದರ ಅನೇಕ ಕಲಾಕೃತಿಗಳನ್ನು ಪ್ರದರ್ಶಿಸ

ಲಾಗಿದ್ದಿತು. ಕಲಾ ವಿದ್ಯಾರ್ಥಿಯಾದ ನನ್ನನ್ನು ಅಲ್ಲಿಗೆ ಕಾವಲಿಗಾಗಿ ನಿಯಮಿಸಿದುದು ಸಹಜವೇ ಇದ್ದಿತು. ಕಲಾ ಪ್ರದರ್ಶನದ ಒಳಕೋಣೆಯಲ್ಲಿ ಓರ್ವ ವ್ಯಕ್ತಿ ಜ್ವರದ ಬಾಧೆಯಿಂದ ನರಳುತ್ತಿದ್ದರೂ ಯಾವುದೋ ಮುದ್ರಣದ ಕರುಡನ್ನು ತಿದ್ದುತ್ತಿದ್ದರು. ಅವರ ನೈ ನಡುಕ ನೋಡಲಾರದ ನನ್ನ ಬಳಿ ಇದ್ದ ಒಂದು ಕಂಬಳಿಯನ್ನು ಅವರಿಗೆ ಹೊದ್ದಿಸಿದೆ. ಆಗ ಅವರು

" ತುಂಬಾ ವಂದನೆಗಳು. ನನಗೊಂದು ಕೆಲಸ ಮಾಡಿಕೊಡುವಿರಾ? " ಎಂದರು.

" ಅಗತ್ಯವಾಗಿ. ಏನುಬೇಕು ?" ಎಂದೆ ನಾನು.

"ಈ ಪ್ರೂಫನ್ನು ಓರಿಯಂಟಲ್ ಪ್ರೆಸ್ ಮಾಲೀಕರಿಗೆ ತಲುಪಿಸಬೇಕಾಗಿದೆ. ನೀವು ಬೆಂಗಳೂರಿಗೆ ಹೊಸಬರಂತೆ ತೋರುವಿರಿ. ಈ ನಕ್ಷೆಯಂತೆ ಹೋಗಿ ಬನ್ನಿ " ಎಂದು ಆ ಪ್ರೆಸ್ ಇರುವ ಕಂಟೋನ್ಮೆಂಟ್‌ಗೆ ನನ್ನನ್ನು ಕಳುಹಿಸಿದರು.

ಆದೇ ವ್ಯಕ್ತಿ ರುಮಾಲೆ ಚನ್ನಬಸವಯ್ಯ ಎಂದು ತಿಳಿದಮೇಲೆ ಅವರ ಬಗ್ಗೆ ಮತ್ತೂ ಅಭಿಮಾನ ಮೂಡಿತು. ಅವರ ಪ್ರಕೃತಿ ಚಿತ್ರಗಳನ್ನು ೧೯೪೫ ರ ದಸರಾ ಕಲಾಪ್ರದರ್ಶನದಲ್ಲಿ ನೋಡಿದ್ದೆ. ಅವರನ್ನು ಮೊದಲ ಸಾರಿಗೆ ಕಂಡದ್ದು ಇಲ್ಲೆ. ಅದೂ ನರಳಾಟದ ಕಾರ್ಯತತ್ಪರತೆಯಲ್ಲಿ ಅವರ ಒಂದು ಪ್ರಕೃತಿ ಚಿತ್ರ 'ಪಂಪ್ ಶೆಡ್' ನನ್ನನ್ನು ಅತಿಯಾಗಿ ಸೆಳೆದಿದ್ದಿತು. ಅಲ್ಲಿ ರುಮಾಲೆಯವರ ಕುಂಚದ ಕೌಶಲವನ್ನು ವರ್ಣಗಳ ಸ್ವಚ್ಛತೆಯನ್ನು ಕಂಡು ಮನಸಾರ ಮೆಚ್ಚಿಕೊಂಡಿದ್ದೆ.

ಶ್ರೀ ರುಮಾಲೆಯವರ ಜೀವನ ತುಂಬ ಕುತೂಹಲಕಾರಿ. ಅಂತೆಯೇ ಸಾಹಸಮಯ. ಶ್ರೀಯುತರು ದಿನಾಂಕ ೬-೯-೧೯೧೦ ರಲ್ಲಿ ದೊಡ್ಡ ಬಳ್ಳಾಪುರದಲ್ಲಿ ಜನಿಸಿದರು. ಬಾಲ್ಯದಿಂದಲೂ ಚಿತ್ರಕಲಾಭಿರುಚಿ ಇವರಿಗಿದ್ದಿತು. ೧೯೩೪ ರಿಂದ ೩೬ ರ ವರೆಗೆ ಇವರು ಮೈಸೂರಿನ ಚಾಮರಾಜ ಕಲಾ ಶಾಲೆಯಲ್ಲಿ ಕಲಾಭ್ಯಾಸ ನಡೆಸಿದರು. ಅಲ್ಲಿಂದಲೇ ಅವರದೇ ಆದ ಒಂದು ನೂತನ ಮಾರ್ಗದಲ್ಲಿ ತೈಲವರ್ಣದ ಚಿತ್ರಗಳನ್ನು ಬಿಡಿಸುತ್ತಾ ಬಂದರು. ೧೯೩೪ರಲ್ಲಿ ಇವರ 'Re - collections' ಜಲವರ್ಣದ ಚಿತ್ರಕ್ಕೆ ಕಲ್ಕತ್ತ ಕಲಾ ಪ್ರದರ್ಶನದಲ್ಲಿ ಬಹುಮಾನ ಬಂದಿತು. ೧೯೩೬ ರಿಂದ ೧೯೪೦ ರ ತನಕ

ಕಲಾಭ್ಯಾಸದ ಜೊತೆಗೆ ಮೈಸೂರು ದೇಶದ ಸ್ವಾತಂತ್ರ್ಯದ ಚಳವಳಿಯಲ್ಲಿ ಭಾಗವಹಿಸಿದರು. ಇದರಿಂದಾಗಿ ೧೯೪೦ ರಲ್ಲಿ ಇವರು ಒಂದು ವರ್ಷ ಸೆರೆಮನೆ ಸೇರಬೇಕಾಯಿತು. ಅನಂತರ ೧೯೪೦ ರಿಂದ ೧೯೪೬ ರ ವರೆಗೆ ನೇರ ಶ್ರೀ ಶ್ರೀ ತಪಸ್ವಿಜೀ ಅವರ ಸೇವೆಯಲ್ಲಿ ತೊಡಗಿದರು. ಅವರ 'ಪಂಪ್‌ಶೆಡ್' ಜಲವರ್ಣ ಚಿತ್ರ ಆಗ ಮದರಾಸು ಮತ್ತು ಕಲ್ಕತ್ತ ಕಲಾ ಪ್ರದರ್ಶನಗಳಲ್ಲಿ ಬಹುಮಾನಗಳಿಸಿ ಇವರಿಗೆ ಹೆಚ್ಚಿನ ಸ್ಫೂರ್ತಿಯನ್ನು ತಂದಿತು.

೧೯೪೬ ರಲ್ಲಿ ಇವರಿಂದಾಗಿ ಸುಭಾಷ್ ನಗರದಲ್ಲಿ ನಡೆದ ೬ನೇ ಮೈಸೂರು ಕಾಂಗ್ರೆಸ್ ಅಧಿವೇಶನದ ಅಂಗವಾಗಿ ಕಲಾಪ್ರದರ್ಶನ ಜರುಗುವಂತಾಯಿತು. ೧೯೪೭ ರಿಂದ ೧೯೫೫ ರ ಅವಧಿಯು ಇವರದು ತುಂಬಾ ಚಟುವಟಿಕೆಯ ಜೀವನವಾಗಿದ್ದಿತು.

೧೯೩೦ ರಲ್ಲಿ ಸತ್ಯಾಗ್ರಹ ಚಳವಳಿಯನ್ನು ಗಾಂಧೀಜೀ ಆರಂಭಿಸಿದರು. ಕೆ. ಪಿ. ಸಿ. ಸಿ. ಪ್ರಾಣದಾನ ಮಾಡುವ ಸಹಸ್ರಮಂದಿ ಸ್ವಯಂಸೇವಕರು ಬೇಕೆಂದು ಪ್ರಮಾಣ ಪತ್ರಕ್ಕೆ ಸಹಿ ಹಾಕಲು ಸೂಚಿಸಿ ಕಳುಹಿದರು. ಆಗ ಇವರ ಅಣ್ಣ ದಿ|| ಡಿ. ಆರ್. ಚೆನ್ನರುದ್ರಯ್ಯನವರು "ನೀನು ಕಲೆಯು ಮೂಲಕವೂ ದೇಶಸೇವೆ ಮಾಡಬಹುದಾಗದೆ" ಎಂದು ಇವರ ಮನೋಪ್ರವೃತ್ತಿಗೆ ಬೆಂಬಲ ನೀಡಿದರು. ದೇಶದ ಸ್ವಾತಂತ್ರ್ಯದ ಕರೆ ಬಂದಾಗ ಇವರ ಕಲಾಭ್ಯಾಸ ತೇಜಸ್ಸಿನಿಂದ ಕೂಡಬಲ್ಲದೆಂದು ಅವರ ಅಣ್ಣನವರು ಮೌನದಿಂದಲೇ ತಮ್ಮನನ್ನು ಆಶೀರ್ವದಿಸಿದರು. ವಾಸ್ತವವಾಗಿ ಹೇಳುವುದಾದರೆ ಶ್ರೀ ಚನ್ನರುದ್ರಯ್ಯನವರೇ ಇವರು ಚಿತ್ರಕಲಾವಿದನಾಗಲು ಕಾರಣ ಕರ್ತರಾಗಿದ್ದವರು.

ದೇಶದ ಕರೆಯ ಪ್ರಾಣಸಮರ್ಪಣಾ ಪ್ರಣಾಳಿಕೆಗೆ ಅಹಿಂಸಾ ರೀತಿಯ ಹೋರಾಟಕ್ಕೆ ಸಹಿಹಾಕಿದರು ರುಮಾಲೆಯವರು. ಹೋರಾಟ ಬಂದಾಗಲೆಲ್ಲಾ ಭಾಗವಹಿಸಿದರು. ಸ್ವಾತಂತ್ರ ಬಂದ ನಂತರವೂ ಆರ್. ಎಸ್. ಎಸ್ ಕೋಟಳೆಯಿಂದ ಭಾವಿ ಜನಾಂಗ ದೂರವಾಗಬೇಕೆಂದು ಇವರು ನಂಬಿದ್ದರು. ಇದಕ್ಕಾಗಿ ೧೯೪೭ ರಿಂದ ೧೯೬೧ ರ ವರೆವಿಗೂ ಚಿತ್ರಕಲೆಯನ್ನು ವ್ಯವಹಾರಿಕವಾಗಿ ಬಿಡಬೇಕಾಯಿತು. ಕಾಂಗ್ರೆಸ್ ಸೇವಾದಳದ ನಂತರ ಭಾರತ ಸೇವಾದಳ ಅನಂತರ ತಾಯಿನಾಡು ಪತ್ರಿಕೆಯ ಸಂಪಾದಕರಾಗಿ

ಇದಾದನಂತರ ಎರಡು ವರ್ಷ ಶ್ರೀ. ಶ್ರೀ. ಶಿವಬಾಲ ಯೋಗಿಗಳ ನಿಕಟ ಸೇವೆಯನ್ನು ಮಾಡಿ ಈಗ ಸಂಪೂರ್ಣ ಕಲಾಭ್ಯಾಸದಲ್ಲಿ ತೊಡಗಿದ್ದಾರೆ.

ರುಮಾಲೆಯವರ ಪ್ರತಿಭೆ ಕಲಾರಂಗದಲ್ಲೂ ಹೆಚ್ಚು ವ್ಯಕ್ತವಾಗಿದೆ. ಇವರು ಕನ್ನಡನಾಡಿನ ಪ್ರಕೃತಿ ಚಿತ್ರಕಾರರಲ್ಲಿ ತುಂಬ ಖ್ಯಾತರಾಗಿದ್ದಾರೆ. ಇವರ ಚಿತ್ರಗಳ ಪ್ರದರ್ಶನ ಅನೇಕ ಬಾರಿ ಬೆಂಗಳೂರಿನಲ್ಲಿ ಜರುಗಿದೆ. ಒಮ್ಮೆ ಪ್ರದರ್ಶಿತ ಚಿತ್ರಗಳಲ್ಲಿ ಬಗೆಬಗೆಯ ಬಣ್ಣಗಳ ಮೆರವಣಿಗೆಯನ್ನು ಬೀರುವ ಪುಷ್ಪ ಪರಿವೇಶವನ್ನು ವಿಶೇಷವಾಗಿ ಗಮನಿಸಬಹುದಾಗಿತ್ತು.

ಹೊರಗಿನ ಅಪೂರ್ವ ದೃಶ್ಯಗಳನ್ನು ಹೋಗಿ ಚಿತ್ರಿಸಿಕೊಂಡು ಬರುವ ಸಾಹಸ ಪ್ರಿಯತೆ ಇವರಲ್ಲಿ ಅಷ್ಟಾಗಿ ಕಂಡುಬರದಿದ್ದರೂ ಬೆಂಗಳೂರಿನ ಒಳ ಹೊರಗಿನ ದೃಶ್ಯಗಳನ್ನು ಅಪೂರ್ವವೆಂಬಂತೆ ಚಿತ್ರಿಸುವುದು ಒಂದು ವಿಶೇಷ ವೆನ್ನಬಹುದು. ಅವರ ಕೃತಿಗಳಲ್ಲಿ ವಿಧವಿಧವಾದ ಗಿಡ, ಬಳ್ಳಿ, ಕೊಂಬೆ, ರೆಂಬೆ, ಎಲೆ, ಹೂಗಳ ತೀಕ್ಷ್ಣ ವರ್ಣಗಳ ವೈಖರಿಯನ್ನು ನಾವು ಈಕ್ಷಿಸಬಹುದು. ಅವುಗಳಲ್ಲಿ ಸೃಷ್ಟಿಯ ಸೊಬಗು ಸೌಂದರ್ಯ ಸಾರವತ್ತಾಗಿ ರಚಿತವಾಗಿದೆ. ನಿಸರ್ಗ ಸೌಂದರ್ಯವನ್ನು ಒಂದೆಡೆ ಸೆರೆಹಿಡಿಯುವಲ್ಲಿ ಇವರ ಕುಂಚ ಸಾರ್ಥಕವಾಗಿದೆ. ತಾವು ಕಂಡ ದೃಶ್ಯಗಳನ್ನು ಎಥಾವತ್ತತೆಗೆ ಮಾರು ಹೋಗದೆ ತಮ್ಮ ಕಲ್ಪನಾ ಚಾತುರ್ಯದಿಂದ ವರ್ಣಗಳ ಮೋಡಿಯಿಂದ ಚಿತ್ರಗಳನ್ನು ಬಿಡಿಸಿದ್ದಾರೆ. ಇವರ ಕೃತಿಗಳಲ್ಲಿ ಸಂಯೋಗ, ಸಂವಿಧಾನ, ಸಮರಸತೆಗಳ ಜೊತೆಗೆ ವಿನೂತನ ರೇಖೆ, ವರ್ಣ, ವಾತಾವರಣಗಳನ್ನು ತರುವ ಜಾಣ್ಮೆ ಇವರದು. ಇತರರ ಕೃತಿಗಳೊಡನೆ ಹೋಲಿಸುವಾಗ ತಮ್ಮದೇ ಆದ ವಿಭಿನ್ನತೆಯನ್ನು ಕಾಪಾಡಿಕೊಳ್ಳುವ ಒಂದು ವೈಶಿಷ್ಟ್ಯ ಇವರ ಕೃತಿಗಳದು.

ಶ್ರೀ ರುಮಾಲೆಯವರು ಬಳಸುವ ಜಲವರ್ಣಗಳೆಲ್ಲಾ ಶುದ್ಧ ವಿದೇಶೀಯವು. ಶುಭ್ರವಾದ ಮತ್ತು ತೆಳುವಾದ ಬಣ್ಣಗಳನ್ನು ಲೇಪಿಸುತ್ತಾರೆ. ಆದಷ್ಟು ಕಪ್ಪಾದ ಪ್ರದೇಶಗಳಿಗೆ ದಟ್ಟವಾದ ವರ್ಣಗಳನ್ನೇ ಬಳಸಿ ಬಿಳಿಯ ಪ್ರದೇಶಗಳನ್ನು ತೆಳುವಾದ ವರ್ಣಸಂಯೋಜನೆಗಾಗಿ ಉಳಿಸಿಕೊಳ್ಳುತ್ತಾರೆ. ಇದರಿಂದ ಚಿತ್ರಗಳಲ್ಲಿ ಹೊಳಪು ಎದ್ದು ಕಾಣುತ್ತದೆ. ಬಿಳಿ ಭಾಗಗಳನ್ನು ಹಾಗೇಯೇ ಉಳಿಸಿಕೊಳ್ಳುವುದರಿಂದ ಬೆಳಕಿನ ಅನುಭವ ಉಂಟಾಗುತ್ತದೆ.

ಕುಂಚ ಸ್ಪರ್ಶದಲ್ಲಿ ಹಗುರವಾದ ಕೈಚಳಕ ಕಂಡರೂ ಮೂಲವಸ್ತುವಿಗೆ ಧಕ್ಕೆ ಬರದಂತೆ ಚಿತ್ರರಚನೆ ಮಾಡಬಲ್ಲರು. ಈ ಎಲ್ಲಾ ಕಲಾತಂತ್ರಗಳನ್ನು ಒಳಗೊಂಡ ೧೯ ನೇ ಶತಮಾನದ ಇಂಗ್ಲೇಂಡಿನ ಕಲಾವಿದ ಪಿ. ಹೆಚ್. ಜೋವೆಟನ ಪ್ರಭಾವ ಇವರ ಕೃತಿಗಳಲ್ಲಿ ಸುಸ್ಪಷ್ಟ.

ರುಮಾಲೆಯವರು ತಮ್ಮ ಕಲೆಯಲ್ಲಿ ಸೂಕ್ಷ್ಮ ವಿವರಗಳಿಗೆ ಮನಸ್ಸು ಕೊಡದೆ ವಸ್ತುವಿನ ಅಥವಾ ದೃಶ್ಯದ ಸಮಗ್ರ ಪರಿಣಾಮದ ಕಡೆಗೇ ಗಮನ ವಿಟ್ಟು ಭಾವೋತ್ಪಾದಕ ಕಲೆಯನ್ನು ಅಳವಡಿಸಿ ಕೊಂಡಿದ್ದಾರೆ. ಇವರ ಚಿತ್ರಗಳಲ್ಲಿ ಬಳಸಿರುವುದು ಕೇವಲ ಜಲವರ್ಣವೇ ಆದರೂ ತೈಲ ವರ್ಣಗಳ ವೈಖರಿ ಕಂಡು ಬರುತ್ತದೆ. ಆದರೆ ಅನೇಕ ಚಿತ್ರಗಳಲ್ಲಿ ನೆಳಲು ಬೆಳಕುಗಳ ವೈವಿಧ್ಯ ಎದ್ದು ತೋರುವುದಿಲ್ಲ. ಎಲ್ಲ ಭಾಗಗಳಲ್ಲೂ ಏಕ ಮುಖತೆಯೇ ಕಂಡು ಬರುತ್ತದೆ.

ಈಚೆಗೆ ಕೊಡಗು, ಶರಾವತಿ, ಜೋಗ್ ಕಡೆಗಳಿಗೆ ಹೋಗಿ ಚಿತ್ರ ಗಳನ್ನು ರಚಿಸಿಕೊಂಡು ಬಂದಿದ್ದಾರೆ. ೧೯೫೫ ರ ಜನವರಿ ೨೪ ರಂದು ಇವರು ರಚಿಸಿದ ಜೋಗ ಜಲಪಾತದ ಜಲವರ್ಣದ ಸುಂದರ ನಿಸರ್ಗ ಚಿತ್ರ ವನ್ನು ಭಾರತದ ಪ್ರಧಾನಿ ದಿ॥ ಶಾಸ್ತ್ರಿಯವರು ಅಮೇರಿಕದ ರಾಯಭಾರಿ ಗಳಾದ ಚೆಸ್ಟರ್ ಬೌಲ್ಸ್ ಅವರಿಗೆ ಕಾಣಿಕೆಯಾಗಿ ಅರ್ಪಿಸಿದ್ದರು. ಇವರ ಕೆಲವು ಚಿತ್ರಗಳನ್ನು ಮೆಚ್ಚಿಕೊಂಡವರಲ್ಲಿ ಖ್ಯಾತ ಕಲಾವಿದ ಡಾ॥ ಎಸ್. ರೋರಿಕ್ ಹಾಗೂ ಮದರಾಸಿನ ಕಲಾಶಾಲೆಯ ಪ್ರಿನ್ಸಿಪಾಲ್ ಶ್ರೀ ಕೆ. ಸಿ. ಎಸ್. ಫಣಿಕರ್ ಅವರು. ಶ್ರೀ ರುಮಾಲೆಯವರ ೧೨ ಜಲವರ್ಣದ ಚಿತ್ರಗಳಿಗೆ ನಮ್ಮ ರಾಜ್ಯಸರ್ಕಾರ ಹತ್ತು ಸಾವಿರರೂಪಾಯಿ ಕೊಟ್ಟು ಪ್ರೋತ್ಸಾಹಿಸಿತು. ಈ ಕೃತಿಗಳನ್ನು ಬೆಂಗಳೂರಿನ ಮ್ಯೂಜಿಯಂ ನಲ್ಲಿ ಪ್ರದರ್ಶಿಸಲಾಗಿದೆ.

ಶ್ರೀ ರುಮಾಲೆಯವರು ಕಲಾವಿದ ಶ್ರೀ. ಎಂ.ವೀರಪ್ಪನವರ ಭಾವ ಮೈದುನರೆಂದು ಅನೇಕರಿಗೆ ತಿಳಿಯದು. ಇವರಿಂದ ಕನ್ನಡ ನಾಡಿನ ಕಲಾ ಕೀರ್ತಿ ಹೆಚ್ಚಲಿ.

ಎಂ. ಎ. ಅಜೀಜ್

ಸುಮಾರು ನಲವತ್ತು, ಐವತ್ತು ವರ್ಷಗಳ ಹಿಂದೆ ಮೈಸೂರಿನ ಕಲಾ ಕೀರ್ತಿಯನ್ನು ಕಾಬೂಲಿನವರೆಗೂ ಬೆಳಗಿದ ದಿವಂಗತ ಜನಾಬ್ ಎಂ.ಎ. ಅಜೀಜ್ ಅವರನ್ನು ಕನ್ನಡ ಜನತೆ ಮರೆಯುವಂತಿಲ್ಲ. ಅಜೀಜ್ ಅವರ ಬಗ್ಗೆ ಇಂದಿನ ನಮ್ಮ ಹಿರಿಯ ಕಲಾವಿದರಿಗೆ ತುಂಬ ಗೌರವವಿದೆ. ಕಾರಣ ಇಷ್ಟೇ. ಅವರು ಜಲವರ್ಣ ಚಿತ್ರ ರಚನೆಯಲ್ಲಿ ತುಂಬ ಹೆಸರುಗಳಿಸಿದಂತೆಯೇ ತೈಲವರ್ಣದಲ್ಲೂ ಅವರ ಕುಂಚ ಸಿದ್ಧಿ ಪಡೆದಿದ್ದಿತು.

ಮೈಸೂರಿನ ಚಿತ್ರ-ಶಿಲ್ಪ ಅಕಾಡಮಿಯ ಕಲಾಗೋಷ್ಠಿಯವರಾದ ನಾವು ೧೯೭೦ ರ ಆಗಸ್ಟ್ ಕೊನೆಯವಾರ ರಮಾವಿಲಾಸ ರಸ್ತೆಯಲ್ಲಿರುವ ಗಾಂಧಿಭವನದಲ್ಲಿ ದಿ|| ಅಜೀಜರ ಕೃತಿಗಳನ್ನು ಪ್ರದರ್ಶಿಸಿದ್ದೆವು. ಆ ಕಲಾವಿದರ ಸುಮಾರು ಇಪ್ಪತ್ತೈದಕ್ಕೂ ಮೇಲ್ಪಟ್ಟು ಉತ್ತಮ ಕಲಾಕೃತಿಗಳನ್ನು ತಮ್ಮಲ್ಲಿ ಸಂಗ್ರಹಿಸಿ ಇಟ್ಟುಕೊಂಡು ಪ್ರದರ್ಶನಕ್ಕೆ ನೀಡಿದವರು ಮೈಸೂರಿನ ಕಲಾಭಿಮಾನಿ ಜನಾಬ್ ಜಿ. ಎಂ. ಮೇಕ್ರಿಯವರು. ಕನ್ನಡ ನಾಡಿನ ಸುಪ್ರಸಿದ್ಧ ಕಲಾವಿದನೊಬ್ಬನ ಇಷ್ಟೊಂದು ವರ್ಣಚಿತ್ರಗಳನ್ನು ಸಂಗ್ರಹಿಸಿ ಆತನ ಕಲಾಸಾಧನೆಗೆ ಒಂದು ಶಾಶ್ವತವಾದ ಕೀರ್ತಿಯನ್ನು ಗಳಿಸಿಕೊಡುವ ಮಂದಿ ನಮ್ಮಲ್ಲಿ ಎಷ್ಟು ಮಂದಿ ?

ದಿವಂಗತ ಅಜೀಜ್‌ರವರು ಮೈಸೂರು ಅರಮನೆಯ ಅಂಗ ರಕ್ಷಕದಳದ ಅಧಿಕಾರಿಗಳಾಗಿದ್ದ ಮಹಮದ್ ಮೂಸಾರವರ ಪುತ್ರರು. ಕಲಾರಾಧನೆಯಲ್ಲಿ ಯಶಸ್ವಿಯಾದ ಜನಾಬರು ಈಗಿನ ಎಷ್ಟೋ ಪ್ರಖ್ಯಾತ ಕಲಾವಿದರು ಕಲಾಭ್ಯಾಸಕ್ಕೆ ಆರಂಭಿಸಿದ್ದ ದಿನಗಳಲ್ಲಿಯೇ, ಬೊಂಬಾಯಿ, ಮದರಾಸು ಮುಂತಾದ ಕಡೆಯ ಕಲಾಶಾಲೆಗಳಲ್ಲಿ ಕಲಾವ್ಯಾಸಂಗ ಮುಗಿಸಿ ಅರಮನೆಯ ಕಲಾವಿದರಾಗಿ ಆರಿಸಲ್ಪಟ್ಟವರು. ಆದರೆ, ಅರಮನೆಯ ಕೆಲಸದ ಪಂಜರದ ಪಕ್ಷಿಯಾಗಬಯಸದೆ, ಸ್ವಾತಂತ್ರ್ಯ ಪ್ರವೃತ್ತಿಯ ಅವರು ಕಾಬೂಲಿಗೆ ಹೊರಟುಹೋದರು. ಮತ್ತೆ ಬರಲಿಲ್ಲ. ಅಲ್ಲಿಯೇ ಕಲಾಶಾಲೆಯನ್ನು ತೆರೆದರು. ಜೀವನದ ಕೊನೆಯವರೆಗೂ ಕಲಾಸೇವೆಯನ್ನು ಮಾಡಿ ಒಮ್ಮೆ ತಮ್ಮ ಕನ್ನಡ ನಾಡಿಗೆ ಮರಳಿ, ಪತ್ನಿಪುತ್ರ (ಅಬ್ದುಲ್ ಅಜೀಜರು ಚಿತ್ರಕಲಾವಿದರಾಗಿದ್ದಾರೆ) ರನ್ನು ನೋಡುವ ಬಯಕೆಯೂ ಈಡೇರದೆ ಗತಿಸಿದವರು. ಅಲ್ಲಿಗೆ ಹೋಗುವ ಮುನ್ನವೇ ಅವರು ರಚಿಸಿದ ಅವರ ನೂರಾರು ಕೃತಿಗಳು ಇಂದು ಮೈಸೂರು ಜಗನ್‌ಮೋಹನ್ ಚಿತ್ರಶಾಲೆ, ಅರಮನೆ, ಲಲಿತಾದ್ರಿ ಅಲ್ಲದೆ ಅನೇಕಾನೇಕ ಖಾಸಗಿಯವರ ಮನೆಯಲ್ಲಿ ಇದ್ದು, ಅವರ ಕಲಾ ಪ್ರತಿಭೆಯನ್ನು ಇಂದಿಗೂ ಸಾರುತ್ತಿವೆ.

ಅವರ ಕಲಾಕೃತಿಗಳಲ್ಲಿ ಜಲವರ್ಣದ ಅತ್ಯುತ್ತಮ ಪ್ರೌಢಿಮೆಯನ್ನು ಕಂಡು ಕಲಾಭಿಮಾನಿಗಳು, ಕಲಾವಿದರೂ ಬೆರಗಾಗುವುದು ಸಹಜವಿದೆ. ತೈಲವರ್ಣವೋ ಜಲವರ್ಣವೋ ಎಂದು ಗುರುತಿಸಲಾಗದಷ್ಟು ಕೌಶಲ್ಯ

ಅವರ ವರ್ಣಬಳಕೆಯಲ್ಲಿ ವ್ಯಕ್ತವಾಗುತ್ತದೆ. ಮೈಸೂರಿನ ಸಂಪ್ರದಾಯಕ್ಕೆ ಸಂಬಂಧಪಟ್ಟ ಅನೇಕ ವ್ಯಕ್ತಿಗಳನ್ನು ಅವರವರ ವೇಷಭೂಷಣಗಳನ್ನು, ಅವರವರ ಸ್ವಭಾವ ಸಹಜತೆಗಳನ್ನು ತುಂಬ ರಮ್ಯವಾಗಿ ಬಿಡಿಸಿದ್ದಾರೆ. ಶರೀರ ಅಂಗಾಂಗಗಳ ಏರುತಗ್ಗುಗಳಲ್ಲಿ ಒಂದು ವಿಶೇಷವಾದ ಹೊಳಪನ್ನು ಸಹಜ ವರ್ಣಗಳಲ್ಲಿ ತರುವ ಕೌಶಲ ಇವರೊಬ್ಬರದೇ. ಇದರಿಂದ ಚಿತ್ರಗಳು ಸ್ವಾಭಾವಿಕವಾಗಿ, ಸಜೀವವಾಗಿ ನಮ್ಮೆದುರು ನಿಂತಂತೆ ತೋರುತ್ತವೆ. ಇವರ ಕೃತಿಗಳಲ್ಲಿ ' ಪೂಜಾವನಿತೆ', ಮಲೆನಾಡಿನ ಘಟ್ಟ ಪ್ರದೇಶವೊಂದನ್ನು ಚಿತ್ರಿಸಿರುವ ಜಲವರ್ಣ ಚಿತ್ರಗಳು ; ತೈಲವರ್ಣದ ಕಾರವಾನ್, ಚಿರತೆ, ಶ್ರೀಮಂತ ಯುವತಿ ಮುಂತಾದುವು ಆಕರ್ಷಣೀಯವಾಗಿವೆ. ಇವೆಲ್ಲವನ್ನೂ ಕಲಾಭಿಮಾನಿ ಜನಾಬ್ ಮೇಕ್ರಿಯವರ ಮನೆಯ ಸಭಾಂಗಣದಲ್ಲಿ ಓರಣ ವಾಗಿ ತೂಗುಹಾಕಲಾಗಿವೆ.

ದಿ|| ಅಜೀಜ್ ಅವರ ಪುತ್ರ ಜನಾಬ್ ಅಬ್ದುಲ್ ಅಜೀಜ್ ಅವರೂ ಚಿತ್ರಕಾರರೇ. ತಂದೆಯಂತೆ ಪುತ್ರ ಅಬ್ದುಲ್ ಅಜೀಜರೂ ಸೊಗಸಾಗಿ ಜಲವರ್ಣದಲ್ಲಿ ಚಿತ್ರಗಳನ್ನು ಚಿತ್ರಿಸುತ್ತಾರೆ. ದಿ|| ಅಜೀಜರ ವರ್ಣ ಸಂಯೋಜನಾ ತಂತ್ರದ ಪ್ರಭಾವವನ್ನು ನಮ್ಮ ಕಲಾವಿದ ಜನಾಬ್ ಸೂಫಿ ಯವರ ಚಿತ್ರಗಳಲ್ಲೂ ನಾವು ಗುರುತಿಸ ಬಹುದಾಗಿದೆ. ಇವರ ಚಿತ್ರಗಳಲ್ಲೆಲ್ಲಾ ನಾವು ಕಾಣುವ ಮತ್ತೊಂದು ವೈವಿಧ್ಯತೆ ಎಂದರೆ ಮಹಮದೀಯ ಸಂಪ್ರ ದಾಯದ ಸೊಬಗು.

ಕನ್ನಡನಾಡಿನ ಈ ಅಪೂರ್ವ ಕಲಾವಿದ ಬಹು ಸೂಕ್ಷ್ಮಗ್ರಾಹಿಗಳಾಗಿ ದ್ದರು. ಅಷ್ಟೇ ಕಲಾಸಾಮರ್ಥ್ಯವನ್ನೂ ಪಡೆದಿದ್ದರು. ಇವರ ಆ ಹಿರಿಯ ವ್ಯಕ್ತಿತ್ವ ಯಾರೂ ಗಳಿಸಲಾರದ ಸ್ವತ್ತಾಗಿದೆ..



ಎಸ್. ಎಸ್. ಕುಕ್ಕೆ

೧೯೬೫ ರ ಜೂನ್ ೧೩ ಮರೆಯಲಾಗದ ದಿನ. ಅಂದು ಒಟ ಸಾವಿತ್ರಿಯ ಹುಣ್ಣಿಮೆ. ಆ ಸಂಜೆ ವರಕವಿ ಶ್ರೀ ದ. ರಾ. ಬೇಂದ್ರೆಯವರನ್ನು ಕಂಡ ಪುಣ್ಯದಿನ. ಕಾರವಾರದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಗೋವಾ, ಕಾರವಾರಗಳ ಪ್ರಕೃತಿ ನೆಲೆಗಳಲ್ಲಿ ಸುತ್ತಾಡಿ ಹಲವಾರು ಚಾರಿತ್ರಿಕ ನಿಸರ್ಗ ಚಿತ್ರಗಳನ್ನು ರಚಿಸಿಕೊಂಡೆ. ದಾರವಾಡದ ನೆನಪಾಯಿತು. ಅಂತೆಯೇ ಶ್ರೀ ಬೇಂದ್ರೆಯವರನ್ನು ಕಾಣುವ ಆಸೆಯಿಂದ

ಧಾರವಾಡಕ್ಕೆ ಹೋಗಿ ಅಲ್ಲಿ ಅವರಿಗೆ ನನ್ನ ಚಿತ್ರಗಳನ್ನೂ ತೋರಿಸಿದೆ. ಅವರಿಗೆ ಪ್ರೀತಿಯಾದ ಒಂದು ಚಿತ್ರವನ್ನು (ಶ್ರೀ ವಾದಿರಾಜರ ವೃಂದಾವನ) ಅವರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದೆ. ಅವರ ಕೆಲವು ಕವನ ಸಂಕಲನಗಳನ್ನೂ. ನಿತ್ಯ ಓದಲೆಂದು ಉಪನಿಷತ್ ಕೃತಿಯೊಂದನ್ನು ನನಗೆ ಕೊಟ್ಟರು.

ಈ ಸಂದರ್ಭದಲ್ಲಿ ಶ್ರೀ ಬೇಂದ್ರೆಯವರಿಗೆ ಮಾತಿನ ನಡುವೆ ಯಾರದೋ ನೆನಪು ಬಂದಿತು.

"ನಿಮಗೆ ಇವರು ಗೊತ್ತೇ ? ಶಿವಮೊಗ್ಗೆಯ ಕಲಾವಿದರು!" ಎಂದರು ಶ್ರೀ ಬೇಂದ್ರೆ.

" ಶಿವಮೊಗ್ಗ ಎಂದಾಕ್ಷಣ ಶ್ರೀ ಕುಕ್ಕೆಯವರೇ " ಎಂದೆ.

" ಹೌದು ನೋಡಿ ಅವರೇ. ನನ್ನ ಪರಮ ಮಿತ್ರ ದಿ|| ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳ ಮಗ. ಒಳ್ಳೆಯ ಕಲಾವಂತ. ಪೌರಾಣಿಕ ಚಿತ್ರ ಬರೆಯುವುದರಲ್ಲಿ ಎತ್ತಿದ ಕೈ ಆತನದು. ಬಹು ಹಿಂದೆ ನೋಡಿದ್ದೆ. ಅದು ಹಳೆಯ ಕತೆಯಾಗಿ ಹೋಯ್ತು. ಆತ ಈಗ ಎಲ್ಲಿದ್ದಾನೆ? ಏನುಮಾಡುತ್ತಿದ್ದಾನೆ?" ಎಂದು ಕುತೂಹಲದಿಂದ ನೆನಪುಮಾಡಿಕೊಂಡು ವಿಚಾರಿಸಿದ್ದರು.

ನಿಜ. ಶ್ರೀ ಬೇಂದ್ರೆಯವರು ನುಡಿದಂತೆ ಶ್ರೀ ಕುಕ್ಕೆಯವರು ಪೌರಾಣಿಕ ಚಿತ್ರ ರಚನೆಯಲ್ಲಿ ನಿಸ್ಸೀಮರಾಗಿದ್ದಾರೆ. ಅಂತೆಯೇ ರೂಪಚಿತ್ರದಲ್ಲೂ ಅವರ ಕೈ ಪಳಗಿದೆ. ೧೯೪೬ ರ ದಸರಾ ಕಲಾಪ್ರದರ್ಶನವಲ್ಲಿ ಇವರದೊಂದು ತೈಲವರ್ಣದ ರೂಪಚಿತ್ರ 'ಮಿಡ್‌ನೈಟ್ ಬರ್ನಿಂಗ್" ಎಂಬುದು ಬಹುಜನರನ್ನು ಆಕರ್ಷಿಸಿದ್ದಿತು. ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿ ರಾತ್ರಿ ನಿದ್ರೆಗೆಟ್ಟು ವ್ಯಾಸಂಗಮಾಡುವ ಈ ಸನ್ನಿವೇಶವಲ್ಲಿ ಕಲಾವಿದ ಕುಕ್ಕೆಯವರು ಬಹು ಜಾಣ್ಮೆಯಿಂದ ವರ್ಣಗಳನ್ನು ಬಳಸಿದ್ದರು. ನೆಳಲು ಬೆಳಕುಗಳ ತಾರತಮ್ಯ ವಿದ್ಯಾರ್ಥಿಯ ಮನೋಧರ್ಮ ಎಲ್ಲವೂ ಸಹಜ ಸುಂದರವಾಗಿ ಮೂಡಿಬಂದಿದ್ದವು. ಈ ಕೃತಿಗೆ ಆ ವರ್ಷ ಅತ್ಯುತ್ತಮ ಬಹುಮಾನವೂ ದೊರಕಿದ್ದಿತು.

ಪುರಾಣ ಪುಣ್ಯಕಥೆಗಳನ್ನು ಬಳಸಿಕೊಂಡು ಚಿತ್ರರಚಿಸುವಲ್ಲಿ ಇವರು ಹೆಚ್ಚಿನ ಪರಿಶ್ರಮ ಹೊಂದಿದ್ದಾರೆ. ಇವರು ಅಪಾರ ಶ್ರದ್ಧೆ ತಾಳ್ಮೆ ಭಕ್ತಿ

ಯಿಂದ ರಚಿಸಿದ ಚಿತ್ರಗಳಲ್ಲಿ " ಗಾಯತ್ರಿ," " ಲಲಿತ," ದುರ್ಗಾ," ಮತ್ತು " ಭಗವದ್ಗೀತಾ " ಮುಖ್ಯವಾದುವು. ಈ ಕೃತಿರಚನೆಗೆ ಮುಖ್ಯವಾಗಿ ಆಯಾಯ ಸ್ತೋತ್ರಗಳನ್ನನುಸರಿಸಿ ರಚಿಸಿರುವುದು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ. ಈ ಚಿತ್ರಗಳಲ್ಲಿ ಕವಿಯ ಕಾವ್ಯಸ್ಫೂರ್ತಿ ಚಿತ್ರಗಾರನ ಕಲಾ ಕೌಶಲ್ಯ ರಸಿಕನ ಮನೋಧರ್ಮ ಅಡಗಿಕೊಂಡಿದೆ. ಭಾರತೀಯ ಕಲಾ ತಂತ್ರ, ಸಾಹಿತ್ಯ ಮತ್ತು ಸಂಸ್ಕೃತಿಗಳ ಆಶ್ರಯಪಡೆದು ರಚಿಸಲಾಗಿರುವ ಈ ಕೃತಿಗಳು ಶ್ರೀ ಕುಕ್ಕೆಯವರಿಗೆ ಒಳ್ಳೆಯ ಹೆಸರನ್ನು ಕೊಟ್ಟವೆ.

ಶ್ರೀ ಕುಕ್ಕೆಯವರು ಮಲೆನಾಡಿನವರು. ನಿಸರ್ಗ ರಮಣೀಯವಾದ ಶಿವಮೊಗ್ಗೆಯೇ ಇವರ ಜನ್ಮಸ್ಥಳ. ಒಳ್ಳೆ ಸಂಸ್ಕಾರ ಪಾಂಡಿತ್ಯ ಪ್ರತಿಭೆಗೆ ಹೆಸರಾದುದು ಇವರ ಮನೆತನ. ಪಂಡಿತರತ್ನಂ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ ಗಳವರೇ ಶ್ರೀ ಕುಕ್ಕೆಯವರ ತಂದೆಯವರು. ಶ್ರೀಯುತರು ಅಸಾಧಾರಣ ಪಂಡಿತ ಪಿತಾಮಹರಾಗಿದ್ದುದರ ಫಲವಾಗಿ ಮಗನಲ್ಲಿ ಬಾಲ್ಯದಿಂದಲೂ ಉತ್ತಮ ಕಲಾಶಕ್ತಿಯು ಬೆಳೆಯುತ್ತಾ ಬಂದಿತು.

ಮಾಧ್ಯಮಿಕಶಾಲೆಯಲ್ಲಿ ಈ ಬಾಲಕ ವಿದ್ಯಾಭ್ಯಾಸ ಮಾಡು ತ್ತಿರುವಾಗ ಸುಮ್ಮನೆ ಯಾವುಯಾವುದೋ ಚಿತ್ರಗಳನ್ನು ಬಿಡಿಸುತ್ತಿದ್ದರು. ಉಪಾಧ್ಯಾಯರು ಪಾಠ ಹೇಳುತ್ತಿದ್ದಾಗ ಈ ಬಾಲ ಕುಕ್ಕೆ ಮನಬಂದ ಚಿತ್ರ ಬರೆಯುವುದರಲ್ಲಿ ಕಾಲ ಕಳೆಯುತ್ತಾ ಬಂದರು. ರಾಜಾರವಿವರ್ಮನ ಚಿತ್ರಪಟಗಳನ್ನು ಕಂಡು ಅವುಗಳಂತೆಯೇ ನಕುಲುಮಾಡುತ್ತಾ ಬಂದರು. ಈ ಬಾಲಕನ ಕಲಾಸಕ್ತಿ ಡ್ರಾಯಿಂಗ್ ಮಾಸ್ತರರಾದ ದಿ|| ರಾಮ ಕೃಷ್ಣರಾವ್ ಅವರ ಗಮನಕ್ಕೂ ಬಿದ್ದಿತು. ಬಾಲಕ ಕುಕ್ಕೆಯವರಿಗೆ ಒಂದು ವರ್ಷ ಚಿತ್ರಕಲಾಭ್ಯಾಸವನ್ನು ಮಾಡಿಸಿದರು. ಮದರಾಸ್ ಸರ್ಕಾರಿ ಪ್ರಥಮ ಕಲಾಪರೀಕ್ಷೆಗೆ ಕೂರಿಸಿದರು. ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ಉತ್ತೀರ್ಣರಾಗಿ ತಮ್ಮ ಗುರುಗಳ ಪ್ರೀತಿಗೆ ಪಾತ್ರರಾದರು.

ಈ ಬಾಲಕನ ಪ್ರತಿಭೆ ಶ್ರೀ ಶೃಂಗೇರಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳ ಗಮನಕ್ಕೂ ಬಂದಿತು. ಪಂಡಿತರತ್ನಂ ಸುಬ್ರಹ್ಮಣ್ಯ ಶಾಸ್ತ್ರಿಗಳ ಪುತ್ರ ಈ ಬಾಲಕನೆಂದು ತಿಳಿದು ಮತ್ತೂ ಆವರ ಅಭಿಮಾನ ಶ್ರೀ ಶ್ರೀಗಳಲ್ಲಿ ಹೆಚ್ಚಿತು. ಬಾಲಕ ಕುಕ್ಕೆಯನ್ನು ಶೃಂಗೇರಿಗೆ ಕರೆಸಿದರು.

"ಚಿತ್ರಕಲೆಯಲ್ಲಿ ಮುಂದುವರಿದು ಖ್ಯಾತಿಪಡೆ" ಎಂದು ಆಶೀರ್ವದಿಸಿದರು. ಆ ವೇಳೆಯಲ್ಲಿ ಶೃಂಗೇರಿಯಲ್ಲಿ ಬರೆದ ಪ್ರಕೃತಿ ಚಿತ್ರಗಳನ್ನು ಶ್ರೀ ಶ್ರೀಯವರು ನೋಡಿ ಮನಸಾರ ಬಾಲಕನನ್ನು ಕೊಂಡಾಡಿದ್ದರು. ಆಗ ಕುಕ್ಕೆಯವರಿಗೆ ಕೇವಲ ಒಂಬತ್ತುವರ್ಷಗಳಾಗಿದ್ದವು.

ಆ ವೇಳೆಯಲ್ಲಿ ಶೃಂಗೇರಿಗೆ ಮಹಮುದ್‌ಪೀರ್ ನಾಟಕ ಕಂಪನಿ ಬಂದಿದ್ದಿತು. ಸಾಮ್ರಾಟ್ ಷಹಜಾನ್, ಸಂಸಾರನೌಕ ನಾಟಕಗಳ ಪ್ರತಿಯೊಂದು ದೃಶ್ಯವನ್ನೂ ಅಲ್ಲಿಯೇ ನಾಟಕ ಜರುಗುತ್ತಿದ್ದಾಗಲೇ ಶ್ರೀ ಕುಕ್ಕೆಯವರು ಹಲವು ಚಿತ್ರಗಳನ್ನು ಬಿಡಿಸಿದರು. ಅದನ್ನು ಕಂಡ ಕಲಾವಿದ ಶ್ರೀ ಹೆಚ್. ಎಲ್. ಎನ್. ಸಿಂಹ ಈ ಹುಡುಗನ ಕಲಾಪ್ರತಿಭೆಗೆ ಮನಸಾರ ಮೆಚ್ಚಿಕೊಂಡರು. ಬಾಲ್ಯದ ಆ ಚಿತ್ರಗಳು ಈಗಲೂ ಶ್ರೀ ಸಿಂಹ ಅವರಲ್ಲಿವೆ.

ಬಾಲಕನ ಕಲಾಕೀರ್ತಿಯನ್ನು ಮೌನವಾಗಿಯೇ ಗಮನಿಸುತ್ತಾ ಬಂದ ತಂದೆಯವರು ಮಗನನ್ನು ಮೈಸೂರಿನ ಚಾಮರಾಜ ಕಲಾಶಾಲೆಗೆ ಸೇರಿಸಿದರು. ಅಲ್ಲಿ ಐದುವರ್ಷಗಳ ವ್ಯಾಸಂಗವನ್ನು ಎರಡುವರ್ಷಗಳಲ್ಲೇ ಶ್ರೀ ಕುಕ್ಕೆಯವರು ಮುಗಿಸಿಬಿಟ್ಟರು. ಅಲ್ಲಿ ದಿ|| ಪಾವಂಜೆ, ಟಂಕಸಾಲೆ, ಕೇಶವಯ್ಯ ಮುಂತಾದ ಅಪ್ರತಿಮ ಕಲಾಧ್ಯಾಪಕರು ಕುಕ್ಕೆಯವರ ಕಲಾ ಗುರುಗಳಾಗಿದ್ದರು. ಅಲ್ಲಿ ಇರುವಷ್ಟು ಕಾಲ ಪೂರ್ಣ ಶ್ರದ್ಧೆ ಭಕ್ತಿಯಿಂದ ಚಿತ್ರಕಲಾಭ್ಯಾಸವನ್ನು ಮುಗಿಸಿದರು.

ಕಲಾಭ್ಯಾಸ ಮುಗಿದೊಡನೆಯೇ ಶ್ರೀ ಕುಕ್ಕೆಯವರು ಮೈಸೂರಿನಿಂದ ಶಿವಮೊಗ್ಗೆಗೆ ಬಂದರು. ಶಿವಮೊಗ್ಗೆಗೆ ಬಂದ ಒಂದು ಸರ್ಕಸಿನ್ನ ಸಂದರ್ಶನದಿಂದ ಯುವಕ ಕುಕ್ಕೆಯವರ ಮನಸ್ಸು ಬೇರೆಕಡೆ ತಿರುಗಿತು. ೭,೮ ವರ್ಷಗಳ ಕಾಲ ಇವರ ದಾರಿಯೇ ಬೇರೆಯಾಯಿತು. ಫುಟ್‌ಬಾಲ್, ಬ್ಯಾಡ್‌ಮೆಂಟನ್‌ಗಳಿಗೆ ಆಕರ್ಷಿತರಾದರು ವ್ಯಾಯಾಮ ಮುಂತಾದುವುಗಳಿಂದಾಗಿ ಇವರುಚಿತ್ರ ಕಲಾಭ್ಯಾಸದ ಕಡೆ ಅಷ್ಟಾಗಿ ಗಮನಹೋಗದಾಯಿತು. ವ್ಯಾಯಾಮ ಮುಂತಾದ ಆಟಗಳಲ್ಲಿ ಅನೇಕ ಬಹುಮಾನಗಳನ್ನು ಗಳಿಸುತ್ತಾ ಬಂದು ಅಗಾಧವಾದ ದೇಹಶಕ್ತಿಯನ್ನು ಗಳಿಸಿಕೊಂಡರು. ಆಗ ಸಾರ್ವಜನಿಕ ಪ್ರದರ್ಶನಗಳನ್ನು ನೀಡುತ್ತಾ ಕಬ್ಬಿಣದ ಕಂಬಿ ಬಗ್ಗಿಸುವುದು, ಕಬ್ಬಿಣದ

ಸರಪಣಿಯನ್ನು ತುಂಡರಿಸುವುದು, ಹೊಟ್ಟೆಯಮೇಲೆ ಮೋಟಾರ್‌ಕಾರ್ ಓಡಿಸಿಕೊಳ್ಳುವುದರಲ್ಲಿ ಪ್ರಸಿದ್ಧಿಗೇರಿದರು. ಅಂಗಸಾಧನೆ ವ್ಯಾಯಾಮದ ಉತ್ತಮ ಶಾಲೆಯನ್ನು ತೆರೆದ ತರುಣರಿಗೆ ಪ್ರೋತ್ಸಾಹಿಸುತ್ತ ಬಂದರು. ಹೀಗೆ ಮೈ ಬೆಳೆಸಿಕೊಂಡು ಓಡಾಡುವ ಈ ಕುಕ್ಕೆಯವರನ್ನು ಕಂಡರೆ ಮನೆಯವರಿಗೆ ಸೇರುತ್ತಿರಲಿಲ್ಲ.

"ಬರೀ ಮೈ ಬೆಳೆಸಿ ಏನು ಪ್ರಯೋಜನ. ಮುಂದೆ ನೀನು ಏನುಮಾಡುವೆ?"—ಎಂದು ಇವರ ತಂದೆಯವರು ಪದೇ ಪದೇ ಎಚ್ಚರಿಸುತ್ತಾ ಬಂದಿದ್ದರು. ಆದರೂ ಯಾವುದನ್ನೂ ಹಚ್ಚಿಕೊಳ್ಳದೇ ಮಗ ಕುಕ್ಕೆಯವರು ಏನುಮಾಡಿದರೂ ತಂದೆಯವರು ಮಾತ್ರ ಸಂತೋಷಪಡುತ್ತಾ ಯಾರ ಮಾತಿಗೂ ಅಷ್ಟಾಗಿ ಕಿವಿ ಕೊಡುತ್ತಿರಲಿಲ್ಲ. ಅವರ ತಂದೆ ದಿವಂಗತರಾದ ಮೇಲೆ ಶ್ರೀ ಕುಕ್ಕೆಯವರು ಸಂಸಾರಸ್ಥರಾದರು. ಕೊನೆಗೆ ಬೆಂಗಳೂರಿಗೆ ಬಂದು ನೆಲಸಿದರು. ಜೀವನದ ದುಗುಡ ಇವರಿಗೆ ಇರದಿದ್ದರೆ ಇವರ ಕುಂಚ ಶಕ್ತಿ ಮತ್ತೂ ಅಪ್ರತಿಮವಾಗಿ ಬೆಳಗುತ್ತಿತ್ತು.

ಬೆಂಗಳೂರಿಗೆ ಬಂದ ತರುಣದಲ್ಲೇ ಮತ್ತೆ ಇವರ ಮನ ಚಿತ್ರಕಲೆಯ ಕಡೆ ಹರಿಯಿತು. ಬಿಡುವಿನಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಾಭ್ಯಾಸ ಮಾಡಿಸುವುದು, ಶೀಘ್ರ ರೇಖಾಚಿತ್ರ (Rapid sketches) ಗಳನ್ನು ಬಿಡಿಸುವುದು, ಸಂಯೋಗ ಚಿತ್ರಗಳನ್ನು ಬಿಡಿಸುವುದು ಇವರ ನಿತ್ಯದ ಕೆಲಸವಾಯಿತು. ಬೆಂಗಳೂರಿನ ಚಿಕ್ಕಪೇಟೆಯ ಒಂದು ಭವ್ಯ ಸೌಧದ ಮಹಡಿಯಲ್ಲಿದೆ ಇವರ ಕಲಾಗಾರ. 'ಶ್ರೀ ಕುಕ್ಕೆ ಸ್ಟುಡಿಯೋ' ಎಂಬ ನಾಮ ಫಲಕ ಕಲಾರಸಿಕರನ್ನು ಸದಾ ಸ್ವಾಗತಿಸುತ್ತಿದೆ. ಇವರ ಬಳಿ ಬಂದವರನ್ನು ಹೃದಯ ತುಂಬಿ ಆದರಿಸಿ ಮಾತಾಡಿಸಿ ಕಳಿಸುತ್ತಾರೆ. ಒಳ್ಳೆಯ ಸಾಹಿತ್ಯ ಕಲಾ ಸಂಸ್ಕಾರ ಇರುವ ಇವರು ತಾವು ರಚಿಸುವ ಒಂದೊಂದು ಕೃತಿಯೂ ಅಪಾರ ಶ್ರಮದ ಕುಸುರಿಯ ಕೆಲಸವಾಗಿ ಬಹು ಬೆಲೆ ತರುವಂತಿರುತ್ತದೆ. ಕುಂಚ, ಜಲವರ್ಣ ಹಾಗೂ ತೈಲವರ್ಣಗಳೆರಡರ ಮಾಧ್ಯಮದಲ್ಲೂ ಪಳಗಿದೆ. ಕುಕ್ಕೆಯವರ ಹೃದಯ ಕಲ್ಲುಸಕ್ಕರೆಯಂತೆ ನೋಡಲು ಕಠಿಣವಾದರೂ ರುಚಿಯಲ್ಲಿ ತಿಳಿಯೊದುದು, ಅಪ್ಪಟವಾದುದು. ಅವರ ಕಲೆಗಾರಿಕೆಯೂ ಅಷ್ಟೆ.

ಜೆ. ವಿ. ಸುಭಾಷಿಣೀದೇವಿ

ಮಹಿಳೆಯರಲ್ಲಿ ಕಲಾರಂಗಕ್ಕೆ ಇಳಿದು ದುಡಿಯುತ್ತಿರುವವರು ವಿರಳ ಶ್ರೀಮತಿ ಜೆ. ವಿ. ಸುಭಾಷಿಣೀದೇವಿಯವರು ತಮ್ಮ ಕಲಾಸಾಧನೆಯ ಮಟ್ಟದಿಂದ ಕನ್ನಡ ಕಲಾವಿದೆಯರಲ್ಲಿ ಗಣ್ಯರೆನಿಸಿದ್ದಾರೆ.

ಶ್ರೀಮತಿ ಸುಭಾಷಿಣೀದೇವಿಯವರು ಶಿಲ್ಪ ಹಾಗು ಚಿತ್ರಕಲೆಗಳಲ್ಲಿ ನಿಷ್ಣಾತರೆನಿಸಿದ್ದ ಶಿಲ್ಪಸಿದ್ಧಾಂತಿ ದಿ|| ಸಿದ್ಧಲಿಂಗಸ್ವಾಮಿಗಳವರ ಶಿಷ್ಯೆ. ಆಧುನಿಕ ಜಕಣಾಚಾರ್ಯರೆಂದು ಪ್ರಸಿದ್ಧರಾಗಿದ್ದು ಅವರ ಕೈಯಲ್ಲಿ ನುರಿತ

ಶ್ರೀಮತಿಯವರು ತಮ್ಮ ಗುರುವಿನ ಕಲಾಕೀರ್ತಿಯನ್ನು ಇಂದಿಗೂ ಬೆಳಗುತ್ತಿರುವ ಶಿಷ್ಯರಲ್ಲಿ ಒಬ್ಬರಾಗಿದ್ದಾರೆ. ಇವರು ಜಲವರ್ಣದ ಸಂಯೋಗ ಚಿತ್ರಗಳನ್ನೂ ಶಿಲ್ಪ ಕೃತಿಗಳನ್ನೂ ರಚಿಸಿದ್ದಾರೆ. ಶಾಸ್ತ್ರೀಯ ರೀತಿಯಲ್ಲಿ ಎರಡು ಕಲೆಗಳನ್ನೂ ಸಾಧಿಸಿಕೊಂಡು ಬರುತ್ತಿರುವ ಶ್ರೀಮತಿಯವರ ಚಿತ್ರ ಕೃತಿಗಳಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಶೈಲಿಗಳ ಸಮ್ಮಿಳನ ಕಂಡು ಬರುತ್ತದೆ. ಹೆಚ್ಚಾಗಿ ಪೌರಾಣಿಕ ಸನ್ನಿವೇಶಗಳನ್ನೇ ಆಯ್ದು ಜಲವರ್ಣದಲ್ಲಿ ಅನೇಕ ಕೃತಿಗಳನ್ನು ತುಂಬ ಆಕರ್ಷಣೀಯವಾಗಿ ರಚಿಸಬಲ್ಲ ಕೌಶಲ ಶ್ರೀಮತಿಯವರದು. ಕಿರಿದಾದ ಆಕೃತಿಯಲ್ಲಿ ಬಹು ಸೂಕ್ಷ್ಮವಾದ ರೇಖೆಗಳನ್ನು ಬಿಡಿಸಿ ರಮ್ಯವಾದ ವರ್ಣಗಳನ್ನು ತುಂಬಿ ಸಹಜವಾಗಿ ಕೃತಿಯನ್ನು ಸೃಷ್ಟಿಸುವ ಶಕ್ತಿ ಇವರಗು. ಒಂದು ಶಿಲ್ಪಕೃತಿಯೋ ಎಂಬಷ್ಟು ಅಲಂಕಾರಗಳು, ಕೆಲವು ವೇಳೆ ಅಧಿಕವೆನಿಸುತ್ತವೆ. ವ್ಯಕ್ತಿಗಳು ಚಲನೆ ಇಲ್ಲದೆ ಒಂದು ವಿಗ್ರಹದಂತೆ ನಿಂತ ಅನುಭವವೂ ಆಗುತ್ತದೆ. ಆದರೆ ಶ್ರೀಮತಿಯವರ ಎಲ್ಲ ಕೃತಿಗಳಲ್ಲೂ ಈ ಕೊರತೆ ಎದ್ದು ತೋರುವುದಿಲ್ಲ. ಕಲಾಸೃಷ್ಟಿಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಇವರು ತೊರಬಲ್ಲರು. ಹಂಸ, ಸರಸ್ವತಿ, ಶಂಕರ ಪಾರ್ವತಿ, ಶಂಕರ ನಾರಾಯಣ, ಪರಶುರಾಮ, ಕರ್ಣ, ಅರ್ಧನಾರೀಶ್ವರ ಮುಂತಾದ ಪೌರಾಣಿಕ ಸನ್ನಿವೇಶಗಳನ್ನೊಳಗೊಂಡ ಕಲಾಕೃತಿಗಳಲ್ಲಿ ಈ ಅಂಶಗಳನ್ನೆಲ್ಲಾ ನಾವು ಗಮನಿಸಬಹುದಾಗಿದೆ. ಸಿದ್ಧಾರ್ಥ, ಟಾಗೂರ್, ಗಾಂಧಿ ಹಾಗೂ ಡಾ॥ ಸಿದ್ಧಲಿಂಗಸ್ವಾಮಿಗಳವರ ಜಲವರ್ಣದ ಚಿತ್ರಗಳಲ್ಲಿಯೂ ಇವರ ಅತಿಸೂಕ್ಷ್ಮ ಕುಂಚ ಕೌಶಲವನ್ನೂ ಸಹಜತೆಯನ್ನೂ ಕಾಣಬಹುದು. ಶ್ರೀಮತಿಯವರು ಒಳ್ಳೆಯ ಮಹಿಳಾಶಿಲ್ಪಿಗಳೂ ಎನ್ನುವುದು ಒಂದು ಅಭಿಮಾನಾರ್ಹವಿಷಯ. ಕನ್ನಡದಲ್ಲಿ ಮಹಿಳಾಶಿಲ್ಪಿಗಳು ತೀರಾ ವಿರಳ. ಶ್ರೀಮತಿ ಸುಭಾಷಿಣೀದೇವಿಯವರು ಕುಂಚವನ್ನು ಕೆಳಗಿಟ್ಟು ಚಾಣವನ್ನು ಹಿಡಿದು ಶಿಲೆಯಲ್ಲಿ ಕೆಲವು ಅಪೂರ್ವವಾದ ಶಿಲ್ಪಕೃತಿಗಳನ್ನು ಕಡೆದಿದ್ದಾರೆ. ಅವರು ರಚಿಸಿದ ಅರ್ಧನಾರೀಶ್ವರ ಮುಂತಾದ ಮೂರ್ತಿಗಳು ಶಾಸ್ತ್ರಶುದ್ಧವಾಗಿ ನವುರಾಗಿ ಶಿಲ್ಪಕೌಶಲವನ್ನು ಮೆರೆಯುವಂತಿವೆ.

ಶ್ರೀಮತಿ ಸುಭಾಷಿಣೀದೇವಿಯವರದು ಶ್ರೀಮಂತ ಮನೆತನ. ಕಲಾಭಿಮಾನಿ ಡಾ॥ ಜೆ. ವೆಂಕಟಸ್ವಾಮಿಯವರ ದ್ವಿತೀಯ ಪುತ್ರಿಯೇ ಸುಭಾಷಿಣೀ

ದೇವಿ. ಶ್ರೀಯುತರು ಮೈಸೂರು ನಗರದಲ್ಲಿ ಹಿಂದೆ 'ಜಗನ್ನಾಥ' ಎಂಬ ಅಪೂರ್ವವಾದ ವಿವಿಧ ಸಾಮಗ್ರಿಗಳ ಒಂದು ಅಂಗಡಿಯ ಮಾಲಿಕರಾಗಿದ್ದರು. ಖ್ಯಾತ ಕಲಾವಿದ ಡಾ|| ಕೆ. ವೆಂಕಟಪ್ಪನವರ ಆಪ್ತ ಮಿತ್ರರಲ್ಲಿ ಶ್ರೀಯುತರೂ ಒಬ್ಬರಾಗಿದ್ದರು. ಜಪಾನ್ ಬರ್ಮ ಮುಂತಾದ ಕಡೆ ಪ್ರವಾಸಮಾಡಿ ಹೆಚ್ಚಿನ ಕಲಾನುಭವ ಪಡೆದುಕೊಂಡಿದ್ದರು. ತಮ್ಮ ಪುತ್ರಿಯಜೊತೆ ಭಾರತಾದ್ಯಂತ ಪ್ರವಾಸಮಾಡಿ ಬಂದಿದ್ದರು. ಎಲ್ಲೋರ, ಅಜಂತ, ಶಾಂತಿನಿಕೇತನ, ಬೊಂಬಾಯಿ ಮುಂತಾದ ಕಲಾಕೇಂದ್ರಗಳನ್ನು ಸಂದರ್ಶಿಸಿ ಬಂದಿದ್ದರು.

ತಂದೆಯವರಲ್ಲಿದ್ದ ಕಲಾಭಿರುಚಿ ತಮ್ಮ ಪುತ್ರಿ ಸುಭಾಷಿಣೀದೇವಿ ಯವರಲ್ಲೂ ಮೂಡಿತು. ಚಿತ್ರಕಲೆಯ ಗೀಳು ಮಗಳಿಗೆ ಅಂಟಿಕೊಂಡಿತು. ಮೈಸೂರಿನಲ್ಲಿದ್ದ ಕೆ. ವೆಂಕಟಪ್ಪನವರು ನಿತ್ಯ ಸಂಜೆಯ ಬಿಡುವಿನಲ್ಲಿ ಇವರ ಷಾಪಿಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದರು. ಕಲೆಯಬಗ್ಗೆ ಅವರಲ್ಲಿ ಆಗಾಗ ಚರ್ಚೆನಡೆಯುತ್ತಿತ್ತು. ಕಾರಣಾಂತರದಿಂದ ರಾಜಾಶ್ರಯ ತ್ಯಜಿಸಿ ಡಾ|| ವೆಂಕಟಪ್ಪನವರು ಬೆಂಗಳೂರಿಗೆ ಹೋಗಿ ನೆಲಸಿದರು. ತಮ್ಮ ಪುತ್ರಿಗೆ ಡಾ|| ವೆಂಕಟಪ್ಪನವರ ಬಳಿ ಕಲಾಭ್ಯಾಸ ಮಾಡಿಸಬೇಕೆಂದಿದ್ದ ಡಾ|| ವೆಂಕಟ ಸ್ವಾಮಿಯವರ ಬಯಕೆ ನೆರವೇರಲಿಲ್ಲ. ಅದೇ ವೇಳೆಯಲ್ಲಿ ಮೈಸೂರಿನಲ್ಲಿದ್ದ ಅಪ್ರತಿಮ ಶಿಲ್ಪಿಗಳಾದ ಸಿದ್ಧಲಿಂಗಸ್ವಾಮಿಗಳ ಸಾನಿಧ್ಯ ಈ ಕುಮಾರಿಗೆ ದೊರತು ಅವರಲ್ಲಿ ಶಿಲ್ಪ ಹಾಗೂ ಚಿತ್ರಕಲಾಭ್ಯಾಸ ಬಹು ಶಾಸ್ತ್ರೀಯ ರೀತಿ ಯಲ್ಲಿ ಜರುಗುವಂತಾಯಿತು.

ಇಷ್ಟಾದರೂ ಡಾ|| ಕೆ. ವೆಂಕಟಪ್ಪನವರ ಸ್ನೇಹಮಾತ್ರ ಇವರಿಗೆ ಪತ್ರ ಗಳ ಮೂಲಕ ಉಳಿದುಕೊಂಡೇ ಬಂದಿತು. ಅವರು ಬರೆದ ಅಪೂರ್ವ ಪತ್ರಗಳಿಂದ (ತಾ|| ೩-೧೨-೧೯೪೮ ಮತ್ತು ೧೯-೧೨-೧೯೪೯) ಅವರ ಕಲಾ ದೃಷ್ಟಿಯನ್ನೂ ಕಲೆಯಮಟ್ಟವನ್ನೂ ನಾವು ಇಲ್ಲಿ ಮತ್ತೊಮ್ಮೆ ನೆನೆಯುವುದು ಉಚಿತ.

"I am very busy with serious studies of my favourit subjects which were neglected for the lost few years for various reasons. I began my studies on 18th nov: 1948 and now I am in good creative mood

though I felt some what difficult for a few days after I began the studies; for I was not in touch with them for a long time. The studies have now come to an interesting stage and so I am busy both day and night. In fact I was busy at the panal till 10 P. M. now. I may be busy for a couple of months at least.

You and Your daughter are quite welcome to my studio any time after January next and of course you will write to me a week before you intend starting to this place. So that it may be convenient for me to unpack the Landscape Studies of Ootacamand and Kodaikanal and arrange them in good light.

The servent boy, who started to work in the studio on the day you had come, refused to work after two days, and so I am, as hither to, myself the servent of the studio."

ಮತ್ತೊಂದು ಕೆ. ವಿ. ಯವರ ಪತ್ರದಿಂದ............

" We should not be carried-away by talks on Fine Arts. Talking of Fine Arts on a platform is one thing and to have real love and taste for Fine Arts is another.

I am gettthing on well with my studies both day and night, ... if not longer because the more I work, the better ideas flash in my mind and every touch is adding to the artistic beauty and so I have decided to go on as long as the creation mood remains irrespective of time and trouble."

ಈ ರೀತಿ ಶ್ರೀಮತಿ ಸುಭಾಷಿಣೀದೇವಿಯವರು ತನ್ನ ತಂದೆಯವರಿಗೆ ಬರುತ್ತಿದ್ದ ಖ್ಯಾತ ಕಲಾವಿದರ ಪತ್ರಗಳಿಂದ ತಮ್ಮ ಕಲಾಭಿರುಚಿಯನ್ನು ಹೆಚ್ಚಿಸಿಕೊಳ್ಳಲು ಅವಕಾಶವಾಯಿತು.

ಶ್ರೀಮತಿ ಸುಭಾಷಿಣೀದೇವಿಯವರು ತಮ್ಮ ಪ್ರೀತಿಯ ಮಾತೆಯನ್ನು ಕಳೆದುಕೊಂಡ ಕೆಲವೇ ವರ್ಷಗಳಲ್ಲಿ ತಮ್ಮ ತಂದೆಯನ್ನೂ ಕಳೆದುಕೊಂಡು ಕಲೆಯೊಂದೇ ತಮ್ಮ ಸರ್ವಸ್ವ ಎಂದು ನಂಬಿದ್ದಾರೆ. ಈಗ ನಜಂನಗೂಡಿನ ಸ್ವಗೃಹದಲ್ಲಿ ಪ್ರಶಾಂತ ಸನ್ನಿವೇಶದಲ್ಲಿ ಕಲಾರಾಧನೆಮಾಡುತ್ತಿದ್ದಾರೆ. ಗೃಹ ಕೈಗಾರಿಕೆಯೊಂದನ್ನು ಸ್ಥಾಪಿಸಿ ಆ ಮೂಲಕ ಹಲವು ಮಹಿಳೆಯರಲ್ಲಿ ಕಲಾಭಿರುಚಿಯನ್ನು ಹೆಚ್ಚಿಸಬೇಕೆಂಬ ಹೆಬ್ಬಯಕೆ ಶ್ರೀಮತಿಯವರಿಗಿದೆ. ಅದು ಫಲಿಸಲಿ ಎಂದು ನಮ್ಮ ಹಾರೈಕೆ.



ಎಚ್. ವಿ. ಸರೋಜಮ್ಮ

ಬೆಂಗಳೂರಿನ ಚಿತ್ರಕಲಾಪರಿಷತ್ ೧೯೬೫ರ ಆಗಸ್ಟ್ ತಿಂಗಳಲ್ಲಿ ವಿಧಾನಸೌಧದಲ್ಲಿ ಚಿತ್ರಕಲಾಪ್ರದರ್ಶನ ಜರುಗಿಸಿತ್ತು. ಅಲ್ಲಿ ಪ್ರದರ್ಶಿತ ಚಿತ್ರಗಳಲ್ಲಿ "ಉಮರನ ಪ್ರೇಮ"— ಎಂಬ ಕೃತಿಯೊಂದು ಕೆಲವರ ಮನಸ್ಸನ್ನು ಆಕರ್ಷಿಸಿದ್ದಿತು. ಹಿರಿಯಸಾಹಿತಿ ಶ್ರೀ 'ಡಿ. ವಿ. ಜಿ' ಯವರ 'ಉಮರನ ಒಸಗೆಯಲ್ಲಿ ಹೇಳಿರುವಂತೆ– ....

" ಅಲ್ಲಿ ಮರದಡಿಯಲ್ಲಿ ನಲ್ಗಾವ್ಯವೊಂದಿರಲು
ರೊಟ್ಟಿಯೊಂದಿನಿತೊಂದು ಕುಡಿಕೆಯಲಿ ಮಧುವು,
ಮೇಣ್ ಮುಗುದೆ, ನೀನೆನ್ನ ಬಳಿ ಕುಳಿತು ಪಾಡಲಹ!
ಏನಾದೊಡೇನದುವೆ ಸಗ್ಗ ಸುಖವೆನಗೆ ॥

ಈ ಪದ್ಯದ ಭಾವಾರ್ಥವನ್ನು ಬಹುಸುಂದರವಾಗಿ ಕಲಾತ್ಮಕವಾಗಿ ಜಲವರ್ಣದಲ್ಲಿ ಕೃತಿ ರಚಿಸಿದ್ದಾರೆ ಕಲಾಸಾಧಕಿ ಸರೋಜಾ ಅವರು. ಉಮರನ ಸಹಜ ವಸ್ತ್ರ, ಬೆಳೆದ ಗಡ್ಡವಿಸಾಸೆಗಳು, ಅವನ ಪ್ರೇಯಸಿಯ ಮೈ ಕೈ ಎಲ್ಲವೂ ತುಂಬಿಕೊಂಡು ಸಹಜವೆನಿಸಿದೆ ಕೃತಿ. ಆ ಪ್ರೇಮೋನ್ಮಾದದ ಅವರ ಕಣ್ಣುಗಳಲ್ಲಿನ ಕಾಂತಿ, ಅವರ ಮುಖದಲ್ಲಿನ ಹಾವಭಾವ ಭಂಗಿಗಳು, ಶರೀರದ ನಿಲುವು ಒಲವುಗಳು ಭಾವಪೂರ್ಣವಾಗಿ ಕುಂಚದಿಂದ ಮೂಡಿಬಂದಿವೆ. ಪ್ರಕೃತಿಯ ಮಡಿಲಿನ ಈ ಪ್ರಣಯ ಸನ್ನಿವೇಶದ ಕೃತಿ ಮೆಚ್ಚುವಂತಹದು. ಸಂಯೋಗ ಚಿತ್ರರಚನೆಗೆ ಸಾಕ್ಷಿಯಾಗಿ ಇದು ಆಕರ್ಷಕವಾದುದು. ಇಂಥದೇ ಮತ್ತೊಂದು ಚಿತ್ರ ' ಅಕ್ಕಮಹಾದೇವಿ 'ಯನ್ನು ಇಲ್ಲಿ ನೆನೆಯುವುದು ಉಚಿತ.

ಮೈಸೂರಿನ ವಾಣಿವಿಲಾಸ ಮೊಹಲ್ಲಾದಲ್ಲಿರುವ ಈ ಕಲಾವಿದೆಗೆ ಹಿನ್ನೆಲೆಯಾಗಿ ಕೀರ್ತಿ ತಂದಿದೆ ಇವರ ಸಂತತಿಯ ಕಲಾಪರಂಪರೆ. ಇವರ ಮುತ್ತಾತ, ತಂದೆಯವರು ಕನ್ನಡ ಕಲಾರಂಗದಲ್ಲಿ ಬಹುದೊಡ್ಡ ಹೆಸರು ಗಳಿಸಿದವರೇ! ಕೀರ್ತಿಯ ಶಿಖರವನ್ನೇರಿದ ಇವರ ಮುತ್ತಾತ ಶ್ರೀ ಕೃಷ್ಣಪ್ಪನವರು ರಚಿಸಿದ ಶ್ರೀ ಕೃಷ್ಣಾರ್ಜುನರ ದಂತದ ಸುಂದರವಾದ ರಥವು ವಿಶ್ವದಲ್ಲೇ ಪ್ರಖ್ಯಾತ ಕಲಾಕೃತಿ ಎನಿಸಿ ಅದು ಈಗ ಲಂಡನ್ ಮ್ಯೂಜಿಯಂನಲ್ಲಿ ಶೋಭಿಸುತ್ತಿದೆ. ಸರೋಜಾ ಅವರ ತಂದೆ ವೆಂಕಪ್ಪನವರು ವಿಖ್ಯಾತ ದಂತಶಿಲ್ಪಿ ಎನ್ನಿಸಿಕೊಂಡು ರಾಧಾಕೃಷ್ಣನ ಪ್ರೇಮದ ವಿವಿಧ ಭಂಗಿಯ ಕೃತಿಗಳನ್ನು ಹೃದಯಂಗಮವಾಗಿ ನಿರ್ಮಿಸಿದ್ದಾರೆ. ಇವರ ಕರಕುಶಲತೆಗೆ ಮನಸಾರೆ ಮೆಚ್ಚಿದ ಬಾಪೂಜಿಯವರ ಇಚ್ಛೆಯಂತೆ ಅವರ ಮೊಮ್ಮಗ ಶ್ರೀ ನವೀನ ಚಂದ್ರ ಗಾಂಧಿಯವರು ಶ್ರೀ ವೆಂಕಪ್ಪನವರಲ್ಲಿ ದಂತಶಿಲ್ಪ ಕಲಾಭ್ಯಾಸ ಮಾಡಿದರು. ಕಾರವಾರ ಜಿಲ್ಲೆಯ ಕಡಲತೀರದ ಹೊನ್ನಾವರ ಇವರ ಮೂಲಸ್ಥಾನ. ಇಂಥ ಒಂದು ಅಪೂರ್ವ ವಂಶದ ಕಲಾ

ಪೋಷಣೆಯಲ್ಲಿ ಹುಟ್ಟಿ ಬೆಳೆದು ಬಂದ ಕುಮಾರಿ ಸರೋಜಾ ಅವರು ವರ್ಣ ಚಿತ್ರ ಕಲಾಸಾಧಕಿಯಾಗಿದ್ದಾರೆ.

ಮೈಸೂರಿನಲ್ಲಿ ಶಿವರಾತ್ರಿಯಂದು ಜನಿಸಿದ ಈ ಕೂಸು ಕಲಾಭಿರುಚಿಯನ್ನು ತನ್ನ ಹುಟ್ಟಿನಿಂದಲೇ ಪಡೆದು ಬಂದಿತೇನೋ ? ಮುದ್ದು ಮುದ್ದಾದ ಈ ಕುವರಿ ಎಲ್ಲರನ್ನೂ ಆಕರ್ಷಿಸಿತು. ಅವರಿವರ ಕಂಕುಳ ಕರುಣೆಯಲ್ಲಿ ಬೆಳೆದುಬಂದಿತು. ಮನೆಯಲ್ಲಿ ತಂದೆ ದಂತಕೃತಿ ರಚಿಸುತ್ತಿರುವಾಗಲೆಲ್ಲಾ ಈ ಮುಗ್ಧ ಮಗು ಸದ್ದುಮಾಡದೆ ಬಂದು ತಂದೆಯ ಬೆನ್ನೇರಿ ನಿಂತು ಅವಲೋಕಿಸುವುದು ರೂಢಿಯಾಗಿದ್ದಿತು. ಮುಂದೆ ತನ್ನ ಬಾಲ್ಯದಲ್ಲಿ ವಿವಿಧ ವರ್ಣಗಳ ಬಳೆಯ ಚೂರುಗಳನ್ನು ಕಲಾತ್ಮಕವಾಗಿ ಓರಣವಾಗಿ ನೆಲದಮೇಲೆ ಜೋಡಿಸಿ ಆನಂದಪಡುವುದು, ಕ್ರಮೇಣ ಮನೆಯ ಗೋಡೆಗಳೆಲ್ಲಾ ಕೃಷ್ಣ ರಾಧಾ, ಶಿವ, ಪಾರ್ವತಿ, ಕಂಸ ಮುಂತಾದ ಸೀಮೆಸುಣ್ಣದ ಚಿತ್ರಗಳಿಂದ ತುಂಬಿಸುವುದು–ಅಲ್ಲದೆ ತಮ್ಮ ಶಾಲೆಯ ಪುಸ್ತಕದ ಹಾಳೆಗಳೆಲ್ಲಾ ಅರೆ ಬರೆ ಚಿತ್ರಗಳಿಂದ ಕೂಡಿದುವು. ಹೈಸ್ಕೂಲು ವ್ಯಾಸಂಗದಲ್ಲಿ ಡ್ರಾಯಿಂಗ್ ಉಪಭಾಗವಾಗಿ ತೆಗೆದುಕೊಂಡದ್ದು ಇವರ ಮುಂದಿನ ಕಲಾಭ್ಯಾಸಕ್ಕೆ ನಾಂದಿಯಾಯಿತು. ಇವರ ಕಲಾಸಕ್ತಿಯನ್ನು ಗುರುತಿಸಿದ ಶಾಲಾಧ್ಯಾಪಕಿಯೊಬ್ಬರು ಕೆಣಕುವ ಬದಲು ಆಗಾಗ ಇವರಿಂದ ಬೋರ್ಡಿನ ಮೇಲೆ ಶಾರದ, ಸರಸ್ವತಿ, ಗಣೇಶ ಮುಂತಾದ ಚಿತ್ರಗಳನ್ನು ಬರೆಸಿ ಸ್ಫೂರ್ತಿ ನೀಡುತ್ತಿದ್ದರಂತೆ. ಆಗ ದಸರಾ ಪ್ರದರ್ಶನದ ರಂಗೋಲಿ ಸ್ಪರ್ಧೆಯಲ್ಲಿ ಬಹುಮಾನವನ್ನು ಗಳಿಸಿದ್ದರು

ಇದೆಲ್ಲವನ್ನೂ ಅವಲೋಕಿಸುತ್ತಾ ಬಂದ ಮಾತಾಪಿತೃಗಳು ಮಗಳ ಕಲಾಭವಿಷ್ಯಕ್ಕೆ ತುಂಬಾ ಸಹಕರಿಸಿ ಪ್ರೋತ್ಸಾಹಿಸುತ್ತಾ ಬಂದರು. ಚಾಮರಾಜ ಕಲಾಶಾಲೆಯ ಐದು ವರ್ಷಗಳ ಕಲಾಭ್ಯಾಸವನ್ನು ಕಲಾವಿದರಾದ ನಂಜುಂಡಸ್ವಾಮಿ, ಸೂಫಿ, ರಾಜು ಅವರ ಉತ್ತಮ ಮಾರ್ಗದರ್ಶನದಲ್ಲಿ ಮುಗಿಸಿದರು. ಅಲ್ಲಿ ತನ್ನ ತಂದೆಯವರು ದಂತ ಶಿಲ್ಪ ಕಲಾಧ್ಯಾಪಕರಾಗಿದ್ದುದರಿಂದ ಮಗಳ ಕಲಾಭ್ಯಾಸಕ್ಕೆ ಇಂಬು ಕೊಟ್ಟಂತಾಯಿತು. ಚಿತ್ರಕಲೆಯ ಜೊತೆಗೆ ಶ್ರೀಗಂಧದ ಕೆತ್ತನೆ ಕೆಲಸವೂ ಇವರಿಗೆ ಸಿದ್ಧಿಸಿದೆ.

ಕುಮಾರಿ ಸರೋಜ ಅವರಿಗೆ ಜಲವರ್ಣ ಹಾಗೂ ತೈಲವರ್ಣಗಳೆರಡರಲ್ಲೂ ಅಭ್ಯಾಸಸಾಗಿದೆ. ಅವರ ಕಲಾದೃಷ್ಟಿ ಭಾವನಾತ್ಮಕವೂ, ಚಾರಿತ್ರಿಕವೂ

ಆದುದಾಗಿದೆ. ಅವರ ಕೆಲವು ಚಿತ್ರಗಳಲ್ಲಿ ತಮ್ಮ ಪ್ರತಿಭೆಯ ಕಲಾಸಾಧನೆಯನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಚಿತ್ರಗಳು ಅವರ ಹಿತೈಷಿಗಳ ಮನೆಗಳಲ್ಲಿ ಶೋಭಿಸುತ್ತಿವೆ. ಇವರಿಗೆ ಚಿತ್ರಕಲೆಯ ಜೊತೆಗೆ ಸಂಗೀತ-ವೀಣಾವಾದನ ಕಲೆಯೂ ಅಂಟಿಕೊಂಡಿದೆ. ಇವರ ಪೇಪರ್ ಕಟ್ ಕಲಾಕೃತಿಗಳಿಗೆ ಎರಡು ಸಾರಿ ದಸರಾ ಕಲಾ ಪ್ರದರ್ಶನದಲ್ಲೂ, ಇವರ ರಚಿಸಿದ ರೂಪ ಚಿತ್ರಕ್ಕೆ ೧೯೬೦ ರಲ್ಲಿ ಮಣಿಪಾಲದಲ್ಲಿ ಜರುಗಿದ ಕಲಾ ಪ್ರದರ್ಶನದಲ್ಲೂ, ಸಂಯೋಗ ಚಿತ್ರಗಳಿಗೆ ೧೯೬೫ರಲ್ಲಿ ಮೈಸೂರಿನ ಕಲಾ ಮಹೋತ್ಸವ ಪ್ರದರ್ಶನದಲ್ಲೂ ಬಹುಮಾನ ಪ್ರಶಸ್ತಿ ಪತ್ರಗಳು ಬಂದಿವೆ. ನಿಸರ್ಗ ಪ್ರಿಯೆಯಾದ ಸರೋಜಾ ಅವರಿಗೆ ಕಲಾ ಪ್ರವಾಸವೆಂದರೆ ಮಹದಾಸೆ. ಇತ್ತೀಚೆಗೆ ಊಟಿ, ಕೊಡಗು ಮಲೆನಾಡು, ಕಾರವಾರದ ಕಡಲತೀರ ಮುಂತಾದ ಕಡೆ ಪ್ರಕೃತಿ ನೆಲೆಗಳಲ್ಲಿ ತಂದೆಯೊಡನೆ ಸಂಚರಿಸಿ ನಿಸರ್ಗ ದರ್ಶನ ಲಾಭ ಪಡೆದಿದ್ದಾರೆ: ಅಲ್ಲಿ ದೊರೆತ ವಿವಿಧ ಎಲೆ ಬಳ್ಳಿಗಳ ವಸ್ತು ವಿಶೇಷವನ್ನು ಕಲೆಹಾಕಿ ನೂತನ ಶೈಲಿಯಲ್ಲಿ ಚಿತ್ರ ರಚಿಸಿದ್ದಾರೆ.

ಮೈಸೂರು ನಗರ ಪುರಸಭಾ ಮಹಿಳಾ ಪ್ರೌಢಶಾಲೆಯಲ್ಲಿ ೧೯೬೦ ರಿಂದ ಚಿತ್ರ ಕಲಾಧ್ಯಾಪಿಕೆ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಸ್ವಾವಲಂಬನ ಮನೋವೃತ್ತಿಯವರಾದ ತಾವು ಸ್ವತಂತ್ರವಾಗಿ ಎಂದೆಂದೂ ಕಲಾ ವಿದ್ಯಾರ್ಥಿಯಾಗಿ ಜೀವನಸಾಗಿಸಬೇಕೆಂಬುದೇ ಇವರ ಹೆಬ್ಬಯಕೆ. ಸರಳ ಉಡುಪಿನ ನಿರಾಡಂಬರ ಕಲಾಸಾಧಕಿ ಸರೋಜ ಅವರ ಕಲಾಭ್ಯಾಸಕ್ಕೆ ಅವರ ಗಂಭೀರವಾದನಡೆ ನುಡಿ, ಸಹೃದಯತೆ, ಮೆರಗು ಕೊಟ್ಟಿದೆ. ಇವರ ಕಲಾರಾಧನೆ-ಸಾಧನೆ ಇವರ ಸಂತತಿಯ ಕಲಾ ಕೀರ್ತಿಯನ್ನು ಉಳಿಸಲಿ ಬೆಳೆಸಲಿ.



ಹೆಚ್. ಆರ್. ಸೀತಮ್ಮ

ಮೈಸೂರಿನ ಉದಯೋನ್ಮುಖ ಕಲಾಸಾಧಕಿ ಶ್ರೀಮತಿ ಸೀತಮ್ಮನವರು ಮೈಸೂರಿನ ಹೆಸರಾಂತ ಚಾಮರಾಜೇಂದ್ರ ಕಲಾಶಾಲೆ ನೀಡಿದ ಪ್ರಪ್ರಥಮ ಮಹಿಳಾ ಕಲಾವಿದೆ. ಇನ್ನೂ ತರುಣ ವಯಸ್ಸಿನ ಶ್ರೀಮತಿಯವರು ಪ್ರಕೃತಿ ಚಿತ್ರ, ರೂಪಚಿತ್ರ, ಸಂಯೋಗಚಿತ್ರ ಈ ಮುಂತಾದ ಪ್ರಕಾರಗಳಲ್ಲಿ ತೈಲ ಹಾಗೂ ಜಲವರ್ಣಗಳಲ್ಲಿ ಉತ್ತಮ ಸಾಧನೆಯನ್ನು ತೋರುತ್ತಾ ಬಂದಿದ್ದಾರೆ.

ಅಲ್ಲದೆ ಇವರು ಸಾಬೂನಿನ ಮಾಧ್ಯಮದಲ್ಲಿ ಶಿಲ್ಪಕೃತಿಗಳನ್ನೂ ರಚಿಸುವ ಹೆಚ್ಚಳವನ್ನು ಗಳಿಸಿಕೊಂಡಿದ್ದಾರೆ. ಒಮ್ಮೆ ದಸರಾಕಲಾಪ್ರದರ್ಶನದಲ್ಲಿ ಇವರು ರಚಿಸಿದ 'ಮುಕುರ ಮುಗ್ಧೆ' ಕೃತಿ ಪ್ರದರ್ಶಿತವಾಗಿದ್ದಿತು. ಅದು ಸಾಮಾನ್ಯ ಸಾಬೂನಿನಲ್ಲೇ ಸಿದ್ಧಮಾಡಲಾದ ಬೇಲೂರು ಶಿಲ್ಪಮಾದರಿಯ ಒಂದು ವಿಶಿಷ್ಟಕೃತಿ. ಇಲ್ಲಿ ಕಾಣಬರುವ ಸಹಜವಾದ ಆಕಾರ, ಅಲಂಕಾರ, ನಿಲುವು, ಭಂಗಿ, ವಿನ್ಯಾಸಗಳನ್ನೆಲ್ಲಾ ಗಮನಿಸಿದಾಗ ಹಿರಿಯ ಶಿಲ್ಪಿಯ ಕೈವಾಡವಿರಬೇಕೆನಿಸುತ್ತಿತ್ತು. ಕಾರಣ ಇವರಿನ್ನೂ ಕಲಾವಿದ್ಯಾರ್ಥಿಯಾಗಿದ್ದರು ಆಗ. ಅದರ ಉತ್ತಮ ಸೊಬಗಿಗೆ ಆಶ್ಚರ್ಯಪಟ್ಟ ಅನೇಕ ಕಲಾವಿದರು ಅನೇಕರೀತಿಯಲ್ಲಿ ಅಭಿಪ್ರಾಯ ಕೊಡುತ್ತಿದ್ದರು.

"ಸೀತಮ್ಮನವರಿಗೆ ಯಾರೋ ಶಿಲ್ಪಿ ಮಾಡಿ ಕೊಟ್ಟಿರಬೇಕು!--"

"ಯಾರೋ ಮಾಡಿದ್ದನ್ನು ಬಹುಮಾನಗಳಿಸಲು ತಂದಿಟ್ಟಿರಬೇಕು"

ಈ ರೀತಿಯ ಕುಹಕ ನುಡಿಗಳನ್ನು ಕೇಳಿದ ಕುಮಾರಿ ಸೀತಮ್ಮನ ಹೃದಯ ಅತಿಯಾಗಿ ನೊಂದಿತು. ಕೆಣಕಿದ ಸಿಂಹಿಣಿಯಂತಾದರು.

ಮತ್ತೆ ದಸರಾಕಲಾಪ್ರದರ್ಶನ ಬಂದಿತು. ಆಗಲೂ ಸೀತಮ್ಮನವರ ಸಾಬೂನಿನ ಮತ್ತೊಂದು ಅಪೂರ್ವ ಶಿಲ್ಪಕೃತಿ ಕಾಣಿಸಿಕೊಂಡಿತು. ಬಹುಮಾನವೂ ದೊರೆಯಿತು. ಹೀಗೆ ಮೂರು ನಾಲ್ಕು ವರ್ಷಗಳ ಕಲಾಪ್ರದರ್ಶನಗಳಲ್ಲಿ ಎಡೆಬಿಡದೆ ಕೃತಿಗಳನ್ನು ಪ್ರದರ್ಶಿಸುತ್ತಾ ಬಂದರು. ಇವರ ಸಹಜ ಕಲಾಶಕ್ತಿಯನ್ನು ಅರಿತ ಜನ ಮೌನತಾಳಿತು, ಅಭಿಮಾನಪಟ್ಟಿತು.

ಇದರಿಂದಾಗಿ ಶ್ರೀಮತಿ ಸೀತಮ್ಮನ ಹೆಸರು ಎಲ್ಲ ಕಲಾವಿದರ ಹೃದಯದಲ್ಲೂ ನಿಲ್ಲುವಂತಾಯಿತು. ಕನ್ನಡ ಮಹಿಳಾಕಲಾವಿದರಲ್ಲಿ ಇವರನ್ನು ಯಾರೂ ಮರೆಯದಂತಾಯಿತು.

ಶಿಲ್ಪಕೃತಿಯಲ್ಲಿ ಹೆಸರು ಪಡೆದಂತೆ ಚಿತ್ರಕಲಾಕೃತಿಗಳನೇಕವು ಇವರಿಗೆ ಹೆಸರು ತಂದಿವೆ. ಭಿಕ್ಷಾಟನಮೂರ್ತಿ, ಬುದ್ಧದೇವ, ಓರ್ವ ಮಹಿಳೆ, ಭಸ್ಮಾಸುರ— ಮುಂತಾದ ಪಾಶ್ಚಿಮಾತ್ಯ ಪದ್ಧತಿಯ ಜಲವರ್ಣದ ಸಂಯೋಗ ಚಿತ್ರಗಳೂ; ವೃದ್ಧ, ಶೃಂಗಾರ ಸಿದ್ಧತೆ, ಹುಬ್ಬಳ್ಳಿ ಪೇಟೆ, ಶಾಕುಂತಲ ಮುಂತಾದ ತೈಲವರ್ಣದ ಚಿತ್ರಗಳೂ ಗಮನಾರ್ಹವಾದುವು. ಅವರಲ್ಲಿಯೂ ಎಲ್ಲರ ಮನಸ್ಸನ್ನು ಸೆಳೆಯುವ ಕೃತಿ 'ಶಾಕುಂತಲ.' ಇಲ್ಲಿ ತೈಲವರ್ಣವನ್ನು

ಬಳಸಿದ್ದರೂ ತೆಳುವಾದ ಜಲವರ್ಣದ ಲೇಪನವಿದ್ದಂತೆ ಮೆರೆದಿರುವ ವರ್ಣ ಮೋಡಿ ಆಶ್ಚರ್ಯವನ್ನುಂಟುಮಾಡುತ್ತದೆ.

ಹೊಂಬಿಸಿಲಿನಲ್ಲಿ ಸುಂದರ ನಿಸರ್ಗದ ನಡುವೆ ಶಕುಂತಲೆ ತನ್ನ ಸಖಿಯರೊಡನೆ ಹೊರಟ ಸನ್ನಿವೇಶ, ಅವಳ ಕೋಮಲ ಪಾದಕ್ಕೆ ಚುಚ್ಚಿದ ಒಂದು ಮುಳ್ಳು, ಹಿಂದಕ್ಕೆ ಬಾಗಿ ಆ ಪಾದವನ್ನು ಎತ್ತಿ ಮುಳ್ಳನ್ನು ತೆಗೆಯುತ್ತಿರುವ ಅವಳ ಮೋಹಕ ಭಂಗಿ, ಆಕರ್ಷಕ ಮುಖಮುದ್ರೆ ಮುಂತಾದುವನ್ನು ತುಂಬ ಮನೋಜ್ಞವಾಗಿ ಶ್ರೀಮತಿ ಸೀತಮ್ಮನವರು ತಂದಿದ್ದಾರೆ.

ನಿಸರ್ಗ ಚಿತ್ರರಚನೆಯಲ್ಲಿ ಉತ್ತಮ ಯಶಸ್ಸನ್ನು ಪಡೆದಿರುವ ಶ್ರೀಮತಿಯವರ ಕುಂಚಶಕ್ತಿ ಈ ಕೃತಿಯಲ್ಲೂ ಪ್ರಕೃತಿ ವೈಭವವನ್ನು ಬಿಡಿಸುವಲ್ಲಿ ಸಾರ್ಥಕವಾಗಿದೆ. ಪ್ರಕೃತಿಯೊಡನೆ ಮಾನವರ ಸಹಚರ್ಯೆಯನ್ನು ಈ ಕೃತಿ ಸುಂದರವಾಗಿ ಪ್ರತಿಬಿಂಬಿಸುತ್ತದೆ. 'ಭಸ್ಮಾಸುರ' ಕೃತಿಯಲ್ಲಿ ಉತ್ತಮ ರೇಖಾವಿನ್ಯಾಸವನ್ನು ಕಾಣಬಹುದು. 'ಕಂಸ ವಸುದೇವರ' ಕೃತಿ ಸಂಯೋಗ ಸಂವಿಧಾನಕ್ಕೆ ಉತ್ತಮ ಉದಾಹರಣೆ.

ಇವರ ಎಲ್ಲ ಕೃತಿಗಳಲ್ಲಿ ಉತ್ತಮ ಪ್ರಯೋಗಶೀಲತೆಯನ್ನೂ ಕಲಾ ಶ್ರದ್ಧೆಯನ್ನೂ ಒಳ್ಳೆಯ ಭವಿಷ್ಯವನ್ನೂ ಗಮನಿಸಬಹುದಾಗಿದೆ.

ಶ್ರೀಮತಿ ಸೀತಮ್ಮನವರದು ಸಂಪ್ರದಾಯನಿಷ್ಠ ಗೌರವಾನ್ವಿತ ಮನೆ. ಬಾಲ್ಯದಲ್ಲೇ ಕಲಾಸಕ್ತಿಯನ್ನು ತೋರಿದರು ಇವರ ತಂದೆಯವರು ಬಹು ಧೈರ್ಯಮಾಡಿ ಚಾಮರಾಜೇಂದ್ರ ಕಲಾಶಾಲೆಗೆ ಸೇರಿಸಿದರು. ಅಲ್ಲಿ ಶ್ರೀ ಎಫ್. ಎಂ. ಸೂಫಿ, ಶ್ರೀ ಎಸ್. ಸುಬ್ರಹ್ಮಣ್ಯರಾಜು ಮತ್ತು ಶ್ರೀ ಎಸ್. ನಂಜುಂಡಸ್ವಾಮಿಗಳವರ ನೇತೃತ್ವದಲ್ಲಿ ಕಲಾಭ್ಯಾಸ ನಡೆಸಿದರು. ಆದರೆ ಇವರ ಅನೇಕ ಚಿತ್ರಗಳಲ್ಲಿ ಜನಾಬ್ ಸೂಫಿಯವರ ಕುಂಚ ವೈಖರಿಯನ್ನೂ ವರ್ಣ ಮೋಡಿಯನ್ನೂ ವಸ್ತುನಿಷ್ಠೆಯನ್ನೂ ಗಮನಿಸಬಹುದಾಗಿದೆ.

ಶ್ರೀಮತಿ ಸೀತಮ್ಮನವರು ಈಚೆಗೆ ಲಗ್ನವಾದಮೇಲೆ ಅವರ ಕಲಾ ಪ್ರತಿಭೆ ಕುಂಠಿತವಾಯಿತೋ ಏನೋ ಎನಿಸುತ್ತಿದೆ. ಕನ್ನಡನಾಡು ಇಂಥ ಪ್ರಭಾವಿ ಮಹಿಳಾ ಕಲಾವಿದೆಯರಿಂದ ಒಳ್ಳೊಳ್ಳೆಯ ಕೃತಿರತ್ನಗಳನ್ನು ಆಶಿಸುವುದು ಸಹಜವಾದುದು.

ಪಿ.ಎಸ್. ಪುಣಿಂಚತ್ತಾಯ

" ನವ್ಯಚಿತ್ರವು ಒಂದು ಸ್ವತಂತ್ರವಿಧಾನ. ಸ್ವಯಂ ಕಲ್ಪಿತವಾದ ಬಣ್ಣಗಾರಿಕೆಗೆ ಅದು ಒಂದು ಮಾಧ್ಯಮವೆನ್ನಬಹುದು. ಅದರಲ್ಲಿ ಒಂದೇ ಆವರಣದೊಳಗೆ ಅನೇಕ ಭಾವಪೂರಿತವಾದ ಚಿತ್ರಗಳನ್ನು ರಚಿಸಿ ತನ್ನ ಜಾಣ್ಮೆಯನ್ನು ತೋರಿಸಲು ಸಾಧ್ಯವಿದೆ. ಈ ವಿಧಾನ ಬೇರೆ ಕಡೆಗಳಲ್ಲಿ ಅಸಾಧ್ಯ. ಅಲ್ಲದೆ ನವ್ಯಚಿತ್ರಗಳಲ್ಲಿ ವರ್ಣವ್ಯವಸ್ಥೆಯ (Colour-Scheme) ಅಭ್ಯಾಸವು ಅತ್ಯಂತ ಗಾಢವಾದುದು. ವ್ಯಾಪಾರೋದ್ಯಮ

(Commercial Art) ಕಲೆಯಲ್ಲಿ ಹಾಗಲ್ಲ....ಅಲ್ಲಿ ಕಲಾವಿದ ವಸ್ತುವಿಗೆ ಶರಣಾಗತನಾಗಬೇಕಾಗುತ್ತದೆ. ಅಲ್ಲಿ ವಸ್ತುವಿಗೆ ಇದ್ದ ರೂಪವನ್ನೆ ಅವನು ಕೊಡಬೇಕಾಗುತ್ತದೆ. ಆಗ ಸ್ವಂತ ಪ್ರತಿಭೆಗೆ ಅವಕಾಶವಿಲ್ಲವಾಗುತ್ತದೆ. ವ್ಯಾಪಾರೋದ್ಯಮಿ ಕಲಾವಿದನು ಅನೇಕ ಬಾರಿ ಭಾವಚಿತ್ರಗಳನ್ನೇ ಆಶ್ರಯಿಸಬೇಕಾಗುತ್ತದೆ. ಹೆಚ್ಚಿನ ವಿವರಣಾ ರೇಖೆಗಳಿಲ್ಲದೆಯೇ ಭಾವವ್ಯಂಜನೆಯನ್ನುಂಟುಮಾಡಿಸುವ ಜಾಣ್ಮೆ ಕಲಾವಿದನ ಯೋಗ್ಯತೆಯನ್ನು ತೂಗಬಲ್ಲದು. ಅಂತಹ ಕಲಾವಿದನ ಸ್ವಯಂಪ್ರತಿಭೆಯೇ ಹೆಚ್ಚು ಸಫಲವಾಗಬಲ್ಲುದು"—ಎಂದು ಶ್ರೀಯುತ ಪುಣಿಂಚತ್ತಾಯ ಅವರು ನವ್ಯಚಿತ್ರಗಳ ಬಗ್ಗೆ ಮನಬಿಚ್ಚಿ ತಮ್ಮ ಅಭಿಪ್ರಾಯವನ್ನು ನೀಡುತ್ತಾರೆ.

ಶ್ರೀಯುತ ಪುಣಿಂಚತ್ತಾಯ ಅವರು ಸಹಜವಾಗಿ ನವ್ಯ ಕಲಾಸಂಪ್ರದಾಯಕ್ಕೆ ಮಾರುಹೋಗಿರುವುದು ಸಹಜವಿದೆ. ಬೊಂಬಾಯಿಯ ನವನಾಗರೀಕತೆಯ ವಾತಾವರಣದಲ್ಲಿ ಕಲಾಭ್ಯಾಸ ಮಾಡಿಬಂದ ತರುಣರಿವರು.

ಕಾಸರಗೋಡು ತಾಲ್ಲೂಕ್ ನೆಕ್ರಾಜೆ ಬಳಿಯ ಪುಂಡೂರು ಇವರ ಹುಟ್ಟೂರು. ಇವರದು ಸುಸಂಸ್ಕೃತ ಮನೆತನ. ಖ್ಯಾತ ಕವಿವರ್ಯರಾದ ದಿ|| ಲಕ್ಷ್ಮೀನಾರಾಯಣಪ್ಪ ಪುಣಿಂಚತ್ತಾಯ ಅವರ ವಂಶ ಇವರದು. ಜನಪ್ರಿಯ ರಾಷ್ಟ್ರೀಯ ಗೀತೆಗಳನ್ನು ಬಹು ಸುಂದರವಾಗಿ ರಚಿಸಿ ಹೆಸರಾಗಿದ್ದರು. ಅವರ ವಂಶದ ಹೆಮ್ಮೆಯ ಈ ಬಾಲಕ ಪುಣಿಂಚತ್ತಾಯ ತನ್ನ ಎಳೆತನದಲ್ಲೇ ಕಲಾಸಕ್ತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ.

ಮಗನ ಕಲಾಭಿರುಚಿಯನ್ನು ಗುರುತಿಸಿದ ಇವರ ತಂದೆ ಬಾಲಕನನ್ನು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಲು ಅವಕಾಶ ಮಾಡಿಕೊಟ್ಟರು. ತುಂಬ ಉತ್ಸಾಹದಿಂದ ಇಲ್ಲಿ ಕಲಾಭ್ಯಾಸ ಮಾಡಿದರು. ಇಲ್ಲಿಯ ಕಲಾಭ್ಯಾಸ ಮುಗಿಯುವ ಮುನ್ನವೇ ಶ್ರೀಯುತರು ಬೊಂಬಾಯಿಗೆ ಬಂದುಬಿಟ್ಟರು. ' ನೂತನ ಕಲಾಮಂದಿರ ' ಇವರನ್ನು ಆಕರ್ಷಿಸಿತು. ಕನ್ನಡದ ಖ್ಯಾತ ಕಲಾವಿದರಾಗಿ ಬೊಂಬಾಯಿಯಲ್ಲಿ ನೆಲಸಿ ನೂತನ ಕಲಾಮಂದಿರದ ಮೂಲಕ ಅನೇಕ ಕನ್ನಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡುತ್ತಿದ್ದ ಪ್ರೊ|| ಜಿ. ಯಸ್. ದಂಡವತಿಮಠ ಅವರ ದೃಷ್ಟಿಗೆ ಈ ಕಲಾಭ್ಯಾಸಿ ಪುಣಿಂಚತ್ತಾಯ ಕಾಣಿಸಿಕೊಂಡರು. ಈ ಯುವಕನ ಅತೀವ ಶ್ರದ್ಧೆ ಉತ್ಸಾಹಗಳನ್ನು

ಗುರುತಿಸಿದ ಶ್ರೀಯುತರು ಒಳ್ಳೆಯ ಮಾರ್ಗದಲ್ಲಿ ಕಲಾಭ್ಯಾಸ ಜರುಗುವಂತೆ ನೋಡಿಕೊಂಡರು.

ಬೊಂಬಾಯಿ ಮಹಾನಗರದ ಆರ್ಟ್‌ಗ್ಯಾಲರಿಗಳಲ್ಲಿ ಪ್ರತಿವರ್ಷವೂ ಕಲಾವಿದರ ಕೃತಿಗಳ ಪ್ರದರ್ಶನ ಜರುಗುತ್ತಲೇ ಇದ್ದವು. ಈ ಎಲ್ಲ ಪ್ರದರ್ಶನಗಳಿಗೂ ಈ ಯುವಕರು ಬಹು ಆಸಕ್ತಿಯಿಂದ ಭೇಟಿಕೊಡುತ್ತಾ ಬಂದರು. ತಮ್ಮ ಮನೋಧರ್ಮ ವಿಕಾಸವಾಗುತ್ತಾ ಬಂದಿತು. ನವ್ಯಚಿತ್ರ ಕಲೆಗೆ ಅವರು ಹೆಚ್ಚು ಮಾರುಹೋಗಲು ಆ ಪ್ರದರ್ಶಗಳೂ ಕೊಂಚ ಸಹಾಯಕವಾದುವು.

ಶ್ರೀ ಪುಣಿಂಚತ್ತಾಯ ಅವರು ನಿಸರ್ಗ ಪ್ರಿಯರಾಗಿದ್ದಾರೆ. ನಿಸರ್ಗದ ಮಡಿಲಲ್ಲೇ ಬೆಳೆದು ಬಂದ ಇವರು ಆದಕ್ಕೆ ಮಾರುಹೋಗಿರುವುದು ಸಹಜವೇ ಆಗಿದೆ. ಇವರ ನಿಸರ್ಗ ಚಿತ್ರಗಳಲ್ಲಿ ಇವರು ತೋರುವ ನವ್ಯತೆ ಮೆಚ್ಚಬಹುದಾದುದು. ಇವರ ಕುಂಚದ ಸೆಳೆತದ ವೇಗವನ್ನೂ ವರ್ಣಗಳ ಸಹಜತೆಯನ್ನೂ ಅವರ ಕೃತಿಗಳಲ್ಲಿ ಗಮನಿಸಬಹುದು. ಇವರ ಕುಂಚ ರೂಪಚಿತ್ರ ರಚನೆಯಲ್ಲಿಯೂ ಪಳಗಿದೆ.

ಒಮ್ಮೆ ಇವರ ಪ್ರಕೃತಿ ಹಾಗು ರೂಪಚಿತ್ರಗಳು ಮೈಸೂರು ದಸರಾ ಕಲಾಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆದಿದ್ದುವು. ೧೯೬೪ ರಲ್ಲಿ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ನಡೆದ ಕಲಾಪ್ರದರ್ಶನದಲ್ಲಿ ಇವರ ಮತ್ತೊಂದ ಪ್ರಕೃತಿ ಚಿತ್ರ ಒಂದು ಪ್ರಥಮ ಬಹುಮಾನವನ್ನು ಗಳಿಸಿದ್ದಿತು.


ಶ್ರೀ ಪುಣಿಂಚತ್ತಾಯರು "ಆರ್ಟ್ ಸೊಸೈಟಿ ಆಫ್ ಇಂಡಿಯಾ"ದ ನೆರವಿನಲ್ಲಿ ವಿದ್ಯಾರ್ಥಿವೇತನ ಪಡೆದು ಹೈದರಾಬಾದ್, ಮೈಸೂರು ಮುಂತಾ ಡೆಡೆಗಳಲ್ಲಿ ಕಲಾಪ್ರವಾಸ ಕೈಕೊಂಡು ಚಿತ್ರಕಲಾಧ್ಯಾಯನ ಮಾಡಿದರು. ೧೯೬೫ ರಲ್ಲಿ ಇವರ ಒಂದು ಅಮೂಲ್ಯ ತೈಲಚಿತ್ರಕ್ಕೆ ಪೂನದ 'ಫೆಡರೇಷನ್ ಆಫ್ ಆರ್ಟ್ ಇನ್‌ಸ್ಟಿಟೂಷನ್'ನವರು ಒಂದು ಬಹುಮಾನವನ್ನಿತ್ತು ಗೌರವಿಸಿದರು.

ಬೊಂಬಾಯಿಯ ಆರ್ಟ್ ಸೊಸೈಟಿ ಆಫ್ ಇಂಡಿಯನ್ ಎಗ್ಜಿಬಿಷನ್‌ನಲ್ಲಿ ನವದೆಹಲಿಯ ಲಲಿತಕಲಾ ಅಕಡಮಿಯವರು ನಡೆಸಿದ 'ನ್ಯಾಷನಲ್ ಎಗ್ಜಿಬಿಷನ್'ನಲ್ಲೂ ಇವರು ಭಾಗವಹಿಸಿದ್ದರು. ಬೊಂಬಾಯಿಯ ಜಹಾಂ

ಗೀರ್ ಕಲಾ ಸಂಗ್ರಾಲಯದಲ್ಲಿ ೧೯೬೫ ರಲ್ಲಿ ಇವರ ಪ್ರಥಮ ಏಕ ವ್ಯಕ್ತಿ ಕೃತಿಗಳ ಪ್ರದರ್ಶನವೂ ಜರುಗಿತು. ಇದೇ ೧೯೬೬ ರ ಜುಲೈನಲ್ಲಿ ಮಂಗಳೂರಿನ ಹಂಪನಕಟ್ಟೆಯ ಸಿಂಡಿಕೇಟ್‌ಬ್ಯಾಂಕ್ ಹಾಲ್‌ನಲ್ಲಿ ಇವರ ದ್ವಿತೀಯ ಕಲಾಪ್ರದರ್ಶನವೂ ಜರುಗಿ ದಕ್ಷಿಣ ಕನ್ನಡದ ಕನ್ನಡಿಗರ ಪ್ರೀತಿ ಗೌರವಕ್ಕೆ ಪಾತ್ರರಾದರು.

"ಸ್ವತಂತ್ರ ಮನೋ ಪ್ರವೃತ್ತಿ ಮತ್ತು ನೂತನ ತಂತ್ರ ವೈವಿಧ್ಯತೆ" ಯನ್ನು ಮೆರೆಯುವುದೇ ನವ್ಯಚಿತ್ರಕಲಾವಿದನ ಮುಖ್ಯಗುರಿ. ಅಂಥ ಕಲಾವಿದನು ಅವನವನ ವಿಶಿಷ್ಟವಾದ ಭಾವನೆಗಳನ್ನು ಅವನವನು ಇಚ್ಛಿಸುವಂತೆ ಸಂಪೂರ್ಣ ಸ್ವಾತಂತ್ರ್ಯದಿಂದ ಚಿತ್ರ ರಚಿಸುತ್ತಾನೆ-ಎಂಬುವನ್ನು ಚೆನ್ನಾಗಿ ಅರಿತು ಕೃತಿ ರಚಿಸುತ್ತಾ ಬಂದಿದ್ದಾರೆ ಶ್ರೀ ಪುಣಿಂಚತ್ತಾಯರು.

ಕನ್ನಡ ನೆಲೆಯಾದ ಕಾಸರಗೋಡು ಇಂಥ ಪ್ರತಿಭಾವಂತ ತರುಣ ಕಲಾವಿದರನ್ನು ಪಡೆದಿರುವುದು ಒಂದು ಹೆಮ್ಮೆಯ ವಿಷಯ. ಇವರಿಂದ ಆ ಪ್ರಕೃತಿನೆಲೆ ಉತ್ತಮ ಸೇವೆಯನ್ನು ಆಶಿಸುತ್ತಿದೆ. ಅಂತೆ ಇವರಿಗೆ ಕಲಾ ರಂಗದಲ್ಲಿ ಭವ್ಯ ಭವಿಷ್ಯವೂ ಕಾದಿದೆ.



ವಿ.ಆರ್. ರಾವ್

" An age, which has no fixed standard of life, and art being an integral part of life, can not be expected to have a fixed standard. Artists have, and will express in various ways and if we accept freedom of expression in art, art, being fundamentally a means of communication, we have also to accept, the freedom

of the artist, to communicate through his painting, in the manner he sincerly believes. What ever may be the mode of approach by any artist, whether he is a modernist, an abstract, or a philosophical painter or on the other hand, one to whom love of nature is the real inspiration to art or whether he is a commercial artist, they should all be friends and learn to respect each other's work. No artist should criticise a brother artist's work in public in a manner as to discredit him".

ಈ ಅನುಭವ ಪೂರ್ಣವಾದ ಅಭಿಪ್ರಾಯಗಳನ್ನು ನಮ್ಮ ಹಿರಿಯ ಕಲಾವಿದರಾದ ಶ್ರೀ ವಿ.ಆರ್.ರಾವ್ ಅವರು ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತಿನ ಆಶ್ರಯದಲ್ಲಿ ೧೯೬೩ ರ ಜುಲೈ ೨೮ ರಂದು ಲಲಿತಕಲಾ ಪ್ರದರ್ಶನದ ಸಂದರ್ಭದಲ್ಲಿ ವ್ಯಕ್ತಪಡಿಸಿದರು.

ಇತರ ವೇಳೆಯಲ್ಲಿ ನೋಡಲು ದುರ್ಲಭವಾದ ಶ್ರೀ ವಿ. ಆರ್. ರಾಯರ ಅಪೂರ್ವ ಚಿತ್ರಗಳನ್ನು ಅಂದು ಅಲ್ಲಿ ಪ್ರದರ್ಶಿಸಿ ಕಲಾಭಿಮಾನಿಗಳಿಗೆ ಒಂದು ಸದವಕಾಶವನ್ನೂ ಒದಗಿಸಲಾಗಿದ್ದಿತು. ಈ ಪ್ರದರ್ಶನಕ್ಕೆ ಜನರು ತಂಡೋಪ ತಂಡವಾಗಿ ಬಂದಿದ್ದರು ಪ್ರೇಕ್ಷಕರ ಪುಸ್ತಕದಲ್ಲಿ ಗುರುತಿಸಲಾಗಿದ್ದ ಅಭಿಪ್ರಾಯಗಳು ಮುಕ್ತಕಂಠದ ಅಭಿಮಾನದ ನುಡಿಗಳೇ ಆಗಿದ್ದವು. ಶ್ರೀ ರಾವ್ ಅವರ ಕೃತಿಗಳನ್ನು ಇರಿಸಲಾಗಿದ್ದ ಸಭಾಂಗಣ ಪ್ರವೇಶಿಸಿದ ಕೂಡಲೇ ನಮಗೆ `ಯಾವುದೋ ಮಾಂತ್ರಿಕ ಲೋಕ ಪ್ರವೇಶಿಸಿದ ಅನುಭವವಾಗುತ್ತಿತ್ತು.

ಈ ಪ್ರದರ್ಶನದಲ್ಲಿ ಮೊದಲು ಕಣ್ಣಿಗೆ ಬಿದ್ದ ಇವರ ಹತ್ತಾರು ತೈಲವರ್ಣದ ಬೃಹದಾಯಕಾರದ ರೂಪಚಿತ್ರಗಳು ತುಂಬ ಆಕರ್ಷಕವಾಗಿದ್ದವು. ನೆಹರೂ ಅವರ ಚಿತ್ರಗಳು ನಮ್ಮ ಕಣ್ಣುಗಳನ್ನು ಸೂರೆಗೊಂಡವು. ಪಿಟೀಲು ನುಡಿಸುವವ, ವೃದ್ಧೆ; ಶ್ರೀ ಹಳ್ಳಿಕೇರಿ; ಹಾಗೂ ನಮು

ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ ಮುಂತಾದವರ ರೂಪಚಿತ್ರಗಳು ಸಹಜ ಸುಂದರವಾಗಿದ್ದವು.

ಶ್ರೀ ರಾಯರು ಲಂಡನ್ನಿನಿಂದ ಬೆಂಗಳೂರಿನವರೆಗೆ ಹೆಸರು ಗಳಿಸಿದ ವ್ಯಕ್ತಿ. ಇವರದು ಪಳಗಿದ ಕುಂಚ ಎಂಬುದಕ್ಕೆ ಅವರ ತೈಲವರ್ಣದ ಆ ಕೃತಿಗಳೇ ಸಾಕ್ಷಿ, ರಾಯರ ಕುಂಚದಲ್ಲಿ ಶಕ್ತಿ ಇದೆ, ಸತ್ವ ಇದೆ. ವರ್ಣ ಬಳಕೆಯಲ್ಲಿ ಸಹಜತೆ ಇದೆ. ಈ ಕೃತಿಗಳಲ್ಲಿ ಬಳಸಲಾದ ತೈಲವರ್ಣ ಜಲವರ್ಣದಂತೆ ತೋರುತ್ತದೆ. ಶ್ರೀಯುತರು ರಚಿಸುವ ಮುಖಗಳಲ್ಲಿ ಎದ್ದು ತೋರುವ ವರ್ಚಸ್ಸು, ಕಣ್ಣುಗಳಲ್ಲಿನ ಕಾಂತಿ, ತುಟಿಗಳಲ್ಲಿನ ಸಜೀವತೆ, ಕೆನ್ನೆಗಳಲ್ಲಿನ ಮಿರುಗುವ ವೈಖರಿ, ತೊಟ್ಟ ಉಡುಪಿನ ವಾಸ್ತವ ವರ್ಣಗಳು ಮುಂತಾದವುಗಳಲ್ಲಿ ಕಾಣಬರುವ ಒಂದು ಕೌಶಲ ಸೋಜಿಗಪಡುವಂತಹದು. ರೂಪಚಿತ್ರಗಳಲ್ಲಿ ಇರಬಹುದಾದ ವೈಶಿಷ್ಟ್ಯಗಳನ್ನೆಲ್ಲಾ ಶ್ರೀ ರಾಯರ ಕೃತಿಗಳಲ್ಲಿ ಗನುನಿಸಬಹುದಾಗಿದೆ. ಇದಕ್ಕೆ ಇವರ ಕುಂಚ ಸಿದ್ಧಿಯೇ ಕಾರಣ ಎನ್ನಬೇಕು. ಪ್ರತಿಯೊಂದು ಚಿತ್ರವೂ ಅವರ ತಪಸ್ಸಿನ ಪ್ರಸಾದವಾಗಿ ಕಲಾಭಿಮಾನಿಗಳನ್ನು ಚಕಿತಗೊಳಿಸುತ್ತವೆ. ಅಲ್ಲದೆ ಉದಯೋನ್ಮುಖ ಕಲಾವಿದರಿಗೆ ಸ್ಫೂರ್ತಿದಾಯಕ ಈ ಹಿರಿಯ ಕಲಾವಿದರ ಕೃತಿಗಳು.

ಶ್ರೀ ವಿ. ಆರ್. ರಾವ್ ಅವರು ಮಂಗಳೂರಿನಲ್ಲಿ ಹುಟ್ಟಿದರು. ಬಾಲ್ಯದಲ್ಲಿ ಅವರನ್ನು ಯಾವುದೋ ಅವ್ಯಕ್ತ ಕಲಾಶಕ್ತಿ ಆಕರ್ಷಿಸಿದ್ದಿತು. ನ್ಯಾಯಶಾಸ್ತ್ರ ವ್ಯಾಸಂಗ ಮಾಡುವ ಸಲುವಾಗಿ ಶ್ರೀ ರಾಯರು ಲಂಡನ್ನಿಗೋದರು. ಅಲ್ಲಿ ರಾಯಲ್ ಅಕಾಡಮಿಯಲ್ಲಿ ಚಿತ್ರಕಲಾಭ್ಯಾಸದ ರೀತಿ ನೀತಿಗೆ, ಪ್ರಸಿದ್ಧ ಚಿತ್ರಕಾರರ ಕೃತಿಗಳಿಗೆ ಶ್ರೀರಾಯರು ಕಲಾಮಯ ಹೃದಯ ಆಕರ್ಷಿತವಾಯಿತು. ತಾವೂ ಓರ್ವ ಕಲಾವಿದರಾಗಲು ಬಯಸಿದರು. ನ್ಯಾಯಶಾಸ್ತ್ರ ಪ್ರವೀಣರಾಲು ಬಹು ದೂರದಿಂದ ಬಂದ ರಾಯರು ಚಿತ್ರಕಲೆಗೆ ಮಾರುಹೋಗಿಬಿಟ್ಟರು ಲಂಡನ್ ನಗರದ ವಿಶ್ವವಿಖ್ಯಾತ ಕಲಾಶಾಲೆಯಾದ ರಾಯಲ್ ಅಕಾಡಮಿಗೆ ಸೇರಿಬಿಟ್ಟರು. ತೈಲಚಿತ್ರ ರೂಪಿಸುವುದರಲ್ಲಿ ಒಳ್ಳೆಯ ಸಾಧನೆಯನ್ನು ತೋರುತ್ತಾ ಬಂದರು. ಈ ಮಾಧ್ಯಮದಲ್ಲಿ ಅಪರೂಪದ ಸಿದ್ಧಿಯನ್ನು ಗಳಿಸಿಕೊಂಡರು ಆ ಮೂಲಕ ರಾಯರಿಗೆ ಎಫ್. ಆರ್. ಎಸ್. ಎ. ಕಲಾಪ್ರಶಸ್ತಿಯು ಲಭಿಸಿತು. ಅಕಾಡಮಿಯ ಸದಸ್ಯರಾಗಿ

ರಾಯರು ಸೇವೆ ಸಲ್ಲಿಸುತ್ತಾ ಬಂದರು. ಇವರ ರೂಪಚಿತ್ರಗಳು ಅಲ್ಲಿ ತುಂಬಾ ಜನಮೆಚ್ಚಿಗೆಗೆ ಪಾತ್ರವಾದುವು. ಲಂಡನ್ ಮಹಾನಗರದಲ್ಲಿ ಶ್ರೀ ರಾಯರೂ ಓರ್ವ ರೂಪಚಿತ್ರಕಾರರೆಂದು ಖ್ಯಾತಿಪಡೆದರು. ಅಲ್ಲಿ ಅವರಿಗೆ ಅಪರಿಮಿತ ವಾದ ಪ್ರೋತ್ಸಾಹವೂ ದೊರಕಿತು. ಈ ನಡುವೆ ೧೯೩೨ ರ ಸಮಯದಲ್ಲಿ ಬೊಂಬಾಯಿಯಲ್ಲಿ 'ನೂತನ ಕಲಾಮಂದಿರ' ಕನ್ನಡಿಗರಿಂದಲೇ ಸ್ಥಾಪಿತ ವಾಯಿತು. ಶ್ರೀ ದಂಡಾವತಿಮಠ ಅವರೊಡನೆ ಶ್ರೀ ರಾಯರು ಕಲಾ ಮಂದಿರ ಬೆಳೆಯಲು ಕಾರಣರಾದರು. ಅಲ್ಪವೇಳೆಯಲ್ಲೇ ರಾಯರು ಲಂಡನ್ನಿಗೆ ಮತ್ತೆ ತೆರಳಬೇಕಾಯಿತು. ಸುಮಾರು ೧೬ ವರ್ಷಗಳ ಕಾಲ ಸಂಸಾರ ಸಮೇತ ಲಂಡನ್ ನಗರದಲ್ಲಿ ವಾಸಮಾಡಿದರು. ಆರೋಗ್ಯ ಕ್ರಮೇಣ ಕೆಡುವಂತಾಯಿತು. ಲಂಡನ್ ಬಿಡುವ ಆಲೋಚನೆ ಮಾಡಿದರು. ೧೯೬೩ ರಲ್ಲಿ ಭಾರತಕ್ಕೆ ಮತ್ತೆ ಬಂದು ತಮ್ಮ ಮೆಚ್ಚಿನ ನೆಲೆಯಾದ ಬೆಂಗಳೂರು ನಗರದಲ್ಲಿ ವಾಸಮಾಡುತ್ತಿದ್ದಾರೆ.

ಬೆಂಗಳೂರಿಗೆ ಬಂದ ಅಲ್ಪ ಸಮಯದಲ್ಲಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ ಮುಂತಾದ ರಾಜಕಾರಣಿಗಳ ಗಮನಕ್ಕೂ ಬಿದ್ದರು. ರಾಯರ ಕಲಾಗಾರಕ್ಕೂ ಅನೇಕರು ಬಂದು ರಾಯರ ಸ್ವಾಭಾವಿಕ ಕೃತಿಗಳನ್ನು ನೋಡಿ ಮನಸಾರ ಮೆಚ್ಚಿಕೊಂಡರು.

ಶ್ರೀ ರಾಯರು ಕಲಾಗಾರ ಬೆಂಗಳೂರಿನ ಜಯಮಹಲ್ ಬಡಾವಣೆ ಯಲ್ಲಿದೆ. ಒಮ್ಮೆ ೧೯೬೩ರ ಜುಲೈ ೨೭ರಂದು ರಾಯರು ನಮ್ಮನ್ನು ಅವರ ಮನೆಗೂ ಆಹ್ವಾನಿಸಿದ್ದರು. ಅವರ ಕಲಾಗಾರದ ನಾಲ್ಕು ಭಿತ್ತಿಗಳಲ್ಲೂ ತೂಗುಹಾಕಲಾಗಿದ್ದ ತೈಲವರ್ಣದ ರೂಪಚಿತ್ರಗಳನ್ನು ನೋಡಿ ಅಚ್ಚರಿ ಪಟ್ಟೆವು. ಅಲ್ಲಿಯ ಶುಚಿತ್ವಕ್ಕೆ ಅಚ್ಚುಕಟ್ಟಿಗೆ ಮನಸೋತೆವು. ಯಾವುದೊ. ಪಾಶ್ಚಾತ್ಯ ಕಲಾವಿದನ ಮನೆಯಲ್ಲಿ ಬಂದುನಿಂತ ನೆನಪಾಯಿತು ನಮಗೆ. ರಾಯರು ಆಗ ಆರೋಗ್ಯ ಸರಿ ಇಲ್ಲದೆ ಹಾಸಿಗೆ ಹಿಡಿದಿದ್ದರು. ಈ ಸ್ಥಿತಿಯಲ್ಲೂ ನಮ್ಮನ್ನು ಬರಮಾಡಿಕೊಂಡರು. ರಾಯರನ್ನು ನೋಡಿ ನಮಗೆ ಆನಂದ ವಾಯಿತು. ಅಲ್ಲೇ ತೂಗುಹಾಕಲಾಗಿದ್ದ ಫೋಟೋ ನನ್ನ ಗಮನವನ್ನು ಸೆಳೆಯಿತು. ರಾಯರು ಲಂಡನ್‌ಗೆ ಹೋಗುವ ಮುನ್ನ ಪಂಡಿತ್ ನೆಹರೂ ಅವರೊಡನೆ ಇಂದಿರಾಜೀ, ರಾಯರು ಪತ್ನಿಸಮೇತ ನಿಂತು ತೆಗೆಸಿದ

ಫೋಟೋವಾಗಿದ್ದಿತು ಆ ಚಿತ್ರ ಕಂಡ ನಮಗೆ. ಶ್ರೀ ರಾಯರಿಗೆ ಭಾರತದ ಹಲವು ಪ್ರಮುಖ ರಾಜಕೀಯ ವ್ಯಕ್ತಿಗಳೆಲ್ಲಾ ಚಿರಪರಿಚಿತರೇ ಆಗಿರಬೇಕೆನಿಸಿದದು ಆಶ್ಚರ್ಯವೇನಲ್ಲ.

ಈಚೆಗೆ ರಾಯರು ಬೆಂಗಳೂರು ಸಮೀಪದಲ್ಲೇ ಒಂದು ಜಮೀನು ಪಡೆದು ಕೊಂಡಿದ್ದಾರೆ. ಅಲ್ಲೇ ಒಂದು ಉತ್ತಮ ಕಲಾಭವನವನ್ನು ತಮಗಾಗಿ ತೆರೆಯಬೇಕೆಂದಿದ್ದಾರೆ. ಅಲ್ಲಿ ಆದರ್ಶ ಕಲಾವಿದರಾಗಿ ಬಾಳಬೇಕೆಂದಿದ್ದಾರೆ. ಅವರಿಗೆ ಓರ್ವ ಕಲಾಪರಿಶ್ರಮದ ಪುತ್ರರೂ ಇದ್ದಾರೆ ರಾಯರ ಶ್ರೀಮತಿಯವರೂ ಕಲಾವಂತೆಯೇ! ಮನೆಯನ್ನು ಅಚ್ಚುಕಟ್ಟಾಗಿ ಇರಿಸುವಲ್ಲಿ, ಬಂದು ಹೋಗುವ ಅತಿಥಿಗಳನ್ನು ಸತ್ಕರಿಸುವಲ್ಲಿ ಅವರು ಕಲಾವಿದೆಯಾಗಿದ್ದಾರೆ. ಶ್ರೀ ರಾಯರ ಈ ಆದರ್ಶ ಜೀವನ ಕನ್ನಡ ಕಲಾವಿದರಿಗೆ ಮಾರ್ಗದರ್ಶನವಾಗಲಿ.



ಕೆ. ಆನಂದ

ವಿಷ್ಣು ಕಂಚಿ, ಶಿವಕಂಚಿ, ಜಿನಕಂಚಿ ಮತ್ತು ಪಾಂಡಿಚೇರಿಯ ಶ್ರೀ ಅರವಿಂದಾಶ್ರಮ ಮುಂತಾದ ಪುಣ್ಯ ನೆಲೆಗಳಲ್ಲೆಲ್ಲಾ ಪ್ರವಾಸಮಾಡಿ ಅನೇಕ ಜಲವರ್ಣ ಚಿತ್ರಗಳನ್ನೂ ರಚಿಸಿಕೊಂಡು ಅದೇತಾನೆ ಮದರಾಸಿಗೆ ಬಂದಿದ್ದೆ. ೧೯೬೬ ರ ಮಾರ್ಚಿ. ಯುಗಾದಿಯ ಹಬ್ಬದ ಮರುದಿನ ನನ್ನ ಕಲಾಪ್ರವಾಸ ಮುಗಿದಿದ್ದಿತು. ನನ್ನ ನಿಸರ್ಗ ಚಿತ್ರಗಳನ್ನು ಕಂಡ ನನ್ನ ಆತ್ಮೀಯ ಮಿತ್ರರೂ ಕಲಾವಿದರೂ ಆದ ಇಂಜಿನಿಯರ್ ಶ್ರೀ ಬಿ. ವಿ. ಪ್ರಹ್ಲಾದ್‌ರಾವ್ ಅವರು ತಮ್ಮ ಮೆಚ್ಚಿಗೆಯನ್ನು ತೋರಿ....

'ನಿಮ್ಮ ಈ ಚಿತ್ರಗಳು ಇಲ್ಲಿಯೇ ಪ್ರಕಟವಾದರೆ ಚೆನ್ನ' ಎಂದು ಹೇಳಿದರು. ನನ್ನನ್ನು ಅಲ್ಲಿಯ ಪ್ರಸಿದ್ಧ ವಾರಪತ್ರಿಕೆಯಾದ 'ಆಂಧ್ರಪ್ರಭಾ' ಸಂಪಾದಕರ ಬಳಿ ಕರೆತಂದುಪ ರಿಚಯ ಮಾಡಿಕೊಟ್ಟರು. ಸಂಪಾಕದಕ ಶ್ರೀ ನೀಲಮರಾಜು ವೆಂಕಟೇಶಯ್ಯನವರು ತುಂಬಾ ಕಲಾಭಿಮಾನಿಗಳು. ಅವರಿಂದಾಗಿ 'ಆಂಧ್ರಪ್ರಭಾ' ಪತ್ರಿಕೆಯ ಪುಟ ಪುಟದಲ್ಲೂ ಪ್ರತಿವಾರ ವಾರವೂ ಅನೇಕ ಹೊಸ ಹೊಸ ಕಲಾವಿದರ ವಿವಿಧ ಕೃತಿಗಳು ಕಾಣು ವಂತಾಗಿದೆ. ಇದು ಬಹು ಹೆಮ್ಮೆಯ ವಿಷಯ. ಅವರು ನನ್ನ ಕೆಲವು ಚಿತ್ರ ಗಳನ್ನು ಬಹು ಸೂಕ್ಷ್ಮವಾಗಿ ಅಭಿಮಾನದಿಂದ ನೋಡಿದರು. ಅವರಿಗೆ ಮೆಚ್ಚಿಗೆಯಾದ ಎರಡು ಚಿತ್ರಗಳನ್ನು ಪ್ರಕಟಣೆಗೆ ತೆಗೆದುಕೊಂಡರು. [ಒಂದು ಚಿತ್ರ—ಜಿನಕಂಚಿಯ ಚಂದ್ರಪ್ರಭಾ ದೇವಾಲಯ, ದಿ: ೪-೫-೬೭ರ ಆಂಧ್ರಪ್ರಭಾದಲ್ಲಿ ಪ್ರಕಟವಾಗಿದೆ]. ಅವರ ಪತ್ರಿಕೆಯ ಕಲಾವಿದರನ್ನು ಕರೆದು ನಮಗೆ ಪರಿಚಯಮಾಡುತ್ತಾ........

"ಇವರು ನಮ್ಮ ಕಲಾವಿದರು. 'ಆನಂದ' ಎಂದು, ನಿಮ್ಮ ಕನ್ನಡಿಗರೇ ಇವರೂ"—ಎಂಬ ಅರ್ಥ ಬರುವಂತೆ ತೆಲಗುಭಾಷೆಯಲ್ಲೇ ನುಡಿದರು.

'ಆನಂದ' ಎಂದಾಕ್ಷಣ ಎಲ್ಲೋ ಇವರನ್ನು ನೋಡಿದ ನೆನಪಾಯಿತು ನನಗೆ. ನಿಜ! 'ಆನಂದ'ರ ಪರಿಚಯ ನೇರ ಇಲ್ಲದಿದ್ದರೂ ಅವರ ರೇಖಾ ಚಿತ್ರಗಳನ್ನು 'ಗೋಕುಲ'ದ ಮೂಲಕ ನೋಡಿಯಾಗಿತ್ತು. ನೇರ ಪರಿಚಯ ಮಾತ್ರ ಇಲ್ಲೇ ನನಗಾದರೂ. ಕನ್ನಡದ ಕಲಾವಿದನೊಬ್ಬ ತೆಲಗು ಪತ್ರಿಕೆ ಯಲ್ಲಿ ಕಲಾಸೇವೆ ಸಲ್ಲಿಸುತ್ತಾ ಬಹು ಜನಪ್ರಿಯರಾಗಿರುವುದನ್ನು ಕೇಳಿದರೆ ಯಾವ ಕನ್ನಡಿಗ ಹೆಮ್ಮೆಪಡುವುದಿಲ್ಲ; ಯಾರು ಅಭಿಮಾನ ಪಡುವುದಿಲ್ಲ!

ಆನಂದರ ಕಲೆಗಾರಿಕೆ ಬಹು ಸೊಗಸಾಗಿದ್ದುದು. ಇವರಿಗೆ "ವಾಷ್‌ಡ್ರಾಯಿಂಗ್" (wash drawing) ರಚಿಸುವುದೆಂದರೆ ಮಹಾ ಪ್ರೀತಿ. ಈ ಬಗೆಯ ಚಿತ್ರಗಳಲ್ಲಿ ಎಂತಹ ಜೀವ ಕಳೆಯನ್ನಾದರೂ ತುಂಬ ಬಲ್ಲರು. ಇದಕ್ಕೆ ಹೆಚ್ಚು ಶ್ರದ್ಧೆಯೂ, ಆಸಕ್ತಿಯೂ ಬೇಕು. ಎಲ್ಲದಕ್ಕೂ ಮುಖ್ಯವಾಗಿ ಶರೀರ ರಚನಾಕೌಶಲವೂ ಕರಗತವಾಗಿರಬೇಕು. ಒಂದೇ ವರ್ಣದ ಮಾಧ್ಯಮದಲ್ಲಿ ಕುಂಚದಿಂದ ಚಿತ್ರ ರಚಿಸುವುದೇನು ಸುಲಭದ ಕೆಲಸವಲ್ಲ. ರಚಿಸುವ ಚಿತ್ರದ ಯಾವುದೋ ಮೂಲೆಯಲ್ಲಿ A ಎಂದು

ಅಂಕಿತದ ತಮ್ಮ ನಾಮದಿಂದ ಮೆರೆಯುವ ಸರಳ ಸ್ವಭಾವದ ವ್ಯಕ್ತಿ ಆನಂದರು. ಪ್ರತಿ ವಾರ ವಾರವೂ ಲಕ್ಷೋಪಲಕ್ಷ ಆಂಧ್ರ ಜನತೆಯ ಮನೆ ಮನೆಗಳಲ್ಲೂ ಪತ್ರಿಕೆಯ ಮೂಲಕ ಇವರ ಚಿತ್ರಗಳು ಮೆರೆಯುತ್ತಿವೆ. ಜನ ಮನವನ್ನು ತಣಿಸುತ್ತಿವೆ.

ಈ ಕಲಾವಿದ ಶಿವಮೊಗ್ಗ ಜಿಲ್ಲೆಯ ಕೂಡಲಿಯಲ್ಲಿ ೧೯೩೬ ರಲ್ಲಿ ಜನಿಸಿದರು. ಇವರ ಎಳೆತನದಲ್ಲೇ ಚಿತ್ರ ಕಲಾಭಿರುಚಿ ಕಾಣಿಸಿಕೊಂಡಿತು. ಇವರ ಮನೆಯ ಗೋಡೆಯ ಮೇಲೆ ಒಂದು 'ದೃಷ್ಟಿಚಿತ್ರ' ವಿದ್ದಿತು. ಗೇಣು ವ್ಯಾಸವಿರುವ ಒಂದು ವೃತ್ತಾಕಾರದೊಳಗೆ ವಿಕಾರವಾದ ಮನುಷ್ಯನ ಮುಖವನ್ನು ಚಿತ್ರಿಸಲಾಗಿತ್ತು. ಯಾರದೃಷ್ಟಿಯೂ ಮನೆಗೆ ತಗಲಬಾರದೆಂಬ ಉದ್ದೇಶದಿಂದ ಸುಮಾರು ೨೫, ೩೦ ವರ್ಷಗಳ ಹಿಂದೆ ಯಾರೋ ತೆಂಗಿನ ನಾರಿನ ಕುಂಚದಿಂದ ಕೆಮ್ಮಣ್ಣಿನ ಬಣ್ಣದಿಂದ ಬರೆದಿದ್ದರು. ಈ ಬಾಲಕ ಆನಂದನನ್ನು ಆ ಚಿತ್ರ ನಿತ್ಯ ಆಕರ್ಷಿಸುತ್ತಿತ್ತು. ಇಜ್ಜಲಿನ ಚೂರಿನಿಂದಲೋ ಅಥವಾ ತನ್ನ ಅಣ್ಣಂದಿರು ಎಸೆದ ಸೀಸದ ಕಡ್ಡಿಯ ಚೂರಿನಿಂದಲೋ ಗೋಡೆಯ ಮೇಲೆ ಆ ಚಿತ್ರದಂತೆಯೇ ನಕಲುಮಾಡಲು ಪ್ರಯತ್ನಿಸುತ್ತಿದ್ದ. ಚಿತ್ರಬರೆಯುವ ಗೀಳು ಹಾಗೇಯೇ ಅಂಟಿಕೊಂಡಿತು. ಪ್ರೈಮರಿಶಾಲೆಗೆ ಸೇರಿದ ಬಾಲಕ ಆನಂದ. ಅಲ್ಲಿಯೂ ಇವನ ಪಠ್ಯ ಪುಸ್ತಕಗಳ ಚಿತ್ರಗಳನ್ನು ಸ್ಲೇಟಿನ ಮೇಲೆ ಬರೆದು ಬರೆದು ತನ್ನ ಕೈ ಕುದುರಿಸಿ ಕೊಳ್ಳುತ್ತಾ ಬಂದ.

ಬಾಲಕ ಆನಂದ ಬರೆದ ಗಾಂಧೀಜಿಯ ರೇಖಾಚಿತ್ರವನ್ನು ನೋಡಿದವರು ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದೇ ಈತನ ಮೊದಲ ಪ್ರೋತ್ಸಾಹವೆನ್ನಬೇಕು. ಆನಂದನ ಶಾಲಾಧ್ಯಾಪಕರು ಮಿತ್ರರೂ ಆಗಾಗ ಪ್ರಶಂಸೆ ಮಾಡುತ್ತಾ ಬಂದರು. ಇಲ್ಲದಿದ್ದರೆ ಈತನ ಆಸಕ್ತಿ ಮತ್ತಾವಕಡೆ ಹರಿಯುತ್ತಿತ್ತೋ? ಇಷ್ಟಾದರೂ ಈ ಹುಡುಗನಿಗೆ ಚಿತ್ರಕಲೆಯಲ್ಲಿ ಸರಿಯಾದ ಮಾರ್ಗದರ್ಶನ ನೀಡುವ ಒಬ್ಬ ಗುರುವೂ ದೊರೆಯಲಿಲ್ಲ. ಮನೆಯಲ್ಲಿದ್ದ ರವಿವರ್ಮನ ಚಿತ್ರಪದಗಳೇ ಈತನಿಗೆ ಸ್ಫೂರ್ತಿ ನೀಡಿದವು.

ಆನಂದ ಬಹು ಸುಂದರ ಮೂರ್ತಿ. ತೆಳ್ಳನೆಯ ಬೆಳ್ಳನೆಯ, ನೀಳ ಆಕರ್ಷಕ ವ್ಯಕ್ತಿ. ಈತನು ಬರೆಯುತ್ತಿದ್ದ ಚಿತ್ರಗಳನ್ನು ಕಂಡ ಕೆಲವರು

"ಆನಂದ, ನೀನು ಚಿತ್ರ ಬರೆಯಬೇಡ. ನಿನ್ನ ಚಿತ್ರಗಳನ್ನು ನೋಡಿದ ಜನರ ದೃಷ್ಟಿ ನಿನ್ನ ಮೇಲೆ ಬಿದ್ದು ನೀನು ಕೃಶವಾದೀಯೇ"-ಎಂದು ವಿಚಿತ್ರವಾಗಿ ಉಪದೇಶ ಮಾಡುತ್ತಿದ್ದರಂತೆ. ಈ ವೇಳೆಗೆ ಪ್ರೌಢಶಾಲೆಯನ್ನು ಮುಗಿಸಿದರು. ಹಲವರು ಇವರನ್ನು ಯಾವುದಾದರೂ ಬೇರೆ ಉದ್ಯೋಗಕ್ಕೆ ಸೇರಲು ಪ್ರೇರೇಪಿಸುತ್ತಿದ್ದರು. ಆದರೆ ಈ ಯುವಕರ ಮನಸ್ಸು ಮಾತ್ರ ಚಿತ್ರಕಲೆಯ ಕಡೆಗೇ ಇದ್ದಿತು ಅಚಲವಾಗಿ. ಇವರ ಹೃದಯದಲ್ಲಿ ಕಲೆ ಆಸಕ್ತಿ ಮಾತ್ರ ದಗದಗಿಸುತ್ತಿತ್ತು ಸದಾ.


ಆನಂದರ ಪ್ರೀತಿಯ ಸೋದರಿಯರಿಗೆಲ್ಲಾ ಲಗ್ನವಾಗಿ ಅವರವರ ಗಂಡನ ಮನೆಗಳಿಗೆ ತೆರಳಿದರು. ಮಾತೃಶ್ರೀಯವರೂ ವಿಧಿವಶರಾದರು. ಮನೆ ಬಿಕೋ ಎನ್ನುತ್ತಿತ್ತು. ಇವರ ಮೃದು ಹೃದಯಕ್ಕೆ ಆಘಾತವಾಯಿತು. ವಾತಾವರಣ ಅಲ್ಲಿರಗೊಡಲಿಲ್ಲ. ಅಶಾಂತಿ ತಲೆದೋರಿತು. ಯಾರಿಗೂ ತಿಳಿಸದೆ ತನ್ನ ಮಮತೆಯ ಹುಟ್ಟೂರನ್ನು ಬಿಟ್ಟರು. ಮನಬಂದಂತೆ ಸುಮ್ಮನೆ ಎಲ್ಲೆಲ್ಲೋ ಅಲೆದರು. ಕೊನೆಗೆ ಮದರಾಸಿಗೆ ಬಂದು ಮುಟ್ಟಿದ.

ಆದರೆ ಮದರಾಸಿನ ಅಂದಿನ ಜೀವನ ಕಷ್ಟಗಳಿಂದಾಗಿ ಸುಗಮವಾಗಲಿಲ್ಲ. ಹೆಜ್ಜೆ ಹೆಜ್ಜೆಗೂ ಅನೇಕ ದಿನಗಳ ಕಾಲ ಹಸಿವಿನ ಬಾಧೆ ಮಾತ್ರ ತಪ್ಪಲಿಲ್ಲ. ಯಾವುದೋ ಉದ್ಯೋಗಕ್ಕೆ ಸೇರಿಬಿಡಬೇಕೆಂಬ ಪರಿಸ್ಥಿತಿ ಬಂದರೂ ಇವರ ಕಲಾಸಕ್ತಿ ಮಾತ್ರ ಇವರನ್ನು ಕಲಾ ಕ್ಷೇತ್ರದಲ್ಲೇ ದುಡಿಯಲು ತವಕಗೊಳಿಸುತ್ತಿತ್ತು. ಇದೇ ವೇಳೆಗೆ ಇವರ ಆರೋಗ್ಯ ಕೆಟ್ಟಿತ್ತು ಕೈಯಲ್ಲಿ ಕಾಸಿಲ್ಲದ ಪರಿಸ್ಥಿತಿ. ಉದ್ಯೋಗಕ್ಕಾಗಿ ನಾಲ್ಕಾರು ಕಡೆ ಸುತ್ತಿಬಂದರು ಇವರು ರೂಢಿಸಿಕೊಂಡುಬಂದ ಸ್ವಪ್ರತಿಭೆಯ ಸಂಪ್ರದಾಯ ಚಿತ್ರಕಲೆ ಇವರಿಗೆ ಅನ್ನ ನೀಡುವಂತಿರಲಿಲ್ಲ. ಇವರ ದೃಷ್ಟಿ ಔದ್ಯೋಗಿಕ ಕಲೆಯ ಕಡೆ ಹರಿಯಿತು. ಆನಂದರು ಎಚ್ಚೆತ್ತರು. ಕೆಲವಾರು ಕಡೆ ಬಗೆಯ ವೃತ್ತಿ ಮಾಡಿಬಂದರು. ಕೊನೆಗೆ 'ಆಂಧ್ರ ಪ್ರಭಾ' ಪತ್ರಿಕೆ ಆನಂದರನ್ನು ಸ್ವಾಗತಿಸಿತು.

ಆನಂದರು ಪತ್ರಿಕಾ ವೃತ್ತಿಯ ಕಲಾವಿಭಾಗದಲ್ಲಿ ಹೆಚ್ಚು ನುರಿತವರು. ಪತ್ರಿಕೆಯಲ್ಲಿ ಕಲಾವಿದನಾಗಿ ಸೇವೆ ನಿರ್ವಹಿಸುವುದು ಅಷ್ಟೇನೂ ಸುಲಭವಲ್ಲ. ಹತ್ತಾರು ಜನರ ನಾನಾ ಅಭಿರುಚಿಗೆ ತಕ್ಕಂತೆ ಕಲಾವಿದ ತನ್ನ ಕುಂಚ ಶಕ್ತಿಯಿಂದ ಅವರನ್ನೆಲ್ಲಾ ತಣಿಸಬೇಕಾಗುತ್ತದೆ. ಕಥೆ

ಗಳಿಗಾಗಲೀ ಲೇಖನಗಳಿಗಾಗಲೀ ರಕ್ಷಾಪತ್ರಗಳಿಗಾಗಲೀ—ಅವುಗಳಲ್ಲಿನ ಸನ್ನಿವೇಶ ವಿವರಗಳಿಗೆ ಹೊಂದಿಕೊಂಡು ಚಿತ್ರಗಳನ್ನು ರೂಪಿಸಿಕೊಡಲು ಅಪೂರ್ವ ಜಾಣ್ಮೆಯೂ ತಾಳ್ಮೆಯೂ ಶ್ರದ್ಧೆಯೂ ಬೇಕು. ಆನಂದರ ಕಲಾ ಸ್ಫೂರ್ತಿ ಅವರಿಗೆ ಗೆಲುವನ್ನು ಸಂದಿತು. ಅಲ್ಲಿ ಕೆಲವು ವರ್ಷಗಳು ದುಡಿದು ಮತ್ತೆ ಇವರ ಕನ್ನಡ ಮಾತೃಭಾಷಾ ಪ್ರೇಮ ಇವರನ್ನ ಬೆಂಗಳೂರಿನ 'ಗೋಕುಲ' ವಾರಪತ್ರಿಕೆಗೆ ತಂದು ನಿಲ್ಲಿಸಿತು. ಆದರೆ ಅಲ್ಪಕಾಲದಲ್ಲೇ ಇವರ ಅಭಿಲಾಷೆ ನೆರವೇರಲಿಲ್ಲ. ಮತ್ತೆ ಆನಂದರು 'ಆಂಧ್ರಪ್ರಭಾ' ಪತ್ರಿಕಾಲಯಕ್ಕೆ ಸೇರಬೇಕಾಯಿತು.

ಈ ಪರಿಸ್ಥಿತಿಯನ್ನು ನೆನೆದು "ಮನಸ್ಸಿನಲ್ಲಿ ಎಂತಹ ಉತ್ತಮವಾದ ಧ್ಯೇಯ ಉದ್ದೇಶಗಳಿದ್ದರೂ ಅದಕ್ಕೆ ಸನ್ನಿವೇಶ ಪರಿಸ್ಥಿತಿಗಳು ಅನುಕೂಲ ವಾಗದಿದ್ದರೆ ಅದನ್ನು ಸಾಧಿಸುವುದು ತಂಬಾ ಕಷ್ಟ" ಎನುತ್ತಾರೆ ವಿನಯ ಶೀಲ ಆದರ್ಶ ಕಲಾವಿದ ಆನಂದರು.



ಎಂ. ಎಚ್. ರಾಮು

೧೯೪೫ ರ ಸುಮಾರು. ನಾನು ಚಿತ್ರದುರ್ಗದಿಂದ ಮೈಸೂರಿಗೆ ಬಂದ ಹೊಸ ದಿನಗಳು. ಆಗ ನಾನು ಚಾಮರಾಜೇಂದ್ರ ಕಲಾಶಾಲೆಯ ಕಲಾ ವಿದ್ಯಾರ್ಥಿ. ಕಲಾ ಶಾಲೆಯ ನನ್ನ ನಿತ್ಯ ಯಾತ್ರೆ "ಲ್ಯಾನ್ಸ್ ಡೌನ್ ಬಜಾರಿನ" ಮಾರ್ಗವಾಗಿಯೇ ಸಾಗುತ್ತಿತ್ತು. ಅಲ್ಲಿಯ ಮಹಾದ್ವಾರದ ಪಕ್ಕದ ಮಹಡಿಯ ಮುಂದೆ "ಲಲಿತ ಆರ್ಟ್ಸ್ ಸ್ಟುಡಿಯೋ" ಎಂಬ ನಾಮಫಲಕ ನನ್ನನ್ನು ಆಕರ್ಷಿಸುತ್ತಿತ್ತು. ನಮ್ಮ ಶಾಲೆಯ ಕೆಲವು ಕಲಾಭ್ಯಾಸಿಗಳು ಈ

ಮಹಡಿಯನ್ನು ಆಗಾಗ ಹತ್ತಿ ಇಳಿಯುತ್ತಿದ್ದುದನ್ನು ಗಮನಿಸುತ್ತಿದ್ದೆ. ಅಲ್ಲಿ ಏನೋ ವಿಶೇಷವಿರಬೇಕೆನಿಸಿ ಒಮ್ಮೆ ನಾನೂ ಅಲ್ಲಿಗೆ ಹೋದೆ. ನಮ್ಮ ಶಾಲೆಯ ಶ್ರೀ ಆರಗಂ ಕೃಷ್ಣಮೂರ್ತಿಗಳು ಅಲ್ಲಿ ಒಂದೆಡೆ ಚಿತ್ರವೊಂದನ್ನು ಬಿಡಿಸುತ್ತಿದ್ದರು. ಅಲ್ಲೇ ಮತ್ತೊಂದೆಡೆ ತೂಗುಯ್ಯಾಲೆಯಲ್ಲಿರುವ 'ರಾಧಾಕೃಷ್ಣರ' ಅನಂತಪ್ರೇಮದ ಸುಂದರ ಚಿತ್ರವನ್ನು ಓರ್ವ ವ್ಯಕ್ತಿ ಬಿಡಿಸುತ್ತಿದ್ದರು. ಶ್ರೀ ಆರಗಂ ಅವರು ನನ್ನನ್ನು ಕಂಡು—

"ನಾನು ನಿಮಗೆ ತಿಳಿಸಿದ 'ಮಧುಗಿರಿ ರಾಮು', ಇವರೇ" ಎಂದು ಪಿಸುಗುಟ್ಟಿದರು. ಇದನ್ನು ಕೇಳಿಸಿಕೊಂಡ ಶ್ರೀಯುತರು ನನ್ನನ್ನು ನೋಡಿ:

"ಬನ್ನಿ ಬನ್ನಿ."....ಎಂದು ಕರೆದು ಕುಳಿತುಕೊಳ್ಳಲು ತಿಳಿಸಿದರು. ತುಂಬು ಹೃದಯದಿಂದ ಕುಶಲಪ್ರಶ್ನೆಮಾಡಿದರು—ರಾಮು.

ನಿಜ! ಶ್ರೀ ರಾಮು ಅವರ ಕಲೆಯಲ್ಲಿ ಗುಟ್ಟೆಂಬುದಿಲ್ಲ. ಇವರು ಕಾರ್ಯೋನ್ಮುಖರಾಗಿ ಚಿತ್ರ ರಚಿಸುತ್ತಿರುವಾಗ ಇವರ ಸುತ್ತೆಲ್ಲ ಒಂದು ಸ್ನೇಹ ಬಳಗದ ಬಳ್ಳಿಯೇ ಹಬ್ಬಿರಬೇಕು. ಅದೇ ಅವರಿಗೆ ಪ್ರೀತಿ. ಚಾಮರಾಜ ಕಲಾಶಾಲೆಗೆ ಬಂದ ಕೆಲವು ಕಲಾಭ್ಯಾಸಿಗಳನ್ನೂ ರಾಮು ಅವರ ವಿಶ್ವಾಸ ಬಹುವಾಗಿ ಆಕರ್ಷಿಸುತ್ತಾ ಬಂದಿದೆ. ಒಂದಲ್ಲ ಒಂದು ಬಗೆಯಲ್ಲಿ ಇವರ ನೆರವು ಸಹಕಾರ ಅವರಿಗೆ ಮೀಸಲು. ಇವರ ಆಶ್ರಯ ಯಾಚಿಸಿ ಬಂದ ವಿದ್ಯಾರ್ಥಿಗಳಿಗೆ ಎಂದೂ ಸ್ವಾಗತ ಇರುತ್ತದೆ. ಚಾಮರಾಜೇಂದ್ರ ಕಲಾಶಾಲೆಯಿಂದ ಹೊರಬಂದ ಕೆಲವಾರು ಕಲಾಸಾಧಕರ ಜೀವನ ರಂಗಕ್ಕೆ 'ರಾಮೂ ಸ್ಟುಡಿಯೋ' ಒಂದು ಉತ್ತಮ ನೆಲೆ ಎನ್ನಬಹುದು. ಇವರ ಆಶ್ರಯದ ನೆರಳಿನಲ್ಲಿ ಇದ್ದು ಹೊರಬಂದವರಲ್ಲಿ ಶ್ರೀ ಆರಗಂ, ಶ್ರೀ ಕೆ. ವಿ. ದೊಡ್ಡಯ್ಯ, ಶ್ರೀ ಮಧುಗಿರಿ ಪ್ರೇಮಕುಮಾರ್, ಎಂ. ಎಸ್. ಶಿವರುದ್ರಪ್ಪ, ಶ್ರೀ ಎಂ. ಬಿ. ಮಲ್ಲಪ್ಪ, ಶ್ರೀ ಅನಂತಾಚಾರ್ ಮುಂತಾದವರನ್ನು ಇಲ್ಲಿ ನೆನೆಯಬಹುದು.

'ರಾಮು!' ಎಂಥ ಮುದ್ದಾದ ಹೆಸರು. ಇವರ ಮಾತೂ ಮುದ್ದು. ಅಂತೆಯೇ ಇವರ ಕಲೆಗಾರಿಕೆ. ಮಧುಗಿರಿ ಹನುಮಂತಪ್ಪ ರಾಮು (ಎಂ. ಎಚ್. ರಾಮು) ಚಿತ್ರಕಾರರೆಂದು ಕನ್ನಡ ನಾಡಿನಲ್ಲಿ ಹೆಸರು ಪಡೆದಿರುವರು. ಇವರ ಕಲಾರಂಗ ಎಷ್ಟು ಪ್ರಸಿದ್ಧವೋ ಇವರ ಬಾಲ್ಯತನವೂ ಅಷ್ಟೇ ಕುತೂಹಲಕಾರಿ.

ಪ್ರಕೃತಿರಮ್ಯ ಚಾರಿತ್ರಿಕ ನೆಲೆಯಾದ ಮಧುಗಿರಿಯೇ ಶ್ರೀ ರಾಮು ಅವರ ಜನ್ಮಸ್ಥಳ. ದಿ॥ ಹನುಮಂತಪ್ಪ ಮತ್ತು ದಿ॥ ಲಕ್ಷ್ಮೀದೇವಮ್ಮನವರ ದ್ವಿತೀಯ ಪುತ್ರರೇ ಶ್ರೀ ರಾಮು. ಈ ಬಾಲಕ ರಾಮು ತನ್ನ ಎಳೆತನದ ದಿನಗಳಲ್ಲೆ ಭಜನೆ, ಬಯಲಾಟಗಳಲ್ಲಿ ಆಸಕ್ತಿ ತೋರುತ್ತಾ ಬಂದ. ಈತನ ಅಣ್ಣ ಹನುಮಂತಪ್ಪ ತಬಲದಲ್ಲಿ ಕೊಂಚ ಪರಿಶ್ರಮ ಪಡೆದಿದ್ದ. ಈ ಅಣ್ಣ ತಮ್ಮಂದಿರಿಬ್ಬರೂ ತಮ್ಮ ಕೇರಿಯ ಹುಡುಗರನ್ನು ಸೇರಿಸಿಕೊಂಡು ನಿತ್ಯ ಸಂಜೆ ಭಜನೆಮಾಡುವ ಹವ್ಯಾಸವನ್ನಿಟ್ಟುಕೊಂಡಿದ್ದರು. ತಮ್ಮನ ಹಾಡುಗಾರಿಕೆಯಲ್ಲಿ ಅಣ್ಣನ ತಬಲ ಹುಡುಗರ ಉತ್ಸಾಹವೂ ಸೇರಿ ಆ ಕೇರಿಯ ಸುತ್ತಿನ ಜನರನ್ನೆಲ್ಲಾ ಆಕರ್ಷಿಸಿದ್ದಿತು.

ಈ ಪುಟ್ಟ ಹುಡುಗ ರಾಮುವಿನ ಕಂಠ ಮಧುರವಾಗಿದ್ದಿತು. ಪ್ರೈಮರಿ ಶಾಲೆಯಲ್ಲಿದ್ದಾಗಲೇ ಪುಟ್ಟ ಪುಟ್ಟ ನಾಟಕಗಳಲ್ಲಿ ಅಭಿನಯಿಸುತ್ತಾ ಬರುವಂತಾಯಿತು ಒಳ್ಳೆಯ ಸಾಹಿತ್ಯ ಹಾಗೂ ಚಿತ್ರ ಕಲಾಪರಿಶ್ರಮವಿರುವ ಶ್ರೀ ಎಂ. ಎಸ್. ದಾಸಪ್ಪನವರು ಆಗ ಇವರಿಗೆ ಗುರುಗಳಾಗಿದ್ದರು ತಮ್ಮ ಶಿಷ್ಯ ರಾಮುವಿನ ಕಲಾಭಿರುಚಿಗೆ ಶ್ರೀಯುತರು ತುಂಬಾ ಮೆಚ್ಚಿಕೊಂಡಿದ್ದರು. ಬಾಲಕ ರಾಮು ತನ್ನ ಸಹಪಾಠಿಗಳನ್ನೆಲ್ಲಾ ಕಲೆಹಾಕಿ ಒಂದು ನಾಟಕ ಮಂಡಲಿಯನ್ನೇ ತೆರೆದು, 'ಕಾಳಿದಾಸ' ನ ನಾಟಕವನ್ನು ಅಭಿನಯಿಸುವ ಸಾಹಸಮಾಡಿದ. ಭೋಜರಾಜನ ಪಾತ್ರವನ್ನೇ ರಾಮು ತೆಗೆದುಕೊಂಡು ಸೊಗಸಾಗಿ ಅಭಿನಯಿಸಿ ಉಪಾಧ್ಯಾಯರ ಪ್ರೋತ್ಸಾಹಕ್ಕೆ ಪಾತ್ರನಾದ. ಈ ನಾಟಕದ ಗೀಳು ಮಾತ್ರ ಈತನಲ್ಲಿ ಮುಂದುವರಿಯಿತು. ಸುಂದರ ಮುಖ ಭಾವದ ಈ ರಾಮುವಿಗೆ ಕ್ರಮೇಣ "ರಾಣಿ" ಯಂಥ ಸ್ತ್ರೀ ಪಾತ್ರಗಳೇ ದೊರೆಯ ತೊಡಗಿದವು. ಈ ಬಗೆಯ ಈತನ ಪಾತ್ರಗಳನ್ನು ಖ್ಯಾತ ವರನಟ ದಿ॥ ವರದಾಚಾರ್ಯರ ಸರಿಸಮಾನರಾಗಿದ್ದ ಅಪೂರ್ವನಟ ದಿ॥ ಕಾಲಿಪಿಲ್ಲಿಯವರು ಮನಸಾರ ಮೆಚ್ಚಿಕೊಂಡಿದ್ದರು

ಪ್ರೌಢಶಾಲೆಗೆ ಬಂದಮೇಲೆ ಚಿತ್ರಕಲೆಯನ್ನು ಐಚ್ಛಿಕವಾಗಿ ತೆಗೆದುಕೊಂಡರು. ಆಗ ಕವಿ 'ಹೊಯ್ಸಳ' ರು ಇವರ ಅಧ್ಯಾಪಕರಾಗಿದ್ದರು. ರಾಮು ಅವರ ಬಹುಮುಖ ಕಲಾಪ್ರತಿಭೆಗೆ ಅವರು ಮೆಚ್ಚಿಕೊಂಡಿದ್ದರು. ಅವರ 'ಮರೆಯಬಾರಗದ ಮಧುಗಿರಿ' ಕವನಕ್ಕೆ ಶ್ರೀ ರಾಮು ಅವರು ತಮ್ಮದೇ

ಆದ ಅಪರೂಪದ ರಾಗವನ್ನೂ ಹಾಕಿಕೊಂಡು ಸೊಗಸಾಗಿ ಹಾಡಿ ಆ ಕವಿ ಹೃದಯವನ್ನು ಗೆದ್ದಿದ್ದರು. ಇದರಿಂದಾಗಿ ವಿದ್ಯಾರ್ಥಿ ಕಲಾರಂಗದಲ್ಲಿ ರಾಮು ಬಹು ಪ್ರಸಿದ್ಧವಿದ್ಯಾರ್ಥಿಯಾಗಿದ್ದರು. ಜೊತೆಗೆ ಕೊಂಚ 'ಪುಂಡು ಹುಡುಗ' ನೆಂಬ ಕೀರ್ತಿಯೂ ಇವರಿಗೆ ಲಭಿಸಿದ್ದಿತು. "ಮಧುಗಿರಿ ಬಿಟ್ಟರೆಸಾಕು ಈ ತುಂಟ" ಎಂದು ಅನೇಕರಿಗೆ ಆಗ ಅನ್ನಿಸಿದ್ದು ಸಹಜವೇ ಸರಿ.

ಅದೇ ವೇಳೆಯಲ್ಲಿ ಇವರ ಜೀವನದಲ್ಲಿ ಅನಿರೀಕ್ಷಿತವಾಗಿ ಒಂದು ಬಿರುಗಾಳಿ ಎದ್ದು ಅನಿವಾರ್ಯವಾಗಿ ಮಧುಗಿರಿಯನ್ನು ಬಿಡಬೇಕಾಯಿತು. ಇವರ ಬಂಧು ಶ್ರೀ ಸಿದ್ದಣ್ಣನವರು (ಖ್ಯಾತ ಚಲನಚಿತ್ರ ನಟ ಮಧುಗಿರಿಯ ರಾಜಾಶಂಕರ್ ಅವರ ತಂದೆ) ಆಗ ರಾಮು ಅವರನ್ನು ಮೈಸೂರಿಗೆ ಕರೆತಂದು ಬಿಟ್ಟರು ಪ್ರೌಢಶಾಲೆಗೆ ಸೇರಿಸಲು. ಶ್ರೀ ಸಿದ್ದಣ್ಣನವರು ಈ ಯುವಕ ರಾಮು ಅವರನ್ನು ಒಮ್ಮೆ ಚಾಮರಾಜೇಂದ್ರ ಕಲಾಶಾಲೆಗೆ ಏಕೋ ಕರೆದುಕೊಂಡು ಹೋದರು. ಅಲ್ಲಿ ಒಂದು ಸುತ್ತು ಎಲ್ಲ ಕೈಗಾರಿಕೆಯ ತರಗತಿಗಳಿಗೂ ಸುತ್ತಿಸಿದರು. "ಇಲ್ಲಿ ನಿನಗೆ ಏನು ಕಲಿಯಬೇಕೆನ್ನಿಸುವುದೋ ಅದನ್ನು ಕಲಿ"—ಎಂದು ಸೂಚಿಸಿದರು. ಅಲ್ಲಿನ ಚಿತ್ರ ಕಲಾಭ್ಯಾಸ ರಾಮು ಅವರನ್ನು ತುಂಬ ಆಕರ್ಷಿಸಿತು. ೧೯೩೬ ರಲ್ಲಿ ಆ ಶಾಲೆಗೆ ಸೇರಿಬಿಟ್ಟರು. ಆಗ ಅಲ್ಲಿ ಮುಖ್ಯಾಧಿಕಾರಿಗಳಾಗಿದ್ದ ಡಾ|| ರಾಮಸ್ವಾಮಿ ಅಯ್ಯಂಗಾರ್ಯರ ನೇತೃತ್ವದಲ್ಲಿ ಡಾ|| ಪಾವಂಜೆ, ಶ್ರೀ ಟಂಕಸಾಲೆ, ಶ್ರೀ ಸುಬ್ರಹ್ಮಣ್ಯ ರಾಜು ಅವರ ಶಿಷ್ಯರಾಗಿ ಕಲಾಭ್ಯಾಸವನ್ನು ನಡೆಸಿದರು. ಆಗ ಇವರ ಸಹಪಾಠಿಗಳಾಗಿದ್ದವರಲ್ಲಿ ಶ್ರೀ ಎಂ. ವಿ. ವೆಂಕಟಾಚಾರ್, ವೀರಭದ್ರಪ್ಪ ಹಂಜಿ, ಎಂ. ಎಸ್. ಚಂದ್ರಶೇಖರ್; ಸೋಮಸುಂದರ್, ವಿಷ್ಣುದಾಸ್ ರಾಮದಾಸ್, ಕಾಳಪ್ಪ ಮುಂತಾದವರು ಮುಖ್ಯರಾದವರು.

"ಬಾಲ್ಯತನದ ನನ್ನ ನಾಟಕ ಮತ್ತು ಸಂಗೀತದ ಅಭಿರುಚಿಯೇ ಮುಂದೆ ನನ್ನ ಚಿತ್ರಕಲಾ ಬಾಳ್ವೆಗೆ ನಾಂದಿ"—ಎನ್ನುತ್ತಾರೆ ಶ್ರೀ ರಾಮು ಅವರು. ಇವರ ನಾಲ್ಕು ವರ್ಷಗಳ ಕಾಲದ ಕಲಾವ್ಯಾಸಂಗದಲ್ಲಿ ಇವರಿಗೆ ಅನೇಕ ಸಿಹಿಕಹಿ ಪ್ರಸಂಗಗಳ ಅನುಭವವಿದೆ. ಕೆಲವುಕಾಲ ಯಾವುದೋ ಬಾಡಿಗೆಯ ರೂಮಿನಲ್ಲಿ ಕಾಲತಳ್ಳಿದರು. ಆಗ ರಾಮು ಅವರ ಜೀವನದ ಪರೀಕ್ಷಾಸಮಯ ಎನ್ನಬಹುದು! ತಿಂಗಳು ತಿಂಗಳೂ ರೂಮಿನ ಬಾಡಿಗೆ

ಕಟ್ಟಲೂ ಎಷ್ಟೋ ಸಮಯ ಕೈಯಲ್ಲಿ ಕಾಸೇ ಇರುತ್ತಿರಲಿಲ್ಲ. ಅನೇಕ ವೇಳೆ ಹಸಿವಿನ ಬಾಧೆಗೂ ತುತ್ತಾಗಬೇಕಾಯಿತು ಇವಾವುದನ್ನೂ ಲೆಕ್ಕಿಸ ಲಿಲ್ಲ ಅವರ ಪವಿತ್ರ ಕಲಾದೃಷ್ಟಿ.

ಕಲಾವಿದನಿಗೆ ಬಲು ಪ್ರಿಯವಾದ ಮನಶ್ಶಾಂತಿಯನ್ನು ರಾಮು ಎಂದೂ ಕಳೆದುಕೊಂಡವರಲ್ಲ. ಎಂಥ ಕಷ್ಟದ ಪರಿಸ್ಥಿತಿಯಲ್ಲೂ ಅಳುಕದೆ ಧೀರರಾಗಿ ಧೀಮಂತರಾಗಿ ಕಲಾವಿದರಾಗಿಯೇ ಬೆಟ್ಟದಂತೆ ನಿಂತರು. ಇವರ ಸಹೃದಯ, ಸ್ನೇಹಬಳ್ಳಿಯೇ ಕ್ರಮೇಣ ಇವರಿಗೆ ನೆರವು ನೀಡಿತು. ಚಾಮ ರಾಜ ಕಲಾಶಾಲೆಯಿಂದ ಅಭ್ಯಾಸ ಮುಗಿಸಿ ಹೊರಬಂದಮೇಲೆ ಇವರದು ಸ್ವತಂತ್ರ ಜೀವನರಂಗವಾಯಿತು. ಶ್ರೀ ರಾಮು ಅವರು ಬೇರೆಯವರ ಬಳಿ ಊಳಿಗದವರಾಗಿರಲು ಇಷ್ಟಪಟ್ಟವರಲ್ಲ. ಸ್ವಯಂ ಸಾಮರ್ಥ್ಯವನ್ನು ಕಳೆದು ಕೊಳ್ಳಲು ಎಂದೂ ಬಯಸಿದವರಲ್ಲ. ಚಿತ್ರಕಲೆಯ ವರ್ಣದ ಸೊಬಗನ್ನು ನಮ್ಮ ಜನಕ್ಕೆ ಛಾಯಾ ಚಿತ್ರದ ಮೂಲಕ ತೋರಿಸಿಕೊಟ್ಟರು ಬರೀ ಕುಂಚ ಒಂದನ್ನೇ ನಂಬಿಕೂರಲಿಲ್ಲ. ಜೊತೆ ಜೊತೆಯಾಗಿ ಎರಡು ಕಲೆಗಳ ಸಂಗಮ ವನ್ನು ಮೆರೆಯುತ್ತಾ ಬಂದರು. ಜೀವನ ಮಾರ್ಗಕ್ಕೆ ಛಾಯಾ ಚಿತ್ರ ಕಲಾ ತಂತ್ರವನ್ನು ಕೈಹಿಡಿದವರು. ಅಂತೆಯೇ ಮೈಸೂರಿನ ಸುಪ್ರಸಿದ್ಧ "ರಾಮುಸ್ ಸ್ಟುಡಿಯೋ" ವಿನಲ್ಲಿ ಎರಡು ವರ್ಷ ನಿಂತು ಆ ಕಲೆಯನ್ನು ಮೈಗೂಡಿಸಿ ಕೊಂಡರು.

'ಲಲಿತ ಆರ್ಟ್ಸ್ ಸ್ಟುಡಿಯೋ' ವನ್ನು ಮೊದಲು ಇವರು ತೆರೆದರು. ಕ್ರಮೇಣ ೧೯೪೬ ರಲ್ಲಿ "ಮೈಸೂರು ಆರ್ಟ್ಸ್ ಸ್ಟುಡಿಯೋ" ಎಂದು ಬದಲಿ ಸಿದರು. ಮತ್ತೆ ಕೊನೆಯದಾಗಿ 'ರಾಮೂ ಸ್ಟುಡಿಯೋ' ವಾಗಿ ಮಾರ್ಪ ಡಿಸಿಕೊಂಡಿರುತ್ತಾರೆ.

ಈ ಸಮಯದಲ್ಲಿ ಕನ್ನಡ ನಾಡಿನ ಹತ್ತಾರು ಕಡೆ ಸುತ್ತಾಡಿದರು. ಕಲಾರಸಿಕರನ್ನು ಗುರುತಿಸಿದರು. ತಮ್ಮ ಕಲಾರಾಧನೆಯನ್ನು ಅಲ್ಲೆಲ್ಲಾ ಪ್ರಚಾರಮಾಡಿ ಬಂದರು. ಇವರ ಕಲೆ ಆ ರಸಿಕರನ್ನು ತುಂಬ ಆಕರ್ಷಿ ಸಿತು. ಇವರ ಜೀವನದಲ್ಲಿ ಕಷ್ಟದ ದಿನಗಳು ಹಿಂದಕ್ಕಾದುವು. ಜೀವನ ತಿಳಿಯಾಯಿತು. ಹಸುರಾಯಿತು. ಒಂದು ವ್ಯವಸ್ಥಿತ ನೆಲೆಗೆ ಬಂದು

ಮುಟ್ಟಿದರು. ಇವರ ಮೈ ಮನವೂ ಒಂದು ರೂಪಕ್ಕೆ ಬಂದು ನಿಂತಿತು. ಬಾಳ ಗೆಳತಿಯನ್ನು ಪಡೆದರು. ಸ್ಫೂರ್ತಿ ಹರಿಯಿತು. ಮೆರೆಯಿತು.

ರಾಮು ಅವರ ಕಲಾ ಸಾಧನೆ ಮೆಚ್ಚುವಂತಹದು. ಬಾಲ್ಯದಿಂದಲೂ ಪುರಾಣ ಪುಣ್ಯ ಕಥಾಶ್ರವಣವೆಂದರೆ ಇವರಿಗೆ ಬಲು ಪ್ರಿಯ. ಇದರಿಂದಾಗಿ ಅನೇಕ ಚಿತ್ರಗಳನ್ನು ರಚಿಸುತ್ತಾ ಬಂದರು. ತೈಲವರ್ಣದಲ್ಲಿ, ಅದರಲ್ಲೂ ವರ್ಣಗಳ ಬಳಕೆಯಲ್ಲಿ ಒಳ್ಳೆಯ ಕುಂಚ ಶಕ್ತಿಯನ್ನೇ ಸಾಧಿಸಿಕೊಂಡರು. ಹೆಚ್ಚುಹೆಚ್ಚು ರೂಪಚಿತ್ರಗಳನ್ನು ರಚಿಸಿಕೊಡುತ್ತಾ ಬಂದರು. ಸಾಮಾನ್ಯ ವಾಗಿ ಕನ್ನಡ ನಾಡಿನ ಅರಮನೆ ಗುರುಮನೆಗಳಲ್ಲೂ, ಸಂಘ ಸಂಸ್ಥೆಗಳಲ್ಲೂ ಇವರು ರಚಿಸಿಕೊಟ್ಟ ದೇವದೇವಿಯರ ಮತ್ತು ಕನಕದಾಸ, ಪುರಂದರದಾಸ, ಬಸವಣ್ಣ ಮುಂತಾದವರ ಚಿತ್ರಗಳು ನಮಗೆ ನೋಡಲು ದೊರೆಯುತ್ತವೆ. ಬೆಂಗೂರಿನ ಪುರಭವನದಲ್ಲಿ ಕೆಂಪೇಗೌಡನ ತೈಲಕೃತಿ ಬಹುಜನರ ಮೆಚ್ಚಿಗೆ ಪಡೆದಿದೆ. ಕರ್ಣಾಟಕದಲ್ಲಿ ಜರುಗಲಿರುವ ಶ್ರೀ ಬಸವೇಶ್ವರರ ೮೦೦ ವರ್ಷ ಗಳ ಜಯಂತ್ಯುತ್ಸವಕ್ಕಾಗಿ ಪೂರ್ಣಾಕೃತಿಯ ಶ್ರೀ ಬಸವಣ್ಣನವರ ತೈಲ ಚಿತ್ರವನ್ನೂ ಶ್ರೀ ರಾಮು ತುಂಬ ಶ್ರಮದಿಂದ ಸುಂದರವಾಗಿ ರಚಿಸಿಕೊಟ್ಟಿದ್ದಾರೆ. ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಎಡ ಬಲ ಭಾಗದ ಮಹಾದ್ವಾರಗಳ ಭಿತ್ತಿಗಳಲ್ಲಿ ಇವರು ರಚಿಸಿರುವ ನಾಲ್ಕು ಬೃಹದಾಕಾರವಾದ ನಿಸರ್ಗ ದೃಶ್ಯಗಳನ್ನು ಇಲ್ಲಿ ಮರೆಯುವಂತಿಲ್ಲ.

ರಾಜಕೀಯ ವ್ಯಕ್ತಿಗಳ ಪರಿಚಯ ಲಾಭದಿಂದ ಇವರ ಅನೇಕ ಕೃತಿ ಗಳಿಗೆ ಪ್ರೋತ್ಸಾಹವೂ ದೊರೆತಿದೆ. ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಇವರು ಚಿತ್ರಿಸಿದ ಗಾಂಧೀಜಿ ಮತ್ತು ಲಾರ್ಡ್ ಮೌಂಟ್‌ಬೇಟನ್ ದಂಪತಿಗಳ ಪೂರ್ಣಾಕೃತಿಯ ತೈಲ ಚಿತ್ರವಿದೆ. ಮೈಸೂರು ಪುರಭವನ ದಲ್ಲಿ ಶ್ರೀ ಎಸ್. ರಾಧಾಕೃಷ್ಣರ ರೂಪಚಿತ್ರವಿದೆ 'ಬೇಡನ್‌ಪೌಲ್' ರೂಪ ಚಿತ್ರ ಮೈಸೂರಿನ ಸ್ಕೌಟ್ ಭವನದಲ್ಲಿದೆ. ದಿ|| ಪಟೇಲ್, ಅಜಾದ್, ನೆಹರು, ರಾಜೇಂದ್ರಪ್ರಸಾದ್ ಮುಂತಾದ ರಾಜಕಾರಣಿಗಳ ಈ ಬಗೆಯ ಚಿತ್ರಗಳನೇಕವು ಅನೇಕ ಸಭಾಮಂದಿರಗಳಲ್ಲಿ ಶೋಭಿಸುತ್ತಿವೆ. ಅಲ್ಲದೆ ಬ್ರಿಟಿಷ್ ರಾಣಿ, ಲಾರ್ಡ್ ಮೌಂಟ್‌ಬೇಟನ್, ಕೆನಡಿ ಮುಂತಾದವರ ಚಿತ್ರ

ಗಳನ್ನು ತೈಲ ವರ್ಣವಲ್ಲಿ ಬಿಡಿಸಿ ಅವರವರಿಗೆ ಪ್ರೀತಿಯ ಕನ್ನಡ ಕಲಾವಿದನ ಕಾಣಿಕೆಯಾಗಿ ಅರ್ಪಿಸಿದ್ದಾರೆ ರಾಮು.

"ಧರೆಯೊಳೆಲ್ಲೇ ಇರಲಿ ನಾನು ಮರೆಯಲಾರೆ ಮಧುಗಿರಿ"–ಎಂಬ ಕವಿ ದಿ|| ಹೊಯ್ಸಳರ ನುಡಿಯಂತೆ, ಕಲಾವಿದ ರಾಮು ಅವರಿಗೆ ಅವರ ಹುಟ್ಟೂರು ಮಧುಗಿರಿ ಬಗ್ಗೆ ತುಂಬ ಅಭಿಮಾನವಿದೆ. ಕೋಟೆ ಕೊತ್ತಳ ಹೆಬ್ಬಂಡೆ ಗುಂಡುಗಳಿಂದ ಕೂಡಿದ ಮಧುಗಿರಿಯ ಭವ್ಯ ನೆಲೆಯನ್ನು ತೈಲ ವರ್ಣಗಳಲ್ಲಿ ಚಿತ್ರಿಸಿ ಅಲ್ಲಿಯ ಪುರಭವನಕ್ಕೆ ನೆನಪಿನ ಕೊಡುಗೆಯಾಗಿ ನೀಡಿದ್ದಾರೆ. ಆ ಮೂಲಕ ಆ ಜನತೆಯಿಂದ ಸನ್ಮಾನ ಪಡೆದ ರಾಮು ಅವರೇ ಧನ್ಯರು.

"ನನ್ನ ಕಲೆಯಲ್ಲಿ ಪರಿಪೂರ್ಣತೆಯೆಂಬುದೇ ಇಲ್ಲ. ಸಾಧಿಸಿದಷ್ಟೂ ಇನ್ನೂ ತಿಳಿಯಬೇಕಾದುದು ಸಾಗರದಂತೆ ಅಗಾಧವಾಗಿದೆ. ಇದೊಂದು ತಪಸ್ಸು. ಇದರಲ್ಲಿ ಸಿದ್ಧಿ ಎಂತೋ!" ಎನ್ನುತ್ತಾರೆ ವಿನಯಶೀಲ ಮಧುಗಿರಿ ರಾಮು.



ಎಂ. ಜೆ. ಶುದ್ಧೋದನ

ಕನ್ನಡನಾಡಿನ ಕೆಲವೇ ಮಂದಿ ಪ್ರಮುಖ ಪ್ರಕೃತಿ ಚಿತ್ರಕಾರರಲ್ಲಿ ಶ್ರೀ ಶುದ್ಧೋದನರೂ ಇಂದು ಒಬ್ಬರಾಗಿದ್ದಾರೆ. ಶ್ರೀಯುತರು ಚನ್ನಪಟ್ಟಣದ ಸರ್ಕಾರಿ ಕರಕುಶಲ ಕಲಾಶಾಲೆಯ ಕಲಾವಿದರಾಗಿದ್ದರು. ೧೯೫೯ ರ ಆಗಸ್ಟ್ ೫ ರಂದು ಅವರಿಂದ ನನಗೆ ಬಂದ ಪತ್ರದಿಂದ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯ ಬಗ್ಗೆ ಅವರಿಗಿರುವ ಅಭಿಮಾನ ಆಸಕ್ತಿಗಳು ವ್ಯಕ್ತವಾಗುತ್ತವೆ.

Dear Sri Thippeswamy,

It is a long time I heard from you or meet you in person... I am writing this just to let you know that, though my name has been recommended for the Asst. Superintendent of Arts, C.T.I. by the Director of Industries and Commerce, the Govt. is taking its own time to post me for the said vacant post.

As I am eager to take up that post and do something towards the development of the Art Section which is in downtroden condition, I hope in the cause of developing the Fine Arts, you will take some interest ....As I know You are in touch with some of the M.L.A's who have got real interest towards the development of Fine Arts....ಎಂದು ನನಗೆ ಪತ್ರ ಬರೆದಿರುತ್ತಾರೆ.

ಬಿಚ್ಚುಹೃದಯದ ಕಲಾವಿದ ಶ್ರೀ ಶುದ್ಧೋದನರಿಗೆ ತಾವು ಕಲಾ ವ್ಯಾಸಂಗಮಾಡಿ ಹೊರಬಂದ ಈ ಕಲಾಶಾಲೆಯ ಬಗ್ಗೆ ಅದೆಷ್ಟು ಮಮತೆ! ಅಲ್ಲಿ ಹಿಂದೆ ದಿ|| ಪಾವಂಜೆ, ಶ್ರೀ ವೀರಪ್ಪ ಮತ್ತು ಶ್ರೀ ಕೇಶವಮೂರ್ತಿಗಳು ಉನ್ನತ ಸ್ಥಾನದಲ್ಲಿದ್ದುಕೊಂಡು ಒಳ್ಳೆಯ ಸೇವೆ ಸಲ್ಲಿದ್ದರೆಂಬುದನ್ನು ನಾವು ಇಲ್ಲಿ ಮರೆಯಬಾರದು. ಈ ಶಾಲೆಯ ಬಗ್ಗೆ ಶ್ರಿ ಶುದ್ಧೋದನರು ಅಭಿಮಾನ ತೋರಿ ಅಲ್ಲಿ ಸೇವೆಮಾಡಲು ಅಪೇಕ್ಷಿಸಿದುದು ಸಹಜವೇ ಸರಿ.

ಪ್ರಕೃತಿಪ್ರಿಯ ಶುದ್ಧೋದನರು ಜಲವರ್ಣ ಮತ್ತು ತೈಲವರ್ಣಗಳೆರಡರ ಮಾಧ್ಯಮದಲ್ಲೂ ಸಿಸ್ಸೀಮ ಸಾಧನೆಯನ್ನು ಗಳಿಸಿಕೊಂಡಿದ್ದಾರೆ. ಇವರು ರಚಿಸಿರುವ ಚಿತ್ರಗಳಲ್ಲಿ ಪ್ರವಾಸಿ ಕೇಂದ್ರಗಳಾದ ಆಗುಂಬೆ, ಶ್ರವಣಬೆಳಗೊಳ, ಶೃಂಗೇರಿ, ಬಿಳಿಗಿರಿ ರಂಗನಬೆಟ್ಟ, ಶ್ರೀರಂಗಪಟ್ಟಣ. ಸೋಮನಾಥಪುರ, ಬೇಲೂರು ಹಳೇಬೀಡು. ಚನ್ನಪಟ್ಟಣ, ಮೈಸೂರು ಮುಂತಾದ ಕಡೆಗಳಲ್ಲಿನ ಬೃಹದಾಕಾರದ ಕೃತಿಗಳೇ ಹೆಚ್ಚು ಕಲಾಪ್ರೇಮಿಗಳ ದೃಷ್ಟಿಯನ್ನು ಸೆಳೆಯುತ್ತವೆ. ವಸ್ತುವಿನ ಆಯ್ಕೆಯಲ್ಲಿ ಕಲಾವಿದ ತನ್ನದೇ ಆದ

ಪ್ರತಿಭೆಯನ್ನು ತೋರಿ ಅಲ್ಲಿ ತನ್ನ ಕೃತಿ ಕಲಾಪೂರ್ಣವಾಗುವಂತೆ ಮಾಡ ಬಲ್ಲನೆಂಬುದಕ್ಕೆ ನಿದರ್ಶನವಾಗಿ ಇಂಥ ಕೃತಿಗಳನ್ನು ಗಮನಿಸಬಹುದು.

ಬೆಳಗೊಳದ ಇಂದ್ರಗಿರಿಯನ್ನು ಇಳಿದು ಬರುವಾಗ ಮೊದಲನೆಯ ಹಂತದಲ್ಲಿ ಸಿಗುವ ಸ್ತಂಭದ್ವಾರದ ಚೌಕಟ್ಟಿನ ಮೂಲಕ ಬೆಳಗೊಳದ ಚೆಲುವನ್ನು ಇವರು ಕಂಡಿದ್ದಾರೆ. ಬೆಳಗೊಳದಲ್ಲಿನ ಸರೋವರದ ಜಲ ಸೌಂದರ್ಯ, ಅದರಲ್ಲಿ ಪ್ರತಿಬಿಂಬಿತವಾಗಿರುವ ಚಂದ್ರಗಿರಿಯನ್ನು ಬಹು ಸಹಜವಾಗಿ ಬಿಡಿಸಿದ್ದಾರೆ.

'ಆಗುಂಬೆ'ಯ ದಟ್ಟವಾದ ಕಾಡಿನ ನಡುವೆ ಹಾವಿನಂತೆ ಹರಿದು ಘಟ್ಟವನ್ನಿಳಿಯುವ ರಸ್ತೆ, ಘಟ್ಟದ ಕೆಳಗೆ ಅನಂತವಾಗಿ ನೆಲವನ್ನಪ್ಪಿ ಮಲಗಿರುವ ಕಾನನದ ಸುನೀಲ ಸೌಂದರ್ಯ ಮುಂತಾದುವನ್ನು ರಮ್ಯವಾಗಿ ಬಿಡಿಸಿದ್ದಾರೆ ಮೈಸೂರಿನ 'ಮಾನಸಗಂಗೋತ್ರಿ'ಯನ್ನು ಕುಕ್ಕನಹಳ್ಳಿ ಕೆರೆಯ ಹಿನ್ನೆಲೆಯಲ್ಲಿ ಸಂಧ್ಯಾಸಮಯದಲ್ಲಿ ದರ್ಶಿಸಿ ರಚಿಸಿರುವ ಪ್ರಕೃತಿ ಚಿತ್ರವೂ ಮೋಹಕವಾದುದೇ. ಶುದ್ಧೋದನರು ಮೇಘ ಸೌಂದರ್ಯವನ್ನು ಬಿಡಿಸುವುದರಲ್ಲಿ ಇತರ ಕಲಾವಿದರಿಗಿಂತ ಹೆಚ್ಚು ಕೌಶಲವನ್ನು ತೋರುತ್ತಾರೆ. ಶಕ್ತಿಪೂಜೆ, ಸೊಲಿಗರಶಾಲೆ, ಕರಿಘಟ್ಟ ಮುಂತಾದ ಇನ್ನೂ ಕೆಲವು ಉತ್ತಮ ಕೃತಿಗಳನ್ನು ೧೯೬೦ರ ನವೆಂಬರ್ ತಿಂಗಳಲ್ಲಿ ಮೈಸೂರಿನ ಚಿತ್ರ-ಶಿಲ್ಪ ಅಕಾಡಮಿ ಏರ್ಪಡಿಸಿದ್ದ ಕಲಾಪ್ರದರ್ಶನದಲ್ಲಿ ಪ್ರದರ್ಶಿಸ ಲಾಗಿದ್ದಿತು

ಹಿಂದೆ ಒಮ್ಮೆ ದಿ. ೨೭-೩-೪೯ರಲ್ಲಿ ಇವರು ರಚಿಸಿದ ಜಲವರ್ಣದ ಸುಮಾರು ೪೨ ಕನ್ನಡನಾಡಿನ ನಿಸರ್ಗ ಚಿತ್ರಗಳನ್ನು ಮದರಾಸಿನ ಮ್ಯೂಜಿಯಂನಲ್ಲಿ ಪ್ರದರ್ಶಿಸಲಾಗಿದ್ದಿತು. ಆ ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಶ್ರೀ ರಾಘವರಾವ್ ಅವರು ತುಂಬು ಹೃದಯದಿಂದ ಇವರ ಕಲಾಕುಶಲತೆಯನ್ನು ಕೊಂಡಾಡಿದರು.

ಶ್ರೀ ಶುದ್ಧೋದನರ ಈ ಪ್ರಗತಿಗೆ ಅವರು ಬೆಳೆದುಬಂದ ಸನ್ನಿವೇಶವೇ ಕಾರಣ. ದಿ|| ಎಂ. ಎಸ್. ಜಗದೀಶನ್ ಅವರ ಪುತ್ರರಾಗಿ ೧೯೧೪ರ ಸೆಪ್ಟೆಂಬರ್ ೨ರಂದು ಜನಿಸಿದರು. ದಿ|| ಜಗದೀಶನ್ ಅವರೂ ಕಲಾವಿದರೇ. ಪ್ರತಿಭಾನಿಷ್ಠ ಕಲಾಧ್ಯಾಪಕರೆನ್ನಿಸಿಕೊಂಡಿದ್ದರು ಮೈಸೂರಿನ ಪುರುಷ

ಉಪಾಧ್ಯಾಯರ ತರಬೇತಿ ಕಾಲೇಜಿನಲ್ಲಿ ಪ್ರಮುಖ ಕಲಾಧ್ಯಾಪಕರಾಗಿ ಸೇರಿ ನಂತರ, ಮಹಿಳಾ ಉಪಧ್ಯಾಯ ತರಬೇತಿ ಕಾಲೇಜಿನಲ್ಲಿ ಕೊನೆಗೆ ನಿವೃತ್ತಿಯಾದರು.

ಶ್ರೀ ಶುದ್ಧೋದನರ ಪ್ರಪ್ರಥಮ ಕಲಾಗುರು ಅವರ ತಂದೆಯವರೇ. ಬಹು ಚಿಕ್ಕವಯಸ್ಸಿನಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು ತಮ್ಮ ಸತತ ಶ್ರದ್ಧೆಯಿಂದ ನಿಸರ್ಗ ಚಿತ್ರಕಾರರಾಗಿದ್ದಾರೆ.

ಚಾಮರಾಜೇಂದ್ರ ಕಲಾಶಾಲೆಯಲ್ಲಿ ಈ ಬಾಲಕ ಕಲಾಭ್ಯಾಸ ನಡೆಸುವ ವೇಳೆಯಲ್ಲೇ ಮದರಾಸು ಕಲಾಪರೀಕ್ಷೆಗಳನ್ನೆಲ್ಲಾ ಮುಗಿಸುತ್ತಾ ಬಂದು ೧೯೩೫ ರಲ್ಲಿ ಡಿಪ್ಲೊಮೋ ಗಳಿಸಿಕೊಂಡರು. ಅನಂತರ ಈ ಯುವಕರ ಮನಸ್ಸು ಬನದ ಸಿರಿಯನ್ನು ಚಿತ್ರಿಸುವಲ್ಲಿ ಹೆಚ್ಚು ಸೆಳೆಯಿತು. ತಂದೆಯವರ ಮಾರ್ಗದರ್ಶನವೂ ಇವರಿಗಿದ್ದಿತು. ತಂದೆಯವರೂ ಶಿಲ್ಪ ಚಿತ್ರ ಸಂಗೀತ ಮುಂತಾದ ಕಲೆಗಳಲ್ಲಿ ಬಹುಮುಖ ಪ್ರತಿಭೆಯನ್ನು ತೋರುತ್ತಾ ಬಂದಿದ್ದರು. ತಮ್ಮ ಆರುಜನ ಪುತ್ರರಲ್ಲಿ ಈ ಹಿರಿಯ ಮಗ ಶುದ್ಧೋದನರು ಚಿತ್ರಕಾರ ನಾದುದು ಅವರಿಗೆ ಬಲು ಹಿಗ್ಗು. ಮೈಸೂರು ನಗರದಲ್ಲೇ ಆಗ ಬೌದ್ಧ ಮನೆತನಗಳೇ ಇರಲಿಲ್ಲ.

ಈ ಸುಪುತ್ರ ಕಲಾವಂತನಿಗೆ ಸೇಲಂ ಜಿಲ್ಲಾ ಕಲೆಕ್ಟರ್ ಅವರ ಮುದ್ದಿನ ಮಗಳನ್ನು ತಂದುಕೊಂಡು ಲಗ್ನ ಮೈಸೂರಲ್ಲಿ ಜರುಗಿತು. ಇವರ ತಂದೆ ದಿ|| ಜಗದೀಶನ್ ಅವರ ಕಲಾಸೇವೆ ಆಗ ದಿ|| ನಾಲ್ವಡಿ ಕೃಷ್ಣರಾಜ ಒಡೆಯರರವರ ಗಮನ ಸೆಳೆದಿತ್ತು. ಅರಮನೆಯಿಂದ ತಮ್ಮ ಮಗನ ಲಗ್ನಕ್ಕೆ ಕಿಲ್ಲತ್ತುಗಳೂ ಬಂದಿದ್ದು ಬಹು ವೈಭವದಿಂದಲೇ ಜರುಗಿತು.

ತಂದೆಯಂತೆ ಪುತ್ರರೂ ಕಲಾರಂಗದಲ್ಲಿ ಕ್ರಮೇಣ ಹೆಚ್ಚಿನಸೇವೆ ಮಾಡುತ್ತಾ. ತಮ್ಮ ಸ್ವಶಕ್ತಿಯನ್ನು ಪ್ರಕೃತಿಚಿತ್ರ ರೂಪಚಿತ್ರಗಳ ರಚನೆಯಲ್ಲಿ ವಿನಿಯೋಗಿಸುತ್ತಾ ಬಂದಿದ್ದಾರೆ. ಶ್ರೀಯುತರ ಹಿರಿಯ ಕುಮಾರ ಶ್ರೀ ನಿರ್ಮಲಕುಮಾರ್ ತಮ್ಮ ಕಲಾಭ್ಯಾಸವನ್ನು ಕಲಾ ಗುರು ಸೂಫಿಯವರ ಮಾರ್ಗದರ್ಶನದಲ್ಲಿ ಮುಗಿಸುತ್ತಾ ಬಂದಿದ್ದಾರೆ. ಈ ಪುತ್ರರು ತಂದೆಯಂತೆ, ತಾತನಂತೆ ಚಿತ್ರಕಲಾರಂಗದಲ್ಲಿ ಪ್ರಗತಿ ಹೊಂದಲಿದ್ದಾರೆ.

ಎಂ. ರಾಮನರಸಯ್ಯ

ಮೈಸೂರು ಉಪವನಗಳ ನಗರ ಎಂಬ ಖ್ಯಾತಿಗೆ ಭಾಜನವಾಗಿದೆ. ಅಲ್ಲದೆ ಕಲಾಕೇಂದ್ರವೂ ಆಗಿದೆ. ಎಲ್ಲಕ್ಕೂ ಮಿಗಿಲಾಗಿ ಸೌಂದರ್ಯದ ಗಣಿ ಎನಿಸಿ ಅಪಾರ ಕಲಾಸಂಪತ್ತನ್ನು ಹೊಂದಿದ ಜಗನ್ಮೋಹನ ಅರಮನೆ ಪ್ರಸಿದ್ಧವಾಗಿದೆ. ಕಲಾಕೋವಿದರ ಅತ್ಯುತ್ತಮ ಚಿತ್ರಗಳ ಮತ್ತು ಶಿಲ್ಪ ಕೃತಿಗಳ ಸಂಗ್ರಹವನ್ನು ಹೊಂದಿ ಅದ್ವಿತೀಯವೆನಿಸಿದೆ. ಇದು ತನ್ನದೇ ಆದ ಇತಿಹಾಸ ಹೊಂದಿ ವೈಭವದಿಂದ ಮೆರೆದಿರುವುದರ ಜೊತೆಗೆ ಅನೇಕ ಶ್ರೇಷ

ಮಟ್ಟದ ಕಲಾಕೋವಿದರ ಕೃತಿಗಳನ್ನು ಮೆರೆಸುವ ಉತ್ತಮ ಆಕರ್ಷಕ ಕಲಾಗಾರವಾಗಿದೆ.

ಪ್ರೇಕ್ಷಕರು ಮೊದಲು ಚಿತ್ರಶಾಲೆಯ ಎಡಭಾಗದ ಮಹಾದ್ವಾರವನ್ನು ಹೊಕ್ಕು ಅಲ್ಲಿನಿಂತಾಗ ಅಲ್ಲಿನ ರಂಗುರಂಗಿನ ಕಲಾಮಯ ವಸ್ತುಗಳಿಗೆ, ಗಾಜಿನ ತೂಗುದೀಪಗಳಿಗೆ ಬೆರಗಾಗುತ್ತಾರೆ. ಇದಾವುದನ್ನೂ ಗಮನಿಸದೆ ಮೊದಲು ಅಲ್ಲಿನ ಒಳಾಂಗಣಕ್ಕೆ ಹೋಗುವ ಬಾಗಿಲಲ್ಲಿ ನಿಂತರೆ ಸಾಕು. ಅಲ್ಲಿ ಶ್ರೀ ಚಾಮರಾಜ ಒಡೆಯರವರ ಬೃಹದಾಕಾರದ ತೈಲವರ್ಣದ ಚಿತ್ರವೊಂದು ತುಂಬ ಆಕರ್ಷಕವಾಗಿ ಗೋಚರಿಸುತ್ತದೆ. ಶ್ರೀ ಒಡೆಯರವರು ಸಿಂಹಾಸನಾರೋಹಣದ ದರ್ಬಾರ್ ಡ್ರೆಸ್ಸಿನಲ್ಲಿ ರಾಜಠೀವಿಯಿಂದ ನಿಂತಿರುವುದನ್ನು ಕಲಾವಿದ ಬಹು ಸ್ವಾಭಾವಿಕವಾಗಿ ಸುಂದರವಾಗಿ ಸಹಜವರ್ಣಗಳಿಂದ ಬಿಡಿಸಿದ್ದಾರೆ. ಕಲಾವಿದರ ಕುಂಚ ವೈವಿಧ್ಯತೆಯ ಮಟ್ಟವನ್ನಳೆಯಲು ಇದೊಂದು ಕೃತಿಸಾಕೆನಿಸುತ್ತದೆ. ಇದನ್ನು ರಚಿಸಿದ ಕಲಾವಿದರೇ ಶ್ರೀ ಎಂ. ರಾಮನರಸಯ್ಯನವರು. ಇವರು ಅದೇ ಚಿತ್ರಶಾಲೆಯ ಮೇಲ್ವಿಚಾರಣೆಯ ಕ್ಯೂರೇಟರಾಗಿದ್ದಾರೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು.

ಶ್ರೀಯುತರು ಬಹು ಸೌಜನ್ಯದ ಸ್ನೇಹಪರ ವ್ಯಕ್ತಿಗಳು. ಆ ಕಲಾಗಾರಕ್ಕೆ ಬಂದುಹೋಗುವ ದೇಶವಿದೇಶದ ಕಲಾರಸಿಕರ ಕಲಾಭಿರುಚಿಯನ್ನು ಬಹುಬೇಗ ಅರಿತುಕೊಳ್ಳುವ ಜಾಣರಿವರು. ಅಲ್ಲಿನ ಕೃತಿಗಳ ಮತ್ತು ಕೃತಿಕಾರರ ಬಗ್ಗೆ ವಿವರ ಪಡೆಯಲಪೇಕ್ಷಿಸುವವರಿಗೆ ತುಂಬು ಹೃದಯದಿಂದ ಸಹಕರಿಸುತ್ತಾರೆ. ಅವರು ನೀಡುವ ವಿವರಣೆ ಚಾರಿತ್ರಿಕ ಹಿನ್ನೆಲೆ ಎಂಥವರ ಹೃದಯವನ್ನೂ ಸೆಳೆಯದಿರವು. ಈ ಮನಮೋಹಕ ಚಿತ್ರಶಾಲೆಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸುವ ಸದವಕಾಶ ಶ್ರೀಯುತರಿಗೆ ದೊರೆತಿರುವುದು ಅವರ ಪುಣ್ಯಫಲವೆಂದೇ ಹೇಳಬೇಕು. ಇವರು ಬೆಳೆದುಬಂದ ಸನ್ನಿವೇಶವೂ ಇದಕ್ಕೆ ಪೂರಕವಾಗಿದೆ.

ಶ್ರೀ ರಾಮನರಸಯ್ಯನವರಂತೆ ಅವರ ತಾತಮುತ್ತಾತಂದಿರೂ ಮೈಸೂರು ಅರಸರ ಬಳಿ ಸೇವೆ ಸಲ್ಲಿಸಿದವರೇ. ಶ್ರೀಯುತರ ತಂದೆ ದಿ|| ವೆಂಕಟನರಸಯ್ಯನವರು. ಅರಮನೆಯ ದರ್ಬಾರ್ ಬಕ್ಷಿಯವರ ಆಫೀಸಿನಲ್ಲಿ ನಾಯಕ್ ವೃತ್ತಿಯಲ್ಲಿದ್ದು ಸೇವೆಸಲ್ಲಿಸಿದ್ದಾರೆ. ದಿ||ವೆಂಕಟನರಸಯ್ಯನವರದು

ಬಹು ಸಾತ್ವಿಕ ಗುಣ. ನಿಧಾನಿಗಳು. ವ್ಯವಹಾರಜ್ಞಾನಿಗಳು. ಶ್ರೀ ರಾಮ ನರಸಯ್ಯನವರ ತಾತನವರೂ ಅರಮನೆಯಲ್ಲಿ ದರ್ಬಾರ್ ಭಕ್ಷಿಯವ ರಾಗಿದ್ದರು. ಅವರ ಭವ್ಯ ಸೌಧ ಅರಮನೆಯ ಕೋಟೆಯ ಒಳಗೆ ಇದ್ದಿತು. ಆಗರ್ಭ ಶ್ರೀಮಂತ ಜಹಗೀರ್‌ದಾರ್ ಮನೆತನ ಅವರದು. ಅವರು ಒಳ್ಳೆಯ ಕ್ರಿಕೆಟ್ ಆಟಗಾರರೂ ಕುಸ್ತಿವಸ್ತಾದಿಗಳೆಂದೂ ಹೆಸರಾಗಿದ್ದರು ಜೊತೆಗೆ ಚಿತ್ರ ಕಲೆಯಲ್ಲಿ ಕೊಂಚ ಅಭಿರುಚಿ ಆಸಕ್ತಿಯೂ ಇದ್ದಿತವರಿಗೆ. ಆಗಿನ ಕಾಲದ ಹೆಸ ರಾಂತ ಚಿತ್ರಕಾರರಿಂದ ಅನೇಕ ದೇವರ ಪಟಗಳನ್ನು ದೇಶೀಯ ಶೈಲಿಯಲ್ಲಿ ಬರೆಯಿಸಿ ಅವರ ಮನೆಯಲ್ಲಿ ತೂಗುಹಾಕುವ ಹವ್ಯಾಸವೂ ಅವರಿಗಿದ್ದಿತು.

ಶ್ರೀ ರಾಮನರಸಯ್ಯನವರ ಮುತ್ತಾತಂದಿರಾದ ದಿ|| ಬಕ್ಷಿ ಬೊಕ್ಕಸದ ಶಾಮರಾಯರೂ ಅರಮನೆಯಲ್ಲಿ ದುಡಿದವರೇ. ಅರಮನೆ ಬೊಕ್ಕಸದ ಭಕ್ಷಿ ಯಾಗಿದ್ದರು. ಇವರು ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರೀತಿಗೌರವಕ್ಕೆ ಪಾತ್ರರಾದವರು. ಇವರಿಗೆ ಸಂಗೀತಕಲೆಯಲ್ಲಿ ಬಹು ಅಭಿರುಚಿ. ಮುಮ್ಮಡಿ ಯವರ ಜೊತೆಯಲ್ಲಿ ವ್ಯಾಸಂಗಮಾಡಿದ ಪುಣ್ಯಶಾಲಿಗಳಿವರು.

ಅರಮನೆಯ ಗಜಶಾಲೆಯ ಮೇಲ್ವಿಚಾರಕರಾದ ರಾಮನರಸಯ್ಯನ ವರ ದೊಡ್ಡಪ್ಪ ದಿ|| ಶಾಮರಾವ್ ಅವರೂ ಘಟವಾದ್ಯದಲ್ಲಿ ಹೆಸರಾಗಿದ್ದರು. ವೀಣೆ ಶೇಷಣ್ಣ ಮತ್ತು ವೀಣೆ ಸುಬ್ಬಣ್ಣನವರಿಗೆ ಪಕ್ಕವಾದ್ಯಕ್ಕೆ ಸೇರುತ್ತಿದ್ದ ಅದೃಷ್ಟಶಾಲಿಗಳಿವರು.

ಬಾಲಕ ರಾಮನರಸಯ್ಯನವರಿಗೆ ತಾತ ಮುತ್ತಾತಂದಿರ ರಾಜಮನೆ ತನದ ಸೇವಾಸಂಪರ್ಕ ಒಳ್ಳೆಯ ಮಾರ್ಗದರ್ಶನವಾಯಿತು. ಚಿಕ್ಕಂದಿನಲ್ಲೆ ಚಿತ್ರ ಬರೆಯಲು ಅಭ್ಯಾಸಮಾಡಿದರು. ಮನೆಯ ಭಿತ್ತಿಯಲ್ಲಿದ್ದ ದೇಶೀಯ ವರ್ಣಚಿತ್ರ ಪಟಗಳೇ ಇವರ ಕಲಾಸ್ಫೂರ್ತಿಗೆ ಕಾರಣವಾದುವು. ಶಾಲೆ ಯಲ್ಲೂ ಚಿತ್ರ ಬಿಡಿಸುವುದೇ ಇವರ ಹವ್ಯಾಸವಾಗಿದ್ದಿತು. ೧೯೩೫ರ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ಈ ಯುವಕರ ಕೃತಿಗೆ ಬಹುಮಾನವೂ ದೊರೆತಿದ್ದಿತು. ಇವರ ತಂದೆ ದಿ|| ವೆಂಕಟನರಸಯ್ಯನವರು ಅರಮನೆಯಲ್ಲಿದ್ದರು. ಮಗನು ರಚಿಸಿದ ಶ್ರೀ ಜಯಚಾಮರಾಜರ ಚಿತ್ರವನ್ನು ರಾಜರಿಗೆ ತೋರಿಸಿದಾಗ ಅವರು ಹುಡುಗನ ಕಲಾಪ್ರತಿಭೆಯನ್ನು ಮೆಚ್ಚಿ ಬಹುಮಾನ ನೀಡಿ ಹರಸಿದರು. ಇದೇ ಮುಂದೆ ಈ ಬಾಲಕ ಚಾಮರಾಜೇಂದ್ರ ಕಲಾಶಾಲೆಗೆ ಸೇರಲು ಅವ

ಕಾಣಸಿಗಿಡಿತೆನ್ನಬಹುದು. ಅಲ್ಲಿ ಶ್ರೀ ಎಸ್. ನಂಜುಂಡಸ್ವಾಮಿಗಳು ಮತ್ತು ಶ್ರೀ ವೈ. ಸುಬ್ರಹ್ಮಣ್ಯರಾಜು ಅವರ ನೇತೃತ್ವದಲ್ಲಿ ಕ್ರಮವಾಗಿ ಕಲಾಭ್ಯಾಸ ನಡೆಸಿದರು. ಆಗ ದ್ವಿತೀಯ ಕಲಾಂತರಗತಿಯಲ್ಲಿದ್ದ ನಾನು ಅವರ ಕಲಾಭ್ಯಾಸವನ್ನು ಹಿಂದಿನಿಂದಲೂ ಗುರುತಿಸುತ್ತಾ ಬಂದಿರುವೆ. ಅರಮನೆಯಲ್ಲಿ ಕಲಾಕೃತಿಗಳ ಕೆಲಸ ಮೇಲಿಂದಮೇಲೆ ಆಗ ಕಲಾವಿದರಿಗೆ ದೊರಕುತ್ತಿತ್ತು. ಆಗ ಇವರೂ ತಮ್ಮ ಗುರುಗಳ ಜೊತೆಯಲ್ಲಿ ಹೋಗಿಬರುತ್ತಿದ್ದರು. ಆಗ ಖ್ಯಾತ ಅರಮನೆಯ ಕಲಾವಿದರಾಗಿದ್ದ ದಿ|| ಕೆ. ಕೇಶವಯ್ಯನವರ ಪ್ರೀತಿಗೆ ಪಾತ್ರರಾದರು ಶ್ರೀ ರಾಮನರಸಯ್ಯನವರು. ಅವರ ಮಾರ್ಗದರ್ಶನದಲ್ಲಿ ಅರಮನೆಯ ಅನೇಕ ಚಿತ್ರಗಳನ್ನು ಮುಗಿಸುತ್ತಾ ತಮ್ಮ ವರ್ಣ ವೈಖರಿಯನ್ನು ಬೆಳೆಸಿಕೊಂಡರು ಮೆರೆಸಿಕೊಂಡರು. ೧೯೪೭ ರಲ್ಲಿ ಇವರು ರಚಿಸಿದ ಶ್ರೀ ರಾಘವೇಂದ್ರಸ್ವಾಮಿಗಳವರ ಚಿತ್ರವನ್ನು ಶ್ರೀ ಜಯಚಾಮರಾಜ ಒಡೆಯರವರಿಗೆ ಅರ್ಪಿಸಿದರು ಪ್ರೀತಿಯ ಕಾಣಿಕೆಯಾಗಿ. ಇವರ ಕಲಾಕುಶಲತೆಯನ್ನು ಮೆಚ್ಚಿದ ಆಫೀಸರ್ ಇನ್‌ಚಾರ್ಜ್‌ರವರಾಗಿದ್ದ ಶ್ರೀ ಚನ್ನರಾಜೇ ಅರಸಿನವರು ಶ್ರೀ ಒಡೆಯರವರಿಗೆ ಹೇಳಿ ಜಗನ್ಮೋಹನ ಚಿತ್ರಶಾಲೆಯ ಕಲಾವಿದರನ್ನಾಗಿ ನೇಮಿಸಿದರು. ಅರಮನೆಯ ಸ್ಟುಡಿಯೋವಿನಲ್ಲಿ ಇವರು ಹಿರಿಯ ಕಲಾವಿದರಾದ ದಿ|| ಕೆ. ಕೇಶವಯ್ಯನವರೊಂದಿಗೆ ಅನೇಕಾನೇಕ ಚಿತ್ರಗಳನ್ನು ಬಿಡಿಸುವ ಸುಯೋಗವೂ ಆ ಮೂಲಕ ಲಭಿಸಿತು. ೧೯೫೦ ರಲ್ಲಿ ಇವರು ರಚಿಸಿದ ಶ್ರೀ ಕೃಷ್ಣರಾಜ ಒಡೆಯರವರ ರೂಪಚಿತ್ರ ಜಗನ್ಮೋಹನ ಚಿತ್ರಶಾಲೆಯಲ್ಲಿದೆ.

ಶ್ರೀಯುತರ ಕುಂಚ ತೈಲ ಹಾಗೂ ಜಲವರ್ಣಗಳೆರಡರಲ್ಲೂ ಸಾಕಷ್ಟು ಚಿತ್ರಗಳನ್ನು ರಚಿಸಿ ಪಳಗಿದೆ. ಇವರಿಗೆ ದೇಶೀಯ ಚಿತ್ರರಚನಾ ಶೈಲಿಯ ತಂತ್ರವೂ ಮೈಗೂಡಿಬಂದಿದೆ. ಇವರು ರಚಿಸಿದ ಜಲವರ್ಣದ ಚಿತ್ರಗಳಲ್ಲಿ ತೋಡಿ ರಾಗ, ವೀಣೆ ಶೇಷಣ್ಣನವರು, ಚರಕ ಮತ್ತು ಶುಶ್ರುತ ಕೃತಿಗಳನ್ನು ತೈಲವರ್ಣದಲ್ಲಿ ಗೌನ್ ಧರಿಸಿರುವ ಜಯಚಾಮರಾಜ ಒಡೆಯರ ರೂಪಚಿತ್ರ; ಸ್ಕಾಟ್‌ಡ್ರೆಸ್ಸಿನ ಯುವರಾಜರ ಚಿತ್ರ, ದಸರಾ ದರ್ಬಾರಿನ ಬೃಹದಾಕಾರದ ತೈಲಚಿತ್ರ, ವಿ. ಪಿ. ಮೆನನ್ನರ ಚಿತ್ರ, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಅವರ ಚಿತ್ರ ಮತ್ತು ಸರ್ ಎಂ ವಿಶ್ವೇಶ್ವರಯ್ಯನವರ

ಚಿತ್ರಗಳನ್ನು ನಾವು ಮರೆಯುವಂತಿಲ್ಲ. ಇವೆಲ್ಲವನ್ನೂ ಜಗನ್‌ಮೋಹನ ಚಿತ್ರಶಾಲೆಯಲ್ಲಿ ಕಾಣಬಹುದು. ಈ ನಡುವೆ ವಿಕ್ಟೋರಿಯಾ ರಾಣಿಯವರ ಮರಿಮಗಳಾದ ಪ್ಯಾರಿಸ್‌ನ ಪ್ರಿನ್‌ಸೆಸ್ ಕಾನಂಡಾಯಲ್‌ರವರು ಅರ ಮನೆಯ ಅತಿಥಿಗಳಾಗಿದ್ದಾಗ ಇವರಿಂದ (ದಂತದ ಫಲಕದ ಮೇಲೆ ಜಲವ ರ್ಣದಲ್ಲಿ) ಅನೇಕ ಚಿತ್ರಗಳನ್ನು ಬರೆಸಿ ಬಹುಮಾನ ನೀಡಿರುತ್ತಾರೆ. ಶ್ರೀ ಶೃಂಗೇರಿ ಸ್ವಾಮಿಗಳವರ ಕಲ್ಪನಾದೃಷ್ಟಿಯಂತೆ ಶ್ರೀರಾಮ ಲಕ್ಷ್ಮಣ ಸೀತ ಗುಹರ ಚಿತ್ರವನ್ನು ಬರೆದು ಕೊಟ್ಟಿದ್ದಾರೆ. ಆಗ ಶ್ರೀ ಶ್ರೀಯವರು ನಾಲ್ಕು ನೂರು ರೂಪಾಯಿಗಳೊಡನೆ ಜರತಾರಿ ಶಾಲನ್ನಿತ್ತು ಸನ್ಮಾನಿಸಿದ ಸನ್ನಿವೇ ಶವನ್ನು ಶ್ರೀಯುತರು ನೆನೆಯುತ್ತಾರೆ.

ರಾಮನರಸಯ್ಯನವರು ಕಲಾವಿದರಾಗಿ ಹೆಸರಾಗಿರುವುದರ ಜೊತೆಗೆ ಯಾವ ಕಲಾವಿದರಲ್ಲೂ ಕಾಣದ ಇನ್ನೊಂದು ವಿಶೇಷ ಗುಣ ಇವರಲ್ಲಿದೆ. ಕುಂಚಗಳ ತಯಾರಿಕಾ ಕಲೆಗಾರಿಕೆ ಇವರಲ್ಲಿದೆ. ಅಂತೆಯೇ ಫೋಟೋ ಕೆಮಿಸ್ಟ್ರಿಯ ಪರಿಶ್ರಮವೂ ಇವರಿಗಿದೆ. ವರ್ಣ ರಾಸಾಯನಿಕ ಶಾಸ್ತ್ರದಿಂದ ಅನೇಕ ಬಣ್ಣಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದಾರೆ.

ಕಲಾವಿದರಿಗೆ ಅಗತ್ಯವಾಗಿ ಬೇಕಾಗುವ ಬ್ರಷ್ ತಯಾರಿಕೆ· ಇವರ ಮುಖ್ಯ ಕಸುಬುಗಳಲ್ಲಿ ಒಂದಾಗಿದೆ. ಪಾಶ್ಚಿಮಾತ್ಯ ದೇಶದಿಂದ ಬರುವ ಕುಂಚಕ್ಕೆ ಯಾವ ವಿಧದಲ್ಲೂ ಇವರು ತಯಾರಿಸುವ ಕುಂಚ ಕಡಿಮೆ ಇಲ್ಲ. ಜಲವರ್ಣ ಹಾಗೂ ತೈಲವರ್ಣಗಳೆರಡರ ಮಾಧ್ಯಮದ ಉಪಯೋಗಕ್ಕೆ ಅನುಕೂಲವಾಗಿ ಇವರು ಕುಂಚಗಳನ್ನು ನಮ್ಮ ಕಲಾವಿದರಿಗೆ ಮಾಡಿ ಕೊಡುತ್ತಾ ಬಂದಿದ್ದಾರೆ. ಅನೇಕ ಕಲಾವಿದರು ಇವರ ಈ ಕೌಶಲವನ್ನು ಮನಸಾರ ಕೊಂಡಾಡುತ್ತಾ ಬಂದಿದ್ದಾರೆ.

ಕುಂಚ ತಯಾರಿಸುವುದೇನೂ ಸುಲಭದ ಕಾರ್ಯವಲ್ಲ. ಕುಂಚಕ್ಕೆ ಬೇಕಾದ ನಯವಾದ ಸೂಕ್ಷ್ಮವಾದ ಕೂದಲನ್ನು ಪಡೆಯುವುದೊಂದು ಸಾಹಸದ ಕೆಲಸ. ಕಾಡುಹಂದಿ, ಕುದುರೆಮರಿ, ಮುಂಗಸಿ. ಮೊಲ, ಅಳಿಲು ಮುಂತಾದ ಪ್ರಾಣಿಗಳ ಬೆನ್ನತ್ತಿ ಹೋಗಬೇಕಾಗುತ್ತದೆ. ಕಾಡುಕುರುಬರ ಸಹಾಯ ಯಾಚಿಸಬೇಕಾಗುತ್ತದೆ. ಹಾಗೆ ಕಷ್ಟದಿಂದ ಪಡೆದುತಂದ ಕೂದ ಲನ್ನು ದ್ರಾವಕಗಳಲ್ಲಿ ನೆನೆಹಾಕಿ ಹದಮಾಡಬೇಕಾಗುತ್ತದೆ. ಹದಮಾಡಿದ

ಕೂದಲನ್ನು ತಗಡಿನ ಕೊಳವೆಗೆ ಅಂಟಿಸಿಂದ ಭದ್ರಪಡಿಸಿ ಮರದ ನಯವಾದ ಲೇಖಣಿಗೆ ಸೇರಿಸಿ ಸಿದ್ಧಪಡಿಸಬೇಕಾಗುವುದು. ಈ ಎಲ್ಲ ಮಾರ್ಗಗಳನ್ನೂ ಬಹು ಜಾಗರೂಕತೆಯಿಂದ ಮುಗಿಸಿಯಾದ ಮೇಲೆ ಅವು ನಮ್ಮ ಕಲಾವಿದರ ಹಸ್ತಕ್ಕೆ ಬಂದು ಸೇರುತ್ತವೆ. ಈ ರೀತಿಯ ಕುಂಚ ತಯಾರಿಕೆಯ ಕೌಶಲ ಪಡೆದ ಇವರಂಥಕಲಾವಿದರು ಕನ್ನಡನಾಡಿನಲ್ಲೇಕೆ ಭಾರತದಲ್ಲೆ ವಿರಳ. ಇದು ಅನೇಕರಿಗೆ ತಿಳಿಯದು. ಸರ್ಕಾರ ಇಂಥ ಪ್ರತಿಭಾಶಾಲಿಗಳನ್ನು ಗುರುತಿಸಿ ಸಂಪೂರ್ಣ ಬೆಂಬಲ ಸಹಕಾರ ನೀಡುವುದು ಉಚಿತವಿದೆ.

ಶ್ರೀ ರಾಮನರಸಯ್ಯನವರ ಬಹುಮುಖ ಕಲಾಸೇವೆಯನ್ನು ಮೆಚ್ಚಿಕೊಂಡ ಪ್ರಸಿದ್ಧ ಕಲಾವಿಮರ್ಶಕ ಶ್ರೀ ಜಿ. ವೆಂಕಟಾಚಲಂ ಅವರು ೧೯೬೧ ರಲ್ಲಿ ಜಗನ್ಮೋಹನ ಚಿತ್ರಸಂಗ್ರಹಾಲಯದ ಕೃತಿಗಳನ್ನು ನೂತನವಾಗಿ ಮತ್ತೆ ಜೋಡಿಸಿ ಪ್ರದರ್ಶಿಸುವಲ್ಲಿ ಶ್ರೀಯುತರ ಸಹಾಯವನ್ನು ಪಡೆದರು. ಈ ಚಿತ್ರಶಾಲೆಯಲ್ಲಿ ಕ್ಯೂರೇಟರ್ ಆಗಿರುವ ಈ ಕಲಾವಿದ ಅಲ್ಲಿರುವ ಚಿತ್ರಗಳು ಹಾಳಾಗದಂತೆ ಬಹು ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡುಬರುವಲ್ಲಿ, ಜನ ಹೆಚ್ಚು ಹೆಚ್ಚು ಸಂದರ್ಶಿಸಲು ಬೇಕಾಗುವ ಎಲ್ಲ ಅವಕಾಶಗಳನ್ನು ಕಲ್ಪಿಸುವುದರಲ್ಲಿ ಈ ವಸ್ತುಸಂಗ್ರಾಲಯದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಎಚ್. ಎಸ್. ಪಾಳೇಗಾರರವರ ಮೆಚ್ಚಿಗೆಗೆ ಪಾತ್ರರಾಗಿ ಅಲ್ಲಿ ಕಲಾಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಇದು ಕನ್ನಡಿಗರು ಹೆಮ್ಮೆಪಡುವ ವಿಷಯವೇ ಸರಿ.



ಜಿ. ಕೆ. ಸತ್ಯ

ಗೋಡೆಯ ಮೇಲೊಂದು ಕನ್ನಡಿ ತೂಗುತ್ತಿತ್ತು. ಅದರ ಮುಂದೆ ಎಂಟು ವರ್ಷದ ಬಾಲಕನೊಬ್ಬ ನಿಂತು ಪದೇ ಪದೇ ಕನ್ನಡಿಯಲ್ಲಿ ಇಣಿಕಿ ನೋಡುತ್ತಿದ್ದ. ಸೀಸದ ಕಡ್ಡಿಯ ತುಂಡೊಂದು ಹಿಡಿದಿದ್ದ ಅವನ ಕೈ ಕನ್ನಡಿಯ ಪಕ್ಕದ ಗೋಡೆಯ ಮೇಲಾಡುತ್ತಿತ್ತು. ಆ ಪುಟ್ಟ ಬಾಲಕ ತನ್ನದೇ ಚಿತ್ರವನ್ನು ರಚಿಸುತ್ತಿದ್ದ! ಈ ಬಾಲಕನ ಕೈ ಚಳಕವನ್ನು ಕಂಡ ಅವನ ಚಿಕ್ಕಪ್ಪ ಆಶ್ಚರ್ಯಪಟ್ಟರು. ಮರುದಿನ ಸೀಸದಕಡ್ಡಿ ಮತ್ತು

ಡ್ರಾಯಿಂಗ್ ಪುಸ್ತಕಗಳನ್ನು ತಂದಿತ್ತು 'ಚಿತ್ರ ಬರೆಯುವುದು ಕಲಿ' ಎಂದು ಬಾಲಕನಿಗೆ ಪ್ರೋತ್ಸಾಹವಿತ್ತರು.

ಹೀಗೆ ಮೊದಲು ಪ್ರಾರಂಭವಾಯಿತು ಜಿ. ಕೆ. ಸತ್ಯ ಅವರ ಚಿತ್ರ ಕಲಾಭ್ಯಾಸ. ಕಲಾಕೇಂದ್ರವಾದ ಮೈಸೂರು ನಗರದಲ್ಲಿ ಜನಿಸಿ, ರಣ ಭೂಮಿ-ಚಿತ್ರದುರ್ಗದಲ್ಲಿ ಬೆಳೆದು ಈಗ ಬೆಂಗಳೂರಿನಲ್ಲಿರುವ ಅವರು ಯಾವೊಬ್ಬ ಗುರುಮುಖದಿಂದಲೂ ಕಲಾಶಿಕ್ಷಣ ಮಾಡದೆ ಸತತ ಪರಿಶ್ರಮ ದಿಂದ ಸ್ವಯಂ ಪ್ರತಿಭೆಯಿಂದ ಇಂದು ಚಿತ್ರಕಲೆಯಲ್ಲಿ ಪ್ರಗತಿ ಪಡೆಯಲೆತ್ನಿ ಸಿದ್ದಾರೆ.

ಬಾಲಕ ಸತ್ಯ ತನ್ನ ಕೇವಲ ನಾಲ್ಕನೆಯ ವಯಸ್ಸಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡ. ತಬ್ಬಲಿಯಾದ. ಆದರೆ ಚಿಕ್ಕಪ್ಪನ ಆಶ್ರಯ ದೊರೆತು ಚಿತ್ರಕಲೆಯಲ್ಲಿ ಆಸಕ್ತಿ ತೋರುತ್ತಾ ಬಂದು ಮೊದಮೊದಲು ಆನೆ ಹುಲಿಗಳ ಚಿತ್ರಗಳನ್ನು ಬರೆಯುತ್ತಿದ್ದ ಈ ಬಾಲಕ ಕ್ರಮೇಣ ಪತ್ರಿಕೆಗಳಲ್ಲಿ ಅಚ್ಚಾಗುತ್ತಿದ್ದ ರಾಜಕಾರಣಿಗಳ ಫೋಟೋ ನೋಡಿ ಅದರಂತೆಯೇ ನಕಲು ಮಾಡಲಾರಂಭಿಸಿದ. ಚಿತ್ರದುರ್ಗದ ಪಾಳೇಗಾರರ ಮೂಲಚಿತ್ರವನ್ನು ಬಹು ಸುಂದರವಾಗಿ ದೊಡ್ಡದಾಗಿ ನಕಲುಮಾಡಿದ. ಚಿತ್ರದುರ್ಗಕ್ಕೆ ಯಾರಾದರೂ ಗಣ್ಯವ್ಯಕ್ತಿಗಳು ಭೇಟಿ ಇತ್ತಾಗ ಅವರ ಚಿತ್ರಗಳನ್ನು ರಚಿಸಿ ಅವರಿಗೇ ಸಮರ್ಪಿಸುತ್ತಿದ್ದ. ಈ ಎಳೆಯ ಹುಡುಗನ ಕಲಾ ನೈಪುಣ್ಯಕ್ಕೆ ಸೋಜಿಗ ಪಟ್ಟ ಅನೇಕರು ಹುಡುಗನನ್ನು ಬೆನ್ನುತಟ್ಟಿ ಷಹಬ್ಬಾಷ್‌ಗಿರಿ ಇತ್ತರು. ಕೆಲವರು ಮೆಚ್ಚುನುಡಿಯನ್ನಿತ್ತರು. ಹಾಗೆ ಮೆಚ್ಚಿ ಹರಸಿದವರಲ್ಲಿ ದಿ|| ರಾಜೇಂದ್ರ ಪ್ರಸಾದ್, ದಿ|| ನೆಹರೂ. ಡಾ|| ಕೇಸ್ಕರ್, ಶ್ರೀ ಜಯಚಾಮ ರಾಜೇಂದ್ರ ಒಡೆಯರ್. ಬಲವಂತರಾವ್ ದಾತಾರ್, ನಿಜಲಿಂಗಪ್ಪ. ಕೆಂಗಲ್ ಹನುಮಂತಯ್ಯ ಮುಂತಾದವರು ಪ್ರಮುಖರು.

ಸತ್ಯನಿಗೆ ಕೇವಲ ೧೩ ವರ್ಷ ಇರಬಹುದು. ಶ್ರೀ ಜಯಚಾಮ ರಾಜೇಂದ್ರ ಒಡೆಯರವರು ೧೯೫೯ ನೇ ಸೆಪ್ಟೆಂಬರ್ ೨೩ ರಲ್ಲಿ ದಾವಣಗೆರೆಗೆ ಬಂದಿದ್ದರು. ಈ ಬಾಲಕ ಚಿತ್ರಿಸಿದ ಅವರ ರೂಪಚಿತ್ರವನ್ನು ಒಡೆಯರು ನೋಡಿದರು. ಮೆಚ್ಚಿಕೊಂಡರು. ಹುಡುಗನ ಕೈಗೆ ಪ್ರೀತಿಯಿಂದ ೨೦೦ ರೂಪಾಯಿಗಳನ್ನಿತ್ತು ಖ್ಯಾತ ಕಲಾವಿದನಾಗೆಂದು ಹರಸಿದರು. ಇವಕ್ಕೂ

ಮುಂಚೆ ಪ್ರಧಾನಿ ನೆಹರೂರವರು ಒಮ್ಮೆ ಹರಿಹರಕ್ಕೆ ಬಂದಿದ್ದರು. ಆಗ ಈ ಬಾಲಕ ರೂಪಿಸಿದ ನೆಹರೂರವರ ಚಿತ್ರವನ್ನು ಇಂದಿರಾಗಾಂಧಿಯವರಿಗೆ ತೋರಿದ. ಪ್ರಧಾನಿಯವರ ಗಮನಕ್ಕೂ ಬಿದ್ದು ಈ ಚತುರ ಹುಡುಗನ ಕಲಾಭಿರುಚಿಯನ್ನು ಮೆಚ್ಚಿ ಉತ್ಸಾಹ ತುಂಬಿ ಆಶೀರ್ವದಿಸಿದರು.

ಅಂದಿನಿಂದ ಬಾಲಕ ಸತ್ಯನ ಮನಸ್ಸಿನಲ್ಲಿ ಕಲೆಯಗೀಳು ಬಲವಾಗಿ ಬೇರೂರಿತು ಯಾವುದಾದರೂ ಉತ್ತಮ ಚಿತ್ರಶಾಲೆಯಲ್ಲಿ ಕಲಾಭ್ಯಾಸ ಮಾಡುವ ಆಸೆ ಮೂಡಿತು. ಆದರೆ ದೂರದ ನಗರಗಳಿಗೆ ಕಳಿಸಿಕೊಡುವಷ್ಟು ಅನುಕೂಲ ಈತನ ಚಿಕ್ಕಪ್ಪನವರಿಗಿರಲಿಲ್ಲ. ಹುಡುಗನಿಗೆ ಪ್ರಧಾನಿಯವರ ಮೆಚ್ಚಿಗೆಯ ಮಾತುಗಳ ನೆನಪಾಯಿತು. ೧೯೫೯ ರಲ್ಲಿ ನೆಹರೂರವರಿಗೆ ಪತ್ರ ಬರೆದುಬಿಟ್ಟ. ಅವರು ಶಾಂತಿನಿಕೇತನಕ್ಕೆ ಶಿಫಾರಸುಮಾಡಿ ವಿದ್ಯಾ ಇಲಾಖೆಗೆ ಆ ಪತ್ರವನ್ನು ರವಾನಿಸಿದರು. ಆದರೆ ದುರದೃಷ್ಟವಶಾತ್ ಶಿಕ್ಷಣ ದೊರಕಲು ಹಾಗೂ ಶಾಂತಿನಿಕೇತನಕ್ಕೆ ಪ್ರವೇಶದೊರಕಲು ಹುಡುಗನ ವಯೋಮಿತಿ ಅಡ್ಡಿ ಬಂದಿತು.

ಈ ನಡುವೆ ಸತ್ಯ ಅವರ ಚಿತ್ರಗಳು ೧೯೫೪ರ ಮೈಸೂರು ದಸರಾ ಕಲಾಪ್ರದರ್ಶನದಲ್ಲೂ ಒಮ್ಮೆ ಪ್ರದರ್ಶಿತವಾದುವು. ಆಗ ಕೇವಲ ಹನ್ನೊಂದು ವರ್ಷದ ಬಾಲ ಶ್ರೀ ಸತ್ಯ. ಮರುವರ್ಷ ಅದೇ ವಸ್ತುಪ್ರದರ್ಶನಾಲಯದಲ್ಲಿ ಒಂದೆಡೆ ಕುಳಿತು ಚಿತ್ರ ರಚಿಸುವ ಅವಕಾಶವೂ ದೊರೆಯಿತು. ಈ ಬಾಲಕನ ಸುತ್ತ ಪ್ರೇಕ್ಷಕ ಜನ ಮುತ್ತಿಕೊಂಡು ನಿಲ್ಲುತ್ತಿದ್ದರು. ಎಳೆ ವಯಸ್ಸಿನ ಕಲಾಪ್ರತಿಭೆಗೆ ಮೆಚ್ಚಿಕೊಂಡು ಪ್ರಶಂಸಿಸಿ ಹೋಗುತ್ತಿದ್ದರು.

ಇವರ ಚಿಕ್ಕಪ್ಪ ಶ್ರೀ ಜಿ. ನಾರಾಯಣರಾವ್ ಅವರು ತನ್ನ ಅಣ್ಣನ ಮಗ ಸತ್ಯ ಅವರ ಕಲಾಸಕ್ತಿಗೆ ತಂಬಾ ನೆರವಾದ ವ್ಯಕ್ತಿ. ಇವರು ಚಿತ್ರದುರ್ಗದ ಕಾಂಗ್ರೆಸ್ಸಿನ ನಿಸ್ವಾರ್ಥ ಕಾರ್ಯಕರ್ತರು. ಅವರದು ನಿಷ್ಠೆಯ ಜೀವನ. ಶ್ರದ್ಧಾಭಕ್ತಿಯಿಂದ ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿದ ಅಪರೂಪದ ವ್ಯಕ್ತಿತ್ವ ಅವರದು. ಬಾಲಕ ಸತ್ಯನನ್ನು ಕಲಾವಿದನನ್ನಾಗಿ ಮಾಡಬೇಕೆಂದು ಸತತ ಶ್ರಮಿಸಿ ಪ್ರೋತ್ಸಾಹ ಬೆಂಬಲ ನೀಡುತ್ತಾ ಬಂದಿದ್ದಾರೆ. “ನನಗೆ ನನ್ನ ಚಿಕ್ಕಪ್ಪನವರೇ ಕಲಾಗುರು”—ಎಂದು ಶ್ರೀ ಸತ್ಯ ಅವರು ಹೃದಯ ತುಂಬಿ ನುಡಿಯುವುದು ಸಹಜವೇ ಇದೆ.


ಸತ್ಯ ಅವರ ಚಿಕ್ಕಪ್ಪ ಬೆಂಗಳೂರಿಗೆ ಸಂಸಾರ ಸಮೇತ ಬಂದು ನೆಲಸಿದರು. ಇಲ್ಲಿಂದ ಸತ್ಯ ಅವರ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತೆನ್ನಬಹುದು. ಇಲ್ಲಿ ಹೈಸ್ಕೂಲಿನ ವ್ಯಾಸಂಗ ಸಾಗುತ್ತಿದ್ದಂತೆಯೇ ಚಿತ್ರಾಭ್ಯಾಸವೂ ಸಾಗಿತು. ಬಿಡುವಿನಲ್ಲಿ ರಕ್ಷಾಪತ್ರಗಳಿಗೆ ಚಿತ್ರಗಳನ್ನು ವರ್ಣಗಳಲ್ಲಿ ರಚಿಸಿಕೊಡುವ ಅವಕಾಶವೂ ತಕ್ಕಮಟ್ಟಿಗೆ ದೊರಕಿತು. ಈ ಮೂಲಕ ಅವರ ವಿದ್ಯಾಭ್ಯಾಸದ ಖರ್ಚನ್ನು ಅವರೇ ಸಂಪಾದಿಸುವಂತಾಯಿತು. ಚಿತ್ರದುರ್ಗದವರಾದ ಸಾಹಿತಿ ಶ್ರೀ ಮ. ಶ್ರೀಧರಮೂರ್ತಿಗಳು ಈ ಯುವಕ ಸತ್ಯ ಅವರನ್ನು ಬೆಂಗಳೂರಿನ ಡಿಸ್ಪೆನ್ಸ್ ಸೆಂಟರಿನಲ್ಲಿರುವ ಖ್ಯಾತ ಬಂಗಾಲಿ ಕಲಾವಿದ ಶ್ರೀ ಎ. ಪಿ. ದುಬೆಯವರಿಗೆ ಪರಿಚಯ ಮಾಡಿಕೊಟ್ಟರು. ಶ್ರೀ ದುಬೆಯವರ ಮನೆಯಲ್ಲಿ ತಯಾರಿಸುತ್ತಿದ್ದ ಮರದ ಗೊಂಬೆಗಳಿಗೆ ವರ್ಣ ಹಾಕುವ ಕೆಲಸವೂ ಶ್ರೀ ಸತ್ಯ ಅವರಿಗೆ ದೊರಕಿತು. ಆದರೆ ಈ ಗೃಹ ಕೈಗಾರಿಕಾ ಕಲೆಯಿಂದಾಗಿ ಚಿತ್ರಕಲಾಭ್ಯಾಸ ಕೊಂಚ ಕುಂಟಿತು. ಬೇಸರ ಬಂದಿತು. ಆ ವೃತ್ತಿಯನ್ನು ನಿಲ್ಲಿಸಿದರು.

ಈ ನಡುವೆ ಶ್ರೀ ಸತ್ಯ ಅವರು ಜಲವರ್ಣದಲ್ಲಿ ಭಾರತರತ್ನ ವಿಶ್ವೇಶ್ವರಯ್ಯನವರ ರೂಪಚಿತ್ರವನ್ನು ರಚಿಸಿದರು. ಅದನ್ನು ನೋಡಿದ ಅವರು ತಮ್ಮ ಹಸ್ತಾಕ್ಷರವನ್ನಿತ್ತರು ಅದರಮೇಲೆ. ೧೯೬೦ ರಲ್ಲಿ ಸರ್. ಎಂ. ವಿ. ಯವರ ಶತಮಾನೋತ್ಸವವನ್ನು ಉದ್ಘಾಟಿಸಿದ ಪ್ರಧಾನಿ ನೆಹರೂರವರಿಗೆ ಅವರದೇ ಚಿತ್ರವನ್ನು ವಿವಿಧ ಭಂಗಿಗಳಲ್ಲಿ ರಚಿಸಿ ತೋರಿಸಿದಾಗ ನೆಹರೂ ಅವರೂ ಪ್ರಶಂಸಿಸಿ ಅದರ ಮೇಲೆ ತಮ್ಮ ಹಸ್ತಾಕ್ಷರಗಳನ್ನಿತ್ತರು. ಅವರ ನೆನಪಿನ ಕುರುಹಾಗಿ ಅವನ್ನು ಸತ್ಯ ಅವರು ತಮ್ಮಲ್ಲಿರಿಸಿಕೊಂಡಿದ್ದಾರೆ.

ಈ ವೇಳೆಗೆ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಸತ್ಯ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಕಾಲೇಜಿಗೆ ಸೇರಲು ಆರ್ಥಿಕ ಬೆಂಬಲ ದೊರಲಿಲ್ಲ. ಮತ್ತೆ ಚಿತ್ರಶಾಲೆಗೆ ಸೇರುವ ಆಸೆ ಬೇರೂರಿತು. ೧೮ ವರ್ಷದ ಸತ್ಯ ಬೊಂಬಾಯಿಯ ಜೆ. ಜೆ. ಕಲಾಶಾಲೆಗೆ ಸೇರಲು ಬಯಸಿದರು. ಮೈಸೂರು ಸರಕಾರ ಶಿಕ್ಷಣ ವೇತನ ನೀಡಿ ಪ್ರತಿವರ್ಷವೂ ಎಂಟುಮಂದಿ ಕಲಾ ವಿದ್ಯಾರ್ಥಿಗಳನ್ನು ಮುಂಬಯಿಗೆ ಕಳಿಸುತ್ತಿತ್ತು. ಶ್ರೀ ಸತ್ಯ ಅವರೂ ಶಿಕ್ಷಣ ವೇತನಕ್ಕಾಗಿ ಅರ್ಜಿ ಸಲ್ಲಿಸಿದರು. ಸತತ ಪ್ರಯತ್ನಮಾಡಿದರು. 'ವಿದ್ಯಾ

ಇಲಾಖೆಯಿಂದ ಶಿಕ್ಷಣ ವೇತನವನ್ನು ಅದೇ ವರ್ಷದಿಂದ ನಿಲ್ಲಿಸಿಬಿಟ್ಟಿದ್ದೇವೆ '—ಎಂದು ಉತ್ತರ ಬಂದಿತು. ಚಿತ್ರಶಾಲೆಗೆ ಸೇರಿ ಕ್ರಮಬದ್ಧವಾದ ಕಲಾಭ್ಯಾಸ ಮಾಡಬೇಕೆಂಬ ಸತ್ಯ ಅವರ ಮಹದಾಸೆ ಕೊನೆಗೂ ಕನಸಾಗಿಯೇ ಉಳಿಯಿತು. ವ್ಯಾಸಂಗ ವೇತನಕ್ಕೆ ಪ್ರಯತ್ನಪಟ್ಟು ಅಲ್ಲಿಯ ಕಹಿ ವಾತಾವರಣವನ್ನು ಅರಿತ ಅವರು— "ಜಾತೀಯತೆ, ರಾಜಕೀಯ ಗುಂಪುಗಳ ಪರಸ್ಪರ ವೈಷಮ್ಯ. ಕಲಹಗಳಲ್ಲಿ ನನ್ನ ಆಸೆ ಈಡೇರಲಿಲ್ಲ" ಎಂದು ಬಹು ನೊಂದು ನುಡಿಯುತ್ತಾರೆ. ತನ್ನ ಜೀವನದಲ್ಲಿ ಉನ್ನತ ಕಲಾಶಾಲೆಯಲ್ಲಿ ವ್ಯಾಸಂಗ ಮಾಡಲಿಲ್ಲವಲ್ಲಾ ಎಂಬ ಕೊರಗು ಮಾತ್ರ ಅವರನ್ನು ಆಗಾಗ ಕಾಡಿಸುವುದು ಸಹಜವೇ ಇದೆ.

ಮುಂದೆ ಶ್ರೀ ಮ. ರಾಮಮೂರ್ತಿಯವರಿಂದ ಜನಪ್ರಗತಿಯ ಸಂಪಾದಕರಾದ ಶ್ರೀ ಬಿ. ಎನ್. ಗುಪ್ತ ಅವರ ಪರಿಚಯವಾಯಿತು. ಅಲ್ಲಿ ಕಲಾ ವಿಭಾಗದಲ್ಲಿ ಕೆಲಸಮಾಡುವ ವೃತ್ತಿಯೂ ದೊರಕಿತು. ತಮ್ಮ ಚಿತ್ರ ಕೌಶಲ್ಯದಿಂದ 'ಮಲ್ಲಿಗೆ' ಮೂಲಕ ಬಹುಬೇಗನೆ ಕನ್ನಡಿಗರಿಗೆ ಪರಿಚಯವಾದರು. ಐದು ವರ್ಷಗಳ ಕಾಲ ಅಲ್ಲಿದ್ದು ಉತ್ತಮ ಸೇವೆ ಸಲ್ಲಿಸಿದರು. ಅವರ ರೇಖಾ ವೈಖರಿಯಿಂದಾಗಿ 'ಸುಧಾ' ಸಚಿತ್ರ ಖ್ಯಾತ ವಾರಪತ್ರಿಕೆ ಅವರಿಗೆ ಸ್ವಾಗತ ನೀಡಿತು. ಅಲ್ಲಿ ದಿನೇ ದಿನೇ ತಮ್ಮ ಕಲೆಯನ್ನು ವೃದ್ಧಿಸಿ ಕೊಳ್ಳುತ್ತಿರುವ ಸತ್ಯ ಅವರು "ಈ ಪತ್ರಿಕಾಲಯವೇ ನನ್ನ ಚಿತ್ರಶಾಲೆಯಾಗಿದೆ, ನಾನು ಕಲಿತದ್ದು ಏನೂಇಲ್ಲ. ಇನ್ನು ಮೇಲೆ ಕಲಿಯ ಬೇಕಾಗಿದೆ"—ಎನ್ನುತ್ತಾರೆ. ಈ ವಿನಯಶೀಲರು. ಯಾವ ಕಲಾಶಾಲೆಯಲಿಯನ್ನೂ ಸೇರದೆ ಯಾವ ಕಲಾಧ್ಯಾಪಕರಲ್ಲೂ ಕಲಿಯದೆ ಕೇವಲ ಸ್ವಪ್ರತಿಭೆಯಿಂದಲೇ ಸತತ ಪ್ರಯತ್ನಿಸಿ ಕಲಾರಂಗದಲ್ಲಿ ಬೆಳಕಿಗೆ ಬಂದವರಲ್ಲಿ ಶ್ರೀ ಸತ್ಯ ಅವರೂ ಒಬ್ಬರೆಂಬುದನ್ನು ಕಲಾವೃಂದ ಮರೆಯುವಂತಿಲ್ಲ.



ಎಸ್. ಶಂಕರರಾಜು

ಮೈಸೂರು ಅರಮನೆಯ ಕಲ್ಯಾಣ ಮಂಟಪದಲ್ಲಿ ಕನ್ನಡನಾಡಿನ ಕೆಲವು ಸುಪ್ರಸಿದ್ಧ ಕಲಾವಿದರು ರಚಿಸಿದ ದಸರಾ ಮೆರವಣಿಗೆಯ ಇಪ್ಪತ್ತು ಬೃಹದಾಕಾರದ ತೈಲಚಿತ್ರಗಳಿವೆ. ಅವುಗಳನ್ನು ಬರೆಸಿ ಪ್ರೋತ್ಸಾಹಿಸಿದ ಕೀರ್ತಿ ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲಬೇಕು. ಅರಮನೆಯ ಕಲಾವಿದರಾಗಿದ್ದ ಶ್ರೀ ಎಸ್. ಶಂಕರರಾಜು ಅವರು ಅವುಗಳಲ್ಲಿ ಐದು ಪ್ಯಾನಲ್ ಚಿತ್ರಗಳನ್ನು ರಚಿಸಿದ್ದಾರೆ. ಕರ್ನಾಟಕ ಬ್ಯಾಂಡ್,

ಇಂಗ್ಲೀಷ್ ಬ್ಯಾಂಡ್ ಮತ್ತು ಪುರಸಭಾ ಸದಸ್ಯರು ಜೊಡ್ಡುಪೇಟೆಯಲ್ಲಿ ಸಾಗುವ ಚಿತ್ರ, ಅರಮನೆಯ ಕೋಟೆಯ ಆವರಣದಲ್ಲಿ ಬಾಡಿಗಾರ್ಡ್ಸ್ ತೆರಳುತ್ತಿರುವಂತಿರುವ ಚಿತ್ರ, ಸಿಪಾಯಿಗಳು ಸಾಗುತ್ತಿರುವ ಚಿತ್ರ ಮತ್ತು ಅರಮನೆಯ ಎದುರು ನಗಾರ್ ಖಾನೆಯ ಬಳಿ ಸಾಗುವ ಪಂಚಕಲಶಗಳ ಗಾಡಿಯಚಿತ್ರ ಮುಂತಾದುವನ್ನು ಶ್ರೀ ಶಂಕರರಾಜು ಅವರು ಪಾಶ್ಚಿಮಾತ್ಯ ಶೈಲಿಯಲ್ಲಿ ಬಹು ಸುಂದರವಾಗಿ ತೈಲವರ್ಣಗಳಲ್ಲಿ ಚಿತ್ರಿಸಿದ್ದಾರೆ.

ಶ್ರೀ ಶಂಕರರಾಜು ಅವರು ಹುಟ್ಟುಕಲಾವಿದರು. ಇವರು ಚಿತ್ರಕಾರ ವಂಶಕ್ಕೆ ಸೇರಿದವರು. ಇವರ ಹಿರಿಯರು ವಿಜಯನಗರ ರಾಜರ ಕಾಲದಲ್ಲಿ ಅಮೋಘವಾದ ಪಾಂಡಿತ್ಯವನ್ನು ಪಡೆದಿದ್ದವರು. ಚಿತ್ರಕಲೆಯಲ್ಲಿ ಗೌರವ ವನ್ನು ಬಹುಮಾನಗಳನ್ನೂ ಅಂದಿನ ರಾಜರಲ್ಲಿ ಪಡೆಯುತ್ತಾ ಬಂದವರು. ವಂಶಪಾರಂಪರ್ಯವಾಗಿಯೂ ಚಿತ್ರಕಲೆಯನ್ನು ನಂಬಿ ಜೀವಿಸುತ್ತಾ ಬಂದ ವರು. ಹೈದರಾಲಿ ಮತ್ತು ಟಿಪ್ಪು ಅವರ ಗಮನಕ್ಕೆ ಈ ವಂಶೀಕರ ಚಿತ್ರ ಕಲೆ ಬಿದ್ದಿತು. ಹೈದರಾಬಾದ್ ರಾಜ್ಯದ ಜಿಲ್ಲಾ ಜಿಲ್ಲೆಯಲ್ಲಿ ವಾಸವಾಗಿದ್ದ ಈ ಕಲಾವಿದರನ್ನು ಗುರುತಿಸಿ ಆ ಮೂಲಕ ಇವರನ್ನು ಟಿಪ್ಪುಸುಲ್ತಾನನು ಶ್ರೀರಂಗಪಟ್ಟಣಕ್ಕೆ ಕರೆತಂದನು. ಅಂದಿನಿಂದ ಇವರು ದರಿಯಾದೌಲತ್ ಅರಮನೆಯ ಚಿತ್ರಕಾರರಾಗಿ ನವಾಬರ ಆಸ್ಥಾನದಲ್ಲಿರುವಂತಾಯಿತು.

ಟಿಪ್ಪುವಿನ ಕಾಲವಾದ ಮೇಲೆ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ದಿ|| ದಿವಾನ್ ಪೂರ್ಣಯ್ಯನವರು ಮೈಸೂರು ಅರಮನೆಯ ಚಿತ್ರ ಕಾರರನ್ನಾಗಿ ನೇಮಿಸಿ ಮೈಸೂರಿಗೆ ಕಲಾವಿದ ವೀರಣ್ಣನನ್ನು ಕರೆ ತಂದರು. ಹಾಗೆ ಕರೆತಂದವರಲ್ಲಿ ಶ್ರೀ ಶಂಕರರಾಜು ಅವರ ತಾತಂದಿರೂ ದಿ|| ವೀರಣ್ಣನವರ ಮಕ್ಕಳೂ ಆದ ದಿ|| ಯಲ್ಲಯ್ಯನವರು ಪ್ರಮುಖ ಚಿತ್ರ ಕಾರರಾಗಿದ್ದರು. ಅಲ್ಲದೆ ಯಲ್ಲಯ್ಯನವರ ಮಕ್ಕಳಾದ ವೈ. ಸುಂದರಯ್ಯ ನವರೂ ಪ್ರಮುಖ ಚಿತ್ರಕಾರರಾಗಿ ಮಹಾರಾಜರ ಪ್ರೇಮಕ್ಕೆ ಪಾತ್ರರಾದ ವರು. ಮುದ್ರಣ ಯಂತ್ರದಲ್ಲಿ ಶಾಸ್ತ್ರೀಯವಾಗಿ ಅಚ್ಚಿನಲ್ಲಿ ಅನೇಕ ವಿಧ ವಿಧವಾದ ಚಿತ್ರಕಲಾ ವೃತ್ತಿಯನ್ನು ಶಾಸ್ತ್ರೀಯವಾಗಿ ಕಲ್ಲಚ್ಚಿನಲ್ಲಿ ಮುದ್ರಿ ಸಿದರು. "ಶ್ರೀ ತತ್ವನಿಧಿ" ಎಂಬ ಅಪೂರ್ವ ವರ್ಣಮಯ ರೇಖಾಚಿತ್ರ ಗಳಿಂದ ತುಂಬಿದ ಕೈಬರಹದ ಎರಡು ಗ್ರಂಥಗಳನ್ನು ಇವರು ರಚಿಸಿ

ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಅರ್ಪಿಸಿದರು. ಇಷ್ಟೇ ಅಲ್ಲದೆ ಈಗಿರುವ ಅರಮನೆಯ ಶಿಲೆ ಹಾಗೂ ಮರದ ಕೆತ್ತನೆಗೂ ಅನೇಕ ನಕ್ಷೆಗಳನ್ನು ತಯಾರಿಸಿಕೊಟ್ಟರು. ಇಂಥ ಕಲಾವೃತ್ತಿಗೆ ಈ ವಂಶಿಕರು ಬಹು ಖ್ಯಾತಿ ಹೊಂದಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಈ ವಂಶಿಕರಿಗೆ ತುಂಬ ಪ್ರೋತ್ಸಾಹ ನೀಡಿದ್ದರು. ಅನಂತರ ದಿ॥ ಚಾಮರಾಜ ಒಡೆಯರ ಕಾಲದಲ್ಲೂ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲೂ ಇವರ ಕಲೆಗೆ ಮೆಚ್ಚಿಗೆಯನ್ನು ಗೌರವವನ್ನೂ ಬಹುಮಾನವನ್ನು ಪಡೆಯುತ್ತಾ ಬಂದಿದ್ದಾರೆ.

ಶ್ರೀ ಶಂಕರರಾಜು ಅವರು ಶ್ರೀ ವೈ. ಸುಂದರಯ್ಯನವರ ಪುತ್ರರು. ನಾಲ್ವಡಿ ಕೃಷ್ಣರಾಜ ಒಡೆಯರು ಬಾಲಕ ಶಂಕರರಾಜು ಅವರಿಗೆ ಚಿತ್ರಾಭ್ಯಾಸಮಾಡಲು ವಿದ್ಯಾರ್ಥಿ ವೇತನವನ್ನು ಅರಮನೆಯಿಂದ ಕೊಟ್ಟು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರುವಂತೆ ಅವಕಾಶಮಾಡಿ ಕೊಟ್ಟರು. ಅನಂತರ ಒಡೆಯರು ಇವರನ್ನು ಲೋಕರಂಜನ್ ಮಹಲ್ ಅರಮನೆಯ ಕಲಾವಿದರನ್ನಾಗಿ ನೇಮಿಸಿಕೊಂಡರು. ಅನೇಕ ರೂಪಚಿತ್ರಗಳನ್ನು ದೇವದೇವತೆಯರ ಚಿತ್ರಗಳನ್ನು ಇವರಿಂದ ಬರೆಯಿಸಿ ಬಹುಮಾನವಿತ್ತರು. ಕೊನೆಯಲ್ಲಿ ಬಹುಕಾಲ ನಿಲ್ಲುವಂಥ ಕೆಲವು ದಸರಾ ಮೆರವಣಿಗೆಯ ಚಿತ್ರಗಳನ್ನು ರಚಿಸಲು ಅವಕಾಶವಿತ್ತವರು ಅವರೇ.

ಈ ಬೃಹದಾಕಾರದ (೧೧ ಅಡಿ ಉದ್ದ ಮತ್ತು ೭ ಅಡಿ ಅಗಲದ) ಪ್ಯಾನಲ್ ಚಿತ್ರಗಳನ್ನು ರಚಿಸಲು ವಿಶೇಷ ತಂತ್ರ ಕುಶಲತೆಯೂ ಅಪಾರ ಕಲಾಭ್ಯಾಸವೂ ಬೇಕಾಗುತ್ತದೆ. ಅದನ್ನು ಇಲ್ಲಿ ನಾವು ಗಮನಿಸುವುದು ಉಚಿತ. ಬೇಕಾಗುವ ಸೈಜಿನಲ್ಲಿ ಫ್ರೇಮ್ ಕ್ಯಾನವಾಸನ್ನು ಮೊದಲು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಯಾವ ಚಿತ್ರ ರಚಿಸಿಕೊಳ್ಳಬೇಕಾದರೂ ಒಂದು ವಸ್ತುವಿನಲ್ಲಿ ಬರುವ ಗುಂಪಿನ ವ್ಯಕ್ತಿಗಳ ಛಾಯಾಚಿತ್ರ ಇರುತ್ತದೆ. ಅದು ಕಲಾವಿದ ಚಿತ್ರಿಸಬೇಕಾದ ಮೂಲವಾಗುತ್ತದೆ. ಬೇಕಾಗುವ ಸೈಜಿನ ಕಾರ್ಟೂನ್ ಡ್ರಾಯಿಂಗ್ ಪೇಪರನ್ನೂ ಗೋಡೆಯ ಮೇಲೆ ಲಗತ್ತಿಸ ಬೇಕಾಗುವುದು. ಅನಂತರ ಡ್ರಾಯಿಂಗ್ ಚಾರ್‌ಕೋಲ್‌ನಲ್ಲಿ ಗುರುತಿಸಲಾಗುವುದು ಅಲ್ಲಿ ಪ್ರಕೃತಿಯನ್ನೂ ಸೇರಿಸಬೇಕಾದಲ್ಲಿ ಪ್ರತ್ಯೇಕವಾಗಿ

ಹೊರಗಡೆ ಚಿತ್ರಿಸಿಕೊಂಡು ಬರಬೇಕಾಗುವುದು. ಅದನ್ನು ಮೂಲ ಡ್ರಾಯಿಂಗ್‌ಗೆ ಹಿಂಬದಿಯಲ್ಲಿ ಬರೆಯಲಾಗುವುದು. ಅಲ್ಲಿ ಬರುವ ವ್ಯಕ್ತಿಗಳ ಪ್ರತಿಯೊಂದು ಪೊಷಾಕನ್ನೂ ತರಿಸಿಕೊಳ್ಳಬೇಕಾಗುತ್ತದೆ. ಅದನ್ನು ನೋಡಿಕೊಂಡು ಬೇಕಾದ ಕಡೆ ಬಣ್ಣದಲ್ಲಿ ಚಿತ್ರಿಸಬೇಕು. ಹಿಂಬದಿಯ ವ್ಯಕ್ತಿಗಳನ್ನು ಸ್ವತಃ ಅಳವಡಿಸಿಕೊಳ್ಳಬೇಕು. ಅದೆಲ್ಲವನ್ನು ಪೇಪರಿನ ಮೇಲೆಚಾರ್‌ಕೋಲಿನಿಂದಗುರುತಿಸಿಕೊಂಡು ಅನಂತರ ವರ್ಣಗಳಲ್ಲಿ ಬಿಡಿಸಿ ಕೊಳ್ಳಬೇಕು. ಇಲ್ಲಿ ಬರುವ ಪ್ರತಿಯೊಂದು ವ್ಯಕ್ತಿಯನ್ನೂ ಕರೆಸಿ ಪ್ರತ್ಯಕ್ಷ ಸಿಟಂಗ್ ತೆಗೆದುಕೊಂಡು ರಚಿಸಬೇಕಾಗುತ್ತದೆ. ಇದೇ ರೀತಿ ಪ್ರತಿ ಚಿತ್ರ ವನ್ನು ಮಾಡಿ ಗುಂಪಿನಲ್ಲಿರುವ ವಿವಿಧವಾದ ವರ್ಣಗಳನ್ನು ತೋರಿಸಬೇಕಾ ಗುವುದು. ಈ ರೀತಿ ಪ್ಯಾನಲ್ ಚಿತ್ರಗಳನ್ನು ರಚಿಸಿ ಮುಗಿಸುತ್ತಾಬರ ಬೇಕಾಗುವುದು.

" ಇಂಥ ಕಷ್ಟ ಸಾಧ್ಯವಾದ ಕಲೆಯನ್ನು ಫೋಟೋ ನೋಡಿ ಕಾಪಿ ಮಾಡಿ ಬರೆದುದು ಎಂದು ಕೆಲವರು ಸುಲಭವಾಗಿ ಹೇಳಿಬಿಡುವವರೂ ನಮ್ಮಲ್ಲಿದ್ದಾರೆ. ಆದರೆ ಅದು ಅವರ ತಪ್ಪು ಕಲ್ಪನೆ. ಅಲ್ಲಿ ಬರುವ ಪ್ರತಿ ಯೊಬ್ಬ ವ್ಯಕ್ತಿಯನ್ನು ಸ್ವಯಂ ಶಕ್ತಿಯಿಂದಲೇ ರಚಿಸಬೇಕಾಗುತ್ತದೆ. ಛಾಯಾಚಿತ್ರ ಕೊಂಚಮಾತ್ರ ನೆರವಾದ ಮಾತ್ರಕ್ಕೆ ಅದರಿಂದಲೇ ಎಲ್ಲ ಕೆಲಸವಾಯಿತು ಎಂದು ಹೇಳುವಂತಿಲ್ಲ. ಕಲಾವಿದನ ಪೂರ್ಣ ದೃಷ್ಟಿ ಇಲ್ಲಿ ಬಹು ಮುಖ್ಯವಾಗಿ ಕೆಲಸ ಮಾಡುತ್ತದೆ–" ಎಂದು ಶ್ರೀ ಎಸ್. ಶಂಕರ ರಾಜು ಅವರು ನುಡಿಯುವ ಅನುಭವ ಪೂರ್ಣವಾದ ನುಡಿಗಳು ಗಮನಾರ್ಹ ವಾದುವು.

ರಾಜರ ಆಶ್ರಯ ತಪ್ಪಿದ ಮೇಲೆ ಈ ವೃದ್ಧ ಕಲಾವಿದ ರಾಜು ಅವರು ಜೀವನ ರಂಗದಲ್ಲಿ ತುಂಬ ತೊಳಲಾಡುತ್ತಿದ್ದಾರೆ. ಆಶ್ರಯ ಸಿಗದೆ ಬಾಡುವ ಬಳ್ಳಿಯಂತಾಗಿದ್ದಾರೆ. ರಾಜ್ಯಸರ್ಕಾರ ಇಂಥವರಿಗೆ ವಿಶ್ರಾಂತಿ ವೇತನ ಕೊಡುವುದರ ಮೂಲಕ ಗೌರವಿಸುವುದು ಉಚಿತವಿದೆ.

ಆರಗಂ ಕೃಷ್ಣಮೂರ್ತಿ

ಆ ಸವಿದಿನಗಳ ನೆನಪು ನನಗೆ ಇನ್ನೂ ಇದೆ. ಕವಿವರ್ಯರಾದ ದಿ|| ಹೊಯ್ಸಳರ ನೆನಪನ್ನು ಮರೆಯಲಾರೆ. ಅವರು ನನಗೆ ಚಿತ್ರದುರ್ಗದ ಸರ್ಕಾರಿ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಸಾಹಿತ್ಯ ಕಲಾಸಕ್ತಿಯಿರುವ ವಿದ್ಯಾರ್ಥಿಗಳನ್ನು ನೋಡಿ ಗುರುತಿಸಿ ಅವರಿಗೆ ಪ್ರೋತ್ಸಾಹಿಸುವುದೆಂದರೆ ಪೂಜ್ಯರಿಗೆ ಅಗಾಧವಾದ ಪ್ರೀತಿ. ಚಿತ್ರಕಲೆ, ಸ್ಕೌಟ್ ಮುಂತಾದ ಚಟುವಟಿಕೆಗಳಲ್ಲಿ ಆಸಕ್ತಿಯಿದ್ದ ನಾನು ಅವರ ಆಪ್ತ ಶಿಷ್ಯನಾದುದೇನೂ ಅಚ್ಚರಿ

ಯಲ್ಲಿ. ‘ ಪ್ರಭಾತ ’ ಎಂಬ ಸಚಿತ್ರ ಶಾಲಾ ಕೈಬರಹ ಸಂಚಿಕೆಯನ್ನು ಸುಂದರವಾಗಿ ಹೊರತರುವ ಕಾರ್ಯ ನನಗೆ ನೀಡಿದ್ದರು. ಅದರಿಂದಾಗಿ ಆಗಾಗ ಅವರ ಮನೆಗೂ ಹೋಗಿಬರುತ್ತಿದ್ದೆ. ಶಾಂತಿನಿಕೇತನದ ವಿದ್ಯಾರ್ಥಿಗಳಾಗಿ ಹೊರಬಂದ ಅವರು ಅಲ್ಲಿಯ ಚಿತ್ರಕಲೆಯ ಬಗ್ಗೆ ಸಾಹಿತ್ಯದ ಬಗ್ಗೆ ಬಹು ಕುತೂಹಲಕಾರಿ ವಿಷಯಗಳನ್ನು ತಿಳಿಸುತ್ತಿದ್ದರು. ಅಲ್ಲಿ ಬಟ್ಟೆಯ ಮೇಲೆ ಅವರೇ ತಯಾರಿಸಿಕೊಳ್ಳುತ್ತಿದ್ದ ವರ್ಣದಿಂದ ಚಿತ್ರಗಳನ್ನು ದೇಶೀಯ ಶೈಲಿಯಲ್ಲಿ ರೂಪಿಸುವ ಬಗೆಯನ್ನು ವಿವರಿಸುತ್ತ ನನ್ನ ಕಲಾಸಕ್ತಿಯನ್ನು ಹೆಚ್ಚಿಸುತ್ತಿದ್ದರು.

೧೯೩೯ ರ ಸಮಯ. ಬೆಂಗಳೂರಿನಲ್ಲಿ ‘ ಮೈಸೂರು ಸ್ಟೇಟ್ ರ್‍ಯಾಲಿ ’ ನಡೆಯುವ ಏರ್ಪಾಟು ನಡೆದಿತು. ಆ ರ್‍ಯಾಲಿಗೆ ಆಯಾ ಜಿಲ್ಲೆಯವರ ಟೆಂಟುಗಳ ಮುಂದೆ ಇರಿಸಲು ಮಹಾದ್ವಾರವನ್ನು ನಿರ್ಮಿಸಬೇಕಿತ್ತು. ಈ ಕೆಲಸ ನಮ್ಮ ದಿ|| ಹೊಯ್ಸಳರಿಗೆ ಸೇರಿದ್ದಿತು. ಅವರು ನನ್ನನ್ನು ಕರೆದು ಅವರ ಬಳಿ ಇದ್ದ ಅಷ್ಟೇನೂ ಎತ್ತರವಲ್ಲದ ಬೆಳ್ಳನೆಯ ದುಂಡನೆಯ ಓರ್ವ ಯುವಕರನ್ನು ನನಗೆ ಪರಿಚಯ ಮಾಡಿಕೊಡುತ್ತ.... ...

“ ನೋಡು ‘ ಪರ್ಟಿ ’ (PRT ಅವರೇ ಕರೆದ ಕಾವ್ಯನಾಮ) ಈತ ನಮ್ಮ ಹುಡುಗ, ಕಲಾ ವಿದ್ಯಾರ್ಥಿ ನೀವಿಬ್ಬರೂ ಸೇರಿ ಈ ಮಹಾದ್ವಾರವನ್ನು ಬೇಗ ಮುಗಿಸಿಕೊಡಬೇಕು— ” ಎಂದರು ಹೊಯ್ಸಳರು.

ಅಂಥ ಕೆಸಲಗಳಲ್ಲಿ ಅಷ್ಟಾಗಿ ಅನುಭವ ಇಲ್ಲವ ನನಗೆ ಆ ಯುವಕರ ಧೈರ್ಯದಿಂದಾಗಿ ಒಪ್ಪಿಕೊಂಡೆ. ನಮಗೆ ಬೇಕಾದ ಬಟ್ಟೆ, ವಾರ್ನಿಷ್ ಬಣ್ಣ ಬ್ರೆಷ್–ಎಲ್ಲವನ್ನೂ ಕೊಡಿಸಿದರು. ನಾವಿಬ್ಬರೂ ಬಹು ಆಸಕ್ತಿಯಿಂದ ಈ ಕೆಲಸವನ್ನು ನೆರವೇರಿಸಿದೆವು. ಬಹು ಸುಂದರವಾದ ಕೋಟೆಕೊತ್ತಲದಿಂದ ಕೂಡಿದ ಚಿತ್ರದುರ್ಗ ಜಿಲ್ಲಾ ಪ್ರತೀಕದ ಮಹಾದ್ವಾರವನ್ನು ನೋಡಿ ಹೊಯ್ಸಳರು ಮೆಚ್ಚಿಕೊಂಡರು. ನಮ್ಮ ಜಿಲ್ಲಾ ಸ್ಕೌಟ್‌ದಳಕ್ಕೂ ಒಳ್ಳೆಯ ಹೆಸರು ಬಂದಿತು.

ಆ ಯುವಕ ಕಲಾವಿದರೇ ಶ್ರೀ ಆರಗಂ ಕೃಷ್ಣಮೂರ್ತಿಗಳು. ಅವರ ಮೊದಲ ಸ್ನೇಹ ನನಗಾದುದು ಅಲ್ಲೇ; ಪೂಜ್ಯ ಹೊಯ್ಸಳರ ಮೂಲಕ. ಆರಗಂ ಅವರು ಈಗ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯ ಕಲಾ

ವಿಧ್ಯಾರ್ಥಿಯಾಗಿದ್ದರು. ಬಿಡುವಿನಲ್ಲಿ ತನ್ನ ಚಿಕ್ಕಪ್ಪ ಹೊಯ್ಸಳರನ್ನು ನೋಡಿಕೊಂಡು ಹೋಗಲು ಬಂದಿದ್ದರು. ಆರಗಂ ಅವರ ಬಾಲ್ಯವೂ ಆಸಕ್ತಿ ದಾಯಕವಾದುದು.

ಇವರ ತಂದೆ ಮಲೆನಾಡಿನ ಆರಗದ ದಿ|| ಸುಬ್ಬರಾಯರು. ತಾಯಿ ಬನಶಂಕರಮ್ಮನವರು. ಇವರು ರೌದ್ರಿನಾಮ ಸಂವತ್ಸರದಲ್ಲಿ ಕೃಷ್ಣರಾಜ ಸಾಗರದಲ್ಲಿ ಹುಟ್ಟಿದರು. ಎಳೆಯ ವಯಸ್ಸಿನಲ್ಲೇ ಪ್ರಕೃತಿಸೊಬಗಿಗೆ ಮನ ಸೋತಿದ್ದ ಈ ಬಾಲಕ. ಇವರ ತೋಟದಲ್ಲಿ ಒಬ್ಬನೇ ಕುಳಿತು ಮಣ್ಣಿನಲ್ಲಿ ಗೊಂಬೆಗಳನ್ನು ಮನಬಂದಂತೆ ಮಾಡುವುದರಲ್ಲಿ ದಿನವೆಲ್ಲಾ ಕಳೆಯುತ್ತಿದ್ದ. ಊಟದ ವೇಳೆಯಲ್ಲಿ ಈ ಹುಡುಗನನ್ನು ಹುಡುಕುವುದೊಂದು ಮನೆಯವರ ಕೆಲಸವಾಗಿತ್ತು. ಕಲಾಭಿರುಚಿಯಿದ್ದ ಇವರ ತಂದೆ ಪ್ರೋತ್ಸಾಹ ನೀಡುತ್ತಾ ಬಂದರು.

ಹದಿಮೂರನೆ ವಯಸ್ಸಿನ ಈ ಯುವಕ ಹುಲೀಕೆರೆಯಲ್ಲಿ ಬೆಳೆದ. ಅಲ್ಲಿಯೂ ಹಳೆಯ ಜಾಡಿನಲ್ಲೇ ಮುಂದುವರಿದ. ಆಗ ಚಿತ್ರಗಳನ್ನು ಸೀಸದಕಡ್ಡಿಯಿಂದ ನಕಲು ಮಾಡಲಾರಂಭಿಸಿದ. ಗೊಂಬೆ ಮಾಡುವುದು ಚಿತ್ರ ಬರಿಯುವುದೆಂದರೆ ಈ ಹುಡುಗನಿಗೆ ಎಲ್ಲಿಲ್ಲದ ಉತ್ಸಾಹ. ಮುಂದೆ ಇವರ ಚಿಕ್ಕಪ್ಪ ಹೊಯ್ಸಳರ ಮನೆಯಲ್ಲಿ ಈತನಿಗೆ ವ್ಯಾಸಂಗಮಾಡುವ ಅವಕಾಶವೂ ದೊರೆಯಿತು. ಆಗ್ಗೆ ಲಾರ್ಡ್ ಬೇಡನ್ ಪೊವೆಲ್‌ರ (Scout founder) ಭಾವಚಿತ್ರವನ್ನು ಪ್ಲಾಸ್ಟರ್ ಸೈಸ್‌ನಲ್ಲಿ ರಚಿಸಿದ ಈ ಹುಡುಗ. ಆಗ ಪ್ಯಾರಿಸ್‌ನಲ್ಲಿ ನಡೆದ ಸ್ಕೌಟ್ ಜಾಂಬೋರಿಗೆ ಅದನ್ನು ಹೊಯ್ಸಳರು ರವಾನಿಸಿದರು. ಇದರ ಪ್ರತಿಫಲನಾಗಿ ಅಲ್ಲಿಂದ ಒಂದು ಬೆಳ್ಳಿಯ ಪದಕವು ಬಹುಮಾನ ರೂಪದಲ್ಲಿ ಬಂದಿತು. ಈ ರೀತಿಯಲ್ಲಿ ಹೊಯ್ಸಳರ ಪ್ರೋತ್ಸಾಹ ಆರಗಂ ಅವರಿಗೆ ಸದಾ ಇದ್ದೇ ಇದ್ದಿತು.

ಶ್ರೀ ಆರಗಂ ಅವರು ಹೈಸ್ಕೂಲಿನಲ್ಲಿ ಡ್ರಾಯಿಂಗನ್ನು ತಮ್ಮ ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು. ಈ ಕಲಾಭಿರುಚಿ ಮುಂದೆ ಇವರನ್ನು ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಕರೆತಂದಿತು. ಅಲ್ಲಿ ಇವರಿಗೆ ಶ್ರೀ ನಂಜುಂಡಸ್ವಾಮಿ, ಶ್ರೀ ಸುಬ್ರಹ್ಮಣ್ಯರಾಜು ಅವರು ಕಲಾಗುರುಗಳಾ ಗಿದ್ದರು. ಬಹು ಉತ್ಸಾಹ ತುಂಬಿ ಅಭ್ಯಾಸ ನಡೆಸುತ್ತಾ ಬಂದರು. ಇವರು

ರಚಿಸಿದ ಸ್ತಬ್ಧಚಿತ್ರವೊಂದನ್ನು ಮೆಚ್ಚಿಕೊಂಡ ಅಲ್ಲಿಯ ಕಲಾವಿಭಾಗದ ಮುಖ್ಯಸ್ಥರಾಗಿದ್ದ ಡಾ|| ಪಾವಂಜೆಯವರು ಅದಕ್ಕೆ ಸುಂದರವಾದ ಚೌಕಟ್ಟನ್ನು ಹಾಕಿಸಿದರು. ಅಲ್ಲೆ ಷೋ ರೂಮಿನಲ್ಲಿರಿಸಿದ ನಾಲ್ಕು ದಿನಗಳಲ್ಲೇ ಅದು ಇಂಗ್ಲೇಡಿನ ಕಲಾಪ್ರವಾಸಿಯೊಬ್ಬರ ಕಣ್ಣಿಗೆ ಬಿದ್ದು, ಕೊಂಡು ಕೊಂಡು ಹೋದ ಒಂದು ಸವಿನೆನಪೂ ಶ್ರೀ ಆರಗಂ ಅವರಿಗಿದೆ. ಆಗಿನ ಇವರ ಕಲಾಭ್ಯಾಸದ ವೇಳೆಯಲ್ಲಿ ದಸರಾ ಕಲಾಪ್ರದರ್ಶನದಲ್ಲಿ ಪ್ರತಿ ವರ್ಷವೂ ಒಂದಲ್ಲ ಒಂದು ಬಹುಮಾನ ಇವರ ಕೃತಿಗಳಿಗೆ ಮೀಸಲಾಗುತ್ತಿತ್ತು.

೧೯೪೫ ಕ್ಕೆ ಇವರ ಕಲಾಭ್ಯಾಸ ಮುಗಿಯಿತು. ೧೯೪೭ ರಲ್ಲಿ ಆರಗಂ ಅವರು ಬೆಂಗಳೂರಿಗೆ ಬಂದು ನೆಲಸಿದರು. ಅಲ್ಲಿ "ಸ್ಟುಡಿಯೋ ಗುರುರಾಜ್—" ಎಂಬ ಕಲಾಗಾರವನ್ನು ತೆರೆದರು. ಕೊರವಂಜಿ, ಆನಂದ ಜ್ಯೋತಿ, ಶಂಕರ್ಸ್ ವೀಕ್ಲಿ, ಪ್ರಜಾವಾಣಿ ಮುಂತಾದ ಪತ್ರಿಕೆಗಳಿಗೆ ಅನೇಕ ವ್ಯಂಗ್ಯಚಿತ್ರಗಳನ್ನು ಜೊತೆಯಲ್ಲೇ ಜೀವನೋಪಾಯಕ್ಕೆ ವಾಣಿಜ್ಯಚಿತ್ರಗಳನ್ನು ಬರೆದುಕೊಡುತ್ತಾ ಬಂದರು.

೧೯೬೩ ರಲ್ಲಿ ನಡೆದ ಮೈಸೂರು ಪ್ರದೇಶ ಚಿತ್ರಕಲಾ ಪ್ರದರ್ಶನದಲ್ಲಿ ಡಾ|| ಕೆ. ವೆಂಕಟಪ್ಪನವರ ಹೆಸರಿನಲ್ಲಿರಿಸಲಾಗಿದ್ದ ಒಂದು ಬಹುಮಾನವು ಶ್ರೀ ಆರಗಂ ಅವರ 'Bad Debts' ಎಂಬ ಜಲವರ್ಣ ರೂಪಚಿತ್ರಕ್ಕೆ ಲಭಿಸಿತು. ಶ್ರೀ ಆರಗಂ ಅವರ ಕಲೆಗಾರಿಕೆಯನ್ನು ಅಳೆಯಲು ಇಂಥ ಒಂದೆರಡು ಕೃತಿಗಳೇ ಸಾಕೆನಿಸುತ್ತದೆ. ಶ್ರೀ ಗುರು ರಾಘವೆಂದ್ರಸ್ವಾಮಿಗಳು ಶ್ರೀ ಕನಕದಾಸರು, ಇವು ಸುಂದರವಾಗಿದ್ದು ಇವರ ಕಲ್ಪನಾಶಕ್ತಿಯನ್ನು ಮೆರೆಯುತ್ತವೆ. ಆಚ್ಚಾದ ಈ ಕೃತಿಗಳು ಕನ್ನಡ ಜನತೆಗೆ ಲಭ್ಯವಾಗಿವೆ. ಇವರು ರಚಿಸಿಕೊಟ್ಟ ಶ್ರೀ ಬೀಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣ ಇವರ ತೈಲಚಿತ್ರಗಳನ್ನು ಬೆಂಗಳೂರಿನ ಗಾಯನ ಸಮಾಜದಲ್ಲಿ ಈಕ್ಷಿಸಬಹುದಾಗಿದೆ. ಮಲೆನಾಡಿನ ಶ್ರೀ ಆರಗಂ ಕೃಷ್ಣಮೂರ್ತಿಯವರ ಬಹುಮುಖ ಕಲಾಸೇವೆಯನ್ನು ನಾವು ಮರೆಯಬಾರದು.

ಪಿ. ರಾಜಶೇಖರ್

ಶ್ರೀ ರಾಜಶೇಖರ್ ಅವರು ರಚಿಸಿದ 'ವಸ್ತ್ರಾಲಂಕರಣ' ಮತ್ತು 'ಯುಗಾದಿ' ಸಂಯೋಗ ಜಲವರ್ಣದ ಚಿತ್ರಗಳು ಒಮ್ಮೆ ನಮ್ಮ ಕಲಾ ವಿದರನೇಕರನ್ನು ಆಕರ್ಷಿಸಿದ್ದುವು. ಯುವತಿಯೋರ್ವಳು ತನ್ನ ಕೋಣೆಯಲ್ಲಿ ನಿಂತು ಸ್ವಾಭಾವಿಕ ಹಿಸ್ಸೆಲೆಯೊಡನೆ ಸೀರೆಯನ್ನು ಉಟ್ಟುಕೊಳ್ಳುವ ಒಂದು ಸನ್ನಿವೇಶವೇ 'ವಸ್ತ್ರಾಲಂಕರಣ'ದ ವಸ್ತು. ಯುಗಾದಿ ಹಬ್ಬದಂದು ಸ್ತ್ರೀಯೊಬ್ಬಳು ತಳಿರು ತೋರಣದಿಂದ ಅಲಂಕೃತವಾದ ಮನೆಯ ದ್ವಾರ

ದಡಿಯಲ್ಲಿ ನಿಂತು ತನ್ನ ಇನಿಯನಿಗಾಗಿ ಕಾಯುತ್ತಿರುವ ಮಧುರ ಸನ್ನಿವೇಶವನ್ನು ಬಹು ಸೊಗಸಾಗಿ ಬಿಡಿಸಿದ್ದಾರೆ ಶ್ರೀ ರಾಜಶೇಖರ್. ಇಲ್ಲಿ ಇವರ ನವೀನ ದೃಷ್ಟಿಯನ್ನೂ ಸ್ವಾಭಾವಿಕ ವರ್ಣಸಂಯೋಜನೆಯನ್ನೂ, ಸಹಜತೆಯ ಸಕಾಲಿಕ ವಸ್ತುವಿಶೇಷವನ್ನೂ ಕಾಣುತ್ತೇವೆ. ಅಲ್ಲದೆ ಅಲ್ಲಿಯ ವ್ಯಕ್ತಿಗಳ ಮುಖಗಳಲ್ಲಿ ಎದ್ದು ತೋರುವ ವರ್ಚಸ್ಸು ಕಣ್ಣುಗಳಲ್ಲಿನ ಕಾಂತಿ, ತುಟಿಗಳಲ್ಲಿನ ಸಜೀವತೆ, ಕೆನ್ನೆಗಳಲ್ಲಿನ ಹೊಳಪು ಮುಂತಾದ ವೈಶಿಷ್ಟ್ಯಗಳನ್ನು ಗಮನಿಸಬಹುದಾಗಿತ್ತು.

ಇವರು ರಚಿಸುವ ಪ್ರತಿ ವ್ಯಕ್ತಿಚಿತ್ರವೂ ಲಾಲಿತ್ಯ ಸೌಂದರ್ಯಗಳಿಂದ ಕೂಡಿರುತ್ತವೆ. ಇಲ್ಲಿಯ ರೂಪ ರೇಖಾವಿನ್ಯಾಸ, ಬಣ್ಣ, ನಿಲುವು ಒಲವುಗಳು ಯಾರ ಹೃದಯವನ್ನಾದರೂ ಸೆರೆ ಹಿಡಿಯದಿರವು. ಇಲ್ಲಿ ಸೌಮ್ಯತೆ ಪ್ರಸನ್ನತೆ ನೂತನತೆಯ ಸಾಮರಸ್ಯತೆಯನ್ನೂ ರಚನಾವಿನ್ಯಾಸವನ್ನೂ ಶರೀರ ಭಂಗಿಗಳನ್ನೂ ಮುಖಮುದ್ರೆಯನ್ನೂ ಈಕ್ಷಿಸಿದರೆ ಶ್ರೀ ರಾಜಶೇಖರ್ ಅವರ ಕುಂಚ ಕುಶಲತೆ ಮೆಚ್ಚುವಂತಹದು.

ಶ್ರೀಯುತರು ಸಾಮಾನ್ಯವಾಗಿ ಸ್ತ್ರೀಯರನ್ನು ವಸ್ತುವಾಗಿ ಬಳಸಿಕೊಂಡು ಚಿತ್ರಿಸುವಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಾ ಬಂದಿದ್ದಾರೆ. ಇವರ ಪ್ರತಿ ಹೆಣ್ಣಿನ ಚಿತ್ರವೂ ವಸ್ತ್ರಾಭರಣಗಳ ಸೌಂದರ್ಯ, ವರ್ಣ ವೈಖರಿ ನಾವೀನ್ಯತೆಯನ್ನು ಪಡೆದು ಮೋಹಕವಾಗಿರುತ್ತವೆ. ಅಲ್ಲಿ ತೋರುವ ಚಿತ್ತಾಕರ್ಷಕ ಸೌಂದರ್ಯ ಶ್ರೀ ರಾಜಶೇಖರರ ಹಿರಿಮೆಯನ್ನೂ ಕಲಾ ಸಾಧನೆಯನ್ನೂ ಸಾರುವಂತಿರುತ್ತದೆ.

ಶ್ರೀ ರಾಜಶೇಖರ್ ಅವರು ೧೯೩೫ ರಲ್ಲಿ ಬೆಂಗಳೂರಿನಲ್ಲಿ ಹುಟ್ಟಿದರು. ದಿ|| ಪುಟ್ಟಪ್ಪ ಇವರ ತಂದೆ ಬಾಲಕ ಶೇಖರ್ ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗಮಾಡುವಾಗ ಬೆಂಗಳೂರಿನ ಶ್ರೀ ಮುನಿಯಪ್ಪನವರ ಸ್ಟುಡಿಯೋ ಆಕರ್ಷಿಸಿತು. ಅವರಲ್ಲಿ ಆಗಾಗ ಹೋಗಿಬರುತ್ತಿದ್ದ. ಆ ಮೂಲಕ ಚಿತ್ರಕಲೆಯಲ್ಲಿ ಉತ್ತಮ ಅಭಿರುಚಿಯನ್ನು ಅವರಿಂದ ಪಡೆದುಕೊಳ್ಳುವಂತಾಯಿತು. ಪ್ರೌಢಶಾಲೆಯ ವ್ಯಾಸಂಗದಲ್ಲೂ ಈ ಹುಡುಗನಿಗೆ ಚಿತ್ರ ಬಿಡಿಸುವುದೊಂದೇ ಹವ್ಯಾಸವಾಗಿದ್ದಿತು. ಇದನ್ನು ಗಮನಿಸುತ್ತಾ ಬಂದ ಈತನ ಚಿಕ್ಕಪ್ಪ ಶ್ರೀ ಡಿ ನಂಜಪ್ಪನವರು ಹುಡುಗನನ್ನು ಮೈಸೂರಿಗೆ ಕರೆತಂದರು. ಅಲ್ಲಿ

ಚಾಮರಾಜೇಂದ್ರ ಕಲಾಶಾಲೆಯ ಕಲಾವಿಭಾಗದ ಮುಖ್ಯಾಧಿಕಾರಿಗಳಾಗಿದ್ದ ಶ್ರೀ ಎಂ. ವೀರಪ್ಪನವರ ಸಲಹೆ ಸಹಕಾರವೂ ದೊರಕಿತು. ಶ್ರೀ ಸುಬ್ರಹ್ಮಣ್ಯ ರಾಜು, ಶ್ರೀ ನಂಜುಂಡಸ್ವಾಮಿ, ಶ್ರೀಸೂಫಿ ಅವರ ಮಾರ್ಗದರ್ಶನದಲ್ಲಿ ಕಲಾಭ್ಯಾಸವನ್ನು ಮುಗಿಸಿದರು.

ಅನಂತರ ಮೈಸೂರು ಸರ್ಕಾರದ ವಿದ್ಯಾರ್ಥಿವೇತನ ಪಡೆದು ಬೊಂಬಾಯಿ ಜೆ. ಜೆ. ಕಲಾಶಾಲೆಯನ್ನು ೧೯೫೭ ರಲ್ಲಿ ಸೇರಿದರು. ಶ್ರೀ ಜೆ. ಡಿ. ಗೋಂಡ್ಸೆಕರ್ ಅವರೇ ಆ ಶಾಲೆಯ ಡೀನ್ ಆಗಿದ್ದರು. ಶ್ರೀ ದೋಬೇಶ್ ವರ್‌ಕರ್ ಮುಖ್ಯೋಪಾಧ್ಯಾಯರಾಗಿದ್ದರು. ಶ್ರೀ ಶಿರ್ ಗೋನ್‌ಕರ್ ಶ್ರೀ ಪಳಸೀಕರ್ ಅವರು ಕಲಾಗುರುಗಳಾಗಿದ್ದು ರೂಪಚಿತ್ರ ಹಾಗೂ ಸಂಯೋಗ ಚಿತ್ರರಚನೆಯಲ್ಲಿ ಉತ್ತಮ ಮಾರ್ಗದರ್ಶನ ನೀಡಿದರು ರಜಾದಿನಗಳಲ್ಲಿ ಆಗಾಗ ಅಲ್ಲಿಯ ನೂತನ ಕಲಾಮಂದಿರಕ್ಕೂ ಹೋಗಿ ಬರುತ್ತಿದ್ದರು. ಅಲ್ಲಿಯ ಪ್ರಿನ್ಸಿಪಾಲರಾಗಿದ್ದ ಶ್ರೀ ದಂಡಾವತಿ ಮಠ ಅವರು 'ನ್ಯೂಡ್ ಸ್ಟಡಿ' ಮಾಡುವುದಕ್ಕೆ ಇವರಿಗೆ ಅವಕಾಶವನ್ನೊದಗಿಸಿ ಕೊಟ್ಟರು.

ಬೊಂಬಾಯಿ ನಗರದಲ್ಲಿ ನಾಲ್ಕಾರುವರ್ಷಗಳಕಾಲ ನೆಲಸಿದ್ದು ವ್ಯಾಸಂಗಮಾಡಿ ಬರುವಲ್ಲಿ ಶ್ರೀ ರಾಜಶೇಖರರು ಜೀವನರಂಗದಲ್ಲಿ ನಾನಾ ಬಗೆಯ ಸಿಹಿ ಕಹಿ ಅನುಭವಗಳನ್ನು ಪಡೆದರು. ಇವರಿಗೆ ಆಗ ಬರುತ್ತಿದ್ದ ವಿದ್ಯಾರ್ಥಿವೇತನ ಅಲ್ಲಿಯ ನಿತ್ಯಜೀವನಕ್ಕೇ ಸಾಲದಾಗುತ್ತಿತ್ತು. ಇವರ ಅದೃಷ್ಟವೋ ಎಂಬಂತೆ ಪೋಲೀಸ್ ಅಧಿಕಾರಿ ಶ್ರೀ ಥಂಗೆಯವರ ಪರಿಚಯ ಲಾಭ ಇವರಿಗಾಯಿತು. ಬಹು ಕಡಿಮೆ ವೆಚ್ಚದಲ್ಲಿ ಊಟ ಹಾಕುವ ಅವಕಾಶ ವನ್ನು ಅವರು ಶ್ರೀ ರಾಜಶೇಖರ್ ಅವರಿಗೆ ಮಾಡಿಕೊಡದಿದ್ದರೆ ತುಂಬಾ ಕಷ್ಟಪಡಬೇಕಾಗುತ್ತಿತ್ತು. ಇಂದಿಗೂ ಅವರ ಸಹಾಯ ಸಹಾನುಭೂತಿಯ ಸ್ಮರಣೆ ಇವರಿಗಿದೆ.

ನವ್ಯಕಲೆಯ ಬಗ್ಗೆ ಶ್ರೀ ರಾಜಶೇಖರ್ ಅವರು ಮಾತನಾಡುತ್ತಾ "ಆಧುನಿಕ ಚಿತ್ರಕಲೆಯು ಈಗಿನ ಸಮಾಜದಲ್ಲಿ ಒಂದು ಫ್ಯಾಷನ್ ಆಗಿ ಬಿಟ್ಟಿದೆ. ನವ್ಯ ಚಿತ್ರಕಲೆಯಲ್ಲಿ ಭಾರತೀಯ ಸಂಪ್ರದಾಯವನ್ನು ಬಳಸಿ ಕೊಂಡು ಪ್ರಾಮಾಣಿಕ ತನದಿಂದ ಚಿತ್ರಿಸಿದರೆ ಅದು ಸ್ವಯಂ ಕಲ್ಪಿತ ಭವ್ಯ

ಚಿತ್ರವಾಗುತ್ತದೆ. ಆ ಚಿತ್ರರಚನಾ ಶೈಲಿಯಲ್ಲಿ ತ್ರಿಕೋಣ ಇರಲಿ, ಅಬ್‌ಸ್ಟ್ರಾಕ್ಟ್ ಇರಲಿ. ಸರಲಿಸಂ ಇರಲಿ ಮತ್ತೇನೇ ಇರಲಿ—ಚಿತ್ರವನ್ನು ನೋಡಿದಾಕ್ಷಣ ಭಾರತೀಯ ಪ್ರಾದೇಶಿಕ ವಸ್ತುನಿಷ್ಠೆ ಅಲ್ಲಿ ವ್ಯಕ್ತವಾಗಿರಬೇಕು. ಅದು ಸಾಮಾನ್ಯ ಕಲಾಭಿರುಚಿ ಇರುವವರಿಗೂ ಕಲಾವಿದರಿಗೂ ಅರ್ಥವಾಗುವಂತಿರಬೇಕು" —ಎಂದು ಅಭಿಪ್ರಾಯ ಪಡುತ್ತಾರೆ.

ಶ್ರೀ ರಾಜಶೇಖರ್ ಅವರು ಈಗ ಮೈಸೂರು ಸರ್ಕಾರದ ಪ್ರಚಾರ ಮತ್ತು ವಾರ್ತಾ ಇಲಾಖೆಯ ಕಲಾವಿಭಾಗದಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಬಿಡುವಿನಲ್ಲಿ 'ಚಿತ್ರಕಲಾ ವಿದ್ಯಾಲಯ'ದ ಕಲಾಗುರುಗಳಾಗಿ ತಮ್ಮ ಮಧುರ ಅನುಭವಗಳಿಂದ ಅಲ್ಲಿ ಬರುವ ಕಲಾವಿದ್ಯಾರ್ಥಿಗಳ ಹೃದಯವನ್ನು ವಿಶಾಲಗೊಳಿಸುತ್ತಾರೆ. ತಮ್ಮದೇ ಆದ ಅಚ್ಚುಕಟ್ಟು ಅವರ ಜೀವನಕ್ಕಿದೆ. ಕನ್ನಡ ನಾಡಿನ ಯಾವ ಕಲಾವಿದನಲ್ಲೂ ಕಾಣದ ಒಂದು ವಿಶೇಷಗುಣವನ್ನು ಇವರ ಕೃತಿಗಳಲ್ಲಿ ಕಾಣಬಹುದಾಗಿದೆ. ಇವರು ನೂತನ ಕಲಾವಿಧಾನದಲ್ಲಿ ಪ್ರಗತಿಪರರಾಗುತ್ತಿರುವುದು ಹೆಮ್ಮೆಯ ವಿಷಯ.



ಎಂ. ಎ. ಚೆಟ್ಟಿ

ಕಲಾವಿದ ಮುರಿಗೆಪ್ಪಚೆಟ್ಟಿಯವರು ಕನ್ನಡ ನಾಡಿನ ಚಿರ ಪರಿಚಿತ ಕಲಾವಿದರು. ಚಾರಿತ್ರಿಕ ಚಿತ್ರಗಳನ್ನು ಸುಂದರವಾಗಿ ರಚಿಸುವುದರಲ್ಲಿ ಹೆಸರಾಗಿದ್ದಾರೆ. ದಪ್ಪನೆಯ ಮೀಸೆ, ಇವರು ಧರಿಸುವ ದಪ್ಪನೆಯ ಕನ್ನಡಕ, ದುಂಡು ಟೋಪಿ, ಕಚ್ಚೆ ಪಂಚೆಯಿಂದಾಗಿ ಇವರೊಬ್ಬರು ಯಾರೋ ವ್ಯಾಪಾರೋದ್ಯಮಿಯಂತೆ ಕಾಣುತ್ತಾರೆ. ಆದರೆ, ಇವರೊಬ್ಬರು ಕನ್ನಡನಾಡಿನ ಅಪೂರ್ವ ಚಿತ್ರಕಾರರೆಂದು ಬೇಗ ಗುರುತಿಸುವುದು ತುಸು ಕಷ್ಟವೇ.

ಶ್ರೀ ಚಿಟ್ಟಿಯವರ ಅನೇಕ ಚಿತ್ರಗಳನ್ನು ದಸರ ಕಲಾಪ್ರದರ್ಶನದಲ್ಲಿ ಕಂಡಿದ್ದೆ. ಅವುಗಳಲ್ಲಿ 'ಕಸೂತಿಯ ಮಹಿಳೆ,' 'ಕಿತ್ತೂರು ರಾಣಿ ಚೆನ್ನಮ್ಮ,' 'ಶ್ರೀ ಮುರುಘರಾಜೇಂದ್ರಸ್ವಾಮಿಗಳ ಸಾನಿಧ್ಯ' ಮುಂತಾದುವು ಮುಖ್ಯವು. ಈ ಕೃತಿಗಳ ವಸ್ತು ವಿಶೇಷಕ್ಕೆ ವರ್ಣ ಸಂಯೋಜನೆಗೆ ಯಾರಾದರೂ ಮನ ಸೋಲವಂತಿದ್ದಿತು.

ಗದುಗಿನಲ್ಲಿರುವ ಶ್ರೀಯುತರು ಅಲ್ಲಿಯ ಅಥಣಿಯಲ್ಲಿ ಚಿಟ್ಟಿಮನೆತನದ ಶ್ರೀ ಅಡಿವೆಪ್ಪ ಹಾಗೂ ಶಿವಗಂಗಾದೇವಿಯವರ ನಾಲ್ಕನೆಯ ಪುತ್ರರಾಗಿ ಹುಟ್ಟಿದರು. ಬಾಲ್ಯದಲ್ಲೇ ಇವರಿಗೆ ಉತ್ತಮ ಸಂಸ್ಕಾರ ಸಂಪರ್ಕವೂ ದೊರೆಯಿತು. ಕೈ|| ಶ್ರೀ ಶ್ರೀ ಶಿವಯೋಗಿಗಳ ಸಾನಿಧ್ಯ ದೊರೆತ ಪುಣ್ಯಶಾಲಿ ಕಲಾವಿದರಿವರು. ಬಾಲ್ಯದಲ್ಲೇ ಕಲಾಶಕ್ತಿ ಇದ್ದಿತು. ಕ್ರಮೇಣ ೧೯೨೪ ರಲ್ಲಿ ಬೊಂಬಾಯಿಯ ಜೆ. ಜೆ. ಕಲಾಶಾಲೆಗೆ ಸೇರಿ ಆರುವರ್ಷಗಳಕಾಲ ಸತತ ಕಲಾಭ್ಯಾಸ ನಡೆಸಿ ೧೯೩೦ ರಲ್ಲಿ ಡಿಪ್ಲೊಮಾ ಗಳಿಸಿದರು. ಅಲ್ಲಿಯ ಪ್ರಿನ್ಸಿಪಾಲರಾಗಿದ್ದ ಶ್ರೀ ಡಬ್ಲ್ಯು. ಡಿ ಗ್ಲಾಡಸ್ಟನ್ ಸಾಲೋಮನ್‌ರು ಶ್ರೀ ಚಿಟ್ಟಿಯವರು ಬಿಡಿಸಿದ ಒಂದು ನಿಸರ್ಗ ಚಿತ್ರವನ್ನು ಕೊಂಡು ಮ್ಯೂಜಿಯಂನಲ್ಲಿ ಇರಿಸಿದುದು ಆಗಿನ ವಿದ್ಯಾರ್ಥಿವೃಂದದಲ್ಲಿ ಶ್ರೀ ಚಿಟ್ಟಿಯವರಿಗೆ ಒಳ್ಳೆಯ ಗೌರವ ತಂದಿತು. ಕಲಾಭ್ಯಾಸ ಮುಗಿದನಂತರ ಶ್ರೀಯುತರು ಗದುಗಿಗೆ ಬಂದು ನೆಲಸಿದರು. ಇವರ ಮನ ಪುರಾಣ, ಪುಣ್ಯಕಥೆಗಳ ಕಡೆ ಹರಿಯಿತು. ಆ ಬಗೆಯ ಹೆಚ್ಚು ಹೆಚ್ಚು ಕೃತಿಗಳನ್ನು ಜಲವರ್ಣ ಹಾಗು ತೈಲವರ್ಣಗಳಲ್ಲಿ ಬಿಡಿಸುತ್ತಾ ಬಂದರು.

೧೯೩೪ ರಲ್ಲಿ ಔಂಧ ಸಂಸ್ಥಾನದ ಶ್ರೀ ಪರಿತಪ್ರತಿನಿಧಿಯವರಿಗೆ ಭಗವದ್ಗೀತೆಯನ್ನು ಆಧರಿಸಿ 'ವಿಶ್ವರೂಪ ದರ್ಶನ'ವನ್ನು ಬಹು ಕಲಾತ್ಮಕವಾಗಿ ರಚಿಸಿಕೊಟ್ಟರು. ಇವಕ್ಕೆ ಐದುನೂರು ರೂಗಳ ಬಹುಮಾನವೂ ಸಂದಿತು ಧಾರವಾಡದ ಕೆ. ಎಲ್. ಇ. ಸಂಸ್ಥೆಯವರು ಪ್ರಕಟಿಸಿರುವ ಮಹಾಕವಿ ಚಾಮರಸನ ಪ್ರಭುಲಿಂಗ ಲೀಲೆ ಹಾಗೂ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣಗಳಲ್ಲಿ ಶ್ರೀ ಚಿಟ್ಟಿಯವರ ಕೆಲವಾರು ವಿಶಿಷ್ಟ ಚಿತ್ರಗಳಿವೆ.

ಶ್ರೀ ಚಿಟ್ಟಿಯವರಷ್ಟು ಗುರುಪರಂಪರೆಯ, ಪವಾಡಪುರುಷರ ಜೀವನ

ಕುರಿತು ಚಿತ್ರಿಸಿರುವ ಕಲಾವಿದರು ಕನ್ನಡ ನಾಡಿನಲ್ಲೇ ಅಪರೂಪ. ಗದುಗಿನ ಶ್ರೀ ತೋಂಟದಾರ್ಯ ಮಠದವರು ಪ್ರಕಟಿಸಿರುವ 'ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ಪುರಾಣ'ದಲ್ಲಿಯ ಚಿತ್ರಗಳು; ಅವರಾದಿ 'ಫಲಾದೇಶ್ವರ ಪುರಾಣ'ದಲ್ಲಿ ಫಲಾರೇಶ್ವರರ ಜೀವನ ಕ್ರಮವನ್ನನುಸರಿದ ಚಿತ್ರಗಳೂ, ಘನಮಠಾರ್ಯರ ಚರಿತ್ರೆಯ ಹಲವಾರು ಚಿತ್ರಗಳು, ಶ್ರೀ ಪರಮಾನಂದ ಮೆಹರಾರವರು ಮುದ್ರಿಸಿರುವ ಸಚಿತ್ರ ಭಗವದ್ಗೀತೆಯ—ಶ್ರೀ ಕೃಷ್ಣನ ವಿಶ್ವರೂಪ ಕುರಿತ ಚಿತ್ರ. ಶ್ರೀ ನಿಜಲಿಂಗೇಶ್ವರ ಮತ್ತು ದುರುದುಂಡೇಶ್ವರ ಪುರಾಣಕ್ಕೆ ಸೇರಿದ ಚಿತ್ರಗಳು, ಸಾವಳಗಿ ಶಿವಲಿಂಗೇಶ್ವರ ಪುರಾಣ ಚಿತ್ರಗಳು, ಶಿವಾನುಭವ ಮಂಟಪದ ಚಿತ್ರ, ಶ್ರೀ ಪುಟ್ಟಯ್ಯ ಗವಾಯಿಗಳ ಹಿಂದಿಭಾಷೆಯ ಕೃತಿ 'ಬಸವ ಪುರಾಣ'ಕ್ಕೆ ಸೇರಿದ ಚಿತ್ರಗಳು, ಅಥಣಿ ಶಿವಯೋಗಿಗಳ ಪವಾಡ ಜೀವನ ಕುರಿತಾದ ಚಿತ್ರಗಳು ಹೀಗೆ ಅನೇಕಾನೇಕ ಗುರು ಪರಂಪರೆಯ ಐತಿಹಾಸಿಕ ಹಿನ್ನೆಲೆಯ ವಸ್ತುಗಳ ಚಿತ್ರಗಳನ್ನು ಶ್ರೀ ಚೆಟ್ಟಿಯವರು ರಚಿಸಿಕೊಟ್ಟು ತಮ್ಮ ಕಲಾಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ.


ಬೊಂಬಾಯಿಯಲ್ಲಿ ಜರುಗಿದ (೧೯೩೧ ರಿಂದ ૩૩ ರವರೆಗೆ) ಕಲಾ ಪ್ರದರ್ಶನಗಳಲ್ಲಿ ಶ್ರೀಯುತರ ಅನೇಕ ಚಿತ್ರಗಳಿಗೆ ಮಾನ್ಯತೆ ಬಂದು ಅವೆಲ್ಲವೂ ಮಾರಾಟವಾದುವು. ಇವರ ಕುಂಚ ನಿಸರ್ಗ ಚಿತ್ರಗಳನ್ನು ಬಿಡಿಸುವಲ್ಲಿ ಪಳಗಿದೆ. 'ಮೊಂಬಾದೇವಿ ದೇಗುಲ' ಮತ್ತು ಶ್ರೀ ಸಿದ್ಧರಾಮೇಶ್ವರ ಮಂದಿರ' ಚಿತ್ರಗಳೇ ಅದಕ್ಕೆ ಸಾಕ್ಷಿಯಾಗಿವೆ. ಇವಕ್ಕೆ ಲಕ್ಕಲಕೋಟಿ ಅರಸರಿಂದ ಬಹುಮಾನವೂ ದೊರಕಿದೆ. ಇವರ ಶ್ರೀ ಸಿದ್ಧಲಿಂಗೇಶ್ವರ ಚಿತ್ರವು ಮೈಸೂರು ಅರಮನೆಯಲ್ಲಿ ಇಂದು ಶೋಭಿಸುತ್ತಿದೆ.

ಇವರ ಕುಂಚ ಚಾರಿತ್ರಿಕ ಚಿತ್ರರಚನೆಯಲ್ಲಿ ಹೆಸರಾದಂತೆ ರೂಪಚಿತ್ರ ರಚನೆಯಲ್ಲೂ ಅಪೂರ್ವ ಸಿದ್ಧಿಯನ್ನು ಗಳಿಸಿದೆ. ಇವರು ರಚಿಸಿಕೊಟ್ಟ ಶ್ರೀ ಜಯಚಾಮರಾಜೇಂದ್ರ ಒಡೆಯರ, ಉಪಕುಲಪತಿ ಶ್ರೀ ಡಿ. ಸಿ. ಪಾವಟೆಯವರ, ಶ್ರೀ ಆರ್. ಆರ್. ದಿವಾಕರರ; ಬಿ. ಜಿ. ಖೇರರ, ಲೋಕೂರರ, ಆರ್. ಎ. ಜಹಾಗೀರ್‌ದಾರರ ವಿವಿಧಾಕೃತಿಗಳ ತೈಲವರ್ಣ ಭಾವಚಿತ್ರಗಳು ಕರ್ನಾಟಕ ವಿಶ್ವವಿದ್ಯಾನಿಲಯದ ಭವ್ಯ ಕಟ್ಟಡದಲ್ಲಿ ಕಂಗೊಳಿಸು

ತ್ತಿವೆ. ಶ್ರೀ ಚೆಟ್ಟಿಯವರ ಕಲಾಕೌಶಲವನ್ನು ಸಾರುತ್ತಿವೆ; ಕೀರ್ತಿಯನ್ನು ಮೆರೆಸುತ್ತಿವೆ.

ಶ್ರೀಯುತರ ಪುತ್ರರಾದ ಬಸವರಾಜು ಚಿತ್ರಕಾರನೆಂದು ಬೆಳಕಿಗೆ ಬಂದಿದ್ದಾರೆ. 'ಶಂಕರ್ಸ್ ವೀಕ್ಲಿ' ಅವರ ಮಕ್ಕಳ ಅಂತರ್‌ರಾಷ್ಟ್ರೀಯ ಚಿತ್ರ ಸ್ಪರ್ಧೆಯಲ್ಲಿ ಈ ಬಾಲಕನ ಕೃತಿಗೆ ಬಹುಮಾನ ಬಂದು ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಗಳಿಂದ ಬಹುಮಾನಿತನಾಗಿರುವುದಕ್ಕೆ ಯಾರಾದರೂ ಅಭಿಮಾನ ಪಡಬೇಕು! ಇದಕ್ಕೆ ತಂದೆ ಚೆಟ್ಟಿಯವರ ಪ್ರೋತ್ಸಾಹವೇ ಕಾರಣ.

ಇಂಥ ಅಪೂರ್ವ ಕಲಾವಿದ ಸದ್ದುಗದ್ದಲವಿಲ್ಲದೆ ಯಾವುದೋ ಮೂಲೆಯಲ್ಲಿ ಕಲಾಯೋಗಿಯಂತೆ ಕಲಾಜೀವನ ಸಾಗಿಸುತ್ತಾ ಬಂದಿದ್ದಾರೆ. ರಾಜಕೀಯ ಮಾಡಿ ಎಲ್ಲ ಕಲಾಸಂಸ್ಥೆಗಳಲ್ಲೂ ತಲೆ ಎತ್ತಿ ಮೆರೆಯುವ ಹುಚ್ಚು ಇವರ ಜಾಯಮಾನಕ್ಕೆ ಬರಲಿಲ್ಲ. ಇದು ಇವರ ಪುಣ್ಯವಿಶೇಷ ಎನ್ನುವುದಕ್ಕಿಂತ ಅಪೂರ್ವ ಕಲಾಕೃತಿಗಳನ್ನು ಪಡೆಯುವಂತಾದ ನಮ್ಮ ಭಾಗ್ಯ ಎನ್ನಬೇಕು.



ಎಸ್. ರಮೇಶ್

ಮೈಸೂರು ನಗರಕ್ಕೆ ಖ್ಯಾತ ಸಾಹಿತಿ ‘ತರಾಸು’ ಅವರು ಬಂದು ನೆಲಸಿದ ಹೊಸದಿನಗಳವು. ೧೯೫೩ ರ ಸುಮಾರು. ನನ್ನ ಹಳ್ಳಿಯ ನೆರೆಯವರಾದ ಅವರ ಆಕರ್ಷಕ ಬರವಣಿಗೆಯ ಬಗ್ಗೆ ನಾನು ಎಂದೋ ಮಾರುಹೋಗಿದ್ದೆ. ಆಗಾಗ ನಾನು ಅವರ ಬಳಿ ಹೋಗಿ ಬರುತ್ತಿದ್ದೆ. ರೇಬ್ರಾಂಟ್‌ನಿಂದ ಪಿಕಾಸೋ ತನಕ, ಅಜಂತದಿಂದ ಲೇಪಾಕ್ಷಿತನಕ ನಮ್ಮ ನಡುವೆ ಮಾತು ಬರುತ್ತಿತ್ತು. ಅಂದಿನ ಅವರ ಕಷ್ಟದ ಬಾಳಿನಲ್ಲಿ ರಚಿತವಾದ

'ನೃಪತುಂಗ' ಮತ್ತು 'ಹಂಸಗೀತೆ' ಕೃತಿಗಳಿಗೆ ನನ್ನಿಂದ ರಕ್ಷಾಪತ್ರಕ್ಕೆ ಚಿತ್ರಗಳನ್ನು ಬರೆಯಿಸಿದ್ದರು. ಒಮ್ಮೆ ಅವರದೊಂದು ಕೃತಿ ಅದೇ ತಾನೆ ಪ್ರಕಟವಾಗಿ ಅವರ ಕೈಗೆ ಬಂದಿದ್ದದು. ಅದರ ರಕ್ಷಾಪತ್ರದ ಚಿತ್ರವನ್ನು ನನಗೆ ತೋರುತ್ತ....

"ಇದು ಹೇಗಿದೆ?"–ಎಂದು ಕೇಳಿದರು.

ಆ ಚಿತ್ರ ಯಾವುದೋ ಹೊಸ ರೀತಿಯ, ಹೊಸ ಕಲ್ಪನೆಯ ಚಿತ್ರವಾಗಿತ್ತು. ಅಪೂರ್ವ ಸಾಧನೆಯನ್ನು ಮೆರೆದಿರುವಂತಿತ್ತು. ಅಲ್ಲಿನ ಕಲ್ಪನಾ ವೈಖರಿಗೆ ನಾನು ತುಂಬ ಆಕರ್ಷಿತನಾಗಿ....

"ನೂತನವಾಗಿದೆ. ಆಕರ್ಷಕವಾಗಿದೆ"–ಎಂದೆ.

"ಇದು ಕಲಾವಿದ 'ರಮೇಶ್' ರಚಿಸಿದ್ದು. ಆಂಧ್ರದವರು. ಈಗ ಬೆಂಗಳೂರಿನಲ್ಲಿದ್ದಾರೆ. ಇಂಥ ನೂತನ ಶೈಲಿಯ ಚಿತ್ರಗಳನ್ನು ರೂಪಿಸುವಲ್ಲಿ ತುಂಬ ಜಾಣ್ಮೆಯನ್ನು ಮೆರೆಯುತ್ತಿದ್ದಾರೆ. ಇವರು ಕನ್ನಡನಾಡಿಗೆ ಹೊಸಬರು"–ಎಂದರು ತರಾಸು.

ನಿಜ! 'ರಮೇಶ್' ಹೆಸರಿನ ಚಿತ್ರಗಳನೆಕವನ್ನು ರಕ್ಷಾಪತ್ರಪತ್ರಗಳಲ್ಲಿ ಕಂಡಿದ್ದೆ. ಎಲ್ಲೂ ಕಾಣದ ಹೊಸ ತಂತ್ರವನ್ನು ಇವರ ರೇಖಾ ಚಿತ್ರಗಳಲ್ಲಿ ಗಮನಿಸಬಹುದಾಗಿತ್ತು. ಅಷ್ಟೇ ಅಲ್ಲ 'ಕಿಡಿ' ಪತ್ರಿಕೆಯಲ್ಲಿ ಹಿಂದೆ ಪ್ರಕಟವಾಗುತ್ತಿದ್ದ ಇವರ ವ್ಯಂಗಚಿತ್ರಗಳಿಗೆ ನಾನು ಮನಸೋತಿದ್ದೆ. ಇವರ ಕೃತಿಗಳಿಗೆ ಮೆಚ್ಚಿ 'ಕಿಡಿ' ಪತ್ರಿಕೆಯನ್ನು ಸದಾ ಕೊಳ್ಳುತ್ತಿದ್ದೆ. 'ಇದಾರೋ ಹೊಸ ಕಲಾವಿದ ನಮ್ಮಲ್ಲಿ ಬೆಳಕಿಗೆ ಬಂದ' ಎಂದೇ ಮನದಲ್ಲಿ ಎಣಿಕೆ ಹಾಕುತ್ತಿದ್ದೆ. ಇವರ ಚಿತ್ರಕ್ಕೆ 'ಕಿಡಿ' ಪ್ರಮುಖ ಸ್ಥಾನವನ್ನು ಕೊಟ್ಟಿದ್ದಿತು. ಮುಖ್ಯವಾಗಿ ಇವು ಮೈಸೂರು ರಾಜಕೀಯಕ್ಕೆ ಸಂಬಂಧಪಟ್ಟವು. ರಮೇಶ್ ಅವರು ತಮ್ಮ ಕಲ್ಪನೆಯಿಂದಲೂ ಕಲಾ ಕೌಶಲದಿಂದಲೂ ಜನತೆಯನ್ನು ಆಕರ್ಷಿಸುತ್ತಾ ಬಂದಿದ್ದರು ಇವರು ಮದರಾಸಿನಲ್ಲಿದ್ದಾಗ ಹಿಂದುಸ್ಥಾನ ಟೈಂಸ್, ಹಿಂದೂ, ಎಕ್ಸ್‌ಪ್ರೆಸ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೋ, ವಾಸು, ಮಾಲಿ, ಶಂಕರ್ ಅವರ ವ್ಯಂಗ್ಯ ಚಿತ್ರಗಳನ್ನು ಗಮನಿಸುತ್ತಾ ಸ್ಫೂರ್ತಿಪಡೆದಿದ್ದರು.

ರಮೇಶ್ ಉತ್ತಮ ರೇಖಾಚಿತ್ರಕಾರರೆಂದು,. ವ್ಯಂಗ್ಯಚಿತ್ರಕಾರ

ರೆಂದು ಕನ್ನಡನಾಡಿನಾದ್ಯಂತ ಹೆಸರುಗಳಿಸಿದ ವ್ಯಕ್ತಿ. ಇವರು ತುಂಬ ಸೂಕ್ಷ್ಮಗ್ರಾಹಿ. ಕಲ್ಪನಾಸಾಮರ್ಥ್ಯವೂ ಅಷ್ಟೇ ತೀಕ್ಷ್ಣ. ಕಲೆಯ ನಾನಾ ಮುಖಗಳನ್ನು ಚೆನ್ನಾಗಿ ಅರಿತ ಇವರು ತಮ್ಮದೇ ಆದ ಶೈಲಿಯನ್ನು ರೂಢಿಸಿ ಕೊಂಡರು. ವ್ಯಕ್ತಿತ್ವ ಸರಳ, ಸುಂದರ ಹಾಗೂ ಅಪ್ಪಟ. ಹೆಚ್ಚು ಸ್ವಾತಂತ್ರ್ಯ ಪ್ರಿಯರು. ಯಾರ ಹಂಗಿಗೂ ಒಳಗಾಗುವವರಲ್ಲ. ತಮಗೆ ಸೇರಿದ ಕಾರ್ಯವನ್ನು ಅಚ್ಚುಕಟ್ಟಾಗಿ ಒಪ್ಪವಾಗಿ ಮಾಡಿಮುಗಿಸುವ ಕ್ರಿಯಾ ಶೀಲರಿವರು. ರಮೇಶ್ ರಚಿಸುವ ಸಾಮಾಜಿಕ ವಸ್ತುಗಳ ರೇಖಾಚಿತ್ರಗಳನ್ನು ಗಮನಿಸಿದಾಗ ಇವರ ಕುಂಚ ಲೀಲಾಜಾಲವಾಗಿ ಹರಿದಿರುವುದು ವೇದ್ಯವಾಗು ತ್ತದೆ. ಇವರ ಪ್ರತಿಭೆಯ ಮಟ್ಟ ಬಹಳ ವಿಶಿಷ್ಟವಾದುದು ಕವಿ ಕಲ್ಪನೆಯ ಸೊಗಸನ್ನು ಇವರ ಚಿತ್ರಗಳಲ್ಲಿ ಕಾಣಬಹುದು. ಈ ಬಗೆಯ ಇವರ ಕೃತಿ ಗಳನ್ನು ಪ್ರಜಾವಾಣಿ, ಸುಧಾ, ಡೆಕ್ಕನ್‌ಹೆರಾಲ್ಡ್‌ನಲ್ಲಿ ಗಮನಿಸಬಹುದು.

ಆಂಧ್ರದ ಪೂರ್ವ ಗೋದಾವರಿ ಜಿಲ್ಲೆಯ ಕಾಕಿನಾಡದ ತೆಲುಗು ಮನೆ ತನ ಇವರದು. ಇವರ ತಂದೆ ಡಾ|| ಎಸ್. ವಸಂತರಾಮಾಚಾರ್ಯ. ಸಂಗೀತ ಸಾಹಿತ್ಯ ಕಲೆಗಳಲ್ಲಿ ಅಪಾರ ಆಸಕ್ತಿ ಅವರಿಗೆ ಅವರ ಪ್ರಭಾವ ರಮೇಶರ ಮೇಲೂ ಬಿದ್ದಿತು. ಬಾಲ್ಯದಲ್ಲೇ ರಮೇಶ್ ತಮ್ಮ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದರು. ಇವರ ದೂರದ ಬಂಧುಗಳಾದ ಶ್ರೀ ವರದ ವೆಂಕಟರತ್ನಂ ಅವರಲ್ಲಿ ವಿದ್ಯಾಭ್ಯಾಸ ಜರುಗಿತು. ಚಿತ್ರಕಲಾಭ್ಯಾಸವನ್ನು ಮಾತ್ರಯಾರಲ್ಲೂ ಮಾಡದೆ ಸ್ವಯಂ ಅಭ್ಯಾಸದಿಂದಲೇ ರೂಢಿಸಿಕೊಂಡರು.

ಸದೃಢವಾದ ದೇಹದ ಗಟ್ಟಿಮುಟ್ಟಾಗಿದ್ದ ಈ ಯುವಕ ಮಿಲಿಟರಿಗೆ ಸೇರುವ ಆಸೆ ತೋರಿದರು. ಅರ್ಜಿ ಸಲ್ಲಿಸಿದರು ಮಿಲಿಟರಿಗೆ ಸೇರಲು ಕಡೆಯ ಆಯ್ಕೆಗಾಗಿ ಮದರಾಸಿಗೆ ಬಂದರು. ಅಲ್ಲಿ ಖ್ಯಾತ ಪತ್ರಿಕಾಕರ್ತರೂ ರಾಜ ಕಾರಣಿಗಳೂ ಸ್ವಾತಂತ್ರ್ಯಚಳವಳಿಯಲ್ಲಿ ಅನೇಕಸಾರಿ ಜೈಲುವಾಸ ಅನುಭವಿ ಸಿದವರೂ ಇವರ ಚಿಕ್ಕಪ್ಪನವರೂ ಆದ ಶ್ರೀ ಎಸ್. ಜಿ. ಆಚಾರ್ಯ ಅವರು ರಮೇಶ್ ಅವರಲ್ಲಿದ್ದ ಕಲಾಶಕ್ತಿಯನ್ನು ಗುರುತಿಸಿದರು. ಮಿಲಿಟರಿಗೆ ಸೇರು ವುದನ್ನು ತಪ್ಪಿಸಿದರು. ರಮೇಶರ ಕಲಾಜೀವನಕ್ಕೆ ತುಂಬ ನೆರವಾಗುತ್ತಾ ಪ್ರೋತ್ಸಾಹ ನೀಡಿದರು. ಆಗ ಅಲ್ಲಿ ೧೯೪೭ ರಿಂದ ಐದು ವರ್ಷಗಳಕಾಲ ರಾಜಕೀಯ ವ್ಯಂಗ್ಯ ಚಿತ್ರಕಾರರಾಗಿ ಜೀವನ ನಡೆಸಿದರು. ತೆಲಗು, ತಮಿಳು

ಪತ್ರಿಕೆಗಳಲ್ಲಿ ಇವರ ಚಿತ್ರಗಳು ಪ್ರಕಟವಾಗುತ್ತಾ ಬಂದುವು. ಆಗಾಗ ಅಲ್ಲಿಯ ಚಲನಚಿತ್ರ ಕ್ಷೇತ್ರದಲ್ಲೂ ಕೊಂಚಕಾಲ ಕೆಲಸಮಾಡಿದರು. ಅನಂತರ ಬೆಂಗಳೂರು ನಗರ ಇವರನ್ನು ಆಕರ್ಷಿಸಿತು. ಬೆಂಗಳೂರಿಗೆ ಬಂದು ಸ್ವತಂತ್ರರಾಗಿ ಜೀವಿಸತೊಡಗಿದರು. ಪತ್ರಿಕಾ ಪ್ರಕಟಣೆಗಳಿಗೆ ಲೇಔಟ್ (Lay out) ಹಾಕಿಕೊಡುವುದು, ರಕ್ಷಾಪತ್ರಗಳಿಗೆ ಚಿತ್ರಬರೆದು ಕೊಡುವುದು, ರೇಖಾಚಿತ್ರ ರಚಿಸಿಕೊಡುವುದು—ಈ ಬಗೆಯ ಕಲಾ ಉದ್ಯಮವನ್ನು ಸಾಗಿಸುತ್ತಾಬಂದರು. ನೂತನವಾಗಿ ಕನ್ನಡ ಅಕ್ಷರಗಳನ್ನೂ ಚಿತ್ರಿಸುವಲ್ಲಿ ಹೆಸರಾದರು. ದಿ॥ ದೇವುಡು, ಅನಕೃ, ತರಾಸು ಮುಂತಾದ ಸಾಹಿತಿಗಳ ಕೃತಿಗಳಿಗೆ ಸುಮಾರು ೧೫೦ ರಕ್ಷಾ ಪುಟದ ಚಿತ್ರಗಳನ್ನು ರಚಿಸಿದ್ದಾರೆ. ಇವರ ವ್ಯಂಗ್ಯ ಚಿತ್ರಗಳಿಂದಾಗಿ 'ಕಿಡಿ' ಹೆಚ್ಚು ಖ್ಯಾತಿಗೇರಿತು.

ರಮೇಶರಿಗೆ ಛಾಯಾ ಚಿತ್ರಕಲೆ ಬಹು ಪ್ರಿಯವಾದುದು. ಮುವತ್ತೆಂಟು ವರ್ಷದ ಗಡಿಯಲ್ಲಿರುವ ಈ ತುಂಬು ಸಂಸಾರದ ಧೃಡಕಾಯದ ಸುಂದರ ವ್ಯಕ್ತಿ ಕನ್ನಡನಾಡಿಗೆ ಕಾಲಿಟ್ಟ ಮೇಲೆ ಕನ್ನಡ ಪತ್ರಿಕಾ ವೃತಿಯ ಕಲಾ ವಿಭಾಗವು ಪ್ರಗತಿಹೊಂದಿ ಜನಪ್ರಿಯವಾಗುವಂತಾಯಿತೆಂದರೆ ಅತಿಶಯೋಕ್ತಿಯಲ್ಲ 'ರಮೇಶ್' ಎಂದು ಹೆಸರನ್ನು ಅವರು ರಚಿಸುವ ಚಿತ್ರಗಳಲ್ಲಿ ಹಾಕದೆ ಪ್ರಕಟಿಸಿದರೂ ಆ ಚಿತ್ರಗಳ ರೇಖಾವಿನ್ಯಾಸದ ಒಂದು ಮೇಲ್ಮೆಯಿಂದಾಗಿ 'ಇದು ರಮೇಶರ ಕುಂಚದಿಂದ ಹರಿದು ಬಂದ ಚಿತ್ರ' ಎಂದು ಬಾಯಿಬಿಡಿಸುತ್ತವೆ. ಪ್ರತಿಭಾನ್ವಿತ ಕಲಾವಿದ ರಮೇಶ್ ಅವರ ಕಲಾಸೇವೆಯನ್ನು ಕನ್ನಡಿಗರು ಎಂದೂ ಮರೆಯಲಾರರು.



ಜಿ. ಎಸ್. ದಂಡಾವತಿಮಠ

ಕಳೆದವರ್ಷ ಗೋವೆಯ ಪ್ರವಾಸವನ್ನು ಮುಗಿಸಿಕೊಂಡು ಹಿಂದಿರುಗುವಾಗ ಧಾರವಾಡ ಹಾಗೂ ಹುಬ್ಬಳ್ಳಿಗಳ ಕಲಾಶಾಲೆಗಳನ್ನು ನೋಡಿ ಹೋಗುವ ಆಸೆಯಾಯಿತು ಧಾರವಾಡದ ‘ಸ್ಕೂಲ್ ಆಫ್ ಆರ್ಟ್’ ಕಲಾಶಾಲೆಯ ವಿಚಾರದಲ್ಲಿ ಬಹಳ ಹಿಂದೆಯೇ ಕೇಳಿದ್ದೆ. ನನ್ನ ಹೈಸ್ಕೂಲ್ ವ್ಯಾಸಂಗದ ವೇಳೆಗೆ ಆ ಶಾಲೆಗೆ ಸೇರುವ ಆಸೆಯುಂಟಾಗಿ ವಿವರಗಳನ್ನು ತರಿಸಿಕೊಂಡಿದ್ದೆ. ಆ ವಿವರಣ ಪತ್ರದಲ್ಲಿ ಕಲಾಶಾಲೆಯ ಸುಂದರ ಛಾಯಾ

ಚಿತ್ರ ಅಚ್ಚಳಿಯದೆ ನನ್ನ ಮನಸ್ಸಿನಲ್ಲಿ ನಿಂತಿತ್ತು. ಧಾರವಾಡಕ್ಕೆ ಬಂದಾಗ ನಮ್ಮ ಬಸ್ಸು ಆ ಕಲಾಶಾಲೆಯ ಮುಂದೆಯೇ ನಿಂತಿತ್ತು. ಕುತೂಹಲದಿಂದ ಆ ಭವ್ಯಮಂದಿರವನ್ನು ನೋಡಿದೆ. ಅದರ ಸವಿವರ ಪರಿಚಯಕ್ಕಾಗಿ ಒಳಹೊಕ್ಕಾಗ ಪ್ರಿನ್ಸಿಪಾಲ್ ಹಾಲಬಾವಿಯವರು ನಸುನಗೆಯಿಂದ ಸ್ವಾಗತಿಸಿದರು. ಕಲಾಶಾಲೆಯನ್ನು ಪರಿಚಯ ಮಾಡಿಕೊಡುವ ವೇಳೆಗೆ ಆಗಂತುಕರೊಬ್ಬರು ಬಂದರು. ಹಿಂದೆ ಬಾಚಿದ ಬಿಳಿಕೂದಲು, ದುಂಡನೆ ಮುಖಕ್ಕೆ ಒಪ್ಪುವ ಕನ್ನಡಕ, ಆಕರ್ಷಿತ ವ್ಯಕ್ತಿತ್ವದ ಆ ಹೊಸಬರನ್ನು ಹಾಲಬಾವಿಯವರು ನನಗೆ ಪರಿಚಯ ಮಾಡಿಕೊಡುತ್ತ....

"ಇವರು ದಂಡಾವತಿ ಮಠ" ಎಂದಾಗ, ಒಂದೂವರೆ ದಶಕದಿಂದ ಅವರ ಹೆಸರನ್ನು ಕೇಳಿದ್ದ ನಾನು ಅವರನ್ನು ಕಂಡಾಗ ಧಾರವಾಡಕ್ಕೆ ಬಂದುದು ಸಾರ್ಥಕವಾಯಿತು ಎಂದು ಕೊಂಡೆ. ಅವರ ಕಲೆಯನ್ನು ಮೆಚ್ಚಿಕೊಂಡಿದ್ದೆ-ಭಾರತದಲ್ಲೇ ಪ್ರಮುಖ ಕಲಾಚಾರ್ಯರಾಗಿ ಅನೇಕ ಮಂದಿ ಪ್ರತಿಭಾವಂತ ಕಲಾವಿದರನ್ನು ನಾಡಿಗೆ ಒದಗಿಸಿದ ಆ ಹಿರಿಯರನ್ನು ನೋಡಿ ನನಗಾದ ಸಂತೋಷ ಅಷ್ಟಿಷ್ಟಲ್ಲ.

ಶ್ರೀ ದಂಡಾವತಿಮಠ ಅವರದು ಬೆಳಗಾಂ ಜಿಲ್ಲೆಯ ಬೈಲಹೊಂಗಲ. ಇವರ ತಂದೆ ದೈವಭಕ್ತರು. ಇವರ ತಾಯಿ ಗಂಗಾಬಾಯಿ ಗೊಂಬೆಮಾಡುವ ಕರಕುಶಲಿಯಾಗಿದ್ದರು. ಇವರ ಕಲಾಸ್ಫೂರ್ತಿಯೇ ಶ್ರೀ ದಂಡಾವತಿಮಠ ಅವರಿಗೆ ಎನ್ನಬಹುದು. ಪ್ರಾಥಮಿಕ ಶಿಕ್ಷಣ ಮುಗಿದನಂತರ ಅಮ್ಮನ ಪಟ್ಟಿ ಹಾಕುವ (Vaccinator) ವೃತ್ತಿ ಇವರಿಗೆ ದೊರಕಿತು. ಕುಳ್ಳನೆಯ ಕುದುರೆ ಏರಿ ಹಳ್ಳಿಹಳ್ಳಿ ಸುತ್ತಿ ದೇವಿಹಾಕುತ್ತಿದ್ದರು. ಬಿಡುವಿನಲ್ಲಿ ಸ್ಫೂರ್ತಿಯಿಂದ ಕಂಡದ್ದನ್ನು ರೇಖೆಗಳಲ್ಲಿ ಬಿಡಿಸುವ ಹವ್ಯಾಸವೂ ಇದ್ದಿತು. ಒಮ್ಮೆ ಧಾರವಾಡದ ಪ್ರೌಢಶಾಲಾ ಚಿತ್ರಕಲಾಧ್ಯಾಪಕರಾಗಿದ್ದ ಶ್ರೀ ನೆರಳೇಕರ್ ಅವರಿಗೆ ತಮ್ಮ ಚಿತ್ರಗಳನ್ನು ತೋರಿದರು. ಅವರು ತುಂಬಾ ಮೆಚ್ಚಿಕೊಂಡು ಕಲಾಪರೀಕ್ಷೆಗೆ ಕೂರುವಂತೆ ಮಾಡಿದರು. ಆ ಮೂಲಕ ಕೆಲಸಕ್ಕೆ ರಾಜೀನಾಮೆಯನ್ನಿತ್ತರು. ಕಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬೊಂಬಾಯಿ ಕಲಾಶಾಲೆಯನ್ನು ಸೇರುವ ಬಯಕೆಯಾಯಿತು. ರೈತಾಪಿ ತಂದೆಗೆ ಅಲ್ಲಿಯ ವೆಚ್ಚವನ್ನು ಕೊಡುವ ಶಕ್ತಿ ಇರಲಿಲ್ಲ. ಯುವಕ ದಂಡಾವತಿಯವರು ದೃಢ

ಮನಸ್ಸಿನಿಂದ ಬೊಂಬಾಯಿಗೆ ನಡೆದರು. ಅಲ್ಲಿ ಅದೃಷ್ಟಕ್ಕೆ ಕನ್ನಡಿಗ ವ್ಯಾಪಾರಿ ಶ್ರೀ ಗಂಗಾಧರಪ್ಪ, ಸಂಗಪ್ಪ, ಸಾಬೋಜಿಯವರು ಇವರ ಸಹಾಯಕ್ಕೆ ಮುಂದೆಬಂದರು.

ಬೊಂಬಾಯಿಯ ಜೆ. ಜೆ. ಕಲಾಶಾಲೆಯನ್ನು ಶ್ರೀಯುತರು ೧೯೨೩ ರಲ್ಲಿ ಸೇರಿದರು. ಈ ನಡುವೆ ಇವರ ತಂದೆ ೧೯೨೮ ರಲ್ಲಿ ತೀರಿಕೊಂಡ ಎರಡು ವರ್ಷದಲ್ಲೇ ತಾಯಿಯವರೂ ತೀರಿಕೊಂಡರು. ಇವರ ಅಭ್ಯಾಸಕ್ಕೆ ಕೊಂಚ ಅಡ್ಡಿ ಬಂದಿತು. ಕೊನೆಗೆ ೧೯೩೧ರಲ್ಲಿ ಡಿಪ್ಲೊಮಾ ಪಡೆದರು. ಇದೇ ಸಮಯದಲ್ಲಿ ಇಂಗ್ಲೆಂಡ್ ರಾಯಲ್ ಅಕಾಡಮಿಯಲ್ಲಿ ಕಲಾಶಿಕ್ಷಣ ಮುಗಿಸಿ ಬಂದ ಬಡಿಗೇರ ಮತ್ತು ಮಂಗಳೂರಿನ ವಿ. ಆರ್. ರಾವ್ ಅವರು ಬೊಂಬಾಯಿಯಲ್ಲಿ 'ನೂತನ ಕಲಾ ಮಂದಿರ'ವನ್ನು ಸ್ಥಾಪಿಸಿದ್ದರು. ೧೯೩೨ ನೇ ನವೆಂಬರ್ ೧೦ ರಲ್ಲಿ ಅಲ್ಲಿ ಅವರ ಸಹಾಯಕ ಕಲಾಶಿಕ್ಷಕರಾಗಿ ದಂಡಾವತಿಯವರೂ ಸೇರಿಕೊಂಡರು. ೧೯೩೩ ರಲ್ಲಿ ಬಡಿಗೇರ ಅವರು ಮುಂಬಯಿ ಚಿತ್ರಕಲಾ ಪರೀಕ್ಷೆಗಳ ಅಧಿಕಾರಿಗಳಾದಾಗ ಕಲಾಮಂದಿರದ ನಿರ್ವಹಣೆಯ ಜವಾಬ್ದಾರಿ ಶ್ರೀ ರಾವ್ ಮತ್ತು ದಂಡಾವತಿಯವರಿಗೆ ಬಿದ್ದಿತು. ನಂತರ ಶ್ರೀ ರಾವ್ ಅವರು ಲಂಡನ್ನಿಗೆ ತಮ್ಮ ಪತ್ನಿಸಮೇತ ಅಲ್ಲೇಯೇ ನೆಲೆಸಲು ತೆರಳಿದರು. ಆಗ ದಂಡಾವತಿಯವರಿಗೆ ನಿರಾಶೆಯ ವಾತಾವರಣ ಬಂದರೂ ಎದೆಗುಂದಲಿಲ್ಲ. ಶಾಲೆಯನ್ನು ನಡೆಸಲು ಮುಂದೆ ಬಂದರು. ಕೇವಲ ನಾಲ್ಕೇ ನಾಲ್ಕು ಕಲಾವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಕಲಾ ಮಂದಿರದಿಂದ ಮೂವತ್ತು ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಹೊರ ಬಂದಿದ್ದಾರೆ. ಕೆಲವರು ವಿಶ್ವವಿಖ್ಯಾತಿಗೇರಿದ್ದಾರೆ. ಇದು ಶ್ರೀಯುತರ ತ್ಯಾಗಮಯ ಜೀವನದ ಫಲ.

ಶ್ರೀ ಕೃಷ್ಣ ಹೆಬ್ಬಾರ (ಈಗ ಪದ್ಮಶ್ರೀ), ಲಕ್ಷಣ ಪೈ, ಎ. ಎ. ಆಲಮೇಲಕರ, ರಘೂ, ಎಸ್. ಎಂ. ಪಂಡಿತ್–ಇವರೇ ಮುಂತಾದವರು ಶ್ರೀ ದಂಡಾವತಿಯರ ನೂತನ ಕಲಾಮಂದಿರದ ಕುಲುಮೆಯಲ್ಲಿ ಕಾದು ರೂಪಗೊಂಡವರು ಈ ಕಲಾಶಾಲೆಯ ರಜತಮಹೋತ್ಸವಕ್ಕೆ ಅಂದಿನ ಬೊಂಬಾಯಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ಎಂ. ಸಿ. ಚಾಗ್ಲಾ ಅವರೂ ೧೯೫೮ ರಲ್ಲಿ ಬಂದಿದ್ದರು.

೧೯೩೨ ರಿಂದ ೪೦ ರ ತನಕ ಶ್ರೀ ದಂಡಾವತಿಯವರು ಕರ್ನಾಟಕದ ಆರ್ಟ್ ಸೊಸೈಟಿಯ ಕಾರ್ಯದರ್ಶಿಗಳಾಗಿದ್ದರು. ಬೊಂಬಾಯಿಯ ಆರ್ಟ್ ಇನ್‌ಸ್ಟಿಟ್ಯೂಟ್ ಪೆಡರೇಷನ್ ಅಧ್ಯಕ್ಷರಾಗಿ ದುಡಿದರು. ಕಾಶಿ ಹಿಂದೂ ವಿಶ್ವವಿದ್ಯಾಲಯದ ಕಲಾವಿಭಾಗದ ಶಾಲೆಗೆ ಶಿಕ್ಷಕರನ್ನು ಆರಿಸುವ ಸಮಿತಿಯಲ್ಲಿ ಸದಸ್ಯರಾಗಿದ್ದರು. ಸಮ್ಮಿಶ್ರ ಬೊಂಬಾಯಿ ರಾಜ್ಯದ ಚಿತ್ರಕಲಾ ಪರೀಕ್ಷೆಗಳ ಸುಧಾರಕ ಹಾಗೂ ಹಾಗೂ ಪರೀಕ್ಷಕರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು.

ಇವರ ಕಲೆಗಾರಿಯೂ ಬಹು ಬೆಲೆಯುಳ್ಳದ್ದು. ತೈಲವರ್ಣದ ರೂಪ ಚಿತ್ರ ರಚನೆಯಲ್ಲಿ ಇವರ ಕುಂಚ ಉತ್ತಮ ಸಾಧನೆಯನ್ನು ಗಳಿಸಿದೆ. ಕಲ್ಕತ್ತ, ಬೊಂಬಾಯಿ, ಮದರಾಸು, ಮೈಸೂರು ಕಲಾಪ್ರದರ್ಶನಗಳಲ್ಲಿ ಇವರ ಕೃತಿಗಳಿಗೆ ಬಹುಮಾನಗಳನೇಕವು ಆಗಲೇ ಬಂದಿದ್ದುವು. ೧೯೩೫ರಲ್ಲಿ ಇವರ ಚಿತ್ರಕ್ಕೆ ಕರ್ನಾಟಕ ಆರ್ಟ್ ಸೊಸೈಟಿಯ ಸುವರ್ಣಪದಕವೂ ದೊರೆತಿದ್ದಿತು.

ಶ್ರೀಯುತರು ಉದಾರಿಗಳು. ಸರಳ ಜೀವಿಗಳು. ಕರುಣಾಳುಗಳು. ಇವರ ಪುತ್ರ ಶಶಿಧರ ಮತ್ತು ವಾಸು ಚಿತ್ರ-ಶಿಲ್ಪಕಲೆಯ ಪರಿಶ್ರಮ ಪಡೆದವರಾಗಿದ್ದಾರೆ. ಓರ್ವ ಪುತ್ರಿ ಕೂಡ ಕಲಾಸಕ್ತಿ ಇರುವವರೇ. ಒಳ್ಳೆಯ ಉನ್ನತ ಗುಣಸಂಪನ್ನರಾಗಿ ಶ್ರೀ ದಂಡಾವತಿಮಠ ಅವರನ್ನು ಯಾರೊಬ್ಬರೂ ಪ್ರೀತಿಸುವವರೇ, ಗೌರವಿಸುವವರೇ ಆಗಿದ್ದಾರೆ.

ಇದೇ ೧೯೬೬ ರ ಏಪ್ರಿಲ್ ತಿಂಗಳಲ್ಲಿ ಕಲಾವೃತ್ತಿಯಿಂದ ನಿವೃತ್ತರಾದ ಶ್ರೀ ಯುತರನ್ನು ಆ ಕಲಾಮಂದಿರದ ಅಪಾರ ವಿದ್ಯಾರ್ಥಿ ಕಲಾವೃಂದ ಸನ್ಮಾನಿಸಿ ಗೌರವಿಸಿತು. ಈಗ ಧಾರವಾಡದಲ್ಲಿರುವ ತಮ್ಮ ಸ್ವಗೃಹದಲ್ಲಿ ಶಾಂತಚಿತ್ತರಾಗಿ ಕಲಾಮಯ ಜೀವನವನ್ನು ಮುಂದುವರಿಸುತ್ತಿದ್ದಾರೆ. ಕರ್ನಾಟಕದಿಂದ ದೂರವಿದ್ದುಕೊಂಡೇ ಈ ತನಕ ಚಿತ್ರಕಲೆಗೆ ಅನೋಘವಾದ ಕಲಾಸೇವೆಸಲ್ಲಿಸಿದ ಈ ಕಲಾಯೋಗಿಗೆ ಕನ್ನಡ ಜನತೆ ಏಕೆ ಭಾರತ ಎಷ್ಟು ಋಣಿಯಾದರೂ ಸಾಲದು.

ಎಂ. ಟಿ. ವಿ. ಆಚಾರ್ಯ

ಯದುಗಿರಿಯ ಆ ಭವ್ಯ ದೃಶ್ಯವನ್ನು ಯಾರು ಮರೆಯಲು ಸಾಧ್ಯ! ಆ ವಿಶಾಲವಾದ ಕಲ್ಯಾಣಿ, ಸುತ್ತುಮಂಟಪದ ಆಕರ್ಷಣೆ, ಸುಂದರ ಸೋಪಾನಗಳು, ಸುನೀಲಬಾನನ್ನು ಪ್ರತಿಬಿಂಬಿಸುತ್ತಿರುವ ಶ್ರೀ ನರಸಿಂಹಗಿರಿಯ ಶಿಖರ....ಕಲಾವಿದ ತನ್ಮಯನಾಗುವ ಅಪೂರ್ವ ನೆಲೆಯದು!

ನನ್ನ ಮೆಚ್ಚಿನ ವರಕವಿ ಪು. ತಿ. ನ. ಅವರ ಊರಾದ ಮೇಲುಕೋಟೆಯ ಇಂಥ ಪ್ರಕೃತಿ ಸೌಂದರ್ಯ ನನ್ನನ್ನು ಬಹುವಾಗಿ ಆಕರ್ಷಿಸಿದೆ.

ಅನೇಕ ಬಾರಿ ಅಲ್ಲಿಗೆ ಮಿತ್ರ ವೇಣುಗೋಪಾಲ್ ಅವರೊಂದಿಗೆ ಹೋಗಿ ಬರುವ ಅವಕಾಶವೂ ದೊರೆತಿವೆ. 'ಚೆನ್ನಿಗ ಚೆಲುವಯ್ಯ' ಜಾನಪದ ಗೀತೆಗಳ ಕೃತಿಗೆ ಆ ಪ್ರಕೃತಿಚಿತ್ರ ಬೇಕಿದ್ದಿತು. ಗೆಳೆಯ ಕರಾಕೃ ನಾನು ಒಮ್ಮೆ ಅಲ್ಲಿಗೆ ಹೋಗಿದ್ದೆವು. ಆ ಕೊಳದ ಒಳಾಂಗಣದಲ್ಲಿನ ಮೂಲೆಯ ಮಂಟಪದಲ್ಲಿ ಕುಳಿತು ಚಿತ್ರ ಬಿಡಿಸುತ್ತಿದ್ದೆ. ಕೊಳದಲ್ಲಿ ಸ್ನಾನಮಾಡಿ ಹಿಂಡಿದ ಮಡಿಪಂಚೆಯ ಗಂಟನ್ನು ತಲೆಯಮೇಲೆ ಹೊತ್ತ ಮೇಲುಕೋಟೆಯ ಅಯ್ಯಂಗಾರ್ಯರೊಬ್ಬರು ಮೆಟ್ಟಿಲುಗಳನ್ನೇರಿ ನನ್ನ ಕಡೆಗೆ ಬಂದರು. ಸ್ವಲ್ಪ ಹೊತ್ತು ನನ್ನ ಚಿತ್ರವನ್ನೇ ನೋಡಿ—ಪ್ರಶ್ನಿಸಿದರು—

"ತಮಗೆ ನಮ್ಮ ಆಚಾರ್ಯರ ಪರಿಚಯವಿದೆಯೇ ?"

ಅವರು ಕೇಳುವ ಆಚಾರ್ಯ ಯಾರೆಂಬುದು ನನಗೂ ಅರ್ಥವಾಗದಿರಲಿಲ್ಲ ಕಲಾವಿದ ಎಂ. ಟಿ. ವಿ. ಆಚಾರ್ಯರನ್ನೇ ಅವರು ವಿಚಾರಿಸುತ್ತಿರುವುದೆಂದು ತಿಳಿದೆ. ಆಚಾರ್ಯರ ಮಾತು ಬಂದಾಕ್ಷಣ ಇದೇ ಕಲ್ಯಾಣಿಯ ಅವರು ರಚಿಸಿದ್ದ ಚಿತ್ರ ತಟ್ಟನೆ ನೆನಪಾಯಿತು ನನಗೆ ಆ ಚಿತ್ರವನ್ನು ಹಿಂದೊಮ್ಮೆ ದಸರ ಪ್ರದರ್ಶನದಲ್ಲಿ ಕಂಡ ನೆನಪು. ಆಚಾರ್ಯರು ಪ್ರಕೃತಿ ಚಿತ್ರದಲ್ಲಿ ಸಿದ್ಧ ಹಸ್ತರೆಂದು ಹೇಳಲು ಇದೊಂದು ಕೃತಿ ಸಾಕೆನಿಸುವಂತಿತ್ತು. ಇಂಥ ಅಪೂರ್ವ ನೈಸರ್ಗಿಕ ನೆಲೆಯ ಸ್ಫೂರ್ತಿಯಿಂದ ಬಂದ ಶ್ರೀ ಆಚಾರ್ಯರು ನಿಸರ್ಗ ಕಲಾವಿದರಾಗಿ ಕೀರ್ತಿಗಳಿಸಬಹುದಿತ್ತು. ಆದರೆ ಅವರು ಕಲೆಯ ಬೇರೊಂದು ಪ್ರಕಾರದಲ್ಲಿ ಉತ್ತಮ ಸಿದ್ಧಿಯನ್ನು ಪಡೆದಿದ್ದಾರೆ. ಐತಿಹಾಸಿಕ ಹಾಗೂ ಚಾರಿತ್ರಿಕ ಸಂಯೋಗ ಚಿತ್ರರಚನೆಯಲ್ಲಿ ಶ್ರೀಯುತರು ಖ್ಯಾತರಾಗಿದ್ದಾರೆ. ಇದಕ್ಕೆ ಅವರು ಬೆಳೆದುಬಂದ ಸನ್ನಿವೇಶವೂ ಪೂರಕವಾಗಿದೆ.

ಮೈಸೂರಿನ ಖ್ಯಾತ ವಿದ್ವಾಂಸರಾದ ಜಯರಾಮ ವೆಂಕಟಾಚಾರ್ಯ ಮತ್ತು ಜಗು ವೆಂಕಟಾಚಾರ್ಯರ ವಂಶದಲ್ಲಿ ಆಚಾರ್ಯರು ೧೯೨೦ ರಲ್ಲಿ ಜನಿಸಿದರು. ಬಡತನದಲ್ಲಿ ಬಾಳಿ ಇವರ ಮಾವನವರಾದ ಶ್ರೀ ಎಂ. ಜೆ. ನಾರಾಯಣಯ್ಯಂಗಾರ್ಯರ ಆಶ್ರಯ ದೊರೆತು ವಿದ್ಯಾಭ್ಯಾಸಮಾಡಿದರು. ಯೋಗಾಭ್ಯಾಸವನ್ನೂ ನಡೆಸಿದರು. ಇದು ಆತ್ಮಶೋಧನೆಗೆ ವಿಚಾರಶೀಲತೆಗೆ ನಾಂದಿಯಾಯಿತು. ಎಸ್. ಎಸ್. ಎಲ್. ಸಿ. ಹಾಗೂ ಹಿಂದಿ, ರಾಷ್ಟ್ರಭಾಷಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಆಸಕ್ತಿ

ಇದ್ದುದರಿಂದ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿ ೧೯೪೦ ರಲ್ಲಿ ಕಲಾಭ್ಯಾಸವನ್ನು ಮುಗಿಸಿದರು. ವಿದ್ಯಾರ್ಥಿದೆಶೆಯಲ್ಲಿ ದಸರಾ ಕಲಾ ಪ್ರದರ್ಶನದ ಉತ್ತಮ ಕೃತಿಗಳು ಇವರಿಗೆ ಮಾರ್ಗದರ್ಶನ ನೀಡಿದುವು. ಆಗ ಇವರ ಕೃತಿಗಳಿಗೂ ಅಲ್ಲಿ ಬಹುಮಾನ ಬಂದುವು. ರಾಜರ ಆಪ್ತಕಾರ್ಯದರ್ಶಿ 'ಸರ್‌ಚಾರ್ಲ್‌ಸ್ ಟಾಡ್‌ಹಂಟರ್'ರವರು ಇವರನ್ನು ಕರೆಯಿಸಿ ರಾಜರಿಗೆ 'ಕಾರ್ಡ್ ಡಿಸೈನನ್ನು' ಮಾಡಿಸಿಕೊಂಡು ಬಹುವಾಗಿ ಉತ್ತೇಜಿಸಿದರು. ಅಂದಿನಿಂದ ಇವರ ಹೃದಯದಲ್ಲಿ ಪಾಶ್ಚಾತ್ಯ ಚಿತ್ರಕಾರರ ಹಾಗೂ ನಮ್ಮವರ ಕಲಾದೃಷ್ಟಿ ಮುಂತಾದುವುಗಳ ಬಗ್ಗೆ ವಿಚಾರಮಥನ ನಡೆಯುತ್ತಿತ್ತು. ಪಾಶ್ಚಾತ್ಯರು ಧರ್ಮ ಸಂಸ್ಕೃತಿಗಳಿಗಾಗಿ ಬೈಬಲ್ ಮುಂತಾದ ಧಾರ್ಮಿಕ ವಸ್ತುಗಳನ್ನು ಅನುಸರಿಸಿ ಚಿತ್ರಗಳನ್ನು ರಚಿಸಿ ಕೀರ್ತಿವಂತರಾದರು. ಹಾಗೆಯೇ ಇವರಿಗೆ ತಾವು ಕಲಿತ ಕಲೆ ಸಾರ್ಥಕವಾಗಬೇಕಾದರೆ ನಮ್ಮ ಸಂಸ್ಕೃತಿಯನ್ನು ಕಲೆಯ ಮೂಲಕ ವ್ಯಕ್ತಪಡಿಸಬೇಕೆಂದೆನಿಸಿದ್ದು ಸಹಜವಾದುದು.

ಈ ರೀತಿಯ ಸ್ಫೂರ್ತಿಯನ್ನು ಪಡೆದು ಕಲಾಶಾಲೆಯಿಂದ ಹೊರಬಂದೊಡನೆಯೇ ಇವರಿಗೆ ನಮ್ಮ ಕಲಾವಿದರ ಬಾಳು, ಸ್ಥಾನಮಾನಗಳನ್ನು ಅರಿತು ನಿರಾಶೆಯಾಯಿತು. ಆಗ ದ್ವಿತೀಯ ಮಹಾಯುದ್ಧದ ಸಮಯ ಆಚಾರ್ಯರು ವಿಮಾನದಳವನ್ನು ಸೇರಿಕೊಂಡರು. ಮನೆಯವರಿಂದಾಗಿ ಅದನ್ನೂ ಬಿಟ್ಟರು. ಆದರೆ ಬೆಂಗಳೂರು ವಿಮಾನ ಕಾರ್ಖಾನೆಗೆ ೧೯೪೩ ರಲ್ಲಿ ಸೇರಿದರು. ಅಲ್ಲಿ ಪ್ರಗತಿ ತೋರಿದರು ಅಲ್ಲಿದ್ದ ಅಮೇರಿಕದ ಅಧಿಕಾರಿ ಇವರ ಕಲೆಗಾರಿಕೆಯನ್ನು ಮೆಚ್ಚಿ ಇವರ ಅನೇಕ ಕೃತಿಗಳನ್ನು ಕೊಂಡು ಪ್ರೋತ್ಸಾಹಿಸಿದರು. ಕಲಾಭ್ಯಾಸದಲ್ಲಿ ಮುಂದುವರಿಯಲು ಅವರು ಆಚಾರ್ಯರನ್ನು ಹರಸಿ ಬೀಳ್ಕೊಟ್ಟರು. ಆತ್ಮ ವಿಶ್ವಾಸ ಮೂಡಿತು, ಕಲಾಭ್ಯಾಸ ಸಾಗಿತು. ಚಿಂತೆ ಮತ್ತೆ ವಿಹಾರಿಸಿಂತಿತು. ದಾರಿ ತೋರಲು ದೇವರನ್ನು ಆತ್ಮಸಾಕ್ಷಿಯಾಗಿ ಕೋರಿದರು. ಒಮ್ಮೆ ಇವರ ಸ್ವಪ್ನದಲ್ಲಿ ಶ್ರೀಹರಿ ಕಾಣಿಸಿಕೊಂಡು 'ನಿನ್ನ ಉದ್ದೇಶ ನೆರವೇರುವುದು ಆಮೇಲೆ ಬಾ' ಎಂದು ಅಭಯಿಸಿತ್ತಂತಾಯಿತು. ಅಂದೇ ಆಚಾರ್ಯರು ತಮ್ಮ ಡೈರಿಯಲ್ಲಿ ಅದನ್ನು ಬರೆದಿಟ್ಟರು. ಇದು ನಿಜವಾಗುವ ಕಾಲವನ್ನು ಕಾಯುತ್ತಾ ಬಂದರು ಅಭ್ಯಾಸ ಸಾಗುತ್ತಾ ಬಂತು

ಆಗ ಇವರ ಚಿತ್ರವೊಂದು ಹೇಗೋ ಪ್ರಮುಖ ಸರ್ಕಾರಿ ಅಧಿಕಾರಿಗಳೊಬ್ಬರ ಕೈ ಸೇರಿತು. ಅವರು ಶ್ರೀಯುತರನ್ನು ಬರಮಾಡಿಕೊಂಡರು ಮದರಾಸಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ವಿ. ವಿ. ಶ್ರೀನಿವಾಸಯ್ಯಂಗಾರ್ಯರಿಗೆ ಪರಿಚಯಮಾಡಿಕೊಟ್ಟರು. ಅವರಿತ್ತ ಒಂದು ಪರೀಕ್ಷೆಯಿಂದಾಗಿ ಅವರು ಸಂತೋಷಗೊಂಡು " ನೀನೊಬ್ಬ ಉತ್ತಮ ಕಲಾವಿದ. ಬೆಂಗಳೂರಿನಲ್ಲೇಕೆ ಇರುವೆ. ಇಲ್ಲಿ ಕಲೆಗೆ ಯಾವ ಪ್ರೋತ್ಸಾಹವಿದೆ? ಮದರಾಸಿಗೆ ನನ್ನೊಡನೆ ಬಾ"—ಎಂದು ಅವರೊಡನೆ ಆಚಾರ್ಯರನ್ನು ಕರೆದುಕೊಂಡು ಹೋಗಿ ಅವರಲ್ಲೇ ಇಟ್ಟುಕೊಂಡು ಉತ್ತೇಜನಕೊಟ್ಟರು. ಅಲ್ಲಿ ಇವರ ಕೃತಿಗಳ 'ಒನ್ ಮ್ಯಾನ್ ಷೋ' ಪ್ರದರ್ಶನ ಏರ್ಪಡಿಸಿದವರೂ ಅವರೇ. ಈ ಸಂದರ್ಭದಲ್ಲಿ ಹಿರಿಯ ನ್ಯಾಯಾಧೀಶರಾದ ಪಿ. ವಿ. ರಾಜಮನ್ನಾರ್ ಅವರು ಆಚಾರ್ಯರ ಕಲಾಕೃತಿಗಳನ್ನು ಮುಕ್ತ ಕಂಠದಿಂದ ಕೊಂಡಾಡಿದರು. ಈ ಸಮಾರಂಭಕ್ಕೆ ಬಂದಿದ್ದ 'ಚಂದಮಾಮ' ಪತ್ರಿಕೆಯ ಮಾಲಿಕರಾದ ಶ್ರೀ ನಾಗಿರೆಡ್ಡಿ ಚಕ್ರಪಾಣಿಯವರ ಗಮನಕ್ಕೂ ಬಂದರು ಆಚಾರ್ಯರು. ಇವರನ್ನು 'ಚಂದಮಾಮ' ಮುಖ ಪುಟಗಳ ಚಿತ್ರರಚಿಸುವ ಕಲಾವಿದರನ್ನಾಗಿ ಆಹ್ವಾನಿಸಿದರು ಶ್ರೀ ರೆಡ್ಡಿಯವರು. ಜೊತೆಗೆ ಕನ್ನಡ 'ಚಂದಮಾಮ' ಪತ್ರಿಕೆಯ ಸಂಪಾದಕತ್ವವು ಇವರ ಪಾಲಿಗೇ ಮೀಸಲಾಯಿತು. ಆ ಮೂಲಕ ರಾಮಾಯಣ, ಭಾಗವತ, ಮಹಾಭಾರತ ಚಿತ್ರಗಳ ಪರಂಪರೆಯನ್ನು ರೂಪಿಸುತ್ತಾ ಬಂದರು. ಇಲ್ಲಿ ಹಿಂದೆ ಇವರಿಗೆ ಬಿದ್ದ ಸ್ವಪ್ನದ ನೆನಪಾಗಿ ಶ್ರೀ 'ಹರಿಯ ಕೃಪೆಯನ್ನು ಭಕ್ತಿಯಿಂದ ನೆನೆದುಕೊಂಡರು.

ಈ ನಡುವೆ ಕಲಕತ್ತ ಕಲಾದರ್ಶನದಲ್ಲಿ ೧೯೪೭ ರಲ್ಲಿ ಇವರ ೬ ಚಿತ್ರಗಳ ಒಂದು ಸೆಟ್ಟಿಗೆ ಒಟ್ಟಾಗಿ ಅಕಾಡಮಿಯ ಬಹುಮಾನ ಬಂದಿತು. ೧೯೫೪ರ ರಲ್ಲಿ ಇವರ 'ಸಮುದ್ರಗುಪ್ತನ ರಾಜಾಸ್ಥಾನ' ಕೃತಿಗೆ ಮೈಸೂರು ದಸರಾ ಪ್ರದರ್ಶನದಲ್ಲಿ ಕಮಿಟಿಯ ಚಿನ್ನದ ಪದಕವೂ ಲಭಿಸಿತು. ಇವರ 'ಹಳ್ಳಿಯ ಉಪಾಧ್ಯಾಯ' ಬಹು ಹೆಸರುಗಳಿಸಿದ ಚಿತ್ರ. ಭಾರತದ ನಾನಾ ಭಾಷಾ ಪತ್ರಿಕೆಗಳಲ್ಲಿ ಈ ಕೃತಿ ಬೆಳಕುಕಂಡು ಶ್ರೀ ಆಚಾರ್ಯರ ಕಲಾ ಕೀರ್ತಿ ಮೆರೆಯುವಂತಾಯಿತು. 'ಮಹಾಭಾರತ ಚಿತ್ರ ಪರಂಪರೆಯು ನನ್ನ ಜೀವನದ ಒಂದು ವಿಶಿಷ್ಟಸಾಧನೆಯೆನ್ನಬಹುದು. ದೈವಾನುಗ್ರಹ ಇಲ್ಲದಿದ್ದರೆ

ಈ ಕಾರ್ಯ ನನ್ನಿಂದ ಎಂದೂ ಸಾಧ್ಯವಾಗುತ್ತಿರಲಿಲ್ಲ. ಇದರಿಂದ ನನಗೆ ಸಮಾಧಾನ ಶಾಂತಿ ದೊರಕಿದೆ '—ಎನ್ನುತ್ತಾರೆ ಆಚಾರ್ಯರು. ೧೯೫೫ ರಲ್ಲಿ ಬೆಂಗಳೂರು, ಬೊಂಬಾಯಿಗಳ ಪ್ರಮುಖ ಗ್ಯಾಲರಿಗಳಲ್ಲಿ ಇವರ ಕೃತಿಗಳು ಪ್ರದರ್ಶನವಾಗಿ ಜನಮನವನ್ನ ಸೂರೆಗೊಂಡವು. ೧೯೬೩ ರ ಮೈಸೂರು ದಸರಾ ಪ್ರದರ್ಶನದಲ್ಲಿ ಇವರ ಕಾಳಿದಾಸ ಋತುಸಂಹಾರದ 'ವಸಂತ' ಎಂಬ ಚಿತ್ರಕ್ಕೆ ಪ್ರಥಮ ಬಹುಮಾನ ದೊರೆಯಿತು. ಇವು ಇವರ ಉತ್ತಮ ಕೃತಿಗಳಾಗಿ ರಾರಾಜಿಸುತ್ತಿವೆ. ಶ್ರೀಯುತರು ಜಲವರ್ಣದಲ್ಲಿ ಬಹು ಹಿರಿಮೆಯನ್ನು ತೋರುತ್ತಾ ಬಂದಿದ್ದಾರೆ.

'ತಾಯಿನಾಡು' ಸಂಸ್ಥೆಯಿಂದ ಆಹ್ವಾನಿತರಾಗಿ ೧೯೬೩ ರಲ್ಲಿ ಕಲಾ ವಿಭಾಗದ ಪ್ರಮುಖ ಕಲಾವಿದರಾಗಿ ಮುವತ್ತು ತಿಂಗಳಕಾಲ ಸೇವೆ ಸಲ್ಲಿಸಿದ ಆಚಾರ್ಯರಿಗೆ ಮತ್ತೆ ಜೀವನದ ಕಹಿ ಅನುಭವಗಳು ತಲೆದೋರು ವಂತಾಯಿತು ಧೈರ್ಯಗೆಡದೆ ತಮ್ಮ ಕೃತಿಗಳನ್ನು ಬೆಂಗಳೂರು, ಹಾಸನ ಗಳಲ್ಲಿ ಪ್ರದರ್ಶಿಸಿದರು. ಇವರ ಕೃತಿಗಳನ್ನು ಜನ ಕ್ಯೂ ನಿಂತು ನೋಡಿದ ಒಂದು ಸಂದರ್ಭವನ್ನು ಕನ್ನಡಿಗರು ಮರೆಯುವಂತಿಲ್ಲ.

ಆಚಾರ್ಯರು ನವ್ಯಕಲೆಯ ಬಗ್ಗೆ ಈ ರೀತಿ ನುಡಿಯುತ್ತಾರೆ ' ಈಗಿನ ನವ್ಯ ಕಲಾಕೃತಿಗಳು ನಮ್ಮ ದೇಶಕ್ಕೆ ಏಳುತಿಂಗಳಲ್ಲಿ ಹುಟ್ಟಿದ ಕೂಸಿನಂತೆ. ಅಡಿಪಾಯ ಇಲ್ಲದ ಕಟ್ಟಡ ಕಟ್ಟಿದಂತೆ. ನಮ್ಮ ಅಪೂರ್ವವಾದ ಕಲಾ ಸಾಧನೆಯಲ್ಲಿ ನಮ್ಮ ಪೂರ್ಣ ಸಂಸ್ಕೃತಿ ಜನಜೀವನ ಪೂರ್ಣ ಪ್ರತಿಬಿಂಬಿಸುವ ಮುನ್ನವೇ ಬಂದ ಅವಸರದ ಸಿಡುಗು—ಅಲ್ಲದೆ ಕಲಾವಿದರು ತಾವು ಜನತೆಗೆ ಉಪಯೋಗಿಗಳು ಎಂದು ಸಾಧಿಸುವ ಮುನ್ನವೇ ಜನರಿಂದ ದೂರ ಸರಿಯುವ ಸಾಧನವಾಗಿ ನಮ್ಮ ದೇಶದ ಕಲೆ ಮತ್ತು ಕಲಾವಿದರಿಗೆ ದೊಡ್ಡ ಅಪಚಾರದ ಕುರುಹೆಂದು ಭಾವಿಸಬೇಕು "—ಎಂದ

ಕರ್ನಾಟಕದ ಮೇಧಾವಿ ಕಲಾವಿದರಲ್ಲಿ ಶ್ರೀ ಎಂ. ಟಿ. ವಿ ಆಚಾರ್ಯರು ತಮ್ಮದೇ ಆದ ಸ್ಥಾನವನ್ನು ಪಡೆದಿದ್ದಾರೆ; ಕನ್ನಡನಾಡು ಅವರ ಕಲಾ ಸಿದ್ಧಿಯ ಪೂರ್ಣ ಫಲವನ್ನು ಪಡೆಯುವಂತಾಗಲಿ.

ಕಮಲಾಗೌಡ

ತಂದೆ ತನ್ನ ಪುಟ್ಟ ಕುವರಿಯನ್ನು ಪಾಠಕ್ಕೆ ಕೂರಿಸಿ ಎಲ್ಲಿಯಾದರೂ ಹೋದರೆ ಸಾಕು ಆ ಬಾಲಿಕೆ ಚಿತ್ರ ಬರೆಯುವುದರಲ್ಲಿ ಪಾಠವನ್ನೇ ಮರೆಯುತಿದ್ದಳು. ಮೊದಮೊದಲು ಈ ಪುತ್ರಿ ಚಿತ್ರಗಳನ್ನು ಚೆನ್ನಾಗಿ ಬರೆಯುವಳೆಂಬ ಜಂಭದಿಂದ ತಾಯಿ ಮನೆಗೆ ಬಂದವರ ಹತ್ತಿರವೆಲ್ಲ ತನ್ನ ಕುವರಿಯನ್ನು ನಿಲ್ಲಿಸಿ ಆಕೆ ಬರೆದ ಅರೆಬರೆಯ ಚಿತ್ರಗಳನ್ನೆಲ್ಲಾ ಒಂದೊಂದಾಗಿ ಅಭಿಮಾನದಿಂದ ತೋರಿಸುತ್ತಿದ್ದರು. ಜನರು ನೋಡಿ

ಶಾಭಾಷ್ ಎನ್ನುತ್ತಿದ್ದರು. ಅವರು ಹೀಗೆ ಅಂದಷ್ಟೂ ಹುಡುಗಿಗೆ ಅದರಲ್ಲೇ ಹೆಚ್ಚು ಆಸಕ್ತಿ ಮೂಡುವಂತಾಯಿತು. ಹೀಗೆ ಕುವರಿ ಚಿಕ್ಕಂದಿನಲ್ಲೇ ಓದಿನ ಕಡೆ ಕೊಂಚ ಅಶ್ರದ್ಧೆಯನ್ನೂ ಕಲೆಯಲ್ಲಿ ಹೆಚ್ಚು ಅಭಿಲಾಷೆಯನ್ನು ತೋರಿದಳು.

ಬೆಂಗಳೂರಿನ ಕಮಲಾಕ್ಷಿಯವರು 'ಕಮಲಾಗೌಡ' ಎಂದೇ ಚಿತ್ರ ರಂಗದಲ್ಲಿ ತಮ್ಮ ಹೆಸರನ್ನು ಬಳಸುತ್ತಾರೆ. ಪ್ರಭಾವಿ ಚಿತ್ರಕಲಾಸಾಧಕಿಯಾಗಿ ಉತ್ತಮ ಭವಿಷ್ಯವನ್ನು ತಮ್ಮ ಕಲಿಕೆಯ ಕೃತಿಗಳ ಮೂಲಕ ವ್ಯಕ್ತ ಪಡಿಸಿದ್ದಾರೆ. ಹೆಚ್ಚಿನ ಶ್ರದ್ಧೆ ಅಭ್ಯಾಸವನ್ನು ಇವರ 'ಸ್ತಬ್ಧ' ಚಿತ್ರಗಳಲ್ಲಿ ಮೆರೆದಿದ್ದಾರೆ. ಟೆಂಪ್‌ಪೌಡರಿನ ಕಲೆಗಾರಿಕೆಯಲ್ಲೂ ಇವರು ಆಸಕ್ತಿ ತೋರಿ ನೆಹರು, ಗಾಂಧಿ, ಮುಂತಾದವರ ರೂಪಚಿತ್ರಗಳನ್ನು ಬಹು ಸುಂದರವಾಗಿ ಅನುಕರಿಸಿದ್ದಾರೆ. ನಿಸರ್ಗ ಚಿತ್ರರಚನೆ ಎಂದರೆ ಅಪಾರ ಪ್ರೀತಿ ತೋರುತ್ತಾರೆ. ಸೃಜಕಲೆ ಅದರಲ್ಲೂ ಭಾರತೀಯ. ಚಿತ್ರ ಸಂಪ್ರದಾಯ ಕಲೆಗಾರಿಕೆ ಎಂದರೆ ಇವರಿಗೆ ಅತಿಯಾದ ವಾತ್ಸಲ್ಯ. ಚಿತ್ರಲೋಕದಲ್ಲಿ ಕಮಲಾಕ್ಷಿಯವರ ಪ್ರತಿಭೆ ಅರಳುವ ಕಮಲದಂತಿದೆ.

ಕುಮಾರಿ ಕಮಲಾಕ್ಷಿಯವರು ಬೆಳೆದು ಬಂದ ಮನೆತನವೂ ಅಪೂರ್ವ ವಾದುದು. ಇವರದು ಹೊಸಕೋಟೆ ತಾಲ್ಲೂಕ್ ಮುಂಡೂರು. ಪಾಳೇಗಾರರ ವಂಶಿಕರಾದ ಇವರದು ಪಟೇಲಿ ವೃತ್ತಿಯ ಮನೆತನ. ಇವರ ತಂದೆ ಶ್ರೀ ಹೆಚ್. ಜಯರಾಮೇಗೌಡರು, ತಾಯಿ ಸುಭದ್ರಮ್ಮ. ಎಂಟು ಜನ ಮಕ್ಕಳಲ್ಲಿ ಎಲ್ಲರೂ ವಿದ್ಯಾವಂತರೇ. ನಾಲ್ಕು ಗಂಡುಮಕ್ಕಳು ಐದು ಹೆಣ್ಣು ಮಕ್ಕಳಲ್ಲಿ ದ್ವಿತೀಯ ಪುತ್ರಿಯೇ ಕಲಾವಿದೆ ಕಮಲಾಕ್ಷಿ.

ಇವರ ತಾತ ದಿ|| ಹನುಮಂತೇಗೌಡರು ದೈವಭಕ್ತರೂ ಉದಾರ ದಾನಿಗಳೂ ಕಲಾಪ್ರಿಯರೂ ಎಂಬ ಕೀರ್ತಿಗಳಿಸಿದ್ದರು. ಬಯಲು ನಾಟಕ ಗಳಲ್ಲಿ ಆಸಕ್ತಿ ಅವರಿಗಿದ್ದ ಕಾರಣ ನಾಟಕ ಸೀನರಿಗಳನ್ನು ಬರೆಯಿಸಿಟ್ಟಿದ್ದರು. ಪುರಾಣ ಭಾಗವತ ಮಾಡಿಸುವುದೆಂದರೆ ಬಲು ಪ್ರೀತಿ ಇವರಿಗೆ. ಇವರ ಮೂಲವಂಶಿಕರು ಪಾಳೇಗಾರರು ಕಮಲಾಕ್ಷಿಯವರ ಮುತ್ತಾತಂದಿರಾದ ದಿ|| ಶಾಮೇಗೌಡರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅನ್ನದಾನ

ಮಾಡಿ ಅವರಿಂದ ಗೌರವ ಕಿಲ್ಲತ್ತುಗಳನ್ನು ಪಡೆದಿದ್ದ ಹಿರಿಯ ಜೀವಿ. ಇವರ ಕೀರ್ತಿಯನ್ನು ಆಗಲೇ ಜನ ಹಾಡುಕಟ್ಟಿ ಕೊಂಡಾಡಿದ್ದಾರೆ.

"ಮುಂಡೂರು ಪುರಕೆ ಮುಗಿಲು ಮುಟ್ಟುವ ಕೋಟೆ.
ಮುದದಿಂದಲೆಸೆಯೆ, ಆಗಳತೆಗಳೇಳು ಅಬ್ಧಿಗಳ್
ಜರೆಯೆ ದೇವಾಲಯುಗಳೋ, ಧೀರ್ಘ ಶಿಖರಗಳೋ,
ಇದಕೆ ರತ್ನಾಕಾರದಂತಿರುವ ಬ್ರಹ್ಮಸ್ವರೂಪ
ಪುಟ್ಟ ಹೊನ್ನಾಂಕ ಮೇಣ್ ಗೌಡರೊಳಗ್ಗಳನು,
ಗುಣ ವಿಶಾರದನು, ಪ್ರೌಢ ಶಾಮೇಗೌಡನು, ಈತನ
ಕಾಂತೆಯು, ಇಂದು ಸಮವದನೆ ಭೂತೇಶ ಸಖನ
ಪರಭಜಕಳಿಭಗನುನೆ, ಘನತೆಯಂ ಪಡೆದ
ಅಕ್ಕಮಾಂಬಾ ಗರ್ಭಸಿಂಧು ಶುಬ್ರಾಂಶುವೆನಿಪ
ಹನುಮಂತಗೌಡನು ವನರುಹಾಸನು ಜನಕನ
ಭಜಕನು, ಜನದೊಳಗುದಾರಿ................"

ಕಮಲಾಕ್ಷಿಯವರ ತಂದೆ ಬಹು ಹಿಂದೆಯೇ ಮುಂಡೂರಿನಿಂದ ಬೆಂಗಳೂರಿಗೆ ಸಂಸಾರ ಸಮೇತರಾಗಿ ಬಂದು ನೆಲಸಿದರು. ಮಂಡಿಯ ವೃತ್ತಿ ಬೇಸರವಾಗಿ ಕಟ್ಟಡ ಕಟ್ಟುವ ಕಂಟ್ರಾಕ್ಟ್ ಕೆಲಸದಲ್ಲಿ ಪ್ರಸಿದ್ಧರಾದರು. 'ರಾಜಾ ಸ್ನೋ' ಫ್ಯಾಕ್ಟರಿಯ ಕಟ್ಟಡದ ಉದ್ಯಮ ವ್ಯವಹಾರದಲ್ಲಿ ಕೊಂಚ ಕೈ ಸುಟ್ಟುಕೊಳ್ಳುವ ಅನಿವಾರ್ಯತೆ ಬಂದೊದಗಿತು. ಆದರೂ ಎದೆಗುಂದದೆ ಮಕ್ಕಳನ್ನೆಲ್ಲಾ ವಿದ್ಯಾವಂತರನ್ನಾಗಿ ಕಲಾವಂತರನ್ನಾಗಿ ಮಾಡಿದ ಕೀರ್ತಿ ಇವರದು.

ಕಮಲಾಕ್ಷಿಯವರಿಗೆ ಪ್ರೈಮರಿ ತರಗತಿಗಳಲ್ಲಿ ಓದುತ್ತಿರುವಾಗಲೇ ಕಲೆಯಲ್ಲಿ ಅಭಿಮಾನವಿದ್ದಿತು. ಇವರ ಮಾತಾಪಿತೃಗಳು ಮಗಳನ್ನು ಚಿತ್ರಾಭ್ಯಾಸಮಾಡಲು 'ಲಲಿತ ಕಲಾಶಾಲೆಗೆ' ಕಳುಹಿಸಿ ಪ್ರೋತ್ಸಾಹಿಸಿದರು. ಪ್ರೌಢಶಾಲೆಯಲ್ಲಿ ಡ್ರಾಯಿಂಗನ್ನು ಐಚ್ಛಿಕಭಾಗವಾಗಿ ತೆಗೆದುಕೊಂಡರು. ಚಿತ್ರಕಲಾ ನಿಕೇತನದ ಅಂಗವಾಗಿ ನಡೆದ ಅಂತರ ಶಾಲಾ ಕಲಾ ಸ್ಪರ್ಧೆಯಲ್ಲಿ ಸುವರ್ಣಪದಕವೂ ಬಂದಿತು. ಚಿತ್ರಕಲೆಯಲ್ಲಿ ಮತ್ತಷ್ಟು

ಸ್ಫೂರ್ತಿ ಚಿಗುರಿತು. ಇವರ ಅಣ್ಣ ಅಕ್ಕಂದಿರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡುತ್ತಿದ್ದುದರಿಂದ ತಾನೂ ಏಕೆ ಓದಬಾರದೆಂಬ ಕೆಚ್ಚು ಬಂದು ಕಾಲೇಜಿಗೂ ಸೇರಿ ಬಿ. ಎ. ಪದವಿಗಳಿಸಿಬಿಟ್ಟರು. ಬಿಡುವಿನಲ್ಲಿ ಮಲ್ಲೇಶ್ವರಂ ಮಹಿಳಾ ಸಮಾಜಕ್ಕೆ ಹೋಗಿ ಚಿತ್ರ ಕಲಾಭ್ಯಾಸ ನಡೆಸಿದರು. ಕ್ರಮೇಣ ಮೈಸೂರು ಚಿತ್ರಕಲಾ ಪರಿಷತ್ತಿನ ಚಿತ್ರಕಲಾ ವಿದ್ಯಾಲಯದ ವಿದ್ಯಾರ್ಥಿನಿ ಯಾದರು ಇಲ್ಲಿ ಇವರಿಗೆ ಉತ್ತಮ ಉತ್ತೇಜನ ಪ್ರೋತ್ಸಾಹಗಳು ದೊರೆತವು. ಚಿತ್ರಕಲೆಯ ಜೊತೆಗೆ ಇವರಿಗೆ ಅಭಿನಯ ಕಲೆಯಲ್ಲಿ ಅದರಲ್ಲೂ ಏಕಪಾತ್ರಾಭಿನಯದಲ್ಲಿ ಕೊಂಚ ಪರಿಶ್ರಮ ಪಡೆದಿದ್ದಾರೆ. ಜಾನಪದ ಗೀತೆಗಳನ್ನು ಸೊಗಸಾಗಿ ಹಾಡಬಲ್ಲರು. ಇದಕ್ಕೆ " ನನ್ನ ತಾಯಿಯವರಿಗಿರುವ ಸಂಗೀತ ಕಲಾಭಿರುಚಿಯೇ ಕಾರಣ ' ಎನ್ನುತ್ತಾರೆ.

ಇವರ ಒಂದು ಕಲಾಕೃತಿಗೆ ೧೯೬೫ ರಲ್ಲಿ ವಿಧಾನಸೌಧದಲ್ಲಿ ಜರುಗಿದ ಕಲಾಪ್ರದರ್ಶನದಲ್ಲಿ ರಜತಪದಕವೂ ದೊರೆಯಿತು. ಹೆಬ್ಬಾಳಿನ ಸೋಷಿಯಲ್ ವೆಲ್‌ಫೇರ್‌ನವರು ಏರ್ಪಡಿಸಿದ್ದ ಕಲಾಪ್ರದರ್ಶನದಲ್ಲಿ ಇವರ ಒಂದು ಚಿತ್ರಕ್ಕೆ ಪ್ರಥಮ ಬಹುಮಾನ ಬಂದಿದೆ. ಸರ್ಕಾರಿ ಲಾ ಕಾಲೇಜಿನ ಲಲಿತಕಲಾ ಸಂಸ್ಥೆ ಏರ್ಪಡಿಸಿದ ಕಲಾಪ್ರದರ್ಶನಗಳಲ್ಲಿ ಎರಡು ವರ್ಷಗಳೂ ಬಹುಮಾನಗಳು ಬಂದಿವೆ.

" ಕಲೆಯಲ್ಲಿ ಕಲಾವಿದರ ಅಭಿಪ್ರಾಯ ತಿಳಿದುಕೊಳ್ಳಲು ಅಪೇಕ್ಷಿಸುತ್ತೇನೆ. ಆದರೆ ಯಾರೊಬ್ಬ ಕಲಾವಿದರನ್ನು ಅನುಕರಿಸುವ ಮನೋಧರ್ಮ ನನ್ನದಲ್ಲ " ಎನ್ನುತ್ತಾರೆ ಕಲಾಸಾಧಕಿ ಕಮಲಾಗೌಡರು. ಈಗಿರುವ ಕಲಾ ಸ್ಫೂರ್ತಿ ಎಂದೂ ಮುಂದುವರಿಯುವಂತಾಗಬೇಕು.



“ಮೂರ್ತಿ”

ಮೈಸೂರಿನ ರಾಜೇಂದ್ರ ನಗರದ ಕೊನೆಯಲ್ಲಿರುವ ಶ್ರೀ ಆರ್.ಎಸ್. ನಾಯಿಡು ಅವರ ಮನೆಗೆ ಯಾರಾದರೂ ಹೋದರೆ ಅಲ್ಲಿ ಅವರು ಕೂರುವ ವರಾಂಡದ ಕಿಟಕಿಬಾಗಿಲುಗಳ ಹಿಂಬದಿಯಲ್ಲಿ ಕೆಲವು ರೇಖಾ ಚಿತ್ರಗಳನ್ನು ಕಾಣುತ್ತೇವೆ. ಅವೆಲ್ಲ ಶ್ರೀ ನಾಯಿಡು ಅವರು ಮೆಚ್ಚಿದ ‘ಡೆಕ್ಕನ್ ಹೆರಾಲ್ಡ್’ನಲ್ಲಿ ಪ್ರಕಟವಾದ ಶ್ರೀ ಮೂರ್ತಿಯವರ ವ್ಯಕ್ತಿಚಿತ್ರಗಳ ಕಟಿಂಗ್‌ಗಳು. ಅಲ್ಲಿ ನಾವು ವಿವಿಧ ಭಂಗಿಯ ನೆಹರು, ಗಾಂಧಿ. ರಾಧಾಕೃಷ್ಣ,

ಶಾಸ್ತ್ರಿ, ಪ್ರಸಾದ್, ರಾಜಾಜಿ ಮುಂತಾದವರ ರೇಖಾಚಿತ್ರಗಳನ್ನೂ ಗಮನಿಸ ಬಹುದು.

ನಿಜ! ಮೂರ್ತಿಯವರ ಚಿತ್ರಗಳೆಂದರೆ ನಾಯಿಡು ಅವರಿಗೆ ಬಲು ಪ್ರೀತಿ. ಹಿರಿಯ ಖ್ಯಾತ್ಯ ಚಿತ್ರಕಾರರೊಬ್ಬರಿಗೆ ಕಿರಿಯರ ಕಲೆಯಬಗ್ಗೆ ಅದೆಷ್ಟು ಮಮತೆ ಅದೆಷ್ಟು ವಿಶ್ವಾಸ! ಇದು ನಾಯಿಡು ಅವರ ಅಪರೂಪ ಗುಣವೇ ಸರಿ. ಇವರು ಮೂರ್ತಿಯವರ ರೇಖಾವೈಖರಿಗೆ ತುಂಬ ಮಾರು ಹೋಗಿದ್ದಾರೆಂಬುವಕ್ಕೆ ಅಲ್ಲಿಯ ಚಿತ್ರಗಳೇ ಸಾಕ್ಷಿ. ಅವರು ನೀಡುವ ಬಿಚ್ಚು ನುಡಿಗಳೇ ಸಾಕ್ಷಿ. ಒಮ್ಮೆ ನಾಯಿಡು ಅವರು ಮೂರ್ತಿ ಬಗ್ಗೆ ಮಾತು ಬಂದು ಹೀಗೆ ಹೇಳಿದ ನೆನಪಿದೆ....

" ನಾನು ಹಿಂದೆ ಬೆಂಗಳೂರಿನ ಮಡಿವಾಳದಲ್ಲಿ ವಾಸವಾಗಿದ್ದೆ. ಆಗ ಈ ಮೂರ್ತಿಯನ್ನು ಪ್ರಜಾವಾಣಿ ಬಳಗದ ಮಿತ್ರರೊಬ್ಬರು(ವೈ. ಎನ್. ಕೆ. ಇರಬಹುದು) ನನ್ನ ಬಳಿ ಕಳಿಸಿಕೊಡುತ್ತ ನಾಯಿಡು ಬಳಿ ಹೋಗಿ ನಿಮ್ಮ ಚಿತ್ರಗಳನ್ನು ತೋರಿಬನ್ನಿ. ನೀವು ಈ ದೆಸೆಯಲ್ಲಿ ಮುಂದುವರಿಯುವಿರೋ ಇಲ್ಲವೋ ಎಂಬುದನ್ನು ಅವರು ಹೇಳಿಬಿಡುತ್ತಾರೆ' ಎಂದು ಹೇಳಿ ಅವರನ್ನು ನನ್ನ ಬಳಿ ಕಳಿಸಿಕೊಟ್ಟಿದ್ದರು. ಆ ವೇಳೆಗೆ ಮೂರ್ತಿಯವರ ಹಲವಾರು ವ್ಯಂಗ್ಯ ಚಿತ್ರಗಳು ಪ್ರಕಟವಾಗಿದ್ದುವು. ಇವರ ಚಿತ್ರಗಳನ್ನು ನೋಡಿದ ನಾಯಿಡು ಅವರು ಪ್ರಗತಿ ಹೊಂದುವ ಭರವಸೆಯನ್ನು ಕಂಡರು. ವ್ಯಂಗ್ಯ ಚಿತ್ರಕಲೆಯಲ್ಲಿ ಮುಂದುವರಿಯಲು ವಿಶ್ವದ ಖ್ಯಾತ ವ್ಯಂಗ್ಯಚಿತ್ರಕಾರರಾದ ವಿಲ್ ಡೈಸನ್ (Will Dyhson) ಮತ್ತು ಲೋ (Low) ಅವರ ಚಿತ್ರ ಗಳನ್ನೂ ಅವರಲ್ಲಿರುವ ಉದಾತ್ತ ಧ್ಯೇಯಗಳನ್ನೂ ಗಮನಿಸುತ್ತಾ ಬರ ಬೇಕೆಂದು ತಿಳಿಸಿದರು—ಅವರ ಕಲೆಯಲ್ಲಿ ಮುಂದುವರಿಯಲು ಆಶಿಸಿ ಹರಸಿ ಬೀಳ್ಕೊಟ್ಟ ಒಂದು ಸಂದರ್ಭವನ್ನು ಶ್ರೀ ನಾಯಿಡು ಅವರು ನೆನಪುಮಾಡಿ ಕೊಂಡರು.

ಮೂರ್ತಿಯವರ ಕಲೆಗಾರಿಕೆ ಸತತವಾಗಿ ಸಾಗುತ್ತಾಬಂದಿತು. ಮೇಧಾವಿ ಕಲಾವಿದ ಶ್ರೀ ನಾಯಿಡು ಅವರ ಆಶೀರ್ವಾದವೂ ಮಾರ್ಗದರ್ಶ ನವೂ ದೊರಕಿದ್ದಿತು. ಇಂಗ್ಲೆಂಡಿನ ಲಾರ್ಡ್ ಬೀವರ್ ಬ್ರೂಕ್ ಅವರ 'Evening standard' ಪತ್ರಿಕೆಯಲ್ಲಿ 'ಲೋ' ಅವರ ಚಿತ್ರಗಳು ಬರ್ರು

ತ್ತಿದ್ದವು ಶ್ರೀ ಮೂರ್ತಿ ಅವುಗಳನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿರಬೇಕು. 'ಲೋ' ಅವರ ರೇಖಾವೈಖರಿಗೆ ತಂತ್ರ ವೈವಿಧ್ಯತೆಗೆ ಶ್ರೀ ಮೂರ್ತಿಯವರ ಮನಸ್ಸು ಮಾರು ಹೋದಿತೇನೋ!

ಬೆಂಗಳೂರಿಗೆ ನಾನು ಹೋದಾಗಲೆಲ್ಲಾ ಬ್ರಿಗೇಡ್ ರೋಡಿನ ಮೂಲೆಯ ಹಿಂಬದಿಯಲ್ಲಿರುವ ಶ್ರೀ ರಾವ್ ಅವರ ಹಳೆಯ ಪುಸ್ತಕದಂಗಡಿಗೆ ಹೋಗಿ ಬರುವುತ್ತಿದ್ದೆ. ರಾವ್ ಅವರು ನನಗಾಗಿ ಕೆಲವು ಅಪರೂಪದ ಕಲಾ ಪುಸ್ತಕಗಳನ್ನು ತೆಗೆದಿಟ್ಟು ಕೊಡುತ್ತಿದ್ದರು. 'ಲೋ' ವ್ಯಂಗ್ಯ ಚಿತ್ರಗಳ ಪುಸ್ತಕವೊಂದನ್ನು ಸಂಗ್ರಹಿಸಲು ಅನೇಕವರ್ಷ ಅವರನ್ನು ಕಾಡಿದ್ದುಂಟು. ಆದರೆ ಅವರನ್ನು ಕೇಳಿದಾಗಲೆಲ್ಲಾ ಡೆಕ್ಕನ್ ಹೆರಲ್ಡ್ ಮೂರ್ತಿಗೆ ಕೊಟ್ಟು ಬಿಟ್ಟೆ ಒಂದು ಮಾರಾಟಕ್ಕೆ ಬಂದಿತ್ತು ಎಂದು ಒಂದೆರಡುಸಾರಿ ನನಗೆ ಹೇಳಿ ನಿರಾಶೆಮಾಡಿದ ನೆನಪು. ಶ್ರೀ ಮೂರ್ತಿಯವರಿಗೆ ವಿಶ್ವವಿಖ್ಯಾತ ಚಿತ್ರಕಾರರ ಚಿತ್ರಗಳನ್ನು ಗಮನಿಸುತ್ತ ಬಂದು ತಮ್ಮದೇಆದ ಒಂದು ಸ್ವತಂತ್ರ ಮಾರ್ಗದಲ್ಲಿ ಉತ್ತಮ ತಂತ್ರಗಳನ್ನು ರೇಖೆಗಳಲ್ಲಿ ಮೆರೆಯುವ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದಾರೆ.

ಮೂರ್ತಿಯವರ ಚಿತ್ರಗಳನ್ನು ಗ್ರಹಿಸಬೇಕಾದರೆ ರಾಜಕಿಯ ವಿಷಯದಲ್ಲಿಯೂ ದೇಶದ ವಿವಿಧ ಕಾರ್ಯಚಟುವಟಿಕೆಗಳಲ್ಲಿಯೂ ಸಾಕಷ್ಟು ಪರಿಶ್ರಮ ಇರಬೇಕು. ಇದಿಲ್ಲದ ಸಾಮಾನ್ಯ ಬುದ್ಧಿಜೀವಿಗಳಿಗೆ ಸುಲಭವಾಗಿ ಆ ಚಿತ್ರಗಳು ಅರ್ಥವಾಗುವುದಿಲ್ಲ. ಇವರ ಚಿತ್ರಗಳ ಹಿಂದಿರುವ ಮನೋಧರ್ಮದಲ್ಲಿ ಒಂದು ಅಪರೂಪ ಗುಣವಿರುತ್ತದೆ. ಇವರ ಕಲೆಯಲ್ಲಿ ಜಾತಿ ದ್ವೇಷ ಮತದ್ವೇಷಾದಿಗಳನ್ನು ನಾವು ಕಾಣಲಾರೆವು. ಜನತೆ ಯಾವುದನ್ನು ಗೌರವದಿಂದ ಕಾಣುವರೋ ಅದನ್ನು ಇವರ ಕುಂಚ ಹೀಯಾಳಿಸುವುದಿಲ್ಲ. ರಾಜಕಿಯವನ್ನು ಕುರಿತು ಬಹು ಸೊಗಸಾಗಿ ಸೂಕ್ಷ್ಮವಾಗಿ ವ್ಯಂಗ್ಯ ಚಿತ್ರಗಳಲ್ಲಿ ಬಣ್ಣಿಸುವ ವಿಶಿಷ್ಟಕಲೆ ಶ್ರೀ ಮೂರ್ತಿಯವರಿಗೆ ಮಾತ್ರ ಮೀಸಲಾದುದು. ಇವರ ಕುಂಚದಲ್ಲಿ ವೇಗ ಇದೆ; ಸೊಗಸಿದೆ.

ಮೂರ್ತಿಯವರ 'ಸಿಟಿಜನ್' (Citizen) ಚಿತ್ರಗಳು ಡೆಕ್ಕನ್ ಹೆರಾಲ್ಡ್ ಓದುಗರಿಗೆ ಬಲು ಪ್ರಿಯ. ಸಮಾಜದ ಕುಂದು ಕೊರತೆಯನ್ನು ಮೈಸೂರು ಪೇಟಧರಿಸಿರುವ ಕನ್ನಡ ನಾಡಿನ ಶ್ರೀ ಸಾಮಾನ್ಯನನ್ನು

ಅವರು ಗಮನಿಸುವಂತೆ ಚಿತ್ರಿಸುವಲ್ಲಿ ಬಹು ಜನಪ್ರಿಯವಾಗಿವೆ ಈ ಬಗೆಯ ಚಿತ್ರಗಳು. ಇಲ್ಲಿ ನಾವು ಆಧುನಿಕ ಸಮಾಜದ ವೈಚಿತ್ರ್ಯದ ಪರಿಣಾಮಗಳ ವಿಡಂಬನೆ, ಜೀವನ ವಿಮರ್ಶೆಯನ್ನು ಕಾಣುತ್ತೇವೆ.

ಶ್ರೀ ಮೂರ್ತಿ ನೋಟಕ್ಕೆ ಸುಂದರ ಮೂರ್ತಿ. ಸ್ವಭಾವ ಮೃದು. ಅಷ್ಟಾಗಿ ಯಾರ ಬಳಿಯೂ ಹೆಚ್ಚು ಸೇರುವ ಸ್ವಭಾವವಲ್ಲ. ಮಾತಾಡುವುದು ಕಡಿಮೆ. ಯೋಚಿಸುವುದೇ ಹೆಚ್ಚು. ನಾಳೆಯ ಪತ್ರಿಕೆಗೆ ಯಾವ ವಸ್ತು ಆರಿಸಿ ಕೊಳ್ಳಲಿ ಎಂದು ಇವರ ಮನಸ್ಸು ಸದಾ ಚಿಂತಿಸುವಂತಿರುತ್ತದೆ ಇವರ ಮುಖಭಾವ. 'ಮೂರ್ತಿಯು' ಕನ್ನಡ ನಾಡಿನ ಏಕೆ ಭಾರತದಲ್ಲಿ ವ್ಯಂಗ್ಯಚಿತ್ರಕಾರರಲ್ಲಿ ಉತ್ತಮ ಸ್ಥಾನವನ್ನು ಗಳಿಸಿಕೊಂಡಿದ್ದಾರೆ "ಮೂರ್ತಿ" ಈ ಹೆಸರು ಚಿಕ್ಕದು. ಆದರೆ ಅವರ ಕೀರ್ತಿ ಅದೆಷ್ಟು ದೊಡ್ಡದು!



ಎಂ.ಎಸ್. ನಂಜುಂಡರಾವ್

ಸಾವಿರದೊಂಬೈನೂರಯ್ವತ್ತೊಂಬತ್ತೇ ಇರಬೇಕು. ಆಗ ಇದ್ದಕ್ಕಿದ್ದಂತೆಯೇ ಬೆಂಗಳೂರಿನಲ್ಲಿ ಚಿತ್ರಕಲಾಸಂಸ್ಥೆಯೊಂದು ಸ್ಥಾಪಿತವಾದ ವಾರ್ತೆ ಪತ್ರಿಕೆಯಲ್ಲಿ ಪ್ರಕಟವಾಯಿತು. ಮೈಸೂರಿನ ಬಹುಮಂದಿ ಪ್ರತಿಭಾವಂತ ಕಲಾವಿದರಿದ್ದೂ ಅವರ ಗಮನಕ್ಕೇ ತಾರದೆ ಅಖಿಲ ಮೈಸೂರು ಮಟ್ಟದಲ್ಲಿ ಸ್ಥಾಪನೆಯಾದ ಚಿತ್ರಕಲಾ ಪರಿಷತ್ತಿನ ಬಗ್ಗೆ ನಮ್ಮಲ್ಲಿ ಕೆಲವರಿಗೆ ಆಶ್ಚರ್ಯವೂ ಆಯಿತು, ಅಸಮಾಧಾನವೂ ಆಯಿತು. ಮೈಸೂರು ನಗರ

ವಲ್ಲಿಯೂ ಅಂಥದೊಂದು ಸಂಸ್ಥೆಯನ್ನು ಸ್ಥಾಪಿಸಿಯೇ ಅದಕ್ಕೆ ಉತ್ತರ ಕೊಡಬೇಕೆನಿಸಿತು. ಮೈಸೂರಿನ ಚಿತ್ರಶಿಲ್ಪ ಅಕಾಡಮಿ ಆರಂಭವಾದುದು ಈ ಹಿನ್ನೆಲೆಯಲ್ಲಿ. ಅದರ ಪ್ರಧಾನ ಕಾರ್ಯದರ್ಶಿಯಾಗಿ ನಿಂತು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ ಇದ್ದ ಒಂದು ನನ್ನ ಸೈಕಲ್ಲನ್ನೂ ಕಳೆದುಕೊಂಡು ನಾನು ಪೇಚಾಡಿದ್ದೆ. ಆದರೆ ನನ್ನ ಕಷ್ಟಕ್ಕಿಂತ ನನಗಾದ ನಷ್ಟಕ್ಕಿಂತ ಮುಖ್ಯವಾಗಿ ಅಕಾಡಮಿ ಸಾಧಿಸಿದ ಕಾರ್ಯಪ್ರಗತಿ ಎಲ್ಲರ ಮೆಚ್ಚಿಗೆಗೂ ಪಾತ್ರವಾದುದು ಒಂದು ಸಮಾಧಾನದ ವಿಷಯವಾಯಿತು. ಮೈಸೂರಿನ ಪ್ರಮುಖ ಕಲಾವಿದರೂ ಶಿಲ್ಪಿಗಳೂ ಅದಕ್ಕೆ ಸದಸ್ಯರಾದರು. ತಿಂಗಳಿಗೊಮ್ಮೆ ಒಬ್ಬ ಕಲಾವಿದರ, ಒಬ್ಬ ಶಿಲ್ಪಿಯ ಕೃತಿಗಳ ಪ್ರದರ್ಶನ ಅದೇ ಸಂದರ್ಭದಲ್ಲಿ ಕಲಾವಿಷಯದಲ್ಲಿ ಸುಪ್ರಸಿದ್ಧ ವಿದ್ವಾಂಸರಿಂದ ಉಪನ್ಯಾಸಗಳು ಹೀಗೆ ಒಂದೆರಡು ವರ್ಷಗಳಲ್ಲಿ ಚಿತ್ರ-ಶಿಲ್ಪ ಅಕಾಡಮಿ ಮೈಸೂರಿನ ಒಳಗೆ ಹೊರಗೆ ಇದ್ದ ಅನೇಕ ಕಲಾವಿದರ ಶಿಲ್ಪಿಗಳ ಅಜ್ಞಾತ ಕೃತಿಗಳನ್ನು ಕಲಾರಸಿಕರಿಗೆ ಪರಿಚಯ ಮಾಡಿಕೊಟ್ಟಿತೇನೋ ನಿಜ. ಆದರೆ ನನ್ನ ಅಂತರಂಗದಲ್ಲಿ ಒಂದು ಅಸಮಾಧಾನ ಮಾತ್ರ ಸದಾ ಕೊರೆಯುತ್ತಿತ್ತು. ಕಲಾವಿದರಲ್ಲಿ ಒಡಕು ಹುಟ್ಟಬಾರದು. ಅವರು ಬೇರೆ ಬೇರೆ ದಾರಿಯನ್ನು ಹಿಡಿಯಬಾರದು. ಒಟ್ಟಾಗಿ ಕಲೆತಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ, ಎನ್ನುವ ಅಂಶ ಸದಾ ತುಡಿಯುತ್ತಿತ್ತು. ಬಹುಶಃ ಬೆಂಗಳೂರಿನ ಆ ಚಿತ್ರಕಲಾ ಪರಿಷತ್ತಿನ ಕಲಾವಿದರಿಗೂ ಹಾಗನಿಸಿರಬೇಕು. ಅದರ ಕಾರ್ಯದರ್ಶಿ ಶ್ರೀ ಎಂ. ಎಸ್. ನಂಜುಂಡರಾಯರು ತಮ್ಮ ಜಾಣ್ಮೆಯಿಂದ ತಮ್ಮ ಕೌಶಲದಿಂದ ನಮ್ಮನ್ನೆಲ್ಲ ಅವರ ಬಲೆಗೆ ಹಾಕಿಕೊಂಡರು. ಕಲಾವಿದರ ನಡುವೆ ಇದ್ದ ಭಿನ್ನಭೇದಗಳು ಮರೆಯಾದವು. ಕಲಾವಿದರ ಒಕ್ಕೂಟದಿಂದ ಬೆಂಗಳೂರಿನ ವಿಧಾನಸೌಧದಂತಹ ವಿಶಿಷ್ಟ ನೆಲೆಯಲ್ಲಿ ಎರಡು ಬಾರಿ ಅಖಿಲ ಭಾರತ ಮಟ್ಟದ ಕಲಾಪ್ರದರ್ಶನ ನಡೆದುದು ಬೆಂಗಳೂರಿನಲ್ಲಿ ಮೊದಲಬಾರಿಗೆನ್ನಬಹುದು. ನಾನು ಮೈಸೂರಲ್ಲಿ ಇದ್ದರೂ ಆ ಸಂಸ್ಥೆಯ ಸಹಕಾರ್ಯದರ್ಶಿಯಾಗಿ ನಿಲ್ಲಬೇಕಾಯಿತು.

ಹೀಗೆ ಕಲಾವಿದರಲ್ಲಿ ಸಾಮರಸ್ಯವನ್ನು ಸಾಧಿಸುವ ದಿಕ್ಕಿನಲ್ಲಿ ಶ್ರೀ ನಂಜುಂಡರಾವ್ ಅಪಾರ ಸಾಮರ್ಥ್ಯವನ್ನು ಮೆರೆದಿದ್ದಾರೆ. ಕಲಾವಿದ

ರೊಬ್ಬರು ಇಷ್ಟೊಂದು ಬಹುಮುಖ ಕಾರ್ಯ ಚಟುವಟಿಕೆಗಳನ್ನು ನೆರೆದಿರುವುದು ಅತಿವಿರಳ.

ಮಧುಗಿರಿ ತಾಲ್ಲೂಕ್ ಸಡ್ಡೆಕುಂಟೆ ಶ್ರೀಯುತರ ಹುಟ್ಟೂರು. ಇವರು ೧೯೩೨ ರಲ್ಲಿ ಸುಸಂಸ್ಕೃತ ಮನೆತನದ ಶ್ರೀ ಎಂ. ಎಸ್. ದಾಸಪ್ಪನವರ ಪುತ್ರರಾಗಿ ಜನಿಸಿದರು. ಶ್ರೀ ದಾಸಪ್ಪನವರು ಕಲಾವಿದರು ಉಪಾಧ್ಯಾಯರೂ ಆಗಿದ್ದರು. ಕಲಾವಿದರಾದ ಮಧುಗಿರಿರಾಮು ಮತ್ತು ಶಂಕರ್ಸ್ ವೀಕ್ಲಿ ಸಂಸ್ಥೆಯಲ್ಲಿರುವ ಪಿ. ಎಸ್. ರಾವ್ ಅವರಿಗೆ ಶ್ರೀ ದಾಸಪ್ಪನವರು ಚಿತ್ರಕಲೆಯಲ್ಲಿ ಸ್ಫೂರ್ತಿಕೊಟ್ಟಂತೆ ತಮ್ಮ ಪುತ್ರರಿಗೂ ಕೊಟ್ಟರು. ಬಾಲಕ ನಂಜುಂಡರಾವ್ ಮಧುಗಿರಿಯ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಆಗ ೧೯೪೭ ರ ಸಮಯ. ಜವಾಬ್ದಾರಿ ಸರ್ಕಾರದ ಚಳುವಳಿಯಲ್ಲಿ ಈ ಯುವಕರು ಪಾತ್ರವಹಿಸಿದರು.

ಶ್ರೀ ನಂಜುಂಡರಾಯರಿಗೆ ಚಿತ್ರಕಲೆಯಲ್ಲಿ ಬಾಲ್ಯದಿಂದಲೂ ಆಸಕ್ತಿ ಇದ್ದುದರಿಂದ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿಕೊಂಡು ಅಲ್ಲಿ ಕ್ರಮವಾಗಿ ಶ್ರಮವಹಿಸಿ ಅಭ್ಯಾಸಮುಗಿಸಿದರು. ಆಗ ಕಲಾವಿದ್ಯಾರ್ಥಿಗಳಾಗಿದ್ದ ನಾವೆಲ್ಲಾ ಕಲಾಗುರುಗಳಾದ ನಂಜುಂಡಸ್ವಾಮಿ, ಜನಾಬ್ ಸೂಫಿಯವರೊಡನೆ ಬೇಲೂರು ಹಳೇಬೀಡುಗಳಿಗೆ ಕಲಾಪ್ರಪ್ರವಾಸ ಹೋಗಿ ಅಲ್ಲಿ ಪಡೆದ ಸ್ಫೂರ್ತಿ ಎಂದೂ ಮರೆಯುವಂತಿಲ್ಲ. ಈ ದಿನಗಳಲ್ಲಿ ಶ್ರೀ ನಂಜುಂಡರಾಯರಿಗೆ ರಚನಾತ್ಮಕ ಕಾರ್ಯಶೀಲರಾದ ಶ್ರೀ ಟಿ. ಎಸ್. ಸುಬ್ಬಣ್ಣನವರ ಪರಿಚಯ ಆಶ್ರಯ ದೊರಕಿತ್ತು. ಅವರ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಸೇವೆ ಸಲ್ಲಿಸಲು ಸದವಕಾಶವಾಯಿತು. ಆಗ ಶ್ರೀಯುತರು ಯುವರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಅನಂತರ ಬೆಂಗಳೂರಿಗೆ ಬಂದರು. ಸ್ವತಂತ್ರರಾಗಿ ಕಲಾರಂಗಕ್ಕಿಳಿದರು. ಮೈಸೂರು ದಸರಾ ವಸ್ತುಪ್ರದರ್ಶನ, ಬೆಂಗಳೂರಿನ ಕಾಂಗ್ರೆಸ್ ವಸ್ತುಪ್ರದರ್ಶನಗಳಲ್ಲಿ ಸರ್ಕಾರೀ ಮಳಿಗೆಗಳ ಹಾಗೂ ೧೯೬೦ ರ ಅಖಿಲಭಾರತ ಕಾಂಗ್ರೆಸ್ ವಸ್ತುಪ್ರದರ್ಶನದ ಮಹಾದ್ವಾರಗಳ ಶೃಂಗಾರದ ಕೆಲಸಗಳಲ್ಲೂ ಮೇಲ್ವಿಚಾರಕರಾಗಿ ಬಹುಯಶಸ್ವಿಯಾದರು. ಬಳಿಕ ಖಾದಿ ಮಂಡಲದಲ್ಲಿ ಕಲಾವಿದರಾಗಿ ಸೇರಿದರು. ಚಿತ್ರಕಲಾಪರಿಷತ್ತಿನ ಕಾರ್ಯ

ದರ್ಶಿಗಳಾಗಿ ಮತ್ತು ೧೯೬೦–೬೨ ರಲ್ಲಿ ಆಯ್ಕೆಯಾದರು. ಲೇಪಾಕ್ಷಿ, ಮದರಾಸು ಮತ್ತು ನಂದಿ ಮುಂತಾದಕಡೆ ಕಲಾಪ್ರವಾಸವನ್ನಿಟ್ಟುಕೊಂಡರು. ಸಂಸ್ಥೆಯ ಕಲಾಶಾಲೆಯ ಪ್ರಗತಿಗೆ ಹಗಲಿರುಳು ಶ್ರಮಿಸಿದರು.

ನಂಜುಂಡರಾವ್ ನೈಜಕಲಾವಿದರು. ಕಲೆಯ ಎಲ್ಲ ಪ್ರಕಾರದ ಕುಶಲತೆಯನ್ನು ಪಡೆದಿದ್ದಾರೆ. ಇವರು ರಚಿಸುವ ಜಲವರ್ಣ ನಿಸರ್ಗ ಚಿತ್ರಗಳಲ್ಲಿ ನಾವು ಉತ್ತಮ ಕೌಶಲಗಳನ್ನು ಕಾಣಬಹುದಾಗಿದೆ. ಒಮ್ಮೆ ನಾವು ಕಲಾವಿದರನೇಕರು ಲೇಪಾಕ್ಷಿಗೆ ಪ್ರವಾಸ ಹೋಗಿದ್ದೆವು. ಅಲ್ಲಿ ಚಿತ್ರ ಬಿಡಿಸುವಲ್ಲಿ ಸ್ಪರ್ಧೆಯೇ ನಡೆದಿತ್ತು. ಚಿತ್ರ ಬಿಡಿಸುವ ಕೆಲಸ ನಮ್ಮೆಲ್ಲರದಾದರೆ ನಮಗೆ ಊಟದ ವ್ಯವಸ್ಥೆ ನೋಡಿಕೊಳ್ಳುವುದು ಶ್ರೀಯುತರದಾಗಿತ್ತು. ಇದನ್ನು ಕಂಡ ಯಾರೋ "ರಾಜಕೀಯದ ನಂಜುಂಡರಾಯರಿಗೆ ಚಿತ್ರಬಿಡಿಸುವುದು ಮರೆತಿರಬೇಕು" ಎಂದು ವಿನೋದವಾಗಿ ಹೇಳಿದರು. ಇದು ಅವರ ಕಿವಿಗೂ ಮುಟ್ಟಿತೇನೋ. ಅಂದು ಸಂಜೆ ಅಲ್ಲಿಯ ಒಂದು ದೃಶ್ಯಾವಳಿಯನ್ನು ಅಲ್ಪವೇಳೆಯಲ್ಲೇ ಬಹು ಹುರುಪಿನಿಂದ ಚಿತ್ರಿಸಿಬಿಟ್ಟರು. ಸಹಜ ವರ್ಣಗಳಲ್ಲಿ ಸುಂದರವಾಗಿ ಬಿಡಿಸಿ ನಮ್ಮ ಬಾಯಿಮುಚ್ಚಿಸಿದರು.

ಬೋಳುದಲೆಯ ನಡುಹರೆಯದ ಈ ಖದ್ದರ್‌ಧಾರಿ ಉತ್ಸಾಹಿ ಬೆಂಗಳೂರಿನಲ್ಲಿ ಕಲಾಭಿಮಾನಿಗಳಿಗೆ ಚಿರಪರಿಚಿತ ವ್ಯಕ್ತಿಯಾಗಿದ್ದಾರೆ. ಲುಂಗಿಯನ್ನುಟ್ಟು ಸದಾ ಯಾವುದಾದರೂ ಒಂದು ಕಾರ್ಯಚಟುವಟಿಕೆಯಲ್ಲಿ ತಲೆಕೆಡಿಸಿಕೊಂಡು ಓಡಾಡುತ್ತಿರುತ್ತಾರೆ. ಅಷ್ಟೇ ಛಲ, ಅಷ್ಟೇ ಕಾರ್ಯದಕ್ಷತೆ ಚಾಕಚಕ್ಯತೆ, ಸೂಕ್ಷ್ಮದೃಷ್ಟಿ. ಎಲ್ಲದಕ್ಕೂ ಮಿಗಿಲಾಗಿ ಅಪೂರ್ವವಾದ ಔದಾರ್ಯ. ಇವುಗಳಿಂದ ಶ್ರೀಯುತರು ಕಲಾವಿದರ ನಿಕಟ ಮಿತ್ರರಾಗಿದ್ದಾರೆ. ಕೈಯಲ್ಲಿ ಕೆಲವು ಸಂದರ್ಭದಲ್ಲಿ ಹಣವಿಲ್ಲದಿದ್ದರೂ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನೆ ಯಶಸ್ವಿಗೊಳಿಸಿ ಎಲ್ಲರನ್ನು ದಂಗುಬಡಿಸುವ ಸಾಹಸಿ ಇವರು.

ಕಲಾವಿದರ ಒಳಿತಕ್ಕಾಗಿ ಯಾವ ರಾಜಕಾರಣಿಯನ್ನಾದರೂ ಯಾವ ಅಧಿಕಾರಿಯನ್ನಾದರೂ ಹಿಡಿತಕ್ಕೆ ತೆಗೆದುಕೊಳ್ಳುವ ಕಾರ್ಯಕುಶಲಿ ಶ್ರೀ ನಂಜುಂಡರಾವ್. ಭಾರತದ ನಾನಾ ಪ್ರಮುಖ ನಗರಗಳಿಗೆಲ್ಲಾ ಭೇಟಿ ಕೊಟ್ಟಿದ್ದಾರೆ. ಈಚೆಗೆ ದೆಹಲಿಗೆ ಕಲಾವಿದ ಕೋಡೂರು ರಾಮಮೂರ್ತಿಗಳ ಕಲಾಪ್ರದರ್ಶನದಲ್ಲಿ ಭಾಗವಹಿಸಿ ಹೆಚ್ಚಿನ ಅನುಭವ ಪಡೆದುಬಂದಿದ್ದಾರೆ.

ಟಿ. ಕೆ. ರಾವ್

೧೯೫೧ರ ಒಂದು ನೆನಪು. ಆಗಿನ ಫಸ್ಟ್‌ಗ್ರೇಡ್ ಕಾಲೇಜಿನ ವಿದ್ಯಾರ್ಥಿ, ಗೆಳೆಯ ‘ ಜೀಶಂಪ ’ ಅವರು ತಾವರೆ ಸಂಸ್ಥೆಯನ್ನು ಸ್ಥಾಪಿಸಿ ‘ ತಾವರೆ ’ ಎನ್ನುವ ಉತ್ಕೃಷ್ಟ ಹಸ್ತಪತ್ರಿಕೆಯನ್ನು ಸಂಪಾದಿಸುತ್ತಿದ್ದರು. ಅಖಿಲ ಕರ್ಣಾಟಕ ಮಟ್ಟದಲ್ಲಿ ನಡೆದ ಒಂದು ಕವಿತಾಸ್ಪರ್ಧೆಯ ಅಂಗವಾಗಿ ಒಂದು ವಿಶೇಷಾಂಕಕ್ಕೆ ಮಂಗಳೂರು ಕಡೆಯಿಂದ ಬಂದ ಆಕರ್ಷಕ ಚಿತ್ರವೊಂದನ್ನು ನನಗೆ ತೋರಿದರು. ಉತ್ತಮ ಕಲಾಸಾಧಕನಾಗುವ

ಇದೇ ಲೇಖಕರ
"ಭಾರತೀಯ ಚಿತ್ರಕಲೆ" ಕೃತಿ ಕುರಿತು

ಆಧುನಿಕ ಕಲೆಯನ್ನು ವಿವೇಚಿಸುತ್ತ ನವ್ಯ ಸಂಪ್ರದಾಯ ವನ್ನು ಕುರಿತು ಲೇಖಕರು ಆಡಿರುವ ಎಚ್ಚರಿಕೆಯ ಮಾತು ಗಮನಾರ್ಹ. ಅವರು ಹೇಳುವಂತೆ ನವ್ಯತೆ ಎಂದು ಬರೀ ವಕ್ರತೆಗೆ, ಗೂಢಾರ್ಥಕ್ಕೆ ಮನಸೋತರೆ ಕಲೆಗೆ ಆಗಬಹುದಾದ ಹಾನಿ ಎಂಥದೆನ್ನುವುದನ್ನು ಯೋಚಿಸಬೇಕು.

ಕರ್ಣಾಟಕದ ಚಿತ್ರಕಲೆಯನ್ನು ಕುರಿತು ಅವರು ಬರೆದಿರುವ ಭಾಗ ಸಂಗ್ರಹವಾಗಿದ್ದರೂ ವಿಷಯ ದೃಷ್ಟಿಯಿಂದ ಶ್ಲಾಘ್ಯ. ಕನ್ನಡ ಕಲಾವಿದರ ಹತ್ತು ಮುಖದ ಸಿದ್ಧಿ, ಅವರ ಚಿತ್ರಗಳ ವೈಶಿಷ್ಟ್ಯ ಇಲ್ಲಿ ಚೆನ್ನಾಗಿ ವರ್ಣಿತವಾಗಿದೆ.

ವರ್ಧಿಷ್ಣು ಕಲಾವಿದರಾದ ಶ್ರೀ ತಿಪ್ಪೇಸ್ವಾಮಿಯವರು ಕುಂಚದೊಡನೆ ಲೇಖನಿಯ ಕೃಷಿಯನ್ನೂ ಕೈಗೊಂಡಿರುವುದು ಅಭಿನಂದನಾರ್ಹ. ಕಲಾವಿಮರ್ಶೆ ನಮ್ಮಲ್ಲಿ ಬೆಳೆಯಬೇಕಾಗಿ ರುವ ಒಂದು ಸಾಹಿತ್ಯ ಪ್ರಕಾರ. ಆ ದಿಕ್ಕಿನಲ್ಲಿ ಇದೊಂದು ಸ್ತುತ್ಯ ಪ್ರಯತ್ನ.

"ಸಂಯುಕ್ತ ಕರ್ಣಾಟಕ." ಬಾ. ಪ್ರಿ.



ಪರ್ಟಿ' (ಇದು ಕವಿ ಹೊಯ್ಸಳ
ಅವರನ್ನು ಕರೆಯುತ್ತಿದ್ದ ಹೆಸರು). ತವ
ಬಣ್ಣ ಗೆರೆಗಾರಿಕೆಯಲ್ಲಿ ಎಷ್ಟು ಪ್ರವೀಣರೋ
ಅಷ್ಟೇ ಪ್ರವೀಣರಾಗಿದ್ದಾರೆ ತಮ್ಮ ನು
ಗಾರಿಕೆಯಲ್ಲೂ ಸಹ ಎಂಬುದನ್ನು ನಾನು
ಪುಸ್ತಕದಿಂದ ಕಂಡುಕೊಂಡೆ. ಇದೋ
ಕಲಾವಿಚಕ್ಷಣನು ತನ್ನ ಕಸಬಿನವರನ
ಕುರಿತು ಸದಭಿರುಚಿಯಿಂದ ಆದರೆ ತುಂ
ಸಹಾನುಭೂತಿಯಿಂದಲೂ ಅಭಿಮಾ
ಪುರಸ್ಸರವಾಗಿಯೂ ಜಾಣ್ಮೆಯಿಂದಲ
ಬರೆದ ಪುಸ್ತಕ. ಇದರಲ್ಲಿ ಸುಮಾರು ಐವತ್ತಕ್ಕು ಹೆಚ್ಚು ಚಿತ್ರಗಾರರ ಪರಿಚಂ
ನಮಗಾಗುತ್ತದೆ. ಎಲ್ಲರೂ ಆಕರ್ಷಕ ವ್ಯಕ್ತಿಗಳು. ಒಬ್ಬರಂತೆ ಮತ್ತೊಬ್ಬರಿಲ್ಲ
ಅವರವರ ಕಲಾ ವೈಶಿಷ್ಟ್ಯಗಳು ತಜ್ಞರ ಪರಿಭಾಷೆಯಲ್ಲಿ ಕುಶಲವಾ
ಚಿತ್ರಿತವಾಗಿವೆ.

ತಿಪ್ಪೇಸ್ವಾಮಿಯವರು ಮೊದಲ ಬಾರಿಗೆ ನಮ್ಮ ಮುಂದೆ ತೆರೆದಿಟ್ಟರು
ಈ ಪ್ರಪಂಚ ತುಂಬ ಸ್ವಾರಸ್ಯವಾಗಿ ಒಂದು ಹೊಸ ಅನುಭವವನ್ನು ನಮ
ಕೊಡುತ್ತದೆ; ಈ ಕಲಾವಿದರನ್ನು ಅವರ ಕಲೆಯನ್ನು ಪರಿಚಯಮಾಡಿಕೊಳ್ಳ
ಬೇಕೆಂಬ ಆಸೆ ಮೂಡುತ್ತದೆ; ಕರ್ನಾಟಕದಲ್ಲೇಕೆ ನಮ್ಮ ಈ ಮೈಸೂರ
ಪಟ್ಟಣದಲ್ಲೇ ಇಷ್ಟೊಂದು ಮಂದಿ ಖ್ಯಾತ ಚಿತ್ರಗಾರರಿದ್ದಾರೆಂದು ನಮ
ಮನಸ್ಸಿಗೆ ಬರುವುದು ಇಲ್ಲೇ ಮೊದಲು.

'ಪುತಿನ